ಮಂಗಳೂರು
ಸೋಮವಾರ, 18 ಮೇ 2026
ಸಂಪುಟ 48, ಸಂಚಿಕೆ 60, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ ₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ತ್ರಿಭಾಷಾ ನೀತಿ, ಅನಗತ್ಯ ಭೀತಿ |೦೭
ಎಬೋಲಾ: ಜಾಗತಿಕ ತುರ್ತುಸ್ಥಿತಿ ಘೋಷಣೆ |೦೭
ಐಪಿಎಲ್: ಪ್ಲೇ ಆಫ್‌ಗೆ ಆರ್‌ಸಿಬಿ ಲಗ್ಗೆ |೧೧

ರಕ್ಷಣೆ, ಖನಿಜ ಸೇರಿ 17 ಒಪ್ಪಂದಗಳಿಗೆ ಉಭಯ ದೇಶಗಳ ಸಹಿ

ಭಾರತ-ನೆದರ್‌ಲ್ಯಾಂಡ್ಸ್ ವ್ಯೂಹಾತ್ಮಕ ಪಾಲುದಾರಿಕೆ

ದ ಹೇಗ್: ಜಾಗತಿಕ ಭೌಗೋಳಿಕ ರಾಜಕೀಯದಲ್ಲಿ ಆಗುತ್ತಿರುವ ವೇಗದ ಸ್ಥಿತ್ಯಂತರಗಳ ನಡುವೆ, ಭಾರತ ಮತ್ತು ನೆದರ್ಲ್ಯಾಂಡ್ಸ್ ತಮ್ಮ ನಡುವಣ ಬಾಂಧವ್ಯವನ್ನು ಈಗ ವ್ಯೂಹಾತ್ಮಕ ಪಾಲುದಾರಿಕೆ ಮಟ್ಟಕ್ಕೆ ಎತ್ತರಿಸಿಕೊಂಡಿವೆ. ಪ್ರಧಾನಿ ನರೇಂದ್ರ ಮೋದಿ ಮತ್ತು ನೆದರ್ಲ್ಯಾಂಡ್ಸ್ ಪ್ರಧಾನಿ ರಾಬ್ ಜೆಟ್ಟೆನ್ ನಡುವೆ ನಡೆದ ಫಲಪ್ರದ ಮಾತುಕತೆಗಳ ಪರಿಣಾಮವಾಗಿ ಉಭಯ ದೇಶಗಳ ನಡುವೆ ರಕ್ಷಣೆ, ಮಹತ್ವದ ಖನಿಜಗಳು ಮತ್ತಿತರ ಪ್ರಮುಖ ಕ್ಷೇತ್ರಗಳಿಗೆ ಸಂಬಂಧಿಸಿ 17 ಒಪ್ಪಂದಗಳಿಗೆ ಸಹಿ ಮಾಡಲಾಗಿದೆ.

ನೆದರ್ಲ್ಯಾಂಡ್ ಭೇಟಿಯಲ್ಲಿರುವ ಪ್ರಧಾನಿ ಮೋದಿಯವರು ಶನಿವಾರ ಸಂಜೆ ಅಲ್ಲಿನ ಪ್ರಧಾನಿ ಜತೆ ನಡೆಸಿದ ಮಾತುಕತೆಯಲ್ಲಿ ಪಶ್ಚಿಮ ಏಷ್ಯಾದಲ್ಲಿನ ಪರಿಸ್ಥಿತಿಯ ಬಗ್ಗೆ ಗಂಭೀರ ಕಳವಳ ವ್ಯಕ್ತವಾಯಿತು. ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದಾಗಿ ಇಡೀ ವಲಯದ ಮೇಲೆ ತೀವ್ರತರ ಪರಿಣಾಮಗಳನ್ನು ಉಂಟುಮಾಡಿರುವುದಷ್ಟೇ ಅಲ್ಲದೆ ಜಾಗತಿಕ ಇಂಧನ ಪೂರೈಕೆ ಮತ್ತು ವ್ಯಾಪಾರ ಸಂಪರ್ಕ ಜಾಲಗಳಿಗೆ ತೀವ್ರ ಅಡಚಣೆಯುಂಟಾಗಿರುವುದನ್ನು ಉಭಯ ನಾಯಕರು ಆತಂಕ ವ್ಯಕ್ತಪಡಿಸಿದರು.



ಹಾರ್ಮುಜ್ ಜಲಸಂಧಿಯ ಮೂಲಕ ಜಾಗತಿಕ ವಾಣಿಜ್ಯ ವ್ಯವಹಾರದ ಸುಲಲಿತ ಹರಿಯುವಿಕೆ ಮತ್ತು ಮುಕ್ತ ನೌಕಾ ಸಂಚಾರಗಳಿಗೆ ಕರೆ ನೀಡಿದ ಉಭಯ ನಾಯಕರು, ಈ ಪ್ರದೇಶದಲ್ಲಿ ಯಾವುದೇ ನಿರ್ಬಂಧಾತ್ಮಕ ಕ್ರಮಗಳನ್ನು ವಿರೋಧಿಸಿದ್ದಾರೆ. ಇದೀಗ ಈ ನಿಟ್ಟಿನಲ್ಲಿ ನಡೆಯುತ್ತಿರುವ ಉಪಕ್ರಮಗಳ ಪ್ರಯತ್ನಗಳಿಗೆ ಪೂರ್ಣ ಬೆಂಬಲ ನೀಡುವುದಾಗಿ ಜಂಟಿ ಹೇಳಿಕೆಯಲ್ಲಿ ಘೋಷಿಸಿದರು. ಜಗತ್ತಿನ ಐದನೇ ಒಂದಂಶದ ಇಂಧನ ಪೂರೈಕೆ ಈ ಇಕ್ಕಟ್ಟಾದ ಸಮುದ್ರ ಮಾರ್ಗದ ಮೂಲಕ ನಡೆಯುತ್ತಿದ್ದು, ಕಳೆದ ಫೆ.28ರಿಂದ ಆತಂಕಕ್ಕೀಡಾಗಿದೆ.

➡ಪುಟ ೪



- ವಿಜ್ಞಾನ, ಆರೋಗ್ಯ, ಕೃಷಿ, ಜಲನಿರ್ವಹಣೆ, ಸಂಶೋಧನೆ, ಹವಾಮಾನ ಬದಲಾವಣೆ, ಇಂಧನ ಪರಿವರ್ತನೆ, ಕಡಲ ಅಭಿವೃದ್ಧಿ ಕ್ಷೇತ್ರಗಳಲ್ಲಿ ಸಹಕಾರ ವಿಸ್ತರಿಸಲು ಉಭಯ ದೇಶಗಳ ಒಪ್ಪಿಗೆ. ಉದ್ಯೋಗ, ಶಿಕ್ಷಣ ಕ್ಷೇತ್ರದಲ್ಲೂ ಸಹಕಾರಕ್ಕೆ ಒತ್ತು

ವಿಶ್ವವಿಖ್ಯಾತ ಸಿಇಒಗಳ ಜತೆ ಪ್ರಧಾನಿ ಮೋದಿ ಮಾತುಕತೆ

ಗುಜರಾತಿನ ಧೋಲೇರಾದಲ್ಲಿ ಟಾಟಾ ಎಲೆಕ್ಟ್ರಾನಿಕ್ಸ್ ಮತ್ತು ಎಎಸ್‌ಎಂಎಲ್ ನಡುವೆ ಸೆಮಿಕಂಡಕ್ಟರ್ ಫ್ಯಾಬ್‌ಗೆ ಬೆಂಬಲ ನೀಡುವ ಒಪ್ಪಂದ ಈ ಒಪ್ಪಂದಗಳಲ್ಲಿ ಸೇರಿದೆ. ಯುರೋಪ್-ಭಾರತ ನಡುವಣ ಎಫ್‌ಟಿಎಯ ತ್ವರಿತ ಅನುಷ್ಠಾನಕ್ಕೆ ಉಭಯ ನಾಯಕರು ಕರೆ ನೀಡಿದರು. ಈ ವೇಳೆ ನಡೆದ ಸಿಇಒಗಳ ದುಂಡುಮೇಜಿನ ಸಭೆಯಲ್ಲಿ ಮಾತನಾಡಿದ ಪ್ರಧಾನಿ ಮೋದಿಯವರು, ಭಾರತ ಪ್ರಮಾಣ ಮತ್ತು ಸ್ಥಿರತೆಯ ಸಂಕೇತವಾಗಿದೆ. ಇಂದು ಮೂಲಸೌಕರ್ಯಗಳ ಅಭಿವೃದ್ಧಿಯಲ್ಲಿನ ವೇಗ, ಸ್ವಚ್ಛ ಇಂಧನ, ಸಂಪರ್ಕಕ್ಕೆ ವಿಶ್ವದ ಯಾವುದೇ ದೇಶವನ್ನು ಭಾರತದೊಂದಿಗೆ ತುಲನೆ ಮಾಡಲು ಸಾಧ್ಯವಿಲ್ಲ. ಭಾರತವಿಂದು ವಿಶ್ವದ ಬೆಳವಣಿಗೆಗೆ ಶೇ.17ರಷ್ಟು ಕೊಡುಗೆ ನೀಡುತ್ತಿದೆ. ಅಭಿವೃದ್ಧಿ ಕ್ಷೇತ್ರದಲ್ಲಿ ಖಾಸಗಿಯವರಿಗೂ ಸಮಾನ ಅವಕಾಶ ನೀಡಲಾಗುತ್ತಿದೆ ಎಂದು ಬೊಟ್ಟು ಮಾಡಿದರು. ಈ ಸಭೆಯಲ್ಲಿ ನೆದರ್ಲ್ಯಾಂಡ್‌ನ ವಿಶ್ವವಿಖ್ಯಾತ ಉದ್ಯಮಿಗಳು, ಸಿಇಒಗಳು ಪಾಲ್ಗೊಂಡಿದ್ದರು.

ಚೋಳರ ತಾಮ್ರ ಶಾಸನ ಮರಳಿಸಿದ ನೆದರ್‌ಲ್ಯಾಂಡ್



ಚೋಳರ ಕಾಲದ ಅಮೂಲ್ಯ ತಾಮ್ರದ ಶಾಸನಗಳನ್ನು ನೆದರ್‌ಲ್ಯಾಂಡ್ ಪ್ರಧಾನಿ ರಾಬ್ ಜೆಟ್ಟನ್ ಭಾರತಕ್ಕೆ ಹಿಂದಿರುಗಿಸಿದ್ದಾರೆ. ವಿಶೇಷ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ತಾಮ್ರದ ಶಾಸನ ಪ್ಲೇಟ್‌ಗಳನ್ನು ಜೆಟ್ಟನ್ ಹಸ್ತಾಂತರ ಮಾಡಿದ್ದಾರೆ.

➡ಪುಟ ೪

ನೌಕೆಗೆ ಅಡ್ಡಿ ಬೇಡ: ವಿಶ್ವಸಂಸ್ಥೆಯಲ್ಲಿ ಭಾರತ

ಹಾರ್ಮುಜ್: ನೌಕೆಗಳ ಮೇಲಿನ ದಾಳಿಗೆ ಆತಂಕ



ಜಿನೀವಾ: ಹಾರ್ಮುಜ್ ಜಲಸಂಧಿಯಲ್ಲಿ ವಾಣಿಜ್ಯ ನೌಕೆಗಳನ್ನು ಗುರಿಪಡಿಸುತ್ತಿರುವುದು, ನಾಗರಿಕ ಸಿಬ್ಬಂದಿಯ ಪ್ರಾಣಕ್ಕೆ ಅಪಾಯ ತಂದೊಡ್ಡುತ್ತಿರುವುದು ಮತ್ತು ನೌಕಾಯಾನಕ್ಕೆ ಅಡ್ಡಿಪಡಿಸುತ್ತಿರುವ ಬಗ್ಗೆ ಭಾರತ ವಿಶ್ವಸಂಸ್ಥೆಯಲ್ಲಿ ತೀವ್ರ ಕಳವಳ ವ್ಯಕ್ತಪಡಿಸಿದೆ.

ಪಶ್ಚಿಮ ಏಷ್ಯಾ ಸಂಘರ್ಷದಿಂದಾಗಿ ಉಂಟಾಗಿರುವ ಇಂಧನ ಮತ್ತು ರಸಗೊಬ್ಬರ ಬಿಕ್ಕಟ್ಟಿನ ಕುರಿತು ಶುಕ್ರವಾರ ನಡೆದ ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಮಂಡಳಿಯ ವಿಶೇಷ ಸಭೆಯಲ್ಲಿ ವಿಶ್ವಸಂಸ್ಥೆಗೆ ಭಾರತದ ಖಾಯಂ ಪ್ರತಿನಿಧಿ ಪರ್ವತನೇನಿ ಹರೀಶ್ ಮಾತನಾಡಿದರು. ಸುರಕ್ಷಿತ ನೌಕಾಯಾನಕ್ಕೆ ಸಂಬಂಧಿಸಿದ ಅಂತಾರಾಷ್ಟ್ರೀಯ ಕಾನೂನುಗಳನ್ನು ಗೌರವಿಸಬೇಕು ಎಂದು ಅವರು ಪ್ರತಿಪಾದಿಸಿದರು.



ಈ ಬಿಕ್ಕಟ್ಟನ್ನು ಎದುರಿಸಲು ಅಂತಾರಾಷ್ಟ್ರೀಯ ಸಹಕಾರದೊಂದಿಗೆ ಅಲ್ಪಾವಧಿ ಹಾಗೂ ರಚನಾತ್ಮಕ ಕ್ರಮಗಳ ಸಂಯೋಜನೆ ಅತ್ಯಗತ್ಯ ಎಂದು ಪ್ರತಿಪಾದಿಸಿದ ಹರೀಶ್, ವಾಣಿಜ್ಯ ನೌಕೆಗಳನ್ನು ಗುರಿಪಡಿಸುವುದು, ನಾಗರಿಕ ಸಿಬ್ಬಂದಿಯನ್ನು ಅಪಾಯಕ್ಕೆ ಸಿಲುಕಿಸುವುದು ಮತ್ತು ಮುಕ್ತ ನೌಕಾಯಾನಕ್ಕೆ ಅಡ್ಡಿಪಡಿಸುವುದು ಒಪ್ಪಿಕೊಳ್ಳಲು ಸಾಧ್ಯವಿಲ್ಲದ್ದಾಗಿದೆ ಎಂಬುದನ್ನು ಪುನರುಚ್ಚರಿಸಿದ್ದಾರೆ.

ಇತ್ತೀಚಿನ ನೌಕೆ ಮೇಲಿನ ದಾಳಿ: ಸೊಮಾಲಿಯಾದಿಂದ ಹೊರಟಿದ್ದ ಭಾರತದ ಧ್ವಜ ಹೊಂದಿದ ವಾಣಿಜ್ಯ ನೌಕೆ ಮೇಲೆ ಮೇ 13ರಂದು ಒಮಾನ್ ಕರಾವಳಿಯಲ್ಲಿ ನಡೆದ ದಾಳಿ ಹಿನ್ನೆಲೆ ಭಾರತ ಈ ಹೇಳಿಕೆ ನೀಡಿದೆ.

➡ಪುಟ ೪

ಹಾರ್ಮುಜ್ ದಾಟಿ ಗುಜರಾತ್ ಪ್ರವೇಶಿಸಿದ ಎಲ್‌ಪಿಜಿ ಹಡಗು

ಮಾರ್ಷಲ್ ಐಲ್ಯಾಂಡ್ ರಾಷ್ಟ್ರಧ್ವಜ ಹೊಂದಿರುವ ಎಲ್‌ಪಿಜಿ ಹಡಗು ಸಿಮಿ 20,000 ಟನ್‌ಗಳಷ್ಟು ಎಲ್‌ಪಿಜಿ ಅನಿಲವನ್ನು ಭಾರತಕ್ಕೆ ತಲುಪಿಸಿದೆ. ಹಾರ್ಮುಜ್ ಜಲಸಂಧಿ ದಾಟಿಕೊಂಡ ಬಂದ ಸಿಮಿ ಗುಜರಾತ್‌ನ ಕಾಂಡ್ಲಾದ ದೀನದಯಾಳ್ ಬಂದರಿನಲ್ಲಿ ಲಂಗರು ಹಾಕಿದೆ. ಮೇ 13ರಂದು ಸಿಮಿ ಹಾರ್ಮುಜ್ ದಾಟಿದ್ದು, ಮಧ್ಯಪ್ರಾಚ್ಯ ಸಂಘರ್ಷ ಮಧ್ಯೆಯೂ ಇಂಧನ ಪೂರೈಕೆ ಮಾಡಿದೆ. ಈ ನೌಕೆಯಲ್ಲಿ 21 ಸಿಬ್ಬಂದಿಯಿದ್ದು, 8 ಉಕ್ರೇನಿಯನ್ನರು ಮತ್ತು 13 ಫಿಲಿಪಿನೋಗಳು ಇದ್ದರು. ಸದ್ಯದ ಆತಂಕದ ಪರಿಸ್ಥಿತಿಯಲ್ಲಿ ಹಾರ್ಮುಜ್ ದಾಟಿದ 11ನೇ ಹಡಗು ಇದಾಗಿದೆ.

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ರೋಹಿಣಿ

ದಿನದ ಮಾತು

ಸಜ್ಜನರ ದರ್ಶನ ಒಳ್ಳೆಯದು. ಅವರ ಹಿತೋಪದೇಶ ಕೇಳುವುದು ಇನ್ನೂ ಒಳ್ಳೆಯದು.
▲ನೀತಿ ಮಂಜರಿ

ಮಿತವ್ಯಯ ಕರೆ: ಈ ಪರಿಯ ಆಕ್ರೋಶ ಏಕೆ?

ನೇರ ನೋಟ
• ದು.ಗು.ಲಕ್ಷ್ಮಣ

• ಪುಟ ೬

ಕಿರುಸುದ್ದಿ

ಉಕ್ರೇನ್ ಡ್ರೋನ್ ದಾಳಿ: ಭಾರತೀಯ ಸೇರಿ 4 ಸಾವು

ಮಾಸ್ಕೋ: ರಷ್ಯಾ ಮೇಲೆ ಉಕ್ರೇನ್ ನಡೆಸಿದ ಈವರೆಗಿನ ಅತಿ ದೊಡ್ಡ ಡ್ರೋನ್ ದಾಳಿಗೆ ಓರ್ವ ಭಾರತೀಯ ಸೇರಿ ನಾಲ್ವರು ಬಲಿಯಾಗಿದ್ದು, 12 ಮಂದಿ ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.


• ಪುಟ ೭

ಸುಪ್ರೀಂ ಆದೇಶ ಸರ್ಕಾರ ಪಾಲಿಸಲಿ: ಕಾರಜೋಳ

• ಪುಟ ೫

ಬೆಂಗ್ಳೂರು-ಮುಂಬೈ ರೈಲಿಗೆ ನಿಶಾನೆ

ಬೆಂಗಳೂರು: ನಗರದ ಸರ್.ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ ಮುಂಬೈನ ಲೋಕಮಾನ್ಯ ತಿಲಕ್ ಟರ್ಮಿನಲ್‌ವರೆಗೆ ಸಂಚರಿಸಲಿರುವ ಹೊಸ ದ್ವಿ-ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ಸೇವೆಗೆ ಭಾನುವಾರ ಚಾಲನೆ ನೀಡಲಾಯಿತು. ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಆನ್‌ಲೈನ್ ಮೂಲಕ ನೂತನ ರೈಲಿಗೆ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.



➡ಪುಟ ೪

ಯುಎಇ ಅಣು ಸ್ಥಾವರಕ್ಕೆ ಡ್ರೋನ್ ದಾಳಿ
ಮಧ್ಯಪ್ರಾಚ್ಯದಲ್ಲಿ ಮತ್ತೆ ಹೆಚ್ಚಿದ ಭೀತಿ

ದುಬೈ: ಯುನೈಟೆಡ್ ಅರಬ್ ಎಮಿರೇಟ್ಸ್‌ನ(ಯುಎಇ) ಏಕೈಕ ಪರಮಾಣು ವಿದ್ಯುತ್ ಸ್ಥಾವರವನ್ನು ಗುರಿಯಾಗಿಸಿ ಭಾನುವಾರ ಡ್ರೋನ್ ದಾಳಿ ನಡೆದಿದ್ದು, ಅದರ ಆವರಣದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಆದರೆ, ಸ್ಥಾವರ ಸುರಕ್ಷಿತವಾಗಿದೆ ಮತ್ತು ಯಾವುದೇ ವಿಕಿರಣ ಸೋರಿಕೆ ಅಥವಾ ಗಾಯಗಳಾದ ವರದಿಯಾಗಿಲ್ಲ, ಎಂದು ಯುಎಇ ಪರಮಾಣು ನಿಯಂತ್ರಣ ಸಂಸ್ಥೆ ತಿಳಿಸಿದೆ. ಆದಾಗ್ಯೂ, ಮಧ್ಯಪ್ರಾಚ್ಯದಲ್ಲಿ ಮತ್ತೆ ಆತಂಕ ಹೆಚ್ಚಳವಾಗಿದೆ.

ವಿಯೆನ್ನಾ ಮೂಲದ ಅಂತಾರಾಷ್ಟ್ರೀಯ ಅಣುಶಕ್ತಿ ಸಂಸ್ಥೆ (ಐಎಇಎ), ದಾಳಿಯಿಂದಾಗಿ ವಿದ್ಯುತ್ ಜನರೇಟರ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಒಂದು ರಿಯಾಕ್ಟರ್ ಪ್ರಸ್ತುತ ತುರ್ತು ಡೀಸೆಲ್ ಜನರೇಟರ್‌ಗಳ ಮೂಲಕ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದೆ. ಐಎಇಎ ಮಹಾನಿರ್ದೇಶಕ ರಾಫೆಲ್ ಮರಿಯಾನೊ ಗ್ರೊಸ್ಸಿ, ಈ ಘಟನೆಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದು, ಪರಮಾಣು ಸುರಕ್ಷತೆಗೆ ಧಕ್ಕೆ ತರುವ ಇಂತಹ ಮಿಲಿಟರಿ ಕ್ರಮಗಳನ್ನು ಒಪ್ಪಲು ಸಾಧ್ಯವಿಲ್ಲ, ಎಂದು ತಿಳಿಸಿದ್ದಾರೆ.

ಈ ದಾಳಿಯ ಜವಾಬ್ದಾರಿಯನ್ನು ಯಾರೂ ಹೊತ್ತುಕೊಂಡಿಲ್ಲ ಮತ್ತು ಯುಎಇ ಯಾರ ಮೇಲೂ ನೇರ ಆರೋಪ ಮಾಡಿಲ್ಲ. ಆದರೆ, ಹಾರ್ಮುಜ್ ಜಲಸಂಧಿಯ ವಿಚಾರವಾಗಿ ಉದ್ವಿಗ್ನತೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಇರಾನ್ ಹಲವು ಡ್ರೋನ್ ಮತ್ತು ಕ್ಷಿಪಣಿ ದಾಳಿಗಳನ್ನು ನಡೆಸಿದೆ ಎಂದು ಯುಎಇ ಆರೋಪಿಸಿದೆ.



ತೀವ್ರಗೊಂಡ ಉದ್ವಿಗ್ನತೆ

ಇಸ್ರೇಲ್ ಸೇನಾ ಅಧಿಕಾರಿ ಸೇರಿದಂತೆ ಇಬ್ಬರು ಅನಾಮಧೇಯ ಮೂಲಗಳು ನೀಡಿರುವ ಮಾಹಿತಿ ಪ್ರಕಾರ, ಇರಾನ್ ಮೇಲಿನ ದಾಳಿಯನ್ನು ಪುನರಾರಂಭಿಸುವ ಬಗ್ಗೆ ಇಸ್ರೇಲ್ ಪ್ರಸ್ತುತ ಯುಎಸ್‌ನೊಂದಿಗೆ ಸಮಾಲೋಚನೆ ನಡೆಸುತ್ತಿದೆ. ಇಸ್ರೇಲ್ ಯಾವುದೇ ಪರಿಸ್ಥಿತಿಗೂ ಸಿದ್ಧವಾಗಿದೆ ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ. ಈ ಮಧ್ಯೆ, ಇರಾನ್ ಸರ್ಕಾರಿ ದೂರದರ್ಶನ, ಸಾರ್ವಜನಿಕರನ್ನು ಯುದ್ಧಕ್ಕೆ ಸಜ್ಜುಗೊಳಿಸಲು ಸಶಸ್ತ್ರ ನಿರೂಪಕರ ಮೂಲಕ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿದ್ದು, ಅದರಲ್ಲಿ ಒಬ್ಬ ನಿರೂಪಕ ಯುಎಇ ಧ್ವಜಕ್ಕೆ ಗುಂಡು ಹಾರಿಸುವಂತೆ ಸನ್ನೆ ಮಾಡಿರುವುದು ಕಂಡುಬಂದಿದೆ.

1991ರ ರಹಸ್ಯ

ಭಾರತ 47,000 ಕೆಜಿ ಚಿನ್ನವನ್ನು ಯುಕೆಗೆ ಕಳುಹಿಸಲು ಕಾರಣವೇನು?

ಭಾರತ ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾಗ, ವಿದೇಶಿ ಸಾಲ ಮರುಪಾವತಿ ಸುಸ್ತಿದಾರರಾಗುವುದನ್ನು ತಪ್ಪಿಸಲು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ(ಆರ್‌ಬಿಐ) 1991ರ ಜುಲೈನಲ್ಲಿ ಸುಮಾರು 47,000 ಕೆಜಿ ಚಿನ್ನವನ್ನು ಇಂಗ್ಲೆಂಡ್‌ಗೆ ರಹಸ್ಯವಾಗಿ ವಿಮಾನದ ಮೂಲಕ ರವಾನಿಸಿ, 405 ಮಿಲಿಯನ್ ಡಾಲರ್ ತುರ್ತು ಸಾಲ ಪಡೆದುಕೊಂಡಿತು. ಈ ಕಾರ್ಯಾಚರಣೆ, ದೇಶವನ್ನು ಆರ್ಥಿಕ ದಿವಾಳಿತನದಿಂದ ರಕ್ಷಿಸಿದ್ದಲ್ಲದೆ, ಪ್ರಧಾನಿ ಪಿ.ವಿ. ನರಸಿಂಹರಾವ್ ನೇತೃತ್ವದ ನೂತನ ಸರ್ಕಾರ ದೇಶದಲ್ಲಿ ಐತಿಹಾಸಿಕ ಆರ್ಥಿಕ ಸುಧಾರಣೆಗಳನ್ನು ತರಲು ಪ್ರಮುಖ ಮುನ್ನುಡಿಯಾಯಿತು.

ಏನಿದು ರಹಸ್ಯ ಚಿನ್ನ ರವಾನೆ?

ಆರ್‌ಬಿಐ ಮುಂಬೈನಿಂದ ನಾಲ್ಕು ಕಂತುಗಳಲ್ಲಿ ಒಟ್ಟು 46.91 ಟನ್ ಚಿನ್ನವನ್ನು 1991ರ ಜುಲೈ 4ರಿಂದ ಏರ್ ಲಿಫ್ಟ್ ಮಾಡಲು ಪ್ರಾರಂಭಿಸಿತು. ಸಶಸ್ತ್ರ ಪಡೆಗಳ ಕಾವಲಿನಲ್ಲಿ ಆರ್‌ಬಿಐನ ವಾಹನಗಳ ಮೂಲಕ ಚಿನ್ನವನ್ನು ಮುಂಬೈನ ಸಾಂತಾಕ್ರೂಜ್ ವಿಮಾನ ನಿಲ್ದಾಣಕ್ಕೆ ಸಾಗಿಸಲಾಯಿತು. ಸಾಮಾನ್ಯ ಕಸ್ಟಮ್ಸ್ ನಿಯಮಗಳಿಂದ ವಿನಾಯಿತಿ ಪಡೆಯಲು ಹಣಕಾಸು ಸಚಿವಾಲಯದಿಂದ ವಿಶೇಷ ಅನುಮತಿಯನ್ನೂ ಪಡೆಯಲಾಗಿತ್ತು.





ಪ್ರಸ್ತುತ ಚಿನ್ನದ ದಾಸ್ತಾನು ಮತ್ತು ವಿದೇಶಿ ವಿನಿಮಯದ ಸವಾಲುಗಳು

1991ರ ಪರಿಸ್ಥಿತಿಗೆ ಹೋಲಿಸಿದರೆ ಇಂದು ಭಾರತದ ಆರ್ಥಿಕ ಸ್ಥಿತಿ ಸಂಪೂರ್ಣ ಬದಲಾಗಿದೆ. ಮಾರ್ಚ್ 2026ರ ಹೊತ್ತಿಗೆ ಆರ್‌ಬಿಐ 115 ಬಿಲಿಯನ್ ಡಾಲರ್ ಮೌಲ್ಯದ 880.52 ಮೆಟ್ರಿಕ್ ಟನ್ ಚಿನ್ನದ ದಾಸ್ತಾನು ಹೊಂದಿದೆ. ಇದರಲ್ಲಿ ಶೇ.77ರಷ್ಟು ಚಿನ್ನವನ್ನು ದೇಶದ ಒಳಗೇ ಸುರಕ್ಷಿತವಾಗಿ ಇಡಲಾಗಿದೆ. ಇತ್ತೀಚಿನ ವರ್ಷಗಳಲ್ಲಿ ವಿದೇಶಗಳಿಂದ 100 ಟನ್‌ಗಿಂತಲೂ ಹೆಚ್ಚು ಚಿನ್ನವನ್ನು ವಾಪಸ್ ತರಲಾಗಿದೆ. ಆದರೂ, 2025-26ರ ಹಣಕಾಸು ವರ್ಷದಲ್ಲಿ ಭಾರತ ಸುಮಾರು 72 ಬಿಲಿಯನ್ ಡಾಲರ್ ಮೌಲ್ಯದ ಚಿನ್ನವನ್ನು ಆಮದು ಮಾಡಿಕೊಂಡಿದೆ. ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಕಾರಣದಿಂದಾಗಿ ತೈಲ ಬೆಲೆಗಳು ಏರಿಕೆ ಕಂಡು ಆಮದು ವೆಚ್ಚ ಹೆಚ್ಚಾಗುತ್ತಿರುವುದರಿಂದ, ವಿದೇಶಿ ವಿನಿಮಯ ಮತ್ತು ಭಾರತೀಯ ರೂಪಾಯಿಯ ಮೌಲ್ಯವನ್ನು ರಕ್ಷಿಸಲು ಕನಿಷ್ಠ ಒಂದು ವರ್ಷದವರೆಗೆ ಅನಗತ್ಯ ಚಿನ್ನದ ಖರೀದಿಯನ್ನು ಮುಂದೂಡುವಂತೆ ಪ್ರಧಾನಿ ನರೇಂದ್ರ ಮೋದಿ ದೇಶದ ಜನತೆಗೆ ಕರೆ ನೀಡಿದ್ದಾರೆ.

ಸುದ್ದಿ ಸಮಗ್ರ



1991ರ ಆರ್ಥಿಕ ಕುಸಿತಕ್ಕೆ ಕಾರಣಗಳೇನು?

1990–91ರ ವೇಳೆಗೆ ಹೆಚ್ಚುತ್ತಿದ್ದ ಸಾಲ, ರಾಜಕೀಯ ಅಸ್ಥಿರತೆ ಮತ್ತು ವಿದೇಶಿ ವಿನಿಮಯದ ತೀವ್ರ ಕೊರತೆಯಿಂದಾಗಿ ಭಾರತದ ಆರ್ಥಿಕತೆ ಕುಸಿದಿತ್ತು. ಆಗ ದೇಶದಲ್ಲಿದ್ದ ವಿದೇಶಿ ವಿನಿಮಯ ಕೇವಲ ಒಂದು ವಾರದ ಆಮದಿಗೆ ಮಾತ್ರ ಸಾಕಾಗುವಷ್ಟಿತ್ತು. 1991ರ ಜನವರಿಯ ಕೊಲ್ಲಿ ಯುದ್ಧದಿಂದಾಗಿ ಜಾಗತಿಕ ತೈಲ ಬೆಲೆಗಳು ತೀವ್ರವಾಗಿ ಏರಿದ್ದರಿಂದ ಮತ್ತು ಗಲ್ಫ್ ದೇಶಗಳಿಂದ ಬರುತ್ತಿದ್ದ ಹಣ ನಿಂತುಹೋಗಿದ್ದರಿಂದ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿತು. ಇದರಿಂದಾಗಿ ಅಂತಾರಾಷ್ಟ್ರೀಯ ಸಂಸ್ಥೆಗಳು ಭಾರತದ ಕ್ರೆಡಿಟ್ ರೇಟಿಂಗ್ ಅನ್ನು ಕಡಿಮೆ ಮಾಡಿದ್ದವು.

ಚಿನ್ನ ನಿನ್ನ ನಾ ಮಾರುವೆ!

- ಜುಲೈ 1991ರಲ್ಲಿ 46.91 ಟನ್ ಚಿನ್ನವನ್ನು ಯುಕೆಗೆ ರಹಸ್ಯವಾಗಿ ರವಾನಿಸಿದ ಆರ್‌ಬಿಐ
- ದೇಶ ದಿವಾಳಿಯಾಗುವುದನ್ನು ತಪ್ಪಿಸಲು ಈ ಮೂಲಕ 405 ಮಿಲಿಯನ್ ಡಾಲರ್ ತುರ್ತು ಸಾಲ
- ಚಂದ್ರಶೇಖರ್ ನೇತೃತ್ವದ ಉಸ್ತುವಾರಿ ಸರ್ಕಾರದಿಂದ ಈ ತುರ್ತು ಚಿನ್ನದ ಯೋಜನೆಗೆ ಅನುಮೋದನೆ
- ಮಾರ್ಚ್ 2026ರ ಹೊತ್ತಿಗೆ ಭಾರತದ ಒಟ್ಟು ಚಿನ್ನದ ದಾಸ್ತಾನು 880.52 ಮೆಟ್ರಿಕ್ ಟನ್‌ಗಳಿಗೆ ಏರಿಕೆ
- ಯುದ್ಧದ ಹಿನ್ನೆಲೆಯಲ್ಲಿ ಪ್ರಧಾನಿಯಿಂದ ಚಿನ್ನದ ಖರೀದಿಯನ್ನು ಒಂದು ವರ್ಷ ಮುಂದೂಡಲು ವಿನಂತಿ

ತುರ್ತು ಆರ್ಥಿಕ ಕ್ರಮಗಳು ಮತ್ತು ಸಾಲ

ಆರ್‌ಬಿಐ ಗವರ್ನರ್ ಎಸ್.ವೆಂಕಟರಮಣನ್ ನೇತೃತ್ವದ ತಂಡದ ಈ ಪ್ರಸ್ತಾವನೆಗೆ, ನವೆಂಬರ್ 1990ರಿಂದ ಜೂನ್ 1991ರವರೆಗೆ ಅಧಿಕಾರದಲ್ಲಿದ್ದ ಪ್ರಧಾನಿ ಚಂದ್ರಶೇಖರ್ ಅವರ ಉಸ್ತುವಾರಿ ಸರ್ಕಾರ ಧೈರ್ಯದಿಂದ ಅನುಮೋದನೆ ನೀಡಿತು. ಆರ್‌ಬಿಐ ಚಿನ್ನವನ್ನು ಅಡವಿಡುವ ಮುನ್ನ, ಮೇ 1991ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಯೂನಿಯನ್ ಬ್ಯಾಂಕ್ ಆಫ್ ಸ್ವಿಟ್ಜರ್ಲೆಂಡ್ ಮೂಲಕ 20 ಟನ್ ಮುಟ್ಟುಗೋಲು ಹಾಕಿಕೊಂಡ ಚಿನ್ನವನ್ನು ವಿನಿಮಯ ಮಾಡಿಕೊಂಡು 215 ಮಿಲಿಯನ್ ಡಾಲರ್ ಸಂಗ್ರಹಿಸಲಾಗಿತ್ತು. ನಂತರ 1991ರ ನವೆಂಬರ್ ವೇಳೆಗೆ ಭಾರತ ಈ ಎಲ್ಲಾ ಸಾಲವನ್ನು ಮರುಪಾವತಿಸಿತು, ಆದರೆ ಚಿನ್ನ ವಿದೇಶಿ ಬ್ಯಾಂಕುಗಳಲ್ಲೇ ಉಳಿದು ಭಾರತದ ಆಸ್ತಿಯಾಗಿ ಮುಂದುವರಿಯಿತು.

ಚಿನ್ನದ ನಿಯಂತ್ರಣಕ್ಕೆ ಐತಿಹಾಸಿಕ ಕಾಯ್ದೆಗಳು

ವಿದೇಶಿ ವಿನಿಮಯವನ್ನು ಉಳಿಸಲು ಭಾರತ ಸರ್ಕಾರ ಈ ಹಿಂದೆಯೂ ಚಿನ್ನದ ಮಾರುಕಟ್ಟೆಯ ಮೇಲೆ ಕಠಿಣ ನಿಯಂತ್ರಣಗಳನ್ನು ಹೇರಿತ್ತು. 1962ರ ಚೀನಾ ಯುದ್ಧದ ನಂತರ ಆರ್ಥಿಕತೆ ಸುಧಾರಿಸಲು ತಂದ ಚಿನ್ನದ ನಿಯಂತ್ರಣ ನಿಯಮಗಳು, 1968ರಲ್ಲಿ ಹಣಕಾಸು ಸಚಿವ ಮೊರಾರ್ಜಿ ದೇಸಾಯಿ ಅವರ ಅವಧಿಯಲ್ಲಿ 'ಚಿನ್ನದ ನಿಯಂತ್ರಣ ಕಾಯ್ದೆ'ಯಾಗಿ ಜಾರಿಗೆ ಬಂದವು. ಇದು ಸಾರ್ವಜನಿಕರು ಚಿನ್ನದ ಬಿಸ್ಕೆಟ್‌ಗಳನ್ನು ಹೊಂದುವುದನ್ನು ನಿಷೇಧಿಸಿತು ಮತ್ತು 14 ಕ್ಯಾರೆಟ್‌ಗಿಂತ ಹೆಚ್ಚಿನ ಚಿನ್ನದ ಒಡವೆಗಳ ತಯಾರಿಕೆಯನ್ನು ನಿರ್ಬಂಧಿಸಿತು. ಆದರೆ ಈ ನಿಯಂತ್ರಣಗಳು ವಿಫಲವಾಗಿ, ಕೇರಳ, ಗುಜರಾತ್ ಮತ್ತು ಮಹಾರಾಷ್ಟ್ರ ಕರಾವಳಿಯಲ್ಲಿ ಚಿನ್ನದ ಕಳ್ಳಸಾಗಣೆ ಹೆಚ್ಚಾಗಲು ಕಾರಣವಾಯಿತು.

ಪೋಲಾರ್ ಸ್ಟಾರ್ ಮೋದಿ

ಗೋಥೆನ್‌ಬರ್ಗ್(ಸ್ವೀಡನ್): ಪ್ರಧಾನಿ ನರೇಂದ್ರ ಮೋದಿ ಅವರಿಗೆ ಭಾನುವಾರ ಸ್ವೀಡನ್‌ನ ಅತ್ಯುನ್ನತ ಗೌರವಗಳಲ್ಲಿ ಒಂದಾದ ರಾಯಲ್ ಆರ್ಡರ್ ಆಫ್ ಪೋಲಾರ್ ಸ್ಟಾರ್ ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದೆ. ಸ್ಕ್ಯಾಂಡಿನೇವಿಯನ್ ರಾಷ್ಟ್ರವಾದ ಸ್ವೀಡನ್ ಸರ್ಕಾರವು ಪ್ರಧಾನಮಂತ್ರಿಗೆ ನೀಡುವ ಅತ್ಯುನ್ನತ ಗೌರವ ಇದಾಗಿದೆ. ಇದು ಪ್ರಧಾನಿ ಮೋದಿಯವರಿಗೆ ಲಭಿಸಿರುವ 31ನೇ ಅಂತಾರಾಷ್ಟ್ರೀಯ ಗೌರವವಾಗಿದೆ.

ರಾಯಲ್ ಆರ್ಡರ್ ಆಫ್ ದ ಪೋಲಾರ್ ಸ್ಟಾರ್ ಪ್ರಶಸ್ತಿಯನ್ನು 1748ರಲ್ಲಿ ಸ್ಥಾಪಿಸಲಾಗಿದ್ದು, ಸ್ವೀಡನ್ ಅಥವಾ ಸ್ವೀಡನ್‌ನ ಹಿತಾಸಕ್ತಿಗಳಿಗಾಗಿ ವೈಯಕ್ತಿಕ ಕೊಡುಗೆ ನೀಡಿದವರಿಗೆ, ವಿಶೇಷವಾಗಿ ಸಾರ್ವಜನಿಕ ಸೇವೆ ಹಾಗೂ ಕರ್ತವ್ಯ ನಿರ್ವಹಣೆಯಲ್ಲಿ ವಿಶಿಷ್ಟ ಸಾಧನೆ ಮಾಡಿದವರಿಗೆ ಈ ಗೌರವ ನೀಡಲಾಗುತ್ತದೆ ಎಂದು ಅಧಿಕೃತ ವೆಬ್‌ಸೈಟ್‌ನಲ್ಲಿ ತಿಳಿಸಲಾಗಿದೆ.

ಪ್ರಧಾನಿ ಮೋದಿ ಅವರು ಎರಡು ದಿನಗಳ ಸ್ವೀಡನ್ ಪ್ರವಾಸಕ್ಕಾಗಿ ಭಾನುವಾರ ಅಲ್ಲಿಗೆ ಆಗಮಿಸಿದ್ದರು. ಗೋಥೆನ್‌ಬರ್ಗ್ ವಿಮಾನ ನಿಲ್ದಾಣದಲ್ಲಿ ಅವರನ್ನು ಸ್ವೀಡನ್ ಪ್ರಧಾನಿ ಆತ್ಮೀಯವಾಗಿ ಸ್ವಾಗತಿಸಿದರು.

ಮೋದಿ ವಿಮಾನಕ್ಕೆ ಸ್ವೀಡನ್ ಸಮರ ವಿಮಾನ ರಕ್ಷಣೆ



ಪ್ರಧಾನಿ ಮೋದಿಗೆ ಸ್ವೀಡನ್ ವಾಯುಪಡೆಯ ಯುದ್ಧವಿಮಾನಗಳು ಎಸ್ಕಾರ್ಟ್ ನೀಡಿದವು.

ಯುಎಇ ಕೂಡಾ ಪ್ರಧಾನಿ ಮೋದಿ ಅವರಿಗೆ ಎಫ್–16 ಯುದ್ಧ ವಿಮಾನಗಳ ವಿಶೇಷ ರಕ್ಷಣೆ ನೀಡಿ ಸ್ವಾಗತಿಸಿದ್ದನ್ನಿಲ್ಲಿ ಸ್ಮರಿಸಬಹುದು.

ಯುರೋಪಿಯನ್ ಕಮಿಷನ್ ಅಧ್ಯಕ್ಷೆ ಉರ್ಸುಲಾ ಹಾಗೂ ಯುರೋಪಿನ ಪ್ರಮುಖ ಉದ್ಯಮಿಗಳೊಂದಿಗೆ ಯುರೋಪಿಯನ್ ಬಿಸಿನೆಸ್ ರೌಂಡ್ ಟೇಬಲ್ ಫಾರ್ ಇಂಡಸ್ಟ್ರಿ ಸಭೆಯಲ್ಲೂ ಮೋದಿ ಭಾಗವಹಿಸಲಿದ್ದಾರೆ. ಈ ಸಭೆ ಭಾರತ ಮತ್ತು ಯುರೋಪ್ ನಡುವಿನ ಹೂಡಿಕೆ ಹಾಗೂ ಕೈಗಾರಿಕಾ ಸಂಪರ್ಕವನ್ನು ಇನ್ನಷ್ಟು ಗಟ್ಟಿಗೊಳಿಸುವ ನಿರೀಕ್ಷೆಯಿದೆ.

ಕಿರುಸುದ್ದಿ

ವಿಜಯ್ ಮೇಲೆ ನನಗೆ ಅಸೂಯೆ ಇಲ್ಲ: ರಜಿನಿ

ಚೆನ್ನೈ: ಡಿಎಂಕೆ ಮುಖ್ಯಸ್ಥ ಎಂ.ಕೆ. ಸ್ಟಾಲಿನ್ ಜತೆ ತಮ್ಮ ಸ್ನೇಹವು ರಾಜಕೀಯಕ್ಕಿಂತ ಮಿಗಿಲಾಗಿದ್ದು ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ವಿರುದ್ಧ ತಮಗೆ ಯಾವುದೇ ಅಸೂಯೆ ಅಥವಾ ರಾಜಕೀಯ ವಿರೋಧವಿಲ್ಲ ಎಂದು ಸೂಪರ್‌ಸ್ಟಾರ್ ರಜಿನಿಕಾಂತ್ ಸ್ಪಷ್ಟಪಡಿಸಿದರು. ಇಲ್ಲಿನ ಪೊಯೆಸ್ ಗಾರ್ಡನ್ ನಿವಾಸದಲ್ಲಿ ಸುದ್ದಿಗೋಷ್ಠಿ ನಡೆಸಿದ ರಜಿನಿಕಾಂತ್, ಚುನಾವಣೆಗೆ ಸಂಬಂಧಿಸಿ ಸಾಮಾಜಿಕ ಜಾಲತಾಣಗಳು ಮತ್ತು ರಾಜಕೀಯ ವಲಯಗಳಲ್ಲಿ ತಮ್ಮ ವಿರುದ್ಧ ಹಲವು ಟೀಕೆಗಳು ಹರಿದಾಡುತ್ತಿರುವ ಕಾರಣ ಸಾರ್ವಜನಿಕವಾಗಿ ಮಾತನಾಡಲು ನಿರ್ಧರಿಸಿದ್ದೇನೆ ಎಂದರು.ಚುನಾವಣೆಯ ಸಂಬಂಧವಾಗಿ ನನ್ನ ವಿರುದ್ಧ ಹಲವು ಟೀಕೆಗಳು ಕೇಳಿಬರುತ್ತಿವೆ. ನಾನು ಇದಕ್ಕೆ ಪ್ರತಿಕ್ರಿಯಿಸದಿದ್ದರೆ, ಅವೇ ಸತ್ಯ ಎಂದು ಜನ ಭಾವಿಸುತ್ತಾರೆ ಎಂದ ಅವರು, ಚುನಾವಣೆಯ ಬಳಿಕ ಸ್ಟಾಲಿನ್ ಅವರನ್ನು ಭೇಟಿಯಾದದ್ದು ಸಂಪೂರ್ಣ ವೈಯಕ್ತಿಕ ಕಾರಣಕ್ಕಾಗಿ ಎಂದು ರಜಿನಿಕಾಂತ್ ಸ್ಪಷ್ಟಪಡಿಸಿದರು.

ಹಂಬನ್ತೋಟ ಬಂದರು ಬಳಿ ವಿಮಾನ ನಿಲ್ದಾಣ ಲೀಸ್‌ಗೆ?

ಹೊಸದಿಲ್ಲಿ: ಶ್ರೀಲಂಕಾ ಸರ್ಕಾರವು ಚೀನಾದ ನಿಯಂತ್ರಣದಲ್ಲಿರುವ ಹಂಬನ್ತೋಟ ಬಂದರು ಸಮೀಪದ ಮಟ್ಟಾಲ ರಾಜಪಕ್ಸೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ (ಎಂಆರ್‌ಐಎ) ಅನ್ನು 30 ವರ್ಷದ ನಿರ್ಮಾಣ–ಕಾರ್ಯಾಚರಣೆ–ವರ್ಗಾವಣೆ (ಬಿಒಟಿ)ಯ ಮಾದರಿಯಲ್ಲಿ ವಿದೇಶಿ ಹೂಡಿಕೆದಾರರಿಗೆ ಲೀಸ್‌ಗೆ ನೀಡಲು ಮುಂದಾಗಿರುವುದು ಕೇಂದ್ರ ಸರ್ಕಾರದ ಗಮನಕ್ಕೆ ಬಂದಿದೆ. 2017ರಲ್ಲಿ ಹಂಬನ್ತೋಟ ಬಂದರನ್ನು ಚೀನಾ 99 ವರ್ಷಗಳಿಗೆ ಲೀಸ್ ಮೂಲಕ ವಶಪಡಿಸಿಕೊಂಡಿದೆ. ಈಗ ಅದೇ ಪ್ರದೇಶದಲ್ಲಿ ವಿಮಾನ ನಿಲ್ದಾಣ ನಿರ್ಮಿಸಲು ಶ್ರೀಲಂಕಾ ಮುಂದಾಗಿದ್ದು, ಭಾರತೀಯ ಕಂಪನಿಗಳಿಗೆ ಹೂಡಿಕೆ ಅವಕಾಶ ಒದಗಿಸಲು ಕೇಂದ್ರ ಪ್ರಯತ್ನ ನಡೆಸುತ್ತಿದೆ ಎಂದು ತಿಳಿದುಬಂದಿದೆ.

ಇರಾನ್‌ಗೆ ಪ್ರಮುಖ 5 ಷರತ್ತು ಹಾಕಿದ ಅಮೆರಿಕ

ವಾಷಿಂಗ್ಟನ್: ಯುದ್ಧವನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ಸದ್ಯ ನಡೆಯುತ್ತಿರುವ ಶಾಂತಿ ಮಾತುಕತೆ ವೇಳೆ ಇರಾನ್ ಮುಂದೆ ಐದು ಪ್ರಮುಖ ಷರತ್ತುಗಳನ್ನು ಅಮೆರಿಕ ಮುಂದಿಟ್ಟಿದೆ ಎಂದು ವರದಿಯಾಗಿದೆ.ಹಿಂದಿನ ನಿರ್ಬಂಧಗಳು ಮತ್ತು ನೀತಿ ನಿರ್ಧಾರಗಳಿಂದ ಉಂಟಾದ ನಷ್ಟಗಳಿಗೆ ಇರಾನ್‌ಗೆ ಯಾವುದೇ ಪರಿಹಾರವನ್ನು ನೀಡಲು ವಾಷಿಂಗ್ಟನ್ ನಿರಾಕರಿಸಿದೆ. 400 ಕೆಜಿಗಳಷ್ಟು ಸಮೃದ್ಧ ಯುರೇನಿಯಂ ಅನ್ನು ಅಮೆರಿಕಕ್ಕೆ ಹಸ್ತಾಂತರಿಸಬೇಕೆಂದು ಅಮೆರಿಕ ಒತ್ತಾಯಿಸಿದೆ ಎಂದು ವರದಿಯಾಗಿದೆ.

ಎಬೋಲಾ: ಜಾಗತಿಕ ತುರ್ತುಸ್ಥಿತಿ ಘೋಷಣೆ

ಅಬುಜಾ: ಕಾಂಗೋ ಮತ್ತು ನೆರೆಯ ರಾಷ್ಟ್ರ ಉಗಾಂಡದಲ್ಲಿ ಎಬೋಲಾ ಸೋಂಕು ಹರಡುತ್ತಿರುವ ಹಿನ್ನೆಲೆ ವಿಶ್ವ ಆರೋಗ್ಯ ಸಂಸ್ಥೆ(ಡಬ್ಲ್ಯುಎಚ್‌ಒ) ಜಾಗತಿಕ ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿಯನ್ನು ಘೋಷಿಸಿದೆ. ಕೋವಿಡ್‌ನಂತೆ ಜಾಗತಿಕ ಮಹಾಮಾರಿಯ ಮಟ್ಟವನ್ನು ತಲುಪಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ ಸ್ಪಷ್ಟಪಡಿಸಿದೆ. ನೈಜೀರಿಯಾದ ಅಬುಜಾದಲ್ಲಿ ಮಾತನಾಡಿದ ವಿಶ್ವ ಆರೋಗ್ಯ ಸಂಸ್ಥೆ ಮಹಾನಿರ್ದೇಶಕ ಟೆಡ್ರೊಸ್ ಅಧನೊಮ್, ಈಗಾಗಲೇ 300ಕ್ಕೂ ಹೆಚ್ಚು ಶಂಕಿತ ಪ್ರಕರಣಗಳು ಮತ್ತು 88 ಸಾವುಗಳು ವರದಿ ಆಗಿರುವುದಾಗಿ ತಿಳಿಸಿದ್ದಾರೆ.

ಕಾಂಗೋದ ಪೂರ್ವ ಭಾಗದ ಇಟುರಿ ಪ್ರಾಂತ್ಯವೇ ಈ ಸೋಂಕಿನ ಕೇಂದ್ರವಾಗಿದ್ದು, ಈಗ ರಾಜಧಾನಿ ಕಿನ್ಶಾಸಾದಲ್ಲೂ ಸೋಂಕು ದೃಢಪಟ್ಟಿವೆ. ಎಬೋಲಾ ಅತ್ಯಂತ ಅಪಾಯಕಾರಿ ಮಹಾಮಾರಿಯಾಗಿದೆ. ವಾಂತಿ, ರಕ್ತ, ವೀರ್ಯ ಸೇರಿದಂತೆ ದೇಹದ ದ್ರವಾಂಶಗಳಿಂದ ಹರಡುತ್ತದೆ. ಅಪರೂಪದ ಬುಂಡಿಬುಗ್ಯೋ ವೈರಸ್ ರೂಪಾಂತರ: ಈ ಬಾರಿ ಹರಡುತ್ತಿರುವ ಬುಂಡಿಬುಗ್ಯೋ ಅಪರೂಪದ ಎಬೋಲಾ ರೂಪಾಂತರವಾಗಿದೆ. ಇದಕ್ಕಿನ್ನೂ ಲಸಿಕೆ ಲಭ್ಯವಿಲ್ಲವೆಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ. 2007–08ರಲ್ಲಿ ಉಗಾಂಡಾದ ಬುಂಡಿಬುಗ್ಯೋ ಜಿಲ್ಲೆಯಲ್ಲಿ ರೂಪಾಂತರ ಕಂಡುಬಂದಿತ್ತು. ಆಗ 149 ಮಂದಿ ಸೋಂಕಿಗೆ ಒಳಗಾಗಿದ್ದು, 37 ಮಂದಿ ಮೃತಪಟ್ಟಿದ್ದಾರೆ. ಕಾಂಗೋದಲ್ಲಿ ನಡೆಯುತ್ತಿರುವ ಉಗ್ರ ಹಿಂಸಾಚಾರ, ಗಣಿ ಕಾರ್ಮಿಕರ ನಿರಂತರ ವಲಸೆ ಹಾಗೂ ಗಡಿಭಾಗ ಸಂಚಾರ ಸೋಂಕು ಪತ್ತೆಹಚ್ಚಲು, ನಿಯಂತ್ರಿಸಲು ಕಷ್ಟವಾಗುತ್ತಿದೆ ಎಂದು ಆಫ್ರಿಕಾ ರೋಗ ತಡೆ ಮತ್ತು ನಿಯಂತ್ರಣ ಕೇಂದ್ರ ತಿಳಿಸಿದೆ.

ಒಎಸ್‌ಎಂ ಪಾರದರ್ಶಕ ವ್ಯವಸ್ಥೆ, ಆತಂಕ ಅನಗತ್ಯ

ಹೊಸದಿಲ್ಲಿ: ಸಿಬಿಎಸ್‌ಇಯ 12ನೇ ತರಗತಿ ಫಲಿತಾಂಶಗಳ ಕುರಿತಾಗಿ ಆನ್–ಸ್ಕ್ರೀನ್ ಮಾರ್ಕಿಂಗ್(ಒಎಸ್‌ಎಂ) ಬಗ್ಗೆ ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ಆತಂಕ ಹೆಚ್ಚಿದ ಹಿನ್ನೆಲೆ ಕೇಂದ್ರ ಶಿಕ್ಷಣ ಸಚಿವಾಲಯ, ಒಎಸ್‌ಎಂ ಹೊಸ ವ್ಯವಸ್ಥೆಯಲ್ಲ ಎಂಬ ಸ್ಪಷ್ಟನೆಯನ್ನು ನೀಡಿದೆ. ಶಿಕ್ಷಣ ಸಚಿವಾಲಯದ ಪ್ರಕಾರ, ಒಎಸ್‌ಎಂ ಹೊಸ ವ್ಯವಸ್ಥೆಯೇ ಅಲ್ಲ. ಸಿಬಿಎಸ್‌ಇ 2014ರಲ್ಲೇ ಈ ವ್ಯವಸ್ಥೆಯನ್ನು ಪರಿಚಯಿಸಿತ್ತು. ಈ ವರ್ಷ ಅದನ್ನು ಮತ್ತೆ ಜಾರಿಗೆ ತಂದಿದ್ದು, ಮೌಲ್ಯಮಾಪನವನ್ನು ಹೆಚ್ಚು ಪಾರದರ್ಶಕ ಹಾಗೂ ನಿಖರವಾಗಿಸಲು ತಂತ್ರಜ್ಞಾನ ಬಳಸಲಾಗಿದೆ ಎಂದು ತಿಳಿಸಿದೆ.

ಮುಖ್ಯಾಂಶಗಳು

- ಒಎಸ್‌ಎಂ ಮೂಲಕ ಉತ್ತರ ಪತ್ರಿಕೆಗಳ ಡಿಜಿಟಲ್ ಮೌಲ್ಯಮಾಪನ
- ಪ್ರಾದೇಶಿಕ ಕಚೇರಿಗಳ ಹೊರಗಡೆಯೂ ಶಿಕ್ಷಕರಿಂದ ಉತ್ತರ ಪತ್ರಿಕೆಗಳ ಪರಿಶೀಲನೆ ಸಾಧ್ಯತೆ
- ಐಬಿ, ಕೇಂಬ್ರಿಜ್ ಇತ್ಯಾದಿ ಅಂತಾರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳಲ್ಲೂ ಇದೇ ವಿಧಾನ ಬಳಕೆಯಲ್ಲಿದೆ ಎಂದ ಸಚಿವಾಲಯ
- ಕೆಲವು ಉತ್ತರ ಪತ್ರಿಕೆಗಳಲ್ಲಿ ಹಗುರ ಬಣ್ಣದ ಮಸಿ ಬಳಕೆಯಿಂದ ಓದಲು ತೊಂದರೆ ಕಂಡುಬಂದಿದ್ದು, ಅಂತಹ 13,000ಕ್ಕೂ ಹೆಚ್ಚು ಉತ್ತರ ಪತ್ರಿಕೆಗಳ ಕೈಯಾರೆ ಮೌಲ್ಯಮಾಪನ
- ವಿದ್ಯಾರ್ಥಿಗಳಿಗೆ ಕಡಿಮೆ ಅಂಕ ಬಂದಿವೆ ಎಂಬ ಅನುಮಾನ ನಿವಾರಣೆಗೆ ಉತ್ತರ ಪತ್ರಿಕೆಗಳ ಪ್ರತಿಯನ್ನು ಕಡಿಮೆ ಶುಲ್ಕದಲ್ಲಿ ನೀಡಲು ಸಿಬಿಎಸ್‌ಇ ನಿರ್ಧಾರ

ಕೇರಳ: ಸಚಿವರ ಪಟ್ಟಿ ಪ್ರಕಟಿಸಿದ ಸತೀಶನ್

ತಿರುವನಂತಪುರಂ: ಕೇರಳದಲ್ಲಿ ಯುಡಿಎಫ್‌ನ ನೂತನ ಸರ್ಕಾರ ರಚಿಸಲು ಸಜ್ಜಾಗಿರುವ ನಿಯೋಜಿತ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಭಾನುವಾರ 20 ಸಚಿವರ ಪಟ್ಟಿಯನ್ನು ಪ್ರಕಟಿಸಿದ್ದಾರೆ. ಅನೇಕ ಸಾಮಾಜಿಕ ಮತ್ತು ಪ್ರಾದೇಶಿಕ ಅಂಶಗಳ ಹಿನ್ನೆಲೆಯಲ್ಲಿ ಅನೇಕ ಆಪ್ತ ಸಹಕಾರಿಗಳಿಗೆ ಸಂಪುಟದಲ್ಲಿ ಅವಕಾಶ ನೀಡಲು ಸಾಧ್ಯವಾಗಿಲ್ಲ ಎಂದು ಅವರು ಸಮಜಾಯಿಷಿ ನೀಡಿದ್ದಾರೆ.

ಸಚಿವರ ಹೆಸರನ್ನು ಪ್ರಕಟಿಸಿದ ಅವರು, ಖಾತೆಗಳ ವಿವರವನ್ನು ರಾಜ್ಯಪಾಲರಿಗೆ ಸಲ್ಲಿಸಲಾಗುವುದು ಮತ್ತು ಅನಂತರ ಗಜೆಟ್ ಅಧಿಸೂಚನೆಯಲ್ಲಿ ಪ್ರಕಟಿಸಲಾಗುವುದು ಎಂದರು. ಇದರಂತೆ ಮುಸ್ಲಿಂಲೀಗಿನ ಕುಂಞಾಲಿಕುಟ್ಟಿ, ಕಾಂಗ್ರೆಸಿನ ಹಿರಿಯ ನಾಯಕರಾದ ರಮೇಶ್ ಚೆನ್ನಿತ್ತಲ, ಸನ್ನಿ ಜೋಸೆಫ್(ಪ್ರದೇಶ ಕಾಂಗ್ರೆಸ್ ಅಧ್ಯಕ್ಷ), ಕೆ.ಮುರಳೀಧರನ್, ಮಾನ್ಸ್ ಜೋಸೆಫ್, ಶಿಬು ಬೇಬಿ ಜಾನ್, ಅನೂಪ್ ಜಾಕೋಬ್, ಸಿ.ಪಿ.ಜಾನ್ , ಎ.ಪಿ.ಅನಿಲ್ ಕುಮಾರ್, ಎನ್. ಸಂಶುದ್ದೀನ್ , ಪಿ.ಸಿ.ವಿಷ್ಣುನಾಥ್, ರೋಜಿ ಎಂ.ಜಾನ್, ಬಿಂದು ಕೃಷ್ಣ ಎಂ.ಲಿಜು, ಕೆ.ಎಂ.ಶಾಜಿ, ಪಿ.ಕೆ.ಬಶೀರ್ , ಅಬ್ದುಲ್ ಗಫೂರ್,ಟಿ ಸಿದ್ದಿಖಿ, ಕೆ.ಎ.ತುಳಸಿ ಮತ್ತು ಒ.ಜೆ.ಜನೀಶ್ ಅವರ ಹೆಸರು ಪಟ್ಟಿಯಲ್ಲಿದೆ. ಮುಸ್ಲಿಂಲೀಗ್ ಕಡೆಯಿಂದ 5 ಸಚಿವರ ಹೆಸರನ್ನು ನೀಡಲಾಗಿದ್ದು, ಪಿ.ಕೆ. ಕುಂಞಾಲಿಕುಟ್ಟಿ, ಎನ್.ಸಂಶುದ್ದೀನ್, ಕೆ.ಎಂ.ಶಾಜಿ, ಪಿ.ಕೆ.ಬಶೀರ್, ವಿ.ಇ.ಅಬ್ದುಲ್ ಗಫೂರ್ ಸಂಪುಟದಲ್ಲಿರಲಿದ್ದಾರೆ.

ತಿರುವಾಂಕೂರು ರಾಧಾಕೃಷ್ಣನ್ ವಿಧಾನಸಭಾಧ್ಯಕ್ಷರಾಗಲಿದ್ದು, ಶನಿಮೋಳ್ ಉಸ್ಮಾನ್ ಉಪಸ್ಪೀಕರ್ ಆಗಲಿದ್ದಾರೆ. ಸರಕಾರದ ಮುಖ್ಯ ಸಚೇತಕರಾಗಿ ಕಾಂಗ್ರೆಸ್‌ನವರೇ ಇರುತ್ತಾರೆ ಎಂದು ಅವರು ತಿಳಿಸಿದ್ದಾರೆ.

ಉಕ್ರೇನ್ ಡ್ರೋನ್ ದಾಳಿ: ಭಾರತೀಯ ಸೇರಿ ನಾಲ್ವರ ಸಾವು

ಮಾಸ್ಕೋ: ರಷ್ಯಾ ಮೇಲೆ ಉಕ್ರೇನ್ ನಡೆಸಿದ ಈವರೆಗಿನ ಅತಿ ದೊಡ್ಡ ಡ್ರೋನ್ ದಾಳಿಗೆ ಓರ್ವ ಭಾರತೀಯ ಸೇರಿ ನಾಲ್ವರು ಬಲಿಯಾಗಿದ್ದು, 12 ಮಂದಿ ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. ಡ್ರೋನ್‌ಗಳ ಅವಶೇಷಗಳು ರಷ್ಯಾದ ಅತಿ ದೊಡ್ಡ ವಿಮಾನ ನಿಲ್ದಾಣದ ಮೇಲೆ ಬಿದ್ದರೂ ಯಾವುದೇ ಹಾನಿಯಾಗಿಲ್ಲ. ರಷ್ಯಾ ಮೇಲೆ ಡ್ರೋನ್ ನಡೆಸಿರುವುದಾಗಿ ಉಕ್ರೇನ್ ಅಧ್ಯಕ್ಷ ವೊಲಾಡಿಮಿರ್ ಝೆಲೆನ್ಸ್ಕಿ ದೃಢೀಕರಿಸಿದ್ದು, ದಾಳಿಯನ್ನು ಸಮರ್ಥಿಸಿದ್ದಾರೆ. ದಾಳಿಗೆ ಪ್ರತ್ಯುತ್ತರವಾಗಿ ರಷ್ಯಾ, ಉಕ್ರೇನ್ ರಾಜಧಾನಿ ಕೀವ್ ಮೇಲೆ 287 ಡ್ರೋನ್‌ಗಳಿಂದ ದಾಳಿಯನ್ನು ನಡೆಸಿದೆ. ಒಟ್ಟು 556 ಉಕ್ರೇನ್ ಡ್ರೋನ್‌ಗಳನ್ನು ರಷ್ಯಾ ಹೊಡೆದುರುಳಿಸಿದೆ.

ಭಾರತೀಯ ಕಾರ್ಮಿಕ ಬಲಿ: ದಾಳಿಗೆ ಭಾರತೀಯ ಕಾರ್ಮಿಕನೊಬ್ಬ ಬಲಿಯಾಗಿದ್ದನ್ನು ರಷ್ಯಾದಲ್ಲಿನ ಭಾರತೀಯ ರಾಯಭಾರ ಕಚೇರಿ ಭಾನುವಾರ ದೃಢೀಕರಿಸಿದೆ.

ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ 2020) ಅನ್ವಯ ಜು.1ರಿಂದ ಸಿಬಿಎಸ್‌ಇ 9ನೇ ತರಗತಿಗೆ ತ್ರಿಭಾಷಾ ಅಧ್ಯಯನ ಕಡ್ಡಾಯ
ಸಿಬಿಎಸ್‌ಇ ತ್ರಿಭಾಷಾ ಅಧ್ಯಯನ ನೀತಿ, ಅನಗತ್ಯ ಭೀತಿ

ಹೊಸದಿಲ್ಲಿ: 2026–27 ಶೈಕ್ಷಣಿಕ ವರ್ಷದ ಆರಂಭವಾದ ಎರಡು ತಿಂಗಳ ಬಳಿಕ, ಸಿಬಿಎಸ್‌ಇ 2026ರ ಜು.1ರಿಂದ 9ನೇ ತರಗತಿಯಲ್ಲಿ ತ್ರಿಭಾಷಾ ನೀತಿ(ತ್ರೀ ಲಾಂಗ್ವೇಜ್ ಫಾರ್ಮುಲಾ) ಜಾರಿಗೆ ತರುವುದಾಗಿ ಅಧಿಸೂಚನೆ ಹೊರಡಿಸಿದ್ದು, ಈ ನೀತಿಯ ವಿವರ ಇಲ್ಲಿದೆ.

1. ತ್ರಿಭಾಷಾ ನೀತಿ ಎಂದರೇನು?

ರಾಷ್ಟ್ರೀಯ ಶಿಕ್ಷಣ ನೀತಿ 2020(ಎನ್‌ಇಪಿ 2020) ಪ್ರಕಾರ, ವಿದ್ಯಾರ್ಥಿಗಳು ಮೂರು ಭಾಷೆಗಳನ್ನು ಕಲಿಯಬೇಕು. ಅವುಗಳಲ್ಲಿ ಕನಿಷ್ಠ ಎರಡು ಭಾಷೆಗಳು ಭಾರತೀಯ ಮೂಲದ್ದಾಗಿರಬೇಕು. ಈ ನಿಯಮ ಸರ್ಕಾರಿ ಹಾಗೂ ಖಾಸಗಿ ಶಾಲೆಗಳಿಗೆ ಅನ್ವಯವಾಗುತ್ತದೆ. ಆದರೆ, ಯಾವ ಭಾಷೆಗಳನ್ನು ಆಯ್ಕೆ ಮಾಡಬೇಕು ಎಂಬುದರಲ್ಲಿ ರಾಜ್ಯಗಳಿಗೆ ಸ್ವಾಯತ್ತತೆ ಇರುತ್ತದೆ. ಯಾವುದೇ ಭಾಷೆಯನ್ನು ಬಲವಂತವಾಗಿ ಹೇರಬಾರದು ಎಂದು ನೀತಿ ಹೇಳುತ್ತದೆ.

2. ತ್ರಿಭಾಷಾ ನೀತಿ ಇತಿಹಾಸ ಏನು?

ಈ ಕಲ್ಪನೆಯನ್ನು ಮೊದಲಾಗಿ 1964–66ರ ಕೊಠಾರಿ ಕಮಿಷನ್ ಶಿಫಾರಸು ಮಾಡಿತ್ತು. ಬಳಿಕ 1968ರಲ್ಲಿ ಅಂದಿನ ಪ್ರಧಾನಿ ಇಂದಿರಾ ಗಾಂಧಿ ನೇತೃತ್ವದ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಇದನ್ನು ಅಳವಡಿಸಲಾಯಿತು. ನಂತರ 1986ರ ಶಿಕ್ಷಣ ನೀತಿಯಲ್ಲಿ ರಾಜೀವ್ ಗಾಂಧಿ ಸರ್ಕಾರ ಇದನ್ನು ಮರುದೃಢಪಡಿಸಿತು. 1992ರಲ್ಲಿ ಪಿ.ವಿ. ನರಸಿಂಹ ರಾವ್ ಸರ್ಕಾರ ಪರಿಷ್ಕರಣೆ ಮಾಡಿ ಭಾಷಾ ವೈವಿಧ್ಯತೆ ಮತ್ತು ರಾಷ್ಟ್ರೀಯ ಏಕತೆಯನ್ನು ಉತ್ತೇಜಿಸುವ ಉದ್ದೇಶದಿಂದ ಮುಂದುವರಿಸಿತು. ಹಿಂದಿನ ಮಾದರಿಯಲ್ಲಿ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ, ಅಧಿಕೃತ ಭಾಷೆ ಮತ್ತು ಮತ್ತೊಂದು ಆಧುನಿಕ ಭಾರತೀಯ ಅಥವಾ ಯುರೋಪಿಯನ್ ಭಾಷೆ ಸೇರಿದ್ದವು.

3. ಎನ್‌ಇಪಿ 2020 ಏನು ಹೇಳುತ್ತದೆ?

ರಾಷ್ಟ್ರೀಯ ಶಿಕ್ಷಣ ನೀತಿ 2020 ಶಾಲಾ ಹಂತದಲ್ಲೇ ಬಹುಭಾಷಾ ಕಲಿಕೆಯನ್ನು ಉತ್ತೇಜಿಸಲು ತ್ರಿಭಾಷಾ ಸೂತ್ರವನ್ನು ಜಾರಿಗೆ ತರಬೇಕು ಎಂದು ಹೇಳುತ್ತದೆ. ಜೊತೆಗೆ ರಾಜ್ಯಗಳ ಆಶಯ, ಸಂವಿಧಾನಾತ್ಮಕ ಅಂಶಗಳು ಹಾಗೂ ಜನರ ಅಭಿರುಚಿಯನ್ನು ಗಮನದಲ್ಲಿಟ್ಟು ಯಾವುದೇ ಭಾಷೆಯನ್ನು ಹೇರಬಾರದು ಎಂದು ಸ್ಪಷ್ಟಪಡಿಸುತ್ತದೆ. ಮೂರು ಭಾಷೆಗಳಲ್ಲಿ ಕನಿಷ್ಠ ಎರಡು ಭಾರತೀಯ ಭಾಷೆಗಳಾಗಿರಬೇಕು. ಉಳಿದ ಭಾಷೆಗಳಲ್ಲಿ ರಾಜ್ಯಗಳು, ಪ್ರದೇಶಗಳು ಮತ್ತು ವಿದ್ಯಾರ್ಥಿಗಳಿಗೆ ಆಯ್ಕೆ ಸ್ವಾತಂತ್ರ್ಯ ನೀಡಲಾಗಿದೆ.



4. ವಿದೇಶಿ ಭಾಷೆಗಳ ವಿಷಯ ಏನು?

ಇಂಗ್ಲಿಷ್ ಹಾಗೂ ಭಾರತೀಯ ಭಾಷೆಗಳ ಜೊತೆಗೆ ಪ್ರೌಢಶಾಲಾ ಹಂತದಲ್ಲಿ ಕೊರಿಯನ್, ಜಪಾನೀಸ್, ಫ್ರೆಂಚ್, ಜರ್ಮನ್, ಸ್ಪ್ಯಾನಿಷ್ ಮುಂತಾದ ವಿದೇಶಿ ಭಾಷೆಗಳನ್ನೂ ಕಲಿಯಲು ಅವಕಾಶ ಇದೆ. ಆದರೆ ಹೊಸ ಬದಲಾವಣೆಯಲ್ಲಿ ಇಂಗ್ಲಿಷ್ ಅನ್ನು ವಿದೇಶಿ ಭಾಷೆ ವರ್ಗಕ್ಕೆ ಸೇರಿಸಿರುವುದು ಪ್ರಮುಖ ಚರ್ಚೆಗೆ ಕಾರಣವಾಗಿದೆ. ತ್ರಿಭಾಷಾ ಚೌಕಟ್ಟಿನಲ್ಲಿ ಒಂದು ವಿದೇಶಿ ಭಾಷೆಗೆ ಮಾತ್ರ ಅವಕಾಶ ಇರುವುದರಿಂದ, ವಿದ್ಯಾರ್ಥಿಗಳು ಇಂಗ್ಲಿಷ್ ಜೊತೆಗೆ ಮತ್ತೊಂದು ವಿದೇಶಿ ಭಾಷೆಯನ್ನು ಆಯ್ಕೆ ಮಾಡುವ ಅವಕಾಶ ಸೀಮಿತವಾಗಬಹುದು.

5. ಪಠ್ಯಪುಸ್ತಕಗಳು ಸಿದ್ಧವಾಗಿವೆಯೇ?

ಸಿಬಿಸ್‌ಇ ಪ್ರಕಾರ, ವಿಶೇಷ ಆರ್3 ಪಠ್ಯಪುಸ್ತಕಗಳು ಸಿದ್ಧವಾಗುವವರೆಗೆ 9ನೇ ತರಗತಿ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡ ಭಾಷೆಗೆ 6ನೇ ತರಗತಿಯ ಆರ್3 (2026–27 ಆವೃತ್ತಿ) ಪಠ್ಯಪುಸ್ತಕಗಳನ್ನು ಬಳಸಬೇಕು. ಅದೇ ವೇಳೆ, ತಕ್ಕ ಮಟ್ಟಿನ ಭಾಷಾ ಶಿಕ್ಷಕರ ಕೊರತೆ ಇರುವ ಶಾಲೆಗಳು ತಾತ್ಕಾಲಿಕವಾಗಿ ಆ ಭಾಷೆಯಲ್ಲಿ ಕಾರ್ಯನಿರ್ವಹಣಾ ಪ್ರಾವೀಣ್ಯತೆ ಹೊಂದಿರುವ ಇತರ ವಿಷಯ ಶಿಕ್ಷಕರನ್ನು ಬಳಸಬಹುದು ಎಂದು ಮಂಡಳಿ ತಿಳಿಸಿದೆ.

6. ತಮಿಳುನಾಡಿನಲ್ಲಿ ವಿರೋಧ

ತಮಿಳುನಾಡು ಇತಿಹಾಸಾತ್ಮಕವಾಗಿ ಈ ನೀತಿಗೆ ವಿರೋಧ ವ್ಯಕ್ತಪಡಿಸಿದೆ. 1937ರಲ್ಲಿ ಅಂದಿನ ಮದ್ರಾಸ್ ಸರ್ಕಾರದ ಮುಖ್ಯಸ್ಥ ಸಿ.ಗೋಪಾಲಾಚಾರಿ ಶಾಲೆಗಳಲ್ಲಿ ಕಡ್ಡಾಯ ಹಿಂದಿಯನ್ನು ಪರಿಚಯಿಸಿದಾಗ, ಪೆರಿಯಾರ್ ಇ.ವಿ. ರಾಮಸಾಮಿ ಸೇರಿದಂತೆ ದ್ರಾವಿಡ ನಾಯಕರು ಪ್ರತಿಭಟನೆ ನಡೆಸಿದ್ದರು. ಬಳಿಕ 1968ರಲ್ಲಿ ತ್ರಿಭಾಷಾ ನೀತಿ ಜಾರಿಗೆ ಬಂದಾಗಲೂ ಹಿಂದಿ ಹೇರಿಕೆಯ ಪ್ರಯತ್ನವೆಂದು ತಮಿಳುನಾಡು ವಿರೋಧಿಸಿತು.ಅಂದಿನ ಮುಖ್ಯಮಂತ್ರಿ ಸಿ.ಎನ್. ಅಣ್ಣಾದುರೈ ನೇತೃತ್ವದಲ್ಲಿ ತಮಿಳು ಮತ್ತು ಇಂಗ್ಲಿಷ್ ಮಾತ್ರ ಬೋಧಿಸುವ ದ್ವಿಭಾಷಾ ನೀತಿ ಅನುಸರಿಸಲಾಯಿತು. ಇಂದಿಗೂ ತಮಿಳುನಾಡು ಮಾತ್ರ ತ್ರಿಭಾಷಾ ನೀತಿಯನ್ನು ಸಂಪೂರ್ಣ ಜಾರಿಗೆ ತರದ ರಾಜ್ಯವಾಗಿದೆ.



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಕರ್ನಾಟಕ ಸಾರಿಗೆ
ಮೂರು ವರ್ಷಗಳ ಪ್ರಗತಿಯ ಪಯಣ



ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಹೊಸ ಬಸ್ಸುಗಳ ಸೇರ್ಪಡೆ

7800 ಹೊಸ ಬಸ್ಸುಗಳ ಸೇರ್ಪಡೆಗೆ ಅನುಮೋದನೆ | ಈಗಾಗಲೇ **5998** ಬಸ್ಸುಗಳ ಸೇರ್ಪಡೆ (ಕರಾರಸಾನಿ-**1286** (EV ಬಸ್ - **50**), ಬಿಎಂಟಿಸಿ-**2329** (EV ಬಸ್ - **1730**), ವಾಕರಸಾಸಂ-**1210**, ಕಕರಸಾನಿ-**1173**)



ಶಕ್ತಿ
ಗ್ಯಾರಂಟಿ
ಮಹಿಳಾ ಸಬಲೀಕರಣದತ್ತ ಪಯಣ

740 ಕೋಟಿ
ಉಚಿತ ಟಿಕೆಟ್‌ಗಳು
ರೂ. 19349.26 ಕೋಟಿ ಮೌಲ್ಯ



ಪ್ರಾಜೆಕ್ಟ್ ಮೆಜೆಸ್ಟಿಕ್

ಬೆಂಗಳೂರಿನ ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ **'ಸಾರಿಗೆ ಹಬ್'** ನಿರ್ಮಾಣಕ್ಕೆ ಕಾರ್ಯ ಯೋಜನೆ ರೂಪಿಸಲಾಗಿದೆ

ವೇತನ ಪರಿಷ್ಕರಣೆ

1.05 ಲಕ್ಷ ನೌಕರರಿಗೆ ಶೇ. **12.5** ರಷ್ಟು ವೇತನ ಹೆಚ್ಚಳ | ನಾಲ್ಕು ಸಾರಿಗೆ ನಿಗಮಗಳಿಗೆ ಪ್ರತಿ ತಿಂಗಳು **ರೂ. 72.80** ಕೋಟಿ, ಪ್ರತಿ ವರ್ಷ **ರೂ. 873.64** ಕೋಟಿ ಹೆಚ್ಚುವರಿ ವೆಚ್ಚ

ಮಾರ್ಚ್ 2023 ರ ವೇತನ ಹೆಚ್ಚಳ ಹಿಂಬಾಕಿ

ವೇತನ ಪರಿಷ್ಕರಣೆಯ ಹಿಂಬಾಕಿ ಮೊತ್ತ **ರೂ. 1271.92** ಕೋಟಿ ಪಾವತಿಗೆ ಅನುಮೋದನೆ ಮೊದಲ ಕಂತಿನ ಹಣ **ರೂ. 450** ಕೋಟಿ ಬಿಡುಗಡೆ

ಕೆ ಎಸ್ ಆರ್ ಟಿ ಸಿ ಆರೋಗ್ಯ

280ಕ್ಕೂ ಹೆಚ್ಚು ಆಸ್ಪತ್ರೆಗಳಲ್ಲಿ ಸಿಬ್ಬಂದಿಗಳಿಗೆ ಹಾಗೂ ಅವಲಂಬಿತರಿಗೆ ಚಿಕಿತ್ಸೆ | ಇಲ್ಲಿಯವರೆಗೆ ಒಟ್ಟು **1,86,973** ಕ್ಲೇಮುಗಳು | **ರೂ. 55.02** ಕೋಟಿ ಪಾವತಿ | ವೈದ್ಯಕೀಯ ಮರುಪಾವತಿ ವೆಚ್ಚ ವಾರ್ಷಿಕ **ರೂ.16** ಕೋಟಿ

ಸಾರಿಗೆ ಸುರಕ್ಷಾ / ಕುಟುಂಬ ಕಲ್ಯಾಣ ವಿಮಾ ಯೋಜನೆ

ಅಪಘಾತದಲ್ಲಿ (ಆನ್ ಡ್ಯೂಟಿ / ಆಫ್ ಡ್ಯೂಟಿ) ಮೃತಪಟ್ಟ ಸಿಬ್ಬಂದಿಯ ಅವಲಂಬಿತರಿಗೆ **ರೂ.1** ಕೋಟಿ / **ರೂ. 50** ಲಕ್ಷ / **ರೂ. 30** ಲಕ್ಷದಂತೆ **ರೂ. 66.50** ಕೋಟಿ ಪಾವತಿ, ಅಪಘಾತ ಹೊರತು ಪಡಿಸಿ ಮೃತಪಟ್ಟ ಸಿಬ್ಬಂದಿಗಳ ಕುಟುಂಬಕ್ಕೆ **ರೂ. 3** ಲಕ್ಷದಿಂದ **ರೂ. 14** ಲಕ್ಷದವರೆಗೆ ಹೆಚ್ಚಳ, ಒಟ್ಟು **ರೂ. 93.28** ಕೋಟಿ ಪಾವತಿ

ಸಾರಿಗೆ ಮಿತ್ರ (HRMS 2.0)

ನೌಕರರ ರಜೆ ಹಾಗೂ ಹಾಜರಾತಿಯಲ್ಲಿ ಪಾರದರ್ಶಕತೆ / ಏಕರೂಪತೆ, ಸಮಗ್ರ ಸೇವಾ ದಾಖಲಾತಿ, ಭವಿಷ್ಯ ನಿಧಿ ಮಾಹಿತಿ

ಡಿಜಿಟಲ್ ಉಪಕ್ರಮಗಳು

ಬಸ್ಸುಗಳಲ್ಲಿ ಯುಪಿಐ ಡಿಜಿಟಲ್ ಪಾವತಿ ಅವತಾರ್ 4.0 | ಶೇ. **52** ರಷ್ಟು UPI ಬಳಕೆ | ಇನ್ವೆಂಟರಿ ಮ್ಯಾನೇಜ್‌ಮೆಂಟ್ (ಇ-ಉಗ್ರಾಣ) | 'ನಮ್ಮ ಬಿಎಂಟಿಸಿ' ಮೊಬೈಲ್ ಅಪ್ಲಿಕೇಶನ್ | ಲ್ಯಾಂಡ್ ಬೀಟ್ ಆಪ್ | ಇ-ವಾಣಿಜ್ಯ | ವಾಯುವ್ಯ ಸ್ನೇಹಿ | ನಮ್ಮ ಕಲಬುರಗಿ | ಅಪಘಾತ ನಿರ್ವಹಣಾ ತಂತ್ರಾಂಶ | ಇ-ಮಳಿಗೆ | ನ್ಯಾಯ ಪಥ



ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಿಗೆ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಪ್ರಶಸ್ತಿಗಳು

1997-2026	ಮೇ 2023 - ಮೇ 2026
694	**245**

ಶಕ್ತಿ ಯೋಜನೆಯಡಿಯಲ್ಲಿ ಮಹಿಳಾ ಪ್ರಯಾಣಿಕರ ಪ್ರಯಾಣವು ವಿಶ್ವದಾಖಲೆಗಳಲ್ಲಿ ಸೇರ್ಪಡೆ

ಹೊಸ ನೇಮಕಾತಿ

10497 ಹುದ್ದೆಗಳ ನೇಮಕಾತಿ | **9000** ಹೊಸ ನೇಮಕಾತಿ | **1497** ಅನುಕಂಪದ ನೇಮಕಾತಿ ಪೂರ್ಣ

ಬಸ್ಸುಗಳ ಪುನಃಶ್ಚೇತನ ಕಾರ್ಯ

2109 ಬಸ್ಸುಗಳ ಪುನಃಶ್ಚೇತನ ಕಾರ್ಯ

ಬಸ್ ಟ್ರಿಪ್‌ಗಳು

ಪ್ರತಿದಿನದ ಬಸ್ ಟ್ರಿಪ್‌ಗಳ ಸಂಖ್ಯೆ **154955** ರಿಂದ **186506**ಕ್ಕೆ ಹೆಚ್ಚಳ

ಧ್ವನಿ ಸ್ಪಂದನ

ದೃಷ್ಟಿ ವಿಶೇಷ ಚೇತನ ಪ್ರಯಾಣಿಕ ಸ್ನೇಹಿ ಉಪಕ್ರಮ

ತರಬೇತಿ

ಸಂಸ್ಥೆಗಳಲ್ಲಿ ಪರಿಣಾಮಕಾರಿ ತರಬೇತಿ ಕಾರ್ಯಯೋಜನೆ ರೂಪಿಸಿದ್ದು, ಒಂದು ವರ್ಷದ ಅವಧಿಯಲ್ಲಿ **33482** ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆ



ಮಾನ್ಯ ಸಾರಿಗೆ ಹಾಗೂ ಮುಜರಾಯಿ ಸಚಿವರಾದ **ಶ್ರೀ ರಾಮಲಿಂಗಾ ರೆಡ್ಡಿ** ಅವರು ನೂತನವಾಗಿ ನೇಮಕಗೊಂಡ ಚಾಲನಾ ಸಿಬ್ಬಂದಿಗಳಿಗೆ ನೇಮಕಾತಿ ಆದೇಶ ನೀಡಿದರು

ಮೂಲಸೌಕರ್ಯ ಅಭಿವೃದ್ಧಿ ಕಾರ್ಯ

ಮೈಸೂರು ನಗರದಲ್ಲಿ **ರೂ.120** ಕೋಟಿ ವೆಚ್ಚದಲ್ಲಿ ಬಸ್ ನಿಲ್ದಾಣ ನಿರ್ಮಾಣಕ್ಕೆ ಕ್ರಮ | ಬೆಳಗಾವಿ, ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ಬಸ್ ನಿಲ್ದಾಣ ನಿರ್ಮಾಣ | ರಾಜ್ಯಾದ್ಯಂತ **31** ಬಸ್ ನಿಲ್ದಾಣಗಳು | **12** ಬಸ್ ಘಟಕಗಳು | **12** ಸ್ಥಳ/ಘಟಕಗಳಲ್ಲಿ ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಸ್ಟೇಷನ್‌ಗಳು | **10** ಸಿಬ್ಬಂದಿ ವಸತಿ ಗೃಹಗಳು ಮತ್ತು **02** ತರಬೇತಿ ಕೇಂದ್ರಗಳ ನಿರ್ಮಾಣ / ಮೇಲ್ದರ್ಜೆಗೇರಿಸಲಾಗಿದೆ | **ಸ್ಮಾರ್ಟ್ ಸಿಟಿ ಯೋಜನೆ**ಯಡಿ ಬೆಳಗಾವಿ, ತುಮಕೂರು (ಮೊದಲ ಹಂತ), ದಾವಣಗೆರೆ ಮತ್ತು ಬೇತೂರು ರಸ್ತೆ ಬಸ್ ನಿಲ್ದಾಣಗಳ ಮರುನಿರ್ಮಾಣ

ಬಸ್ಸುಗಳ ಬ್ರ್ಯಾಂಡಿಂಗ್

ಅಶ್ವಮೇಧ | ಪಲ್ಲಕ್ಕಿ | ಅಂಬಾರಿ ಉತ್ಸವ | ಕಲ್ಯಾಣ ರಥ | ಐರಾವತ ಕ್ಲಬ್ ಕ್ಲಾಸ್ 2.0 | ಅಮೋಘವರ್ಷ | ರಾಜ ರಥ

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ

18,758 ಸಿಬ್ಬಂದಿಗಳಿಗೆ ಹೃದಯ ತಪಾಸಣೆ, **10** ಸಿಬ್ಬಂದಿಗಳಿಗೆ ತೆರೆದ ಹೃದಯ ಚಿಕಿತ್ಸೆ ಹಾಗೂ **42** ಸಿಬ್ಬಂದಿಗಳಿಗೆ ಸ್ಟಂಟ್ ಅಳವಡಿಕೆ, ವೆಚ್ಚ **ರೂ. 50.56** ಲಕ್ಷ ಪಾವತಿ

ಸಾರಿಗೆ ವಿದ್ಯಾ ಚೇತನ / ವಿದ್ಯಾ ಸ್ಫೂರ್ತಿ

ಸಿಬ್ಬಂದಿಗಳ ಮಕ್ಕಳಿಗೆ ಅತ್ಯಧಿಕ ಮೊತ್ತದ ವಿದ್ಯಾರ್ಥಿ ವೇತನ ಹೆಚ್ಚಳ ಹಾಗೂ ಇಲ್ಲಿಯವರೆಗೆ **ರೂ. 4.25** ಕೋಟಿ ಪಾವತಿ

ಮೊಬೈಲ್ ಕಾರ್ಯಾಗಾರ/ ಮೆಟ್ರೋ ಫೀಡರ್ ವ್ಯವಸ್ಥೆ

ಅಪಘಾತ ತುರ್ತು ಸ್ಪಂದನ ವಾಹನ | ಸಂಚಾರಿ ಕಾರ್ಯಾಗಾರ ನಿಯೋಜನೆ | **241** ಮೆಟ್ರೋ ಫೀಡರ್ ಬಸ್ಸುಗಳು | **12** ಪ್ಯಾಕೇಜ್ ಟೂರ್ | **142** ಎಕ್ಸ್ ಪ್ರೆಸ್ | **33** ನೈಸ್ ರಸ್ತೆಗಳ ಸೇವೆಗಳು | **10292** ಪ್ರತಿ ದಿನ ಹೆಚ್ಚುವರಿ ಟ್ರಿಪ್‌ಗಳು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು

ನುಡಿದಂತೆ ನಡೆದಿದ್ದೇವೆ

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಮಂಗಳೂರಿನ ಮಾತಾ ಅಮೃತಾನಂದಮಯಿ ಮಠ । ಸೇವಾ ಚಟುವಟಿಕೆ, ಸೇವಾಕಾರ್ಯಗಳಿಗೇ ಆದ್ಯತೆ

ಯುವ ಜಾಗೃತಿಗೆ ಅಮೃತ ಯುವ ಧರ್ಮ ಧಾರಾ ಪಣ



• **ಮಂಗಳೂರು:** ಮಂಗಳೂರಿನ ಮಾತಾ ಅಮೃತಾನಂದಮಯಿ ಮಠ ಮತ್ತು ಮಾತಾ ಅಮೃತಾನಂದಮಯಿಸೇವಾ ಸಮಿತಿ ನೇತೃತ್ವದಲ್ಲಿ ನಡೆಯುತ್ತಿರುವ ಹತ್ತು ಹಲವು ಸೇವಾ ಚಟುವಟಿಕೆಗಳಲ್ಲಿ ಯುವ ಜಾಗೃತಿ ಕಾರ್ಯವೂ ಒಂದು.

ಯುವಜನತೆಗೆ ಸರಿಯಾದ ದಿಕ್ಕು ತೋರುವುದರೊಂದಿಗೆ ಅವರಲ್ಲಿ ಸಮಾಜಮುಖಿ ಚಿಂತನೆ ಬೆಳೆಸುವ ಮಹತ್ತರವಾದ ಕಾರ್ಯವನ್ನು ಮಾಡುತ್ತಾ ಬರಲಾಗಿದೆ. ಆದಕ್ಕಾಗಿಯೇ ಯುವ ಸಂಘಟನೆಯೊಂದು ನಿರಂತರವಾಗಿ ಕೆಲಸ ಮಾಡುತ್ತಿದೆ. ಅದುವೇ ಅಮೃತ ಯುವ ಧರ್ಮ ಧಾರಾ (ಆಯುಧ್).

ಯುವ ಜಾಗೃತಿ ಮತ್ತು ಧರ್ಮಕ್ಕಾಗಿ ಐಕ್ಯತೆ ಎಂಬ ಧ್ಯೇಯೋದ್ದೇಶದಿಂದ ಆಯುಧ್ ಕಾರ್ಯಾಚರಿಸುತ್ತಿದೆ. 'ಈಗಾಗಲೇ ಆಯುಧ್ ಅಧ್ಯಕ್ಷ ಸ್ವಸ್ತಿಕ್ ಶೆಟ್ಟಿ ಅವರ ನೇತೃತ್ವದಲ್ಲಿ ಹಲವಾರು ಕಾರ್ಯಕ್ರಮಗಳು ನಡೆಯುವ ಮೂಲಕ ಯುವ ಸಮೂಹ ಮಹತ್ತರವಾದ ಬದಲಾವಣೆಗೆ ತೆರೆದು ಕೊಳ್ಳುವಲ್ಲಿ ಸಹಾಯವಾಗಿದೆ' ಎನ್ನುತ್ತಾರೆ ಮಾತಾ ಅಮೃತಾನಂದಮಯಿ ಸೇವಾ ಸಮಿತಿಯ ಡಾ.ದೇವದಾಸ್ ಪುತ್ರನ್ ಅವರು.



ಅಮ್ಮನೊಂದಿಗೆ ಯುವಜಾಗೃತಿಗಾಗಿ ರಚನೆಯಾಗಿರುವ 'ಆಯುಧ್' ತಂಡದ ಸದಸ್ಯರು

ಯುವಜನಾಂಗವನ್ನು ಸಮಾಜಮುಖಿ ಚಿಂತನೆಯೊಂದಿಗೆ ಸರಿಯಾದ ಪಥದಲ್ಲಿ ಮುನ್ನಡೆಸುವಲ್ಲಿ ಆಯುಧ್ ದಿಟ್ಟ ಹೆಜ್ಜೆ ಇಟ್ಟಿದೆ. ಸೇವಾ ಶೈಲಿಯ ಮೂಲಕವೇ ಆಯುಧ್ ಜನತೆಯ ಮೆಚ್ಚುಗೆಗೆ ಪಾತ್ರವಾಗಿದೆ. ಸಾಮಾಜಿಕ ಸೇವೆ, ಹಸಿರು ಉಪಕ್ರಮಗಳು, ವೈಯಕ್ತಿಕ ಸಬಲೀಕರಣ ಮತ್ತು ಸಾಂಸ್ಕೃತಿಕ ವಿನಿಮಯದಲ್ಲಿ ಭಾಗವಹಿಸಲು 15 ಮತ್ತು 30 ವರ್ಷದೊಳಗಿನ ಯುವಸಮುದಾಯವನ್ನು ಪ್ರೇರೇಪಿಸುತ್ತಿದೆ. ಯುಎನ್ ಸಹಯೋಗದೊಂದಿಗೆ, ಉದ್ಯಾನಗಳನ್ನು ಬೆಳೆಸುವುದು, ಆಹಾರವನ್ನು ಪೂರೈಸುವುದು ಮತ್ತು ಮನೆಯಿಲ್ಲದವರಿಗೆ ಆರೈಕೆ ಚೀಲಗಳನ್ನು ತಯಾರಿಸುವುದು, ಕಾರ್ಯಾಗಾರಗಳು ಮತ್ತು ಬೋಧನಾ ಸೇವೆಗಳನ್ನು ನಡೆಸುವುದು ಮತ್ತು ಸಾಮಾನ್ಯ ಸತ್ಸಂಗ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಅಭಿಯಾನಗಳನ್ನು ನಡೆಸುತ್ತಾ ಬಂದಿದೆ.

ಪರಿಸರ ಸಂರಕ್ಷಣೆಗೆ ವಿಶೇಷ ಒತ್ತು

ಆಯುಧ್ ಪರಿಸರ ಸಂರಕ್ಷಣೆಗೂ ಹೆಚ್ಚಿನ ಒತ್ತು ನೀಡಿದೆ. ಆಯುಧ್ ಅಧ್ಯಕ್ಷರಾದ ನ್ಯಾಯವಾದಿ ಸ್ವಸ್ತಿಕ್ ಶೆಟ್ಟಿ ಅವರ ನೇತೃತ್ವದಲ್ಲಿ ಹಲವು ಮಹತ್ವದ ಕಾರ್ಯಕ್ರಮಗಳು ನಡೆದಿದ್ದು, ಸಾರ್ವಜನಿಕರಲ್ಲಿ ಪರಿಸರದ ಮಹತ್ವವನ್ನು ವಿವರಿಸುವುದರೊಂದಿಗೆ ಗಿಡ ನೆಡುವ ಮೂಲಕ ಪರಿಸರ ಕಾಳಜಿಯ ಬದ್ಧತೆಯನ್ನು ಆಯುಧ್ ಮೆರೆದಿದೆ. ಬೀದಿ ನಾಟಕಗಳ ಮೂಲಕವೂ ಜಾಗೃತಿ ಕಾರ್ಯ ನಡೆಯುತ್ತಾ ಬಂದಿದೆ.

ವರ್ಷದಲ್ಲಿ ಸಾವಿರ ಸಸಿ ನೆಡುವ ಪ್ರತಿಜ್ಞೆ

ಸಾರ್ವಜನಿಕರಲ್ಲಿ ಪರಿಸರದ ಕಾಳಜಿ ಮೂಡಿಸುವ ಜೊತೆಗೆ ಆಯುಧ್ ಸ್ವಯಂಸೇವಕರು ಕೂಡ ಪ್ರತಿವರ್ಷ ಸಾವಿರ ಸಸಿಗಳನ್ನು ನೆಟ್ಟು ಬೆಳೆಸುವ ಪ್ರತಿಜ್ಞೆ ಕೈಗೊಂಡಿದ್ದಾರೆ.

ಆಯುಧ್ ಸದಸ್ಯರು ಬೀಜದ ಉಂಡೆಗಳ ತಯಾರಿಕೆಯಲ್ಲಿ ತೊಡಗಿಕೊಂಡಿರುವುದು ಕೂಡ ಗಮನಸೆಳೆದಿದೆ. ವಿವಿಧ ರೀತಿಯ ಹಣ್ಣು ಬಿಡುವ ಬೀಜಗಳನ್ನು ಸಂಗ್ರಹಿಸಿ ಕೈಯಿಂದ ಪರಿಸರ ಸ್ನೇಹಿ ಬೀಜದ ಉಂಡೆಗಳಾಗಿ ಪರಿವರ್ತಿಸುವ ಕಾರ್ಯ ಮಾಡಿರುವುದುಶ್ಲಾಘನೀಯವೆನಿಸಿದೆ. ಆಯುಧ್ ನೇತೃತ್ವದಲ್ಲಿ ತಯಾರಾದ ಬೀಜದುಂಡೆಗಳನ್ನು ಸಾರ್ವಜನಿಕ ಸ್ಥಳಗಳು ಸೇರಿದಂತೆ ಅರಣ್ಯದಲ್ಲಿ ಹರಡುವ ಮೂಲಕ ಈ ಜೀವವೈವಿಧ್ಯತೆ ಮತ್ತು ನೈಸರ್ಗಿಕ ಮರು ಅರಣ್ಯೀಕರಣವನ್ನು ಸಾಕಾರಗೊಳಿಸಲಾಗಿದೆ. ಆಯುಧ್ ತಂಡದ ಇಂತಹ ಕಾರ್ಯಕ್ರಮಗಳು ಆಶಾದಾಯಕ ಮತ್ತು ಸುಸ್ಥಿರ ಭವಿಷ್ಯವನ್ನು ಸಂಕೇತಿಸುತ್ತದೆ.

ಕಿರುಸುದ್ದಿ

ಮಂಗಳೂರು ಪ್ರೆಸ್ ಕ್ಲಬ್ ಗೌರವ ಸನ್ಮಾನಕ್ಕೆ ಆಯ್ಕೆ





ಮಂಗಳೂರು: ಮಂಗಳೂರು ಪ್ರೆಸ್ ಕ್ಲಬ್‌ನ 2025-26 ಸಾಲಿನ ಮಂಗಳೂರು ಪ್ರೆಸ್ ಕ್ಲಬ್ ಗೌರವ ಸನ್ಮಾನಕ್ಕೆ ಐವರು ಹಿರಿಯ ಪತ್ರಕರ್ತರು ಆಯ್ಕೆಯಾಗಿದ್ದಾರೆ. ಬಾಲಸುಬ್ರಹ್ಮಣ್ಯ ಕಾಯಾರ, ರಾಮಣ್ಣ ವೈ. (ವಿಜಯ ಕರ್ನಾಟಕ), ಹರ್ಷ (ಡೆಕ್ಕನ್ ಹೆರಾಲ್ಡ್), ರೇಮಂಡ್ ಡಿಕೂನಾ (ಓಂಗಾರೆ) ಮತ್ತು ಆರ್.ಎಂ. ರಾಜೇಂದ್ರನ್ (ಕಲ್ಯೆಂಜರ್ ಟಿ.ವಿ.) ಅವರು ಗೌರವ ಸನ್ಮಾನಕ್ಕೆ ಆಯ್ಕೆಯಾದವರು. ಗೌರವ ಪುರಸ್ಕಾರ 10 ಸಾವಿರ ರೂ. ನಗದು, ಪ್ರಶಸ್ತಿ ಫಲಕ, ಸ್ಮರಣಿಕೆ ಒಳಗೊಂಡಿದೆ. ಮೇ 24ರಂದು ಬೆಳಗ್ಗೆ 11ಕ್ಕೆ ನಗರದ ರೆಡ್ ಕ್ರಾಸ್ ಶತಮಾನೋತ್ಸವ ಭವನದ ಪ್ರೇರಣಾ ಸಭಾಂಗಣದಲ್ಲಿ ನಡೆಯಲಿರುವ ಮಂಗಳೂರು ಪ್ರೆಸ್ ಕ್ಲಬ್ ದಿನಾಚರಣೆಯಂದು ಗೌರವ ಸನ್ಮಾನ ನೀಡಲಾಗುವುದೆಂದು ಮಂಗಳೂರು ಪ್ರೆಸ್ ಕ್ಲಬ್‌ನ ಪ್ರಧಾನ ಕಾರ್ಯದರ್ಶಿ ಇಬ್ರಾಹಿಂ ಅಡ್ಕಸ್ಥಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದ.ಕ. ಜಿಲ್ಲೆಯಲ್ಲೇ ಮೊದಲ ಬಾರಿಗೆ ಮಕ್ಕಳಿಗೆ ಕೃಷಿಯ ಬಗ್ಗೆ ತಳಮಟ್ಟದ ಅಧ್ಯಯನ

• **ಮಂಗಳೂರು:** ಉಳ್ಳಾಲದ ಉಳ್ಳಾಲಬೈಲಿನ ದಕ್ಷ್ ಪ್ಲೇಸ್ಕೂಲ್ ಮತ್ತು ಫುಡ್‌ಚೈನ್ ಕ್ಯಾಂಪೇನ್ (ಕೆವಿಕೆ) ಮಂಗಳೂರು ಪಾಲುದಾರಿಕೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಮೊದಲ ಬಾರಿಗೆ ಮಕ್ಕಳಿಗೆ ಕೃಷಿಯ ಬಗ್ಗೆ ತಳಮಟ್ಟದ ಅಧ್ಯಯನ ನಡೆಸಲು ತೀರ್ಮಾನಿಸಲಾಗಿದೆ. ಚಿಕ್ಕ ಮಕ್ಕಳಿಗೆ ಮಾನಸಿಕ, ಬೌದ್ಧಿಕ ಬೆಳವಣಿಗೆ, ಸುರಕ್ಷತೆ, ಪೋಷಣೆ ಮುಂತಾದ ಉತ್ತೇಜಕ ವಾತಾವರಣ ಕಲ್ಪಿಸಲು ದಕ್ಷ್ ಪ್ಲೇ ಸ್ಕೂಲ್ ನೆಲೆಗೊಂಡಿದೆ. 2026-27ನೇ ಶೈಕ್ಷಣಿಕ ಸಾಲಿನಲ್ಲಿ ನಮ್ಮ ಶಾಲೆಯ ನರ್ಸರಿ, ಎಲ್‌ಕೆಜಿ, ಯುಕೆಜಿ ವಿದ್ಯಾರ್ಥಿಗಳಿಗೆ ಪರಿಸರದ ಜೊತೆಗಿನ ಒಡನಾಟವನ್ನು ಹೇಳಿಕೊಡಲಿದ್ದೇವೆ. ಇಂದಿನ ಮೊಬೈಲ್ ಜಮಾನದಲ್ಲಿ ಮಕ್ಕಳು ಮಣ್ಣಿನ ಜೊತೆ, ಕೃಷಿಯ ಜೊತೆ ಬೆಳೆಯಬೇಕು. ಅವರ ವಯಸ್ಸಿಗೆ ತಕ್ಕಂತೆ ಕೃಷಿಯ ಅನುಭವ ಅವರಿಗೆ ಆಗಬೇಕು ಎನ್ನುವುದು ನಮ್ಮ ಉದ್ದೇಶ ಎಂದು ದಕ್ಷ್ ಪ್ಲೇಸ್ಕೂಲ್ ಸ್ಥಾಪಕಿ, ವ್ಯವಸ್ಥಾಪಕ ನಿರ್ದೇಶಕಿ ಮಲ್ಲಿಕಾ ಉಳ್ಳಾಲಬೈಲು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರತಿವಾರ ಗಿಡ ನೆಡುವುದು ಸಹಿತ ಕೃಷಿ ಸಂಬಂಧಿತ ವಿಷಯಗಳ ಬಗ್ಗೆ ಮಕ್ಕಳಿಗೆ ತಿಳಿಸಿಕೊಡಲಾಗುವುದು. ಪರಿಸರ ಪ್ರೇಮಿಗಳು ನಮಗೆ ಸಹಕಾರ ನೀಡಲಿದ್ದಾರೆ. ಎಳೆ ವಯಸ್ಸಿನ ಮಕ್ಕಳಿಗೆ ತಕ್ಕಂತೆ ಕೃಷಿ ಅಧ್ಯಯನ ನಡೆಸಿಕೊಡಲು ಫುಡ್ ಚೈನ್ ಕ್ಯಾಂಪೇನ್ ಒಪ್ಪಿಕೊಂಡಿದೆ ಎಂದರು. ಫುಡ್ ಚೈನ್‌ನ ಯತೀಶ್ ತುಕಾರಾಂ, ಯಕ್ಷಗಾನ ಗುರು ಆಶ್ವತ್ಥ್ ಮಂಜನಾಡಿ, ರೋಶನಿ ನಿಲಯ ಪ್ರಾಧ್ಯಾಪಕ ಸಂದೀಪ್ ಉಳ್ಳಾಲ್, ಪರಿಸರ ಸಂರಕ್ಷಕ ಮಾಧವ ಉಳ್ಳಾಲ್, ಪ್ರಮುಖರಾದ ಶಿಲ್ಪ ರಾಕೇಶ್ ಗಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಯುವತಿ ನಾಪತ್ತೆ

• **ಬೈಂದೂರು:** ಪಡುವರಿ ಗ್ರಾಮದ ಜೋಗೂರು ನಿವಾಸಿ ನಾಗರಾಜ ಅವರ ಹಿರಿಯ ಪುತ್ರಿ ಸ್ನೇಹಾ (19) ಶನಿವಾರದಿಂದ ಕಾಣೆಯಾಗಿದ್ದಾರೆ. ಎಂದಿನಂತೆ ಬೆಳಿಗ್ಗೆ 7.30ಕ್ಕೆ ಶಿರೂರಿನ ಗೇರುಬೀಜ ಫ್ಯಾಕ್ಟರಿ ಕೆಲಸಕ್ಕೆ ಹೋದವರು, ಫ್ಯಾಕ್ಟರಿಗೂ ಹೋಗದೇ ವಾಪಸ್ ಮನೆಗೂ ಬಾರದೇ ನಾಪತ್ತೆಯಾಗಿದ್ದಾರೆ. ಈ ಬಗ್ಗೆ ನೆರೆಹೊರೆಯವರಲ್ಲಿ ಸಂಬಂಧಿಕರಲ್ಲಿ ಹಾಗೂ ಸ್ನೇಹಿತರ ವಿಚಾರಿಸಿದರೂ ಯಾವುದೇ ಸುಳಿವು ಸಿಗದ ಹಿನ್ನೆಲೆಯಲ್ಲಿ ತಾಯಿ ಸುಶೀಲಾ ಬೈಂದೂರು ಠಾಣೆಗೆ ದೂರು ನೀಡಿದ್ದು, ತನಿಖೆ ನಡೆಯುತ್ತಿದೆ. ಈಕೆ ಪತ್ತೆಯಾದಲ್ಲಿ ಬೈಂದೂರು ಠಾಣೆಗೆ ಮಾಹಿತಿ ನೀಡುವಂತೆ ಠಾಣಾಧಿಕಾರಿ ಸುನಿಲ್ ಬಿ. ವೈ. ಮನವಿ ಮಾಡಿದ್ದಾರೆ.



ಮರಳು ಅಕ್ರಮ ಸಾಗಾಟ ಪತ್ತೆ

• **ಬಂಟ್ವಾಳ:** ಪುದು ಗ್ರಾಮದ ಸುಜೀರು ಮಲ್ಲಿ ಎಂಬಲ್ಲಿ ನೇತ್ರಾವತಿ ನದಿಯಿಂದ ಮರಳು ಕಳವುಗೈದು ಪಿಕಪ್ ವಾಹನಕ್ಕೆ ತುಂಬಿಸುತ್ತಿದ್ದ ವೇಳೆ ಬಂಟ್ವಾಳ ಗ್ರಾಮಾಂತರ ಠಾಣಾ ಪೊಲೀಸರು ದಾಳಿ ನಡೆಸಿದ ಘಟನೆ ನಡೆದಿದೆ. ಖಚಿತ ಮಾಹಿತಿಯ ಮೇರೆಗೆ ಪೊಲೀಸರು ಸ್ಥಳಕ್ಕೆ ತೆರಳಿದಾಗ ಇಬ್ಬರು ವ್ಯಕ್ತಿಗಳು ನದಿ ದಡದಲ್ಲಿ ಪಿಕಪ್ ವಾಹನಕ್ಕೆ ಮರಳು ತುಂಬಿಸುತ್ತಿದ್ದರು. ಪೊಲೀಸರನ್ನು ಕಂಡು ಪರಾರಿಯಾಗಿದ್ದಾರೆ. ಸ್ಥಳದಲ್ಲಿದ್ದ ಮರಳು ತುಂಬಿದ್ದ ಪಿಕಪ್ ವಾಹನ ಹಾಗೂ ಮರಳು ತೆಗೆಯಲು ಬಳಸಿದ ಸಲಕರಣೆಗಳನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಈ ಬಗ್ಗೆ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೇರು ಉತ್ಪಾದನೆಯಲ್ಲಿ ರಾಜ್ಯವನ್ನು ಸ್ವಾವಲಂಬಿ ಮಾಡಲಾಗುವುದು: ಸಚಿವ ಈಶ್ವರ ಖಂಡ್ರೆ

ಗೇರುಕೃಷಿಗೆ 1 ಕೋಟಿ ರೂ. ಅನುದಾನ

• **ಮಂಗಳೂರು:** ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಲ್ಲಿ ಗೇರು ಬೆಳೆಯಲು ವಿಪುಲ ಅವಕಾಶ ವಿದ್ದು, ಗೇರು ಅಭಿವೃದ್ಧಿ ನಿಗಮದ ವತಿಯಿಂದ ಗುಣಮಟ್ಟದ ಗೇರು ಸಸಿಗಳನ್ನು ಬೆಳೆಸಿ, ರೈತರಿಗೆ ನೀಡಲಾಗುವುದು. ಇದಕ್ಕಾಗಿ 1 ಕೋಟಿ ರೂ. ಅನುದಾನ ನೀಡುವುದಾಗಿ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.

ಕರ್ನಾಟಕ ಗೇರು ಅಭಿವೃದ್ಧಿ ನಿಗಮ ವತಿಯಿಂದ ನಗರದ ಕದ್ರಿ ಪಾರ್ಕ್‌ನಲ್ಲಿ ಆಯೋಜಿಸಿರುವ ಎರಡು ದಿನಗಳ ಗೇರು ಮೇಳಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಎಂಡೋಸಲ್ಫಾನ್ ಅನಾಹುತದ ಬಳಿಕ ಹಲವು ರೈತರು ಗೇರು ಬೆಳೆಯಿಂದ ವಿಮುಖರಾಗಿದ್ದಾರೆ. ಇವರಿಗೆ ಮತ್ತೆ ಉತ್ತೇಜನ ನೀಡಿ ಗತವೈಭವ ಮರಳುವಂತೆಮಾಡಲುಕ್ರಮ ವಹಿಸಲಾಗುವುದು. ಆಸಕ್ತ ರೈತರಿಗೆ ಗೇರು ಸಸಿಗಳನ್ನು ನಿಗಮದ ನರ್ಸರಿಗಳಲ್ಲಿಯೇ ಬೆಳೆಸಿ, ಪೂರೈಸುವುದು ಸೂಕ್ತ ಎಂದು ಪರಿಗಣಿಸಿ, ಈ ವರ್ಷದಿಂದಲೇ ಕಸಿ ಮಾಡಿದ ಸಸಿ ಬೆಳೆಸಲು ಸೂಚನೆ ನೀಡಲಾಗಿದೆ. ಇದಕ್ಕಾಗಿ 1 ಕೋಟಿ ರೂ. ಅನುದಾನ ನೀಡಲಾಗುವುದು. ಮುಂದಿನ ವರ್ಷದಿಂದ ಸಬ್ಸಿಡಿ ದರದಲ್ಲಿ ರೈತರಿಗೆ ಈ ಸಸಿಗಳನ್ನು ಮಾರಾಟ ಮಾಡಲಾಗುವುದು. ಕರ್ನಾಟಕವನ್ನು ಗೇರು ಕ್ಷೇತ್ರದಲ್ಲಿ ಸ್ವಾವಲಂಬಿಯನ್ನಾಗಿ ಮಾಡಲಾಗುವುದು ಎಂದರು.



ನಷ್ಟದಲ್ಲಿದ್ದ ಗೇರು ಅಭಿವೃದ್ಧಿ ನಿಗಮವನ್ನು ಲಾಭದತ್ತ ತೆಗೆದುಕೊಂಡು ಹೋಗುವಲ್ಲಿ ನಿಗಮದ ಅಧ್ಯಕ್ಷೆ ಮಮತಾ ಗಟ್ಟಿ ಅವರು ಶ್ರಮಿಸಿದ್ದು, ಅಭಿನಂದನಾರ್ಹರಾಗಿದ್ದಾರೆ ಎಂದರು.

ಮಕ್ಕಳಿಗೆ ಚಿತ್ರ ಬರೆಯುವ ಸ್ಪರ್ಧೆ

ಮೇಳದ ಅಂಗವಾಗಿ ಮಕ್ಕಳಿಗೆ ಸ್ಥಳದಲ್ಲೇ ಚಿತ್ರ ಬರೆಯುವ ಸ್ಪರ್ಧೆ ಮತ್ತು ರಂಗೋಲಿ ಸ್ಪರ್ಧೆ ಏರ್ಪಡಿಸಲಾಗಿತ್ತು. ಚಿತ್ರ ಬರೆದ ಚಿಣ್ಣರೊಂದಿಗೆ ಕೆಲ ಸಮಯ ಕಳೆದ ಸಚಿವರು, ಮಕ್ಕಳನ್ನು ಅಭಿನಂದಿಸಿದರು. ಇದೇ ಸಂದರ್ಭದಲ್ಲಿ 12 ಮಂದಿ ಪ್ರಗತಿಪರ ರೈತರನ್ನು ಸನ್ಮಾನಿಸಲಾಯಿತು.

ಶಾಸಕ ವೇದವ್ಯಾಸ ಕಾಮತ್ ಅಧ್ಯಕ್ಷತೆ ವಹಿಸಿದ್ದರು. ಶಾಸಕರಾದ ಉಮಾನಾಥ ಕೋಟ್ಯಾನ್, ಅಶೋಕ್‌ಕುಮಾರ್ ರೈ, ರಾಜೇಗೌಡ, ಐವನ್ ಡಿಸೋಜ, ಕರಾವಳಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಂ.ಎ. ಗಫೂರ್, ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ ಅಧ್ಯಕ್ಷೆ ಶಾಲೆಟ್ ಪಿಂಟೊ, ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್, ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ, ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಜೋಕಿಂ ಸ್ಟ್ಯಾನಿ ಅಲ್ವಾರಿಸ್, ಬ್ಯಾರಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಉಮ್ಮರ್ ಯು.ಎಚ್., ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರಿ ದ.ಕ. ಜಿಲ್ಲಾಧ್ಯಕ್ಷ ಭರತ್ ಮುಂಡೋಡಿ, ಮುಡಾ ಅಧ್ಯಕ್ಷ ಸದಾಶಿವ ಉಳ್ಳಾಲ್, ಜಿಲ್ಲಾಧಿಕಾರಿ ದರ್ಶನ್ ಎಚ್.ವಿ., ಮಾಜಿ ಸಚಿವರಾದ ರಮಾನಾಥ ರೈ, ಅಭಯಚಂದ್ರ ಜೈನ್, ಮಾಜಿ ಶಾಸಕಿ ಶಕುಂತಳಾ ಶೆಟ್ಟಿ, ದ.ಕ. ಕೃಷಿಕ ಸಮಾಜ ಅಧ್ಯಕ್ಷ ವಿಜಯಕುಮಾರ್ ರೈ, ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳಾದ ಕರಿಕಾಳನ್, ಕಮಲಾ ಕರಿಕಾಳನ್, ರವಿಶಂಕರ್ ಮತ್ತಿತರರು ಉಪಸ್ಥಿತರಿದ್ದರು.

ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಗಟ್ಟಿ ಸ್ವಾಗತಿಸಿದರು. ಮಂಜುಳಾ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

> ವರ್ಷಕ್ಕೊಮ್ಮೆ ಇಳುವರಿ ನೀಡುವ ಗೇರು ಬೆಳೆಯಲ್ಲಿ ಲಾಭ ಕಡಿಮೆ. ಗೇರು ಹೂ ಬಿಡುವ ವೇಳೆ ಮಳೆ ಬಂದರೆ, ವಿಪರೀತ ಬಿಸಿಲು ಇದ್ದರೆ ಫಸಲು ನಷ್ಟವಾಗುತ್ತದೆ. ಸರಕಾರ ಗೇರು ಬೆಳೆಗೆ ಪ್ರೋತ್ಸಾಹ ನೀಡಬೇಕು. ಪಾಳು ಬಿದ್ದಿರುವ ಅರಣ್ಯ ಭೂಮಿಯಲ್ಲಿ ಸರಕಾರ ಗೇರು ಬೆಳೆಸಬೇಕು. ಕರಾವಳಿ ಭಾಗ, ಕೊಡಗು, ಶಿವಮೊಗ್ಗದಲ್ಲಿ ಗೇರು ಬೆಳೆಯುವ ರೈತರಿಗೆ ಸರಕಾರ ವಿಶೇಷ ಪ್ಯಾಕೇಜ್ ನೀಡಬೇಕು.
> ■ **ವೇದವ್ಯಾಸ ಕಾಮತ್,** ಶಾಸಕರು

ಗೇರು ತಳಿಗಳ ಪ್ರದರ್ಶನ

ಎರಡು ದಿನಗಳ ಗೇರು ಮೇಳದಲ್ಲಿ ವಿವಿಧ ಗೇರು ಉತ್ಪನ್ನಗಳು ಮಾರಾಟಕ್ಕಿವೆ. ಗೇರು ಹಣ್ಣಿನ ಜ್ಯೂಸ್, ಗೋಡಂಬಿ, ಗೇರುಬೀಜದ ಪಾಯಸ, ಹಲ್ವ, ಸಹಿತ ವಿವಿಧ ಮೌಲ್ಯವರ್ಧಿತ ಉತ್ಪನ್ನಗಳಿವೆ. ಗೇರು ಸಸಿಯ ಮಾರಾಟವೂ ಇದೆ. ಗೇರು ತಳಿಗಳ ಪ್ರದರ್ಶನವಿದೆ. ಜತೆಗೆ ಮಾವು, ಹಲಸು ಮಾರಾಟಕ್ಕೆ ಇರಿಸಲಾಗಿದೆ.

ಸಚಿವ ಈಶ್ವರ ಖಂಡ್ರೆ ಗುರುಪುರ ಜಂಗಮ ಮಠಕ್ಕೆ ಭೇಟಿ

ಜೀರ್ಣೋದ್ಧಾರಕ್ಕೆ ಸಹಕಾರದ ಭರವಸೆ



• **ಕೈಕಂಬ:** ಸಾವಿರ ವರ್ಷಗಳಷ್ಟು ಪುರಾತನವಾಗಿರುವ ಪ್ರಸ್ತುತ ಜೀರ್ಣೋದ್ಧಾರಗೊಳ್ಳುತ್ತಿರುವ, ಇತಿಹಾಸ ಪ್ರಸಿದ್ಧ ಗುರುಪುರ ಶ್ರೀ ಜಂಗಮ ಸಂಸ್ಥಾನ ಮಠಕ್ಕೆ ಕರ್ನಾಟಕ ರಾಜ್ಯ ಅರಣ್ಯ, ಜೀವಿಶಾಸ್ತ್ರ ಹಾಗೂ ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆಯವರು ಭಾನುವಾರ ಭೇಟಿ ನೀಡಿ ಜೀರ್ಣೋದ್ಧಾರ ಕಾಮಗಾರಿ ಪರಿಶೀಲಿಸಿದರು.

ಶ್ರೀ ಜಂಗಮ ಮಠದ ಶ್ರೀ ನೀಲಕಂಠೇಶ್ವರ ದೇವರಿಗೆ ಪೂಜೆ ಸಲ್ಲಿಸಿದ ಸಚಿವರನ್ನು ಮಠದ ಶ್ರೀ ರುದ್ರಮುನಿ ಮಹಾಸ್ವಾಮಿ ಹಾಗೂ ಜೀರ್ಣೋದ್ಧಾರ ಸಮಿತಿ ಪದಾಧಿಕಾರಿಗಳು ಮತ್ತು ಸದಸ್ಯರು ಶಾಲು ಹೊದಿಸಿ ಸನ್ಮಾನಿಸಿದರು. ಶ್ರೀ ನೀಲಕಂಠೇಶ್ವರ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಆರ್ಥಿಕ ನೆರವು ಕೋರಿ ಸಚಿವರಿಗೆ ಮನವಿ ಸಲ್ಲಿಸಲಾಯಿತು. ಈ ವೇಳೆ ಸಚಿವರು ಶ್ರೀ ರುದ್ರಮುನಿ ಮಹಾಸ್ವಾಮಿ ಅವರಿಗೆ ಶಾಲು ಹೊದಿಸಿ ಗೌರವಿಸಿ, ಆಶೀರ್ವಾದ ಪಡೆದುಕೊಂಡರು.

ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರೂ ಆಗಿರುವ ಈಶ್ವರ ಖಂಡ್ರೆ ಜಂಗಮ ಮಠದ ಶ್ರೀ ರುದ್ರಮುನಿ ಮಹಾಸ್ವಾಮಿ ಹಾಗೂ ಜೀರ್ಣೋದ್ಧಾರ ಸಮಿತಿ ಪದಾಧಿಕಾರಿಗಳಿಂದ ಮಠದ ಇತಿಹಾಸ, ಮಠಕ್ಕಿರುವ ಆಸ್ತಿ-ಪಾಸ್ತಿಗಳ ಮಾಹಿತಿ ಪಡೆದುಕೊಂಡು, ಶ್ರೀ ಜಂಗಮ ಸಂಸ್ಥಾನ ಮಠದ ಶ್ರೀ ನೀಲಕಂಠೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ಕೆ ಸರಕಾರ ಮತ್ತು ಅಖಿಲ ಭಾರತ ವೀರಶೈವ ಮಹಾಸಭಾದಿಂದ ನೆರವು ಪಡೆಯುವಲ್ಲಿ ಸಹಕರಿಸುತ್ತೇನೆ ಎಂದು ಭರವಸೆ ನೀಡಿದರು.

ಖಂಡ್ರೆ ಅವರೊಂದಿಗೆ ಅಖಿಲ ಭಾರತ ವೀರಶೈವಮಹಾಸಭಾದರಾಜ್ಯ ಉಪಾಧ್ಯಕ್ಷೆ ರಾಜೇಶ್ವರಿ ಎನ್, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಸಚಿನ್ ಅಡಪ ಗುರುಪುರ, ಸಮಿತಿಯ ಪದಾಧಿಕಾರಿಗಳು ಹಾಗೂ ಸದಸ್ಯರು, ನಿವೃತ್ತ ಪೊಲೀಸ್ ಅಧಿಕಾರಿ ಮೋಹನ್ ಕೊಟ್ಟಾರಿ ಗುರುಪುರ, ನಿವೃತ್ತ ಅರಣ್ಯಾಧಿಕಾರಿ ಶೀನ ಕೊಟ್ಟಾರಿ ಗುರುಪುರ, ನೂರಾರು ಮಂದಿ ಭಕ್ತರು ಇದ್ದರು.

ಮಹಾರುದ್ರಯಾಗದ ಪ್ರಯುಕ್ತ 'ಬೀಚ್ ಕ್ರೀಡೋತ್ಸವ'

ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲಿ

• **ಉಡುಪಿ:** ನಗರದ ಕೊಡವೂರು ಮಹತೋಭಾರ ಶ್ರೀಶಂಕರನಾರಾಯಣ ದೇವಸ್ಥಾನದಲ್ಲಿ ಪ್ರಸಾದ್ ರಾಜ್ ಕಾಂಚನ್ ಅವರ ನೇತೃತ್ವದಲ್ಲಿ ಲೋಕ ಕಲ್ಯಾಣಾರ್ಥವಾಗಿ ಆಯೋಜಿಸಿರುವ ಮಹಾರುದ್ರಯಾಗದ ಪ್ರಯುಕ್ತ ಮಲ್ಪೆ ಬೀಚ್‌ನಲ್ಲಿ ಭಾನುವಾರ ಬೆಳಗ್ಗೆ ಬೀಚ್ ಕ್ರೀಡೋತ್ಸವಕ್ಕೆ ಚಾಲನೆ ನೀಡಲಾಯಿತು.

ಕ್ರೀಡೋತ್ಸವಕ್ಕೆ ಚಾಲನೆ ನೀಡಿದ ಉಡುಪಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಮ್ ಶಂಕರ್ ಮಾತನಾಡಿ, ಮಕ್ಕಳು ಮೊಬೈಲ್ ಅನ್ನು ಪಕ್ಕಕ್ಕಿಟ್ಟು ಲಗೋರಿಯಂತಹ ಕ್ರೀಡಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದರಿಂದ ಮಾನಸಿಕ ಹಾಗೂ ದೈಹಿಕ ಆರೋಗ್ಯ ಸದೃಢಗೊಳ್ಳುತ್ತದೆ ಎಂದರು.

ಮಹಾರುದ್ರಯಾಗದ ಜೊತೆ ಕ್ರೀಡೆಯಂತಹ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿರುವುದು ಬಹಳ ಸಂತೋಷದ ವಿಚಾರ. ಇಂತಹ ಕಾರ್ಯಕ್ರಮಗಳು ಹೆಚ್ಚೆಚ್ಚು ಆಯೋಜನೆಗೊಳ್ಳಬೇಕು. ಇದಕ್ಕೆ ಪೊಲೀಸ್ ಇಲಾಖೆಯ ಸಹಕಾರ, ಪ್ರೋತ್ಸಾಹ ಸದಾ ಇರಲಿದೆ ಎಂದರು.



ಮಹಾರುದ್ರಯಾಗ ಸಮಿತಿಯ ಕಾರ್ಯಾಧ್ಯಕ್ಷ ಪ್ರಸಾದ್ ರಾಜ್ ಕಾಂಚನ್ ಮಾತನಾಡಿ, ಮಕ್ಕಳಿಗೆ ಧಾರ್ಮಿಕತೆಯ ಜೊತೆಗೆ ಸಾಮಾಜಿಕ ಬದ್ಧತೆಯನ್ನು ಕಲಿಸಬೇಕು. ಕರಾವಳಿ ಜಿಲ್ಲೆಯ ಮಕ್ಕಳ ಶಿಕ್ಷಣಕ್ಕೆ ತಕ್ಕಂತೆ ಉದ್ಯೋಗ ಲಭಿಸುತ್ತಿಲ್ಲ. ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವುದರ ಜೊತೆ ಅವರಿಗೆ ಸೂಕ್ತ ಉದ್ಯೋಗ ಕಲ್ಪಿಸುವ ಕೆಲಸ ಆಗಬೇಕು. ಆ ನಿಟ್ಟಿನಲ್ಲಿ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಿದ್ದೇವೆ. ಏಳೂವರೆ ಸಾವಿರ ಉದ್ಯೋಗ ಅವಕಾಶಗಳು ಲಭ್ಯವಿರಲಿದೆ. ಎಸ್ಸೆಸ್ಸೆಲ್ಸಿ, ಪಿಯುಸಿ ಕಲಿತಿರುವ ಮಕ್ಕಳಿಗೆ ಹೆಚ್ಚು ಆದ್ಯತೆ ಸಿಗುವ ಉದ್ಯೋಗವನ್ನು ಕಲ್ಪಿಸುತ್ತಿದ್ದೇವೆ ಎಂದರು.

ಕ್ರೀಡಾ ಸಮಿತಿ ಸಂಚಾಲಕ ಶಾನ್ ರಾಜ್ ಕೋಟ್ಯಾನ್, ಸಮಾಜ ಸೇವಕ ಪಾಡುರಂಗ ಮಲ್ಪೆ ಸಮಿತಿಯ ಸಂಚಾಲಕರಾದ ತಾರಾನಾಥ ಪೂಜಾರಿ, ನಂದಕಿಶೋರ್ ಮೊದಲಾದವರು ಉಪಸ್ಥಿತರಿದ್ದರು. ಸತೀಶ್ ಚಿತ್ರಾಪುರ ಕಾರ್ಯಕ್ರಮ ನಿರೂಪಿಸಿದರು.

ತನ್ನ ದೃಶ್ಯ ವೈಭವದಿಂದ ಪ್ರವಾಸಿಗರನ್ನು ನಿರಂತರವಾಗಿ ಸೆಳೆಯುತ್ತಿದೆ ಸಮುದ್ರಕ್ಕೆ ಹೊಂದಿಕೊಂಡಿರುವ ಈ ನೈಸರ್ಗಿಕ ಬಂಡೆಗಳ ಪ್ರದೇಶ

ಅಭಿವೃದ್ಧಿ ಪಥದತ್ತ ಚೆಂಬರಿಕ ಬೀಚ್ ಪ್ರವಾಸೋದ್ಯಮ

• **ಕಾಸರಗೋಡು:** ಜಿಲ್ಲೆಯಲ್ಲಿ ಸುದೀರ್ಘ ಕಾಲದ ನಿರೀಕ್ಷೆ ಮತ್ತು ಸಾರ್ವಜನಿಕರ ಮಹತ್ತರ ಬೇಡಿಕೆಗಳ ಬಳಿಕ ಚೆಂಬರಿಕ ಬೀಚ್ ಪ್ರವಾಸೋದ್ಯಮವು ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿದೆ. ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಇತ್ತೀಚೆಗೆ ಚೆಂಬರಿಕ ಬೀಚ್‌ಗೆ ಭೇಟಿ ನೀಡಿದ ನಂತರ ಅಭಿವೃದ್ಧಿ ಯೋಜನೆಗಳು ತ್ವರಿತಗತಿಯಲ್ಲಿ ಹಾಗೂ ಕ್ರಮಬದ್ಧವಾಗಿ ಮುಂದುವರಿಯುತ್ತಿವೆ.

ಚೆಮ್ನಾಡು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಈ ಮನಮೋಹಕ ಸಮುದ್ರ ಕರಾವಳಿಯನ್ನು ಜಿಲ್ಲೆಯ ಪ್ರಮುಖ ಪ್ರವಾಸೋದ್ಯಮ ಕೇಂದ್ರಗಳಲ್ಲಿ ಒಂದಾಗಿ ಅಭಿವೃದ್ಧಿಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳು ಸಮಗ್ರ ರೂಪುರೇಷೆ ತಯಾರಿಸಿದ್ದಾರೆ.

ಅರಬ್ಬೀ ಸಮುದ್ರಕ್ಕೆ ಹೊಂದಿಕೊಂಡಿರುವ ಪಾರೆಯು ಚೆಂಬರಿಕ ಬೀಚ್‌ನ ಪ್ರಧಾನ ಆಕರ್ಷಣೆಯಾಗಿದೆ. ಸಮುದ್ರಕ್ಕೆ ಹೊಂದಿಕೊಂಡಿರುವ ನೈಸರ್ಗಿಕ ಬಂಡೆಗಳ ಪ್ರದೇಶವು ತನ್ನ ದೃಶ್ಯ ವೈಭವಗಳಿಂದ ಪ್ರವಾಸಿಗರನ್ನು ತನ್ನತ್ತ ನಿರಂತರವಾಗಿ ಸೆಳೆಯುತ್ತಿದೆ. ಸೂರ್ಯೋದಯ ಮತ್ತು ಸೂರ್ಯಾಸ್ತ ಸಮಯಗಳ ಮನಮೋಹಕ ನೋಟ ಇಲ್ಲಿನ ವಿಶೇಷತೆಯಾಗಿದೆ.



ಪ್ರವಾಸಿಗರ ಸಂಭ್ರಮ ಸಡಗರ

ಸರಿಸುಮಾರು ಎರಡು ಕಿಲೋ ಮೀಟರ್‌ನಷ್ಟು ವಿಸ್ತರಿಸಿರುವ ವಿಶಾಲವಾದ ಕಡಲ ತೀರಕ್ಕೆ ದಿನಂಪ್ರತಿ ನೂರಾರು ಮಂದಿ ಆಗಮಿಸಿ ಸಂಭ್ರಮ ಸಡಗರ ವ್ಯಕ್ತಪಡಿಸುತ್ತಾರೆ. ಪಾರೆ ಬಂಡೆಗಳ ಇಕ್ಕೆಲಗಳಲ್ಲಿ ಹರಡಿರುವ ಸಮುದ್ರವು ಈ ಕರಾವಳಿಗೆ ಪ್ರತ್ಯೇಕವಾದ ಮನೋಹರತೆಯನ್ನು ಒದಗಿಸುತ್ತಿದೆ. ಜೊತೆಗೆ ನೀಲ ಸಮುದ್ರದ ಅಲೆಗಳ ಭಾರೀ ಭೋರ್ಗರೆತ ಇಲ್ಲಿನ ಇನ್ನೊಂದು ಸೊಬಗಾಗಿದೆ.

ಕಪ್ಪು ಮರುವಾಯಿ ಕೃಷಿ

ಮಾತ್ರವಲ್ಲದೆ ಇಲ್ಲಿನ ಕಪ್ಪು ಮರುವಾಯಿ ಕೃಷಿಯನ್ನು ಕಣ್ತುಂಬಿಕೊಳ್ಳಲೆಂದೇ ಅನೇಕ ಮಂದಿ ಇಲ್ಲಿಗೆ ಆಗಮಿಸುತ್ತಾರೆ. ಸ್ವದೇಶಿ ಹಾಗೂ ವಿದೇಶಿ ಪ್ರವಾಸಿಗರು ಕೂಡಾ ಭೇಟಿ ನೀಡುವ ಈ ಬೀಚ್‌ನ ಸೌಂದರ್ಯಗಳನ್ನು ವರ್ಧಿಸುವ ಗುರಿಯೊಂದಿಗೆ ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕರು ಅಭಿವೃದ್ಧಿ ಯೋಜನೆಗಳನ್ನು ಘೋಷಿಸಿ ಆಡಳಿತಾನುಮತಿ ಪಡೆದಿದ್ದಾರೆ. ಇದರ ಅಂಗವಾಗಿ ವಿವಿಧ ಮೂಲಭೂತ ಸೌಕರ್ಯಗಳನ್ನು ಚೆಂಬರಿಕ ಬೀಚ್‌ನಲ್ಲಿ ಅಳವಡಿಸಲಾಗುತ್ತಿದೆ.

ಕರಾವಳಿ ನಿಯಂತ್ರಣ ವಲಯಕ್ಕೆ ಸಂಬಂಧಿಸಿ ಕೆಲವು ಅಡಚಣೆಗಳು ಗೋಚರಿಸುತ್ತಿದ್ದರೂ ಅವುಗಳನ್ನು ಕೂಡಲೇ ಪರಿಹರಿಸಲು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಯೋಜನೆಗೆ ಅಗತ್ಯವಾಗಿ ಬೇಕಾಗಿರುವ ಇತರ ವ್ಯವಸ್ಥೆಗಳನ್ನು ಚೆಮ್ನಾಡು ಗ್ರಾಮ ಪಂಚಾಯತ್ ಆಡಳಿತವು ಒದಗಿಸುವುದಾಗಿ ತಿಳಿಸಿದೆ.

ಬೀಚ್‌ನಲ್ಲಿ ವಿವಿಧ ಸೌಲಭ್ಯಗಳ ಸಮರ್ಪಕ ಅಳವಡಿಕೆ

ಕಾಸರಗೋಡು ಜಿಲ್ಲಾಧಿಕಾರಿಗಳ ಸಂದರ್ಶನದಿಂದಾಗಿ ದೀರ್ಘಕಾಲದಿಂದ ಸ್ಥಗಿತಗೊಂಡಿದ್ದ ಪ್ರವಾಸೋದ್ಯಮ ಯೋಜನೆಗಳಿಗೆ ಮರುಜೀವ ಲಭಿಸ ಲಿದೆ ಎಂಬ ಆಶಯ ಮತ್ತು ನಿರೀಕ್ಷೆ ಸಾರ್ವಜನಿಕ ರದ್ದಾಗಿದೆ. ಚೆಂಬರಿಕ ಬೀಚ್ ಪಾರ್ಕ್‌ನಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ವಿಪುಲ ವಾಹನ ಪಾರ್ಕಿಂಗ್ ವ್ಯವಸ್ಥೆ, ಆಧುನಿಕ ಮಾದರಿಯ ಶೌಚಾಲಯ ಕೊಠಡಿಗಳು, ರಸ್ತೆಗೆ ಹೊಂದಿಕೊಂಡು ಫುಟ್‌ಪಾತ್, ಆಸನ ಸೌಲಭ್ಯ, ರಾತ್ರಿ ವೇಳೆ ಸಂದರ್ಶಕರಿಗೆ ಅತ್ಯಾಧುನಿಕ ಲೈಟಿಂಗ್ ವ್ಯವಸ್ಥೆ, ಲಘು ಭೋಜನಾಲಯ, ಆಕರ್ಷಕ ಪ್ರವೇಶ ದ್ವಾರ ಇತ್ಯಾದಿಗಳನ್ನು ನಿರ್ಮಿಸುವ ಮಹತ್ವದ ಉದ್ದೇಶ ಹೊಂದಲಾಗಿದೆ.

ಮೊಬೈಲ್ ಆ್ಯಪ್ ಮೂಲಕವೇ ಹಾಜರಾತಿ | ಶಾಲಾ ಶಿಕ್ಷಣ ಇಲಾಖೆ ಜಾರಿ

ಶಾಲಾ ಶಿಕ್ಷಕರ ಹಾಜರಾತಿಗೆ ಕಾಮ್ಸ್ ಆ್ಯಪ್

ಎಸ್. ರುದ್ರೇಶ್ವರ

ರಾಮನಗರ: ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರು ಹಾಜರಾತಿಯನ್ನು ಇನ್ನು ಮುಂದೆ ಹಾಜರಾತಿ ಪುಸ್ತಕದಲ್ಲಿ ಹಾಕುವ ಹಾಗಿಲ್ಲ, ಕರ್ನಾಟಕ ಅಡ್ವಾನ್ಸ್ ಅಟೆಂಡೆನ್ಸ್ ಮ್ಯಾನೇಜ್‌ಮೆಂಟ್ ಸಿಸ್ಟಮ್ – ಕಾಮ್ಸ್ (ಕೆ.ಎ.ಎ.ಎಂ.ಎಸ್) ಮೊಬೈಲ್ ಆ್ಯಪ್ ಮೂಲಕವೇ ಹಾಜರಾತಿ ಹಾಕುವ ವ್ಯವಸ್ಥೆಯನ್ನು ಶಾಲಾ ಶಿಕ್ಷಣ ಇಲಾಖೆ ಜಾರಿಗೊಳಿಸಿದೆ.


ಆಡಳಿತದಲ್ಲಿ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಶಿಕ್ಷಣ ಇಲಾಖೆ ಕಳೆದ ವರ್ಷವೇ ಸಚಿವರು ಬಯೋಮೆಟ್ರಿಕ್ ಮೂಲಕ ಹಾಜರಾತಿ ದಾಖಲಿಸಲು ಸಿದ್ಧತೆ ನಡೆಸಿದ್ದರು. ಆದರೆ ಎಐ ತಂತ್ರಜ್ಞಾನ ಬಳಕೆ ಹೆಚ್ಚಾಗುತ್ತಲೆ ಈಗ ಆಯುಕ್ತ ಕಚೇರಿ ಶೈಕ್ಷಣಿಕ ವರ್ಷದ ಮೇ 28 ರಿಂದಲೇ ಶಾಲೆಗಳಲ್ಲಿ ಎಐ ತಂತ್ರಾಂಶದ ಮೂಲಕವೇ ಹಾಜರಾತಿ ಹಾಕಲು ಸೂಚನೆ ನೀಡಿ ಸುತ್ತೋಲೆ ಹೊರಡಿಸಿದೆ. ಈಗಾಗಲೇ ರಾಜ್ಯ ಸರ್ಕಾರ ಕಳೆದ ಅದಿವೇಶನದಲ್ಲಿ ತಿಳಿಸಿದಂತೆ ಅಡ್ವಾನ್ಸ್ ಅಟೆಂಡೆನ್ಸ್ ಮ್ಯಾನೇಜ್‌ಮೆಂಟ್ ಸಿಸ್ಟಮ್ ಜಾರಿಗೆ ತಂದಿದ್ದು ಇದರ ಭಾಗವಾಗಿ ರಾಜ್ಯದಲ್ಲಿ ಹೆಚ್ಚಿನ ಸರ್ಕಾರಿ ನೌಕರರನ್ನು ಹೊಂದಿರುವ ಶಿಕ್ಷಣ ಇಲಾಖೆಯ 60,913 ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿನ 1.65618 ಲಕ್ಷ ಶಿಕ್ಷಕರಿಗೆ ಮತ್ತು ಬೋಧಕೇತರ ಸಿಬ್ಬಂದಿಗೂ ಎಐ ಆಪ್ ಮೂಲಕವೇ ಹಾಜರಾತಿ ಹಾಕುವ ವ್ಯವಸ್ಥೆ ಜಾರಿಗೊಳಿಸಿದೆ.

> ಶಿಕ್ಷಣ ಇಲಾಖೆಗೆ ಎಐ ಹಾಜರಾತಿ ಅಳವಡಿಕೆಗೆ ಸಿದ್ಧತೆ ನಡೆಸಿವೆ. ಸರ್ಕಾರ ನೌಕರರ ಹಾಜರಾತಿಯಲ್ಲಿ ಪಾರದರ್ಶಕತೆ ತರಲು ಬದಲಾವಣೆ ತಂದಿದೆ. ಶಾಲೆಗಳಲ್ಲಿ ಬಯೋಮಿಟ್ರಿಕ್ ಬದಲು ಎಐ ತಂತ್ರಜ್ಞಾನದ ಮೂಲಕವೇ ಶಿಕ್ಷಕರ ಹಾಜರಾತಿ ಕಡ್ಡಾಯ.
> ■ ಮಧು ಬಂಗಾರಪ್ಪ, ಶಿಕ್ಷಣ ಸಚಿವ

ಕಾಮ್ಸ್ (ಕೆಎಎಎಂಎಸ್)ಆ್ಯಪ್: ಕರ್ನಾಟಕ ಆಧುನಿಕ ಹಾಜರಾತಿ ನಿರ್ವಹಣಾ ವ್ಯವಸ್ಥೆಯ ಭಾಗವಾಗಿ ಕೃತಕ ಬುದ್ದಿಮತ್ತೆ (ಎಐ)ಮತ್ತು ಜಿಯೋ-ಫೆನ್ಸಿಂಗ್ ತಂತ್ರಜ್ಞಾನಗಳನ್ನು ಬಳಸಿ ಅಭಿವೃದ್ಧಿ ಪಡಿಸಿದ ಮೊಬೈಲ್ ಆಪ್‌ನ್ನು ಶಿಕ್ಷಕರು ಡೌನ್ ಲೋಡ್ ಮಾಡಿಕೊಂಡು ಶಿಕ್ಷಕರು ಶಾಲೆ ಆವರಣದೊಳಗಿದ್ದಾಗ ಮಾತ್ರ ಮೊಬೈಲ್ ಬಳಸಿ ಹಾಜರಾತಿ ಹಾಕಬೇಕಿದೆ. ಬೆಳಿಗ್ಗೆ ಶಾಲೆಗೆ ಹಾಜರಾದಾಗ ಮತ್ತು ಶಾಲೆ ಮುಕ್ತಾಯದ ವೇಳೆ ಎರಡು ಬಾರಿ ಹಾಜರಾತಿ ಕಡ್ಡಾಯವಾಗಿದೆ. ಶಿಕ್ಷಕರ ರಜೆ, ಒ.ಓ.ಡಿ ಮುಂತಾದ ಎಲ್ಲಾ ಮಾಹಿತಿಯನ್ನು ಆ್ಯಪ್‌ನಲ್ಲಿಯೇ ದಾಖಲಿಸಬೇಕು. ಹಾಜರಾತಿ ಆ್ಯಪ್‌ನಲ್ಲಿ ಶಿಕ್ಷಕರು ಇರುವ ಸ್ಥಳ, ಶಾಲೆಯ ಜಿಯೋ ಟ್ಯಾಗ್ ಮಾಡಿಕೊಂಡು ಆಪ್‌ನಲ್ಲಿ ಸೂಚಿಸಿದ ಸಮಯದೊಳಗೆ ಲಾಗಿನ್ ಆಗಿ ಹಾಜರಾತಿ ಹಾಕಬೇಕಿದೆ. ಕೇವಲ ಶಾಲೆ ಮಾತ್ರವಲ್ಲದೆ ಶಿಕ್ಷಕರು ಮೌಲ್ಯಮಾಪನ ಮತ್ತು ಇಲಾಖೆಯ ತರಬೇತಿಗಳಿಗೆ ಹೋದಾಗಲೂ ಆ್ಯಪ್ ಮೂಲಕವೇ ಹಾಜರಾತಿ ದಾಖಲಿಸಬೇಕು.

ಈಗಾಗಲೇ ಶಿಕ್ಷಣ ಇಲಾಖೆಯ ಆಯುಕ್ತ ಕಚೇರಿ ಯಶಸ್ವಿ ಪ್ರಯೋಗ ನಡೆಸಿ ಬಳಿಕ ಮೇ.9ರಿಂದಲೇ ರಾಜ್ಯ ಎಲ್ಲಾ ತಾಲೂಕುಗಳಲ್ಲಿಯೂ ಬಿಇಒ ಮತ್ತು ಬಿಆರ್‌ಸಿಗಳ ಮೂಲಕ ಆ್ಯಪ್‌ನ ಬಳಕೆ ಮತ್ತು ಹಾಜರಾತಿ ಹಾಕುವ ಬಗ್ಗೆ ಎಲ್ಲಾ ಶಿಕ್ಷಕರಿಗೂ ತರಬೇತಿಯನ್ನು ಕೊಡುತ್ತಿದೆ. ಕೆಲ ಶಿಕ್ಷಕರು ಹಾಗೂ ಶಿಕ್ಷಣ ಇಲಾಖೆ ಸಂಘ ಸಂಸ್ಥೆಗಳಲಿದ್ದವರು ಶಾಲೆಗೆ ಅನಧಿಕೃತ ಗೈರಾದರೂ ಮರುದಿನ ಶಾಲಾ ಹಾಜರಾತಿ ಪುಸ್ತಕದಲ್ಲಿ ಮುಖ್ಯ ಶಿಕ್ಷಕರ ಅಡ್ಜಸ್ಟ್‌ಮೆಂಟ್ ಮೇಲೆ ಸಹಿ ಮಾಡಿಕೊಳ್ಳುತ್ತಿದ್ದರು.

ರಾಮ ಬಾಣ



ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

◈ ಸ್ಪೀಕರ್ ಅವರು ವಿಧಾನಸೌಧದ ಬಾಗಿಲು ಮೆಟ್ಟಿಲುಗಳನ್ನು ಹೊಸದು ಮಾಡಲು ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಾರೆ.ಆದರ ಜೊತೆಗೆ ಮುಖ್ಯ ಮಂತ್ರಿಯವರ ಕುರ್ಚಿಯ ನಟ್ಟು ಬೋಲ್ಟ್ ಕೂಡಾ ರಿಪೇರಿ ಮಾಡಿಸಬೇಕು
–ಶ್ರೀರಾಮುಲು
–ಅದು ಅವರ ವ್ಯಾಪ್ತಿಯಲ್ಲಿ ಇಲ್ಲ, ಅದೇನಿದ್ದರೂ ಹೈಕಮಾಂಡಿನದು.ಅವರು ಅದನ್ನು ಮಾಡೋದು ಬಿಡಿ ,ಸಿ.ಎಂ ಕುರ್ಚಿಯ ಕುರಿತು ಕನಸಿನಲ್ಲಿ ಯೋಚನೆ ಮಾಡಲೂ ಹೆದರುತ್ತಿದ್ದಾರೆ ಅಂತ ನಿಗೂಢ ಮೂಲಗಳಿಂದ ಬಂದ ವರದಿ!

ದಿನ ಭವಿಷ್ಯ

ಮೇಷ ಸಂಬಂಧದಲ್ಲಿ ಉಂಟಾಗಿದ್ದ ಸಮಸ್ಯೆ ನಿವಾರಣೆ. ಹಣದ ವಿಚಾರದಲ್ಲಿ ಎಚ್ಚರವಿರಲಿ. ಸಾಲ ನೀಡಿದರೆ ಮರಳಿ ಬಾರದ ಪರಿಸ್ಥಿತಿ.

ವೃಷಭ ಎಲ್ಲ ಇದ್ದೂ ಅಸಂತೃಪ್ತಿಯ ಭಾವ. ಕೆಲ ವಿಷಯ ಅಗತ್ಯಕ್ಕಿಂತ ಗಂಭೀರ ತೆಗೆದುಕೊಳ್ಳದಿರಿ. ನೆಮ್ಮದಿ ಕೆಡಿಸಲು ಅವಕಾಶ ಕೊಡದಿರಿ.

ಮಿಥುನ ಏರಿಳಿತಗಳ ದಿನ. ವೃತ್ತಿಯಲ್ಲಿ ಹೊಣೆ ಹೆಚ್ಚು. ಹೊಸ ಉದ್ಯೋಗ ಅವಕಾಶ. ಪ್ರೀತಿಯಲ್ಲಿ ಅಪಸ್ವರ ಎದ್ದೀತು. ವಿವೇಕದಿಂದ ವ್ಯವಹರಿಸಿ.

ಕಟಕ ವೃತ್ತಿಯ ಒತ್ತಡ ನಿಮ್ಮ ಆರೋಗ್ಯದ ಮೇಲೂ ಪರಿಣಾಮ ಬೀರಬಹುದು. ವೃತ್ತಿ ಮಾತ್ಸರ್ಯ ನೆಮ್ಮದಿ ಕಲಕಬಹುದು.

ಸಿಂಹ ಇನ್ನಷ್ಟು ವಿಳಂಬ ಬೇಡ, ಪ್ರಮುಖ ನಿರ್ಧಾರ ಇಂದೇ ತಾಳಿ. ಅದರಿಂದ ಉತ್ತಮ ಫಲಿತಾಂಶ. ಹಿರಿಯರಿಗೆ ದೈಹಿಕ ನೋವು.

ಕನ್ಯಾ ಪ್ರತಿಯೊಬ್ಬರ ವಿಷಯವನ್ನೂ ನೀವೇ ನಿರ್ಧರಿಸುವವರು ಎಂಬಂತೆ ವರ್ತಿಸದಿರಿ. ನಿಮ್ಮ ನಡೆಗೆ ಕೆಲವರ ವಿರೋಧ ಸಂಭವ.

ತುಲಾ ವೃತ್ತಿಯಲ್ಲಿ ಹೆಚ್ಚುವರಿ ಹೊಣೆ. ಸರಿಯಾಗಿ ನಿಭಾಯಿಸುವಿರಿ. ಶೇರು ವ್ಯವಹಾರ ಲಾಭ ತರಲಿದೆ. ಮನೆಯ ಕಾರ್ಯ ಸುಗಮವಾಗಿ ಸಾಗಲಿದೆ.

ವೃಶ್ಚಿಕ ಖಾಸಗಿ ಮತ್ತು ವೃತ್ತಿ ಬದುಕಲ್ಲಿ ಪೂರಕ ದಿನ. ಸಂಕೀರ್ಣ ಕಾರ್ಯವನ್ನು ಸುಲಭದಲ್ಲಿ ಮುಗಿಸುವಿರಿ. ವಿವಾಹಿತರ ಪಾಲಿಗೆ ಶುಭ ಬೆಳವಣಿಗೆ ಸಂಭವ.

ಧನು ಇಂದು ಸಕಾಲದಲ್ಲಿ ಕಾರ್ಯ ಮುಗಿಯದು. ಕೆಲ ವಿದ್ಯಮಾನಗಳಿಗೆ ಭಾವಾವೇಶ ತೋರುವಿರಿ. ಶಾಂತಚಿತ್ತರಾಗಿ ಪ್ರತಿಕ್ರಿಯೆ ತೋರುವುದು ಅವಶ್ಯ.

ಮಕರ ಪ್ರೀತಿಯಲ್ಲಿ ಗುಣಾತ್ಮಕ ಬೆಳವಣಿಗೆ. ಆತ್ಮೀಯರ ಬೆಂಬಲ. ಮನದ ಒತ್ತಡ ನಿವಾರಣೆ. ವೃತ್ತಿಯಲ್ಲಿ ಇತರರ ಸಹಕಾರ ಪಡೆಯುವಿರಿ.

ಕುಂಭ ವೃತ್ತಿ ಒತ್ತಡ ಕಡಿಮೆ. ಆದರೆ ಖಾಸಗಿ ಬದುಕಲ್ಲಿ ಹೊಸ ಸವಾಲು ಉದ್ಭವ. ದಿನದಂತ್ಯಕ್ಕೆ ಸಂತೋಷ ಪಡುವ ಬೆಳವಣಿಗೆ. ಆಪ್ತ ಸಂಗದಿಂದ ನೆಮ್ಮದಿ.

ಮೀನ ಉದ್ಯೋಗ ಬದಲಾವಣೆಗೆ ಈಗ ಕಾಲ ಅಪಕ್ವ. ಆಪ್ತರ ಕುರಿತಂತೆ ಭಾವುಕ ಪ್ರಸಂಗ ಎದುರಿಸುವಿರಿ. ಹಣದ ಬಿಕ್ಕಟ್ಟು ಪರಿಹಾರ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00
ಅದೃಷ್ಟ ಸಂಖ್ಯೆ: 4,9,1,5

ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಕೇಂದ್ರ ಸಚಿವ ಕುಮಾರಸ್ವಾಮಿ ಪ್ರಶ್ನೆ

ಬೆಲೆ ಹೆಚ್ಚಳದ ಪಟ್ಟಿ ಕೊಡಿ

ಮೈಸೂರು: ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಬಗ್ಗೆ ಅಪಪ್ರಚಾರ ನಡೆಸುತ್ತಿರುವ ಕಾಂಗ್ರೆಸ್ ನಾಯಕರು, ಕಳೆದ ಮೂರು ವರ್ಷಗಳಲ್ಲಿ ಪಂಚ ಗ್ಯಾರಂಟಿಗಳಿಗೆ ಹಣ ಹೊಂದಿಸಲು ನಿಮ್ಮ ಸರಕಾರವು ಎಷ್ಟು ಸಲ ಬೆಲೆ ಏರಿಕೆ ಮಾಡಿದೆ? ಯಾವ ಯಾವ ಬಾಬತ್ತುಗಳ ಮೇಲೆ ಎಷ್ಟೆಷ್ಟು ತೆರಿಗೆ ವಿಧಿಸಿದೆ ಎಂಬ ಬಗ್ಗೆ ಜನರಿಗೆ ಹೇಳಲಿ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ನೇರ ಸವಾಲು ಹಾಕಿದರು.

ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ಜನರೊಂದಿಗೆ ಜನತಾದಳ ಮತ್ತು ಸದಸ್ಯತ್ವ ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿದ ಕೇಂದ್ರ ಸಚಿವರು ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಕಳೆದ ಮೂರು ವರ್ಷಗಳಲ್ಲಿ ಮದ್ಯ, ಬಸ್ಸು, ವಿದ್ಯುತ್ ಸೇರಿದಂತೆ ಅನೇಕ ಬಾಬತ್ತುಗಳ ಮೇಲೆ ನಿರಂತರವಾಗಿ ತೆರಿಗೆವಿಧಿಸಿ ಬೆಲೆ ಏರಿಕೆ ಮಾಡಲಾಗಿದೆ. ಒಂದೆಡೆ ಗ್ಯಾರಂಟಿಗಳನ್ನು ಕೊಡುತ್ತೇವೆ ಎಂದು ಜನರ ಮೂಗಿಗೆ ತುಪ್ಪ ಸವರುತ್ತಿರುವ ಸರ್ಕಾರವು ಮತ್ತೊಮ್ಮೆ ಅದಕ್ಕೂ ಮೀರಿ ಬೆಲೆ ಏರಿಕೆ ಮಾಡುತ್ತಿದೆ. ಎಷ್ಟು ಬಾರಿ ತೆರಿಗೆ ಹೇರಿಕೆ, ಬೆಲೆ ಏರಿಕೆ ಮಾಡಿದ್ದೇವೆ ಎಂಬ ಬಗ್ಗೆ ಕಾಂಗ್ರೆಸ್ ಸರ್ಕಾರ ಪಟ್ಟಿ ನೀಡಲಿ ಎಂದು ಕುಮಾರಸ್ವಾಮಿ ಅವರು ಗುಡುಗಿದರು. ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಬಗ್ಗೆ ಮಾತನಾಡುತ್ತಿರುವ ಕಾಂಗ್ರೆಸ್ ನಾಯಕರು ರಾಜ್ಯದ ಅಭಿವೃದ್ಧಿಗೆ ಏನು ಮಾಡಿದ್ದಾರೆ ಎಂದು ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳಲಿ. ಬರುವ 19ರಂದು ಸಾಧನಾ ಸಮಾವೇಶ ಮಾಡಲು ಹೊರಟಿರುವ ಕಾಂಗ್ರೆಸ್ ನಾಯಕರು ರಾಜ್ಯದ ಅಭಿವೃದ್ಧಿಗೆ ನೀಡಿರುವ ಕೊಡುಗೆಯ ಬಗ್ಗೆ ಆಲೋಚನೆ ಮಾಡಲಿ ಎಂದು ಕೇಂದ್ರ ಸಚಿವರು ಹರಿಹಾಯ್ದರು.



ಅಮೆರಿಕ, ಇಸ್ರೇಲ್ ಜೊತೆಗೂಡಿ ಇರಾನ್ ಮೇಲೆ 60 ದಿನಗಳ ಕಾಲ ಯುದ್ಧ ಮಾಡಿದ್ದರಿಂದ ತೈಲ ಸರಬರಾಜು ಬಿಕ್ಕಟ್ಟು ಉಂಟಾಗಿದೆ. ಜಗತ್ತಿನ ಮುಂದುವರಿದ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಕಡಿಮೆ ಇದೆ. ಮುಂದುವರಿದ ದೇಶ ಎಂದು ಗುರುತಿಸಿಕೊಂಡಿರುವ ಸಿಂಗಾಪುರದಲ್ಲಿ ಪೆಟ್ರೋಲ್ ಬೆಲೆ 245ರೂ. ಇದೆ ಎಂಬುದನ್ನು ಕಾಂಗ್ರೆಸ್ ನಾಯಕ ಕಣ್ತೆರೆದು ನೋಡಬೇಕು. ಯುದ್ಧದಿಂದ ಜಗತ್ತಿನ ಎಲ್ಲಾ ದೇಶಗಳು ತೈಲ ಬಿಕ್ಕಟ್ಟು ಎದುರಿಸುತ್ತಿವೆ. ಯುದ್ಧ ನಡೆಯುತ್ತದೆ ಎಂದು ಯಾರಿಗಾದರೂ ಮೊದಲೇ ಕನಸು ಬಿದ್ದಿರುತ್ತದಾ? ಇದರ ಕನಸು ಬಿದ್ದಿದ್ದರೆ ಕಾಂಗ್ರೆಸ್ ನಾಯಕರು ಹೇಳಲಿ. ಒಂದು ವೇಳೆ ಇಂತಹ ಕಷ್ಟದ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿ ಇದ್ದಿದ್ದರೆ ಏನು ಮಾಡುತ್ತಿತ್ತು? ಎಂದು ಸಚಿವ ಕುಮಾರಸ್ವಾಮಿ ಅವರು ಕಾಂಗ್ರೆಸ್ ನಾಯಕರ ವಿರುದ್ಧ ಕಿಡಿಕಾರಿದರು.

75 ಕ್ಷೇತ್ರ ಗೆಲುವಿನ ಗುರಿ: ಮುಂಬರುವ ವಿಧಾನಸಭೆ ಚುನಾವಣೆಗೆ ಸಜ್ಜಾಗುವಂತೆ ಈಗಲೇ ಕಾರ್ಯಕರ್ತರ ಪಡೆಗೆ ಕರೆ ಕೊಟ್ಟ ಪಕ್ಷದ ರಾಜ್ಯಾಧ್ಯಕ್ಷರು ಆಗಿರುವ ಕುಮಾರಸ್ವಾಮಿ ಅವರು ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ಪಕ್ಷವು 75 ಕ್ಷೇತ್ರಗಳಲ್ಲಿ ಜಯ ಗಳಿಸುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಮ್ಮಲ್ಲಿ ಗೊಂದಲವಿಲ್ಲ

ನಮ್ಮ ಪಕ್ಷದಲ್ಲಿ ಯಾವುದೇ ಗೊಂದಲವಿಲ್ಲ. ಯಾವುದೇ ಒತ್ತಡಗಳಿಗೆ ಮಣಿಯುವುದಿಲ್ಲ. ಕಾರ್ಯಕರ್ತರ ಭಾವನೆಗಳಿಗೆ ಬೆಲೆ ಕೊಟ್ಟು ಚಾಮುಂಡೇಶ್ವರಿ ಕ್ಷೇತ್ರ ಜೆಡಿಎಸ್ ಭದ್ರಕೋಟೆ ಎಂದು ಮನವರಿಕೆ ಮಾಡಿಕೊಡಲು ಸಮಾವೇಶ ಮಾಡಿದ್ದೇವೆ ಎಂದು ಅವರು ಒತ್ತಿ ಹೇಳಿದರು. ನಮ್ಮ ಪಕ್ಷಕ್ಕೆ ಲಕ್ಷಾಂತರ ಮಂದಿ ನಿಷ್ಠಾವಂತ ಕಾರ್ಯಕರ್ತರು ಬೆನ್ನೆಲುಬಾಗಿದ್ದಾರೆ. ಕಾರ್ಯಕರ್ತರ ಶ್ರಮದ ಫಲವಾಗಿ ಇಂದಿಗೂ ಜೆಡಿಎಸ್ ಪ್ರಬಲವಾಗಿ ಉಳಿದಿದೆ ಎಂದ ಕೇಂದ್ರ ಸಚಿವರು ಹಿಂದೆ ನಡೆದ ಇದೇ ಚಾಮುಂಡೇಶ್ವರಿ ಕ್ಷೇತ್ರದ ಉಪ ಚುನಾವಣೆ ಸನ್ನಿವೇಶವನ್ನು ನೆನಪು ಮಾಡಿಕೊಂಡರು.

ಶಿವಾನಂದ ಪೊಲೀಸ್ ವಶಕ್ಕೆ

ಬೆಳಗಾವಿ: ಆರ್‌ಬಿಐ ನಿಯಮಗಳನ್ನು ಪಾಲಿಸದೆ ಸಾವಿರಾರು ಜನರಿಂದ ಠೇವಣಿ ಸಂಗ್ರಹಿಸಿ ಅನಧಿಕೃತ ಬಡ್ಡಿ ವ್ಯವಹಾರ ನಡೆಸಿದ ಆರೋಪದಲ್ಲಿ ಶಿವಂ ಅಸೋಸಿಯೇಟ್ಸ್ ಮಾಲೀಕ ಶಿವಾನಂದ ನೀಲಣ್ಣವರ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.



ನಗರ ಪೊಲೀಸ್ ಕಮಿಷನರ್ ಭೂಷಣ ಬೊರಸೆ ಮಾಹಿತಿ ನೀಡಿದ್ದು, ಪ್ರಾಥಮಿಕ ತನಿಖೆಯಲ್ಲಿ ಸುಮಾರು 35 ಸಾವಿರ ಜನರಿಂದ ಠೇವಣಿ ಸಂಗ್ರಹಿಸಿರುವುದು ಗೊತ್ತಾಗಿದೆ. ಸಾವಿರಾರು ಕೋಟಿ ರೂಪಾಯಿ ವ್ಯವಹಾರ ನಡೆದಿರುವ ಶಂಕೆ ಇದೆ. ಆದರೆ, ವ್ಯವಹಾರಗಳು ಆರ್‌ಬಿಐ ನಿಯಮಾನುಸಾರ ನಡೆದಿಲ್ಲ ಎಂದರು. ಬೆಳಗಾವಿಯ ಮಾಳ ಮಾರುತಿ ಪೊಲೀಸರು ಆರೋಪಿಯನ್ನು ಶುಕ್ರವಾರ ರಾತ್ರಿ ಬಂಧಿಸಿ, ಮ್ಯಾಜಿಸ್ಟ್ರೇಟ್ ಅವರ ನಿವಾಸದ ಮುಂದೆ ಹಾಜರುಪಡಿಸಿದ್ದರು. ವಿಚಾರಣೆಗಾಗಿ ಆರೋಪಿಯನ್ನು 5 ದಿನ ಪೊಲೀಸ್ ವಶಕ್ಕೆ ನೀಡಲಾಗಿದೆ.

ಡಿಸಿ ನಿರ್ದೇಶನದಂತೆ ಎಸಿ ಶ್ರವಣ ನಾಯಕ ನೇತೃತ್ವದಲ್ಲಿ ಸಹಕಾರ ಇಲಾಖೆ ಹಾಗೂ ಪೊಲೀಸರ ತಂಡ ಶಿವಾನಂದ ಅವರ ಮನೆ, ಕಚೇರಿ ಸೇರಿದಂತೆ ವಿವಿಧ ಸ್ಥಳಗಳ ಮೇಲೆ ದಾಳಿ ನಡೆಸಿತು. 2 ದಿನಗಳಿಂದ ದಾಖಲೆಗಳ ತಪಾಸಣೆ ನಡೆಯುತ್ತಿದ್ದು, ಹಣ ವರ್ಗಾವಣೆ ಹಾಗೂ ಹೂಡಿಕೆ ವ್ಯವಹಾರಕ್ಕೆ ಸಂಬಂಧಿಸಿದ ನೂರಾರು ದಾಖಲೆಗಳನ್ನು ಪರಿಶೀಲಿಸಲಾಗಿದೆ.

ಸಿಐಡಿ ಅಧಿಕಾರಿಗಳ ಸಭೆ

ಬೆಳಗಾವಿ: ಶಿವಂ ಅಸೋಸಿಯೇಟ್ಸ್‌ನ ಮಾಲಿಕ ಶಿವಾನಂದ ನೀಲಣ್ಣವರ ಇಷ್ಟು ದಿನ ಬೆಳಗಾವಿ ಜನರಿಗೆ ಮಾತ್ರ ಪರಿಚಯವಾಗಿದ್ದ. ಆದರೆ, 4500 ಕೋಟಿ ರೂ. ವಂಚನೆ ಪ್ರಕರಣ ರಾಜ್ಯಾದ್ಯಂತ ಭಾರೀ ಸಂಚಲನ ಮೂಡಿಸಿದೆ. ಹೂಡಿಕೆ ವಂಚನೆ ಆರೋಪ ಪ್ರಕರಣದ ತನಿಖೆಯನ್ನು ಸಿಐಡಿಗೆ ಹಸ್ತಾಂತರಿಸುವ ಕುರಿತು ಆಯುಕ್ತರ ಕಚೇರಿಯಲ್ಲಿ ಭಾನುವಾರ ಮಹತ್ವದ ಉನ್ನತ ಮಟ್ಟದ ಸಭೆ ನಡೆಯಿತು. ಬೆಳಗಾವಿ ನಗರ ಪೊಲೀಸ್ ಕಮಿಷನರ್ ಭೂಷಣ್ ಬೊರಸೆ ಉಪಸ್ಥಿತಿಯಲ್ಲಿ ನಡೆದ ಈ ಸಭೆಗೆ ಸಿಐಡಿ ಡಿಐಜಿ ಭೀಮಾಶಂಕರ್ ಗುಳೇದ್ ಸೇರಿದಂತೆ ಮೂವರು ಪ್ರಮುಖ ತನಿಖಾಧಿಕಾರಿಗಳ ತಂಡ ಆಗಮಿಸಿತ್ತು.

ಬ್ಯಾಂಕ್ ಅಧಿಕಾರಿಗಳು ಶಾಮೀಲು?

ಬೆಳಗಾವಿ: ಜಿಲ್ಲೆಯಲ್ಲಿ 4,500 ಕೋಟಿ ರೂ. ವಂಚನೆ ಪ್ರಕರಣದ ತನಿಖೆಗೆ ಈಗಾಗಲೇ ಸಿಐಡಿ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ. 35 ಸಾವಿರಕ್ಕೂ ಹೆಚ್ಚು ಜನರಿಂದ ಹೂಡಿಕೆ ಹಣ ಪಡೆದಿರುವುದು ಬೆಳಕಿಗೆ ಬಂದಿದೆ. ಆದರೆ, ಶಿವಾನಂದ ನೀಲಣ್ಣವರ ಖಾಸಗಿ ಬ್ಯಾಂಕ್ ಖಾತೆಗಳಲ್ಲಿ ಕೋಟ್ಯಂತರ ರೂ. ಪತ್ತೆಯಾಗಿದ್ರು, ವಹಿವಾಟುಗಳ ಬಗ್ಗೆ ಬ್ಯಾಂಕ್‌ಗಳು ಮೌನ ವಹಿಸಿದ್ದೇಕೆ ಎಂಬ ಪ್ರಶ್ನೆ ಇದೀಗ ಚರ್ಚೆಗೆ ಕಾರಣವಾಗಿದೆ.

ಹಾರ್ಮುಜ್: ನೌಕೆಗಳ ಮೇಲಿನ ದಾಳಿಗೆ ಆತಂಕ

ಪುಟ ೧➜ಈ ದಾಳಿಯ ಹಿಂದಿರುವ ಅಪರಾಧಿಗಳು ಯಾರೆಂದು ಇನ್ನೂ ಪತ್ತೆಯಾಗಿಲ್ಲ. ಒಮಾನ್ ಅಧಿಕಾರಿಗಳು ನೌಕೆಯಲ್ಲಿದ್ದ ಎಲ್ಲಾ 14 ನಾಗರಿಕ ಸಿಬ್ಬಂದಿಯನ್ನು ಯಶಸ್ವಿಯಾಗಿ ರಕ್ಷಿಸಿದ್ದಾರೆ. ಪ್ರಾದೇಶಿಕ ಸಂಘರ್ಷ ಆರಂಭವಾದ ದಿನದಿಂದ ಕನಿಷ್ಠ ಎರಡು ಭಾರತೀಯ ಧ್ವಜದ ಹಡಗುಗಳು ದಾಳಿಗೆ ಒಳಗಾಗಿದ್ದು, ಈ ಘಟನೆಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲದ್ದು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಈ ಹಿಂದೆ ತಿಳಿಸಿತ್ತು.

ಪ್ರಾದೇಶಿಕ ಹಿನ್ನೆಲೆ: ಒಮಾನ್ ಬಳಿ ಇರುವ ಹಾರ್ಮುಜ್ ಜಲಸಂಧಿ ಒಂದು ಕಿರಿದಾದ ಜಲಮಾರ್ಗವಾಗಿದ್ದು, ಇದರ ಮೂಲಕ ಜಾಗತಿಕ ಇಂಧನ ಪೂರೈಕೆಯ ಸರಿಸುಮಾರು ಐದನೇ ಒಂದು ಭಾಗದಷ್ಟು ಸಾಗಾಟ ನಡೆಯುತ್ತದೆ. ಯುಎಸ್ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ದಾಳಿ ನಡೆಸಿದ ನಂತರ ಈ ಪ್ರದೇಶದಲ್ಲಿ ಅಸ್ಥಿರತೆ ತೀವ್ರಗೊಂಡಿದ್ದು, ಪ್ರತಿಯಾಗಿ ಪ್ರತ್ಯುತ್ತರ ದಾಳಿಗಳು ನಡೆದಿವೆ.

ಸುಪ್ರೀಂ ಕೋರ್ಟ್ ಜಡ್ಜ್‌ಗಳ ಸಂಖ್ಯೆ 38ಕ್ಕೆ ಏರಿಕೆ

ಹೊಸದಿಲ್ಲಿ: ಭಾರತದ ಮುಖ್ಯ ನ್ಯಾಯಮೂರ್ತಿಗಳನ್ನು ಹೊರತುಪಡಿಸಿ ಸರ್ವೋಚ್ಚ ನ್ಯಾಯಾಲಯದ ಅನುಮೋದಿತ ನ್ಯಾಯಮೂರ್ತಿಗಳ ಸಂಖ್ಯೆಯನ್ನು 33 ರಿಂದ 37ಕ್ಕೆ ಹೆಚ್ಚಿಸುವ ಸುಗ್ರೀವಾಜ್ಞೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅನುಮೋದನೆ ನೀಡಿದ್ದಾರೆ. ಸರ್ವೋಚ್ಚ ನ್ಯಾಯಾಲಯ (ನ್ಯಾಯಮೂರ್ತಿಗಳ ಸಂಖ್ಯೆ) ತಿದ್ದುಪಡಿ ಸುಗ್ರೀವಾಜ್ಞೆ, 2026 ಅನ್ನು ಶನಿವಾರ ಕೇಂದ್ರ ಗೆಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಇದು ಸರ್ವೋಚ್ಚ ನ್ಯಾಯಾಲಯ (ನ್ಯಾಯಮೂರ್ತಿಳ ಸಂಖ್ಯೆ) ಕಾಯ್ದೆ, 1956ರ ಸೆಕ್ಷನ್ 2ರಲ್ಲಿದ್ದ "ಮೂವತ್ತಮೂರು" ಎಂಬ ಪದದ ಬದಲಿಗೆ "ಮೂವತ್ತೇಳು" ಎಂದು ಬದಲಾಯಿಸುತ್ತದೆ.



ಈ ಬದಲಾವಣೆಯೊಂದಿಗೆ, ಮುಖ್ಯ ನ್ಯಾಯಮೂರ್ತಿ ಸೇರಿದಂತೆ ಸರ್ವೋಚ್ಚ ನ್ಯಾಯಾಲಯದ ಒಟ್ಟು ನ್ಯಾಯಮೂರ್ತಿಗಳ ಸಂಖ್ಯೆ ಈಗಿರುವ 34 ರಿಂದ 38ಕ್ಕೆ ಏರಿಕೆಯಾಗಲಿದೆ.

ಸಚಿವ ಸಂಪುಟದ ಅನುಮೋದನೆ ಮತ್ತು ಜಾರಿ: ಈ ಪ್ರಸ್ತಾವನೆಗೆ ಕೇಂದ್ರ ಸಚಿವ ಸಂಪುಟವು ಮೇ 5ರಂದು ಅನುಮೋದನೆ ನೀಡಿತ್ತು. ಸಂಸತ್ತಿನ ಅಧಿವೇಶನ ನಡೆಯದ ಅವಧಿಯಲ್ಲಿ ಸುಗ್ರೀವಾಜ್ಞೆ ಹೊರಡಿಸಲು ರಾಷ್ಟ್ರಪತಿಗಳಿಗೆ ಅಧಿಕಾರ ನೀಡುವ ಸಂವಿಧಾನದ ವಿಧಿ 123ರ ಅನ್ವಯ ಈ ಕ್ರಮ ಕೈಗೊಳ್ಳಲಾಗಿದೆ. ನ್ಯಾಯಾಲಯದಲ್ಲಿ ಬಾಕಿ ಉಳಿದಿರುವ ಹೆಚ್ಚಿನ ಸಂಖ್ಯೆಯ ಪ್ರಕರಣಗಳನ್ನು ನಿಭಾಯಿಸಲು ಈ ವಿಸ್ತರಣೆ ನಾಲ್ಕು ಹೆಚ್ಚುವರಿ ಹುದ್ದೆಗಳನ್ನು ಸೃಷ್ಟಿಸಲಿದ್ದು, ಈ ಹುದ್ದೆಗಳಿಗೆ ಕೊಲಿಜಿಯಂ ಪ್ರಕ್ರಿಯೆಯ ಮೂಲಕವೇ ನೇಮಕಾತಿ ನಡೆಯಬೇಕಿದೆ.

ನ್ಯಾಯಾಧೀಶರ ಸಂಖ್ಯೆ ಹೆಚ್ಚಳದ ಇತಿಹಾಸ: 1950 ರಲ್ಲಿ ಸರ್ವೋಚ್ಚ ನ್ಯಾಯಾಲಯವನ್ನು ಸ್ಥಾಪಿಸಿದಾಗ, ಸಂವಿಧಾನದ ವಿಧಿ 124(1)ರ ಅನ್ವಯ ಮುಖ್ಯ ನ್ಯಾಯಮೂರ್ತಿಗಳು ಸೇರಿದಂತೆ ಕೇವಲ ಎಂಟು ನ್ಯಾಯಮೂರ್ತಿಗಳಿದ್ದರು. ನಂತರ ಸಂಸತ್ತು ನ್ಯಾಯಮೂರ್ತಿಗಳ ಸಂಖ್ಯೆಯನ್ನು 1956ರಲ್ಲಿ 11ಕ್ಕೆ, 1960ರಲ್ಲಿ 14ಕ್ಕೆ ಮತ್ತು 1977ರಲ್ಲಿ 18ಕ್ಕೆ ಹೆಚ್ಚಿಸಿತು. ಬಳಿಕ, ಈ ಸಂಖ್ಯೆಯನ್ನು 1986 ರಲ್ಲಿ 26ಕ್ಕೆ ಮತ್ತು 2009 ರಲ್ಲಿ 31ಕ್ಕೆ ಹೆಚ್ಚಿಸಲಾಯಿತು. ಕೊನೆಯದಾಗಿ 2019 ರಲ್ಲಿ ನ್ಯಾಯಮೂರ್ತಿಗಳ ಸಂಖ್ಯೆಯನ್ನು 31ರಿಂದ 34ಕ್ಕೆ ಹೆಚ್ಚಿಸಲಾಗಿತ್ತು.

ರೈಲಿನಲ್ಲಿ ಬೆಂಕಿ: ಪಾರಾದ ಪ್ರಯಾಣಿಕರು

ಕೋಟಾ: ದಿಲ್ಲಿಗೆ ತೆರಳುತ್ತಿದ್ದ ರಾಜಧಾನಿ ಎಕ್ಸ್‌ಪ್ರೆಸ್ ರೈಲಿನ ಎಸಿ ಬೋಗಿಯಲ್ಲಿ ಭಾರೀ ಬೆಂಕಿ ಕಾಣಿಸಿಕೊಂಡಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಹಾನಿಯಾಗಿಲ್ಲ. ತಿರುವನಂತಪುರಂ – ದಿಲ್ಲಿಯ ಹಜರತ್ ನಿಜಾಮುದ್ದೀನ್ ರಾಜಧಾನಿ ಎಕ್ಸ್ ಪ್ರೆಸ್ ರೈಲಿನಲ್ಲಿ ಭಾನುವಾರ ಬೆಳಗ್ಗೆ 5 ಗಂಟೆ ಸುಮಾರಿಗೆ ಅವಘಡ ಸಂಭವಿಸಿದೆ.

ರಾಜಸ್ಥಾನದ ಕೋಟಾದ ವಿಕ್ರಮ್‌ಗಢ ಅಲೋಟ್ ರೈಲು ನಿಲ್ದಾಣದ ಬಳಿ ರೈಲಿನ ಎಸಿ ಬೋಗಿಯಲ್ಲಿ ಬೆಂಕಿ ಕಂಡುಬಂದಿದೆ. ಬೆಂಕಿ ಕಾಣಿಸಿಕೊಂಡ ಬಿ1 ಎಸಿ ಬೋಗಿಯಲ್ಲಿ 68 ಪ್ರಯಾಣಿಕರಿದ್ದರು. ತಕ್ಷಣವೇ ಎಲ್ಲರನ್ನೂ ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ. ಘಟನೆಯಲ್ಲಿ ಯಾರಿಗೂ ಗಾಯಗಳಾಗಿಲ್ಲ ಎಂದು ರೈಲ್ವೆ ಅಧಿಕಾರಿಗಳು ಹೇಳಿದ್ದಾರೆ. ಬೋಗಿಯಲ್ಲಿ ಬೆಂಕಿ ಹೊತ್ತಿಕೊಂಡ ಬಗ್ಗೆ ಮೊದಲು ಗಾರ್ಡ್ ಗಮನಿಸಿ ತಕ್ಷಣವೇ ಎಚ್ಚರಿಸಿದ್ದ. ಬಳಿಕ ತುರ್ತು ಬ್ರೇಕ್‌ಗಳನ್ನು ಬಳಸಿ ರೈಲನ್ನು ನಿಲ್ಲಿಸಲಾಯಿತು. ತಕ್ಷಣವೇ ರೈಲ್ವೆ ರಕ್ಷಣಾ ಪಡೆ ಮತ್ತು ರೈಲಿನಲ್ಲಿರುವ ಸಿಬ್ಬಂದಿ ಮತ್ತು ಇತರ ಅಧಿಕಾರಿಗಳು ಬೋಗಿಯಲ್ಲಿದ್ದ ಪ್ರಯಾಣಿಕರನ್ನು ಸ್ಥಳಾಂತರಿಸಲು ಪ್ರಾರಂಭಿಸಿದರು. ಸುಮಾರು 15 ನಿಮಿಷಗಳಲ್ಲಿ ಬೋಗಿಯನ್ನು ತೆರವುಗೊಳಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮದ್ಯದ ದರ ತುಸು ಏರಿಕೆ

ಬೆಂಗಳೂರು: ಜಾಗತಿಕ ಮಟ್ಟದಲ್ಲಿ ಮದ್ಯದ ಅಂಶವನ್ನು ಆಧರಿಸಿ ಮದ್ಯದ ಬೆಲೆ ನಿರ್ಧಾರವಾಗುವ ಹೊಸ ನೀತಿ ಅನುಷ್ಠಾನದ ಪರಿಣಾಮ ಹೆಚ್ಚು ಮಾರಾಟವಾಗುವ ಮದ್ಯ ಮತ್ತು ಬಿಯರ್ ಬ್ರಾಂಡ್‌ಗಳ ದರಗಳ ಪರಿಷ್ಕರಣೆಯಾಗಿದ್ದು, ಕಡಿಮೆ ಬೆಲೆಯ ದರ ಹೊಂದಿದ್ದ ಮದ್ಯದ ಬೆಲೆಯಲ್ಲಿ ಸ್ವಲ್ಪ ಮಟ್ಟಿನ ಏರಿಕೆಯಾಗಿದೆ. ತೆರಿಗೆ ಪದ್ಧತಿಯ ಹೊಸ ನೀತಿಯಡಿ ಮಾರುಕಟ್ಟೆ ಪರಿಗಣನೆ ಆಧಾರದ ಮೇಲೆ ಮದ್ಯ ಉತ್ಪನ್ನಗಳನ್ನು ಸ್ಲಾಬ್‌ಗಳಲ್ಲಿ ನಿರ್ಧರಿಸುವ ಅಧಿಕಾರವನ್ನು ಸಂಪೂರ್ಣವಾಗಿ ಉತ್ಪಾದಕರಿಗೆ ನೀಡಲಾಗಿದ್ದು, ಈ ಹಿಂದೆ ಇದ್ದ 16 ಸ್ಲಾಬ್‌ಗಳನ್ನು 8 ಸ್ಲಾಬ್‌ಗಳಿಗೆ ಇಳಿಸಲಾಗಿದೆ. 2026–27 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ, ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ಮದ್ಯದ ಅಂಶವನ್ನು ಆಧರಿಸಿದ ತೆರಿಗೆ ವ್ಯವಸ್ಥೆ ಜಾರಿಗೆ ತರಲಾಗಿದೆ. ರಾಜ್ಯದ ಗ್ರಾಹಕರಿಗೆ ಅಗ್ಗದ ದರದಲ್ಲಿ ಮದ್ಯ ದೊರಕುವಂತೆ ಹಾಗೂ ರಾಜ್ಯದ ಮದ್ಯದ ದರ ನೆರೆ ರಾಜ್ಯಗಳಿಗೆ ಅಂದರೆ ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ಮತ್ತು ಕೇರಳ ರಾಜ್ಯಗಳಲ್ಲಿ ಇರುವ ಮದ್ಯದ ದರಗಳಿಗೆ ಹೋಲಿಸಿದಾಗ ಅದಕ್ಕಿಂತ ಕಡಿಮೆ ಇರುವಂತೆ ಹಾಗೂ ತುಲನಾತ್ಮಕವಾಗಿ ಸಮ ಇರುವಂತೆ ಐಎಂಎಲ್ ತರ್ಕಬದ್ಧಗೊಳಿಸಲಾಗಿದೆ ಎಂದು ಅಬಕಾರಿ ಇಲಾಖೆ ತಿಳಿಸಿದೆ.

ಸ್ಟ್ರಾಂಗ್ ಬಿಯರ್ ಬೆಲೆ ಹೆಚ್ಚಳ

ಆಲ್ಕೋಹಾಲ್ ಪ್ರಮಾಣ ಆಧರಿಸಿ ಅಬಕಾರಿ ಸುಂಕ ವಿಧಿಸುವ ನೀತಿಯ ಕಾರಣಕ್ಕೆ ಬಿಯರ್ ಬೆಲೆಯಲ್ಲಿಯೂ ಏರುಪೇರಾಗಿದೆ. ಆಲ್ಕೋಹಾಲ್ ಪ್ರಮಾಣ ಶೇ.5 ರಿಂದ ಶೇ.8 ರಷ್ಟು ಇರುವ ಬಿಯರ್‌ಗಳ ಬೆಲೆಯಲ್ಲಿ 25 ರಿಂದ 80 ರೂ. ವರೆಗೂ ಇಳಿಕೆಯಾಗಿದೆ. ಆದರೆ ಆಲ್ಕೋಹಾಲ್ ಪ್ರಮಾಣ ಶೇ.10 ರಿಂದ 15ರಷ್ಟು ಇರುವ ಸ್ಟ್ರಾಂಗ್ ಬಿಯರ್ ಬೆಲೆಯಲ್ಲಿ ಶೇ.20ರಷ್ಟು ಏರಿಕೆಯಾಗಿದೆ.

ಭಾರತ–ನೆದರ್‌ಲ್ಯಾಂಡ್ಸ್ ವ್ಯೂಹಾತ್ಮಕ ಪಾಲುದಾರಿಕೆ

ಪುಟ೧➜ ಅಮೆರಿಕ–ಇಸ್ರೇಲ್, ಇರಾನ್ ಯುದ್ಧ ದಿಂದಾಗಿ ಉಂಟಾಗಿರುವ ಬಿಕ್ಕಟ್ಟು ಇನ್ನೂ ಇತ್ಯರ್ಥಗೊಳ್ಳದಿ ರುವುದು ಜಾಗತಿಕ ಕಳವಳಕ್ಕೆ ಕಾರಣವಾಗಿದೆ.

ಇದೇ ವೇಳೆ ಉಕ್ರೇನ್–ರಷ್ಯಾ ನಡುವಣ ಸಂಘರ್ಷ ಕುರಿತಂತೆಯೂ ಉಭಯ ನಾಯಕರು ಚರ್ಚಿಸಿ, ವಿಶ್ವಸಂಸ್ಥೆಯ ಮಾರ್ಗಸೂಚಿ ಹಾಗೂ ಅಂತಾರಾಷ್ಟ್ರೀಯ ಕಾನೂನಿನಲ್ಲಿ ಮಾತುಕತೆ ಮತ್ತು ರಾಜತಾಂತ್ರಿಕ ಮಾರ್ಗಗಳ ಮೂಲಕ ಶಾಂತಿ ಸ್ಥಾಪನೆಗೆ ಕರೆನೀಡಿದರು.

ಜಾಗತಿಕ ಬಿಕ್ಕಟ್ಟಿನ ನಡುವೆಯೇ ಭಾರತದ ಹಿತಾಸಕ್ತಿಗಳನ್ನು ಕಾಯುವ ಗಂಭೀರ ಪ್ರಯತ್ನದ ಭಾಗವಾಗಿ ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ)ಅಲ್ಲದೆ ನಾಲ್ಕು ಯುರೋಪಿಯನ್ ದೇಶಗಳ(ನೆದರ್ಲ್ಯಾಂಡ್ಸ್, ಸ್ವೀಡನ್, ನಾರ್ವೆ, ಇಟಲಿ) ಭೇಟಿಯ ಭಾಗವಾಗಿ ಪ್ರಧಾನಿ ಮೋದಿ ಇಲ್ಲಿಗಾಗಮಿಸಿದ್ದರು. ಉಭಯ ದೇಶಗಳ ನಡುವೆ ಇದೀಗ ವ್ಯಾಪಾರ ಮತ್ತು ಹೂಡಿಕೆಗೆ ಉತ್ತೇಜನ, ರಕ್ಷಣೆ ಮತ್ತು ಭದ್ರತೆ, ಸೆಮಿಕಂಡಕ್ಟರ್, ಬಾಹ್ಯಾಕಾಶ, ಎಐ ಮತ್ತು ಕ್ವಾಂಟಮ್ ಕಂಪ್ಯೂಟಿಂಗ್ ಸೇರಿದಂತೆ ಮಹತ್ವದ ತಂತ್ರಜ್ಞಾನಗಳು ಒಳಗೊಂಡ ವ್ಯೂಹಾತ್ಮಕ ಪಾಲುದಾರಿಕೆ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. ಅಲ್ಲದೆ ಹಸಿರು ಜಲಜನಕ ಅಭಿವೃದ್ಧಿ ಮೇಲಿನ ಮಹತ್ವಾಕಾಂಕ್ಷಿ ಭಾರತ–ನೆದರ್ಲ್ಯಾಂಡ್ಸ್ ಮಾರ್ಗಸೂಚಿಯೊಂದಕ್ಕೆ ಚಾಲನೆ ನೀಡಲಾಗಿದೆ. ನೆದರ್ಲ್ಯಾಂಡ್ ಯುರೋಪಿನಲ್ಲಿ ಭಾರತದ ಅತಿದೊಡ್ಡ ವ್ಯಾಪಾರ ನೆಲೆಗಳಲ್ಲೊಂದಾಗಿದ್ದು, ಉಭಯ ದೇಶಗಳ ನಡುವಣ ದ್ವಿಪಕ್ಷೀಯ ವ್ಯಾಪಾರ 2024–25ರಲ್ಲಿ 27.8 ಬಿಲಿಯನ್ ಡಾಲರ್‌ಗೆ ತಲುಪಿತ್ತು. ಹಾಗೆಯೇ ಭಾರತದ ನಾಲ್ಕನೇ ಅತಿದೊಡ್ಡ ಹೂಡಿಕೆದಾರ ಯುರೋಪಿಯನ್ ದೇಶವಾಗಿದ್ದು, 55.6 ಬಿ.ಡಾ. ವಿದೇಶಿ ನೇರ ಹೂಡಿಕೆದಾರನೂ ಆಗಿದೆ. ನೆದರ್ಲ್ಯಾಂಡ್ ವಿಶ್ವದರ್ಜೆಯ ಲಾಜಿಸ್ಟಿಕ್ ಜಾಲವನ್ನು ಹೊಂದಿದೆ.

ಚೋಳರ ತಾಮ್ರ ಶಾಸನ ಮರಳಿಸಿದ ನೆದರ್‌ಲ್ಯಾಂಡ್

ಪುಟ ೧➜ಇದು ಮೊದಲನೇ ರಾಜರಾಜ ಚೋಳ ಮತ್ತು ಪುತ್ರ ರಾಜೇಂದ್ರ ಚೋಳನ ಆಡಳಿತ ಕಾಲ 11ನೇ ಶತಮಾನಕ್ಕೆ ಸೇರಿದ ದಾಖಲೆಯಾಗಿದೆ. ಇದು ತಮಿಳುನಾಡಿನ ನಾಗಪಟ್ಟಣದ ಚೂಲಾಮಣಿವರ್ಮ ಹೆಸರಿನ ಬೌದ್ಧ ವಿಹಾರಕ್ಕೆ ಭೂದಾನ ಮತ್ತು ಹಣಕಾಸಿನ ನೆರವು ನೀಡಿರುವ ಬಗ್ಗೆ ದಾಖಲಿಸುತ್ತದೆ. ಇದು 30 ಕೆ.ಜಿ. ತೂಕದ್ದಾಗಿದ್ದು, 21 ತಾಮ್ರದ ಪ್ಲೇಟ್‌ಗಳಿವೆ. ಇದರಲ್ಲಿ ಚೋಳರ ರಾಜಮುದ್ರೆ ಮುದ್ರಿಸಲ್ಪಟ್ಟಿದೆ. 21ರಲ್ಲಿ ಮೊದಲ 5 ಪ್ಲೇಟ್‌ಗಳಲ್ಲಿ ಸಂಸ್ಕೃತ ಹಾಗೂ ಇನ್ನುಳಿದ 16 ಪ್ಲೇಟ್‌ಗಳಲ್ಲಿ ತಮಿಳು ಭಾಷೆಯಲ್ಲಿ ಶಾಸನ ಬರೆಯಲಾಗಿದೆ. ಶಾಸನ ಪ್ಲೇಟ್‌ಗಳಲ್ಲಿ ವಿಷ್ಣುವಿನಿಂದ ಸೂರ್ಯನವರೆಗೆ, ಎಲ್ಲಾ ಚೋಳ ಪೀಳಿಗೆಯ ಅರಸರ ಹೆಸರುಗಳನ್ನು ಮುದ್ರಿಸಲಾಗಿದೆ. ಇದನ್ನು 1712ರಲ್ಲಿ ಡಚ್ ಮಿಷನರಿಯ ಪಾದ್ರಿ ಫ್ಲೋರೆಂಟಿಯಸ್ ಕ್ಯಾಂಪರ್ ನೆದರ್‌ಲ್ಯಾಂಡ್‌ಗೆ ಕೊಂಡೊಯ್ದಿದ್ದ. ಲೀಡೆನ್ ವಿಶ್ವವಿದ್ಯಾಲಯದಲ್ಲಿ ಇದನ್ನು ಸುರಕ್ಷಿತವಾಗಿ ಇಟ್ಟುಕೊಂಡಿದ್ದರು. 2012ರಲ್ಲೇ ಇವುಗಳನ್ನು ಹಿಂದಿರುಗಿಸಲು ಕೇಂದ್ರ ಸರ್ಕಾರ ಮನವಿ ಮಾಡಿತ್ತು. ಆದರೆ ಪ್ರಧಾನಿ ಮೋದಿ ಭೇಟಿ ಸಂದರ್ಭದಲ್ಲಿ ಅಧಿಕೃತವಾಗಿ ಭಾರತಕ್ಕೆ ಹಸ್ತಾಂತರಿಸಲಾಗಿದೆ. ಪ್ರತಿ ಭಾರತೀಯನಿಗೂ ಇದೊಂದು ಸಂತಸದ ಕ್ಷಣವೆಂದು ಮೋದಿ ಬಣ್ಣಿಸಿದ್ದಾರೆ.

ಬೆಂಗ್ಳೂರು–ಮುಂಬೈ ರೈಲಿಗೆ ನಿಶಾನೆ

ಪುಟ ೧➜ಮೇ 23ರಿಂದ ರೈಲು ಸಂಖ್ಯೆ 16553 ಎಸ್‌ಎಂವಿಟಿ ಬೆಂಗಳೂರು–ಲೋಕಮಾನ್ಯ ತಿಲಕ್ ಟರ್ಮಿನಲ್ ದ್ವಿ– ಸಾಪ್ತಾಹಿಕ ಎಕ್ಸ್‌ಪ್ರೆಸ್ ಸೇವೆ ಆರಂಭವಾಗಿದೆ. ಈ ರೈಲು ಪ್ರತಿ ಮಂಗಳವಾರ ಮತ್ತು ಶನಿವಾರ ಸಂಚರಿಸಲಿದೆ. ಮೇ 24 ರಿಂದ ರೈಲು ಸಂಖ್ಯೆ 16554 ಲೋಕಮಾನ್ಯ ತಿಲಕ್ ಟರ್ಮಿನಲ್ –ಎಸ್‌ಎಂವಿಟಿ ಬೆಂಗಳೂರು ದ್ವಿ–ಸಾಪ್ತಾಹಿಕ ಎಕ್ಸ್‌ಪ್ರೆಸ್ ಪ್ರತಿ ಭಾನುವಾರ ಮತ್ತು ಬುಧವಾರ ಸಂಚರಿಸಲಿದೆ. ಕೇಂದ್ರ ಸಚಿವ ವಿ.ಸೋಮಣ್ಣ ಮಾತನಾಡಿ, ಈ ರೈಲು ತುಮಕೂರು, ದಾವಣಗೆರೆ, ಹಾವೇರಿ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ ಸೇರಿ ಹಲವು ಪ್ರಮುಖ ನಗರಗಳಲ್ಲಿ ನಿಲುಗಡೆ ಹೊಂದಿದೆ. ಪ್ರಸ್ತುತ ಪ್ರಯಾಣ ಅವಧಿ ಸುಮಾರು 22 ಗಂಟೆಗಳಾಗಿದ್ದು, ಮುಂದಿನ ದಿನಗಳಲ್ಲಿ ಪ್ರಯಾಣ ಸಮಯ ಕಡಿಮೆ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಟಿಕೆಟ್ ದರ ಎಷ್ಟಿದೆ?: ಬೆಂಗಳೂರು–ಮುಂಬೈ ಮಾರ್ಗದ ಸ್ಲೀಪರ್ ದರ 580 ರೂ. 3 ಎಸಿ 1,510 ರೂ, ಹಾಗೂ 2 ಎಸಿ 2,155 ರೂ. ನಿಗದಿಪಡಿಸಲಾಗಿದೆ. ದಾವಣಗೆರೆ–ಮುಂಬೈ ರೈಲಿನ ಟಿಕೆಟ್ ದರ ಸ್ಲೀಪರ್ 470 ರೂ, 3 ಎಸಿ 1,235 ರೂ, 2 ಎಸಿ 1,750 ರೂ. ಹಾಗೂ ಹುಬ್ಬಳ್ಳಿ–ಮುಂಬೈ ರೈಲಿನ ಟಿಕೆಟ್ ದರ ಸ್ಲೀಪರ್ 420 ರೂ, 3 ಎಸಿ 1,105 ರೂ, 2 ಸಿ 1,565 ರೂ. ನಿಗದಿಪಡಿಸಲಾಗಿದೆ.

ರೈಲು ಸಂಚಾರದ ವೇಳಾಪಟ್ಟಿ: ಬೆಂಗಳೂರು ಎಸ್‌ಎಂವಿಟಿಯಿಂದ ರಾತ್ರಿ 8.35 ಕ್ಕೆ ಹೊರಡುವ ರೈಲು ಮರುದಿನ ರಾತ್ರಿ 8.40ಕ್ಕೆ ಲೋಕಮಾನ್ಯ ತಿಲಕ್ ಟರ್ಮಿನಲ್ ತಲುಪಲಿದೆ. ಅದೇ ರೀತಿ ಮುಂಬೈನಿಂದ ರಾತ್ರಿ 11.15ಕ್ಕೆ ಹೊರಡುವ ರೈಲು ಮರುದಿನ ರಾತ್ರಿ 10.30ಕ್ಕೆ ಬೆಂಗಳೂರಿನ ಎಸ್‌ಎಂವಿಟಿ ತಲುಪಲಿದೆ.

ಹೈ–ಸ್ಪೀಡ್ ರೈಲು ಕಾರಿಡಾರ್‌ಗೆ ಆಗ್ರಹ

ಬೆಂಗಳೂರು: ದಾವಣಗೆರೆ ಮತ್ತು ಹುಬ್ಬಳ್ಳಿ ಮಾರ್ಗವಾಗಿ ಬೆಂಗಳೂರು ಮತ್ತು ಮುಂಬೈ ನಡುವೆ ಹೈ–ಸ್ಪೀಡ್ ರೈಲು ಕಾರಿಡಾರ್ ಮಂಜೂರು ಮಾಡುವಂತೆ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಭಾನುವಾರ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಆಗ್ರಹಿಸಿದ್ದಾರೆ. ಈ ಯೋಜನೆಯು ಮಧ್ಯ ಮತ್ತು ಉತ್ತರ ಕರ್ನಾಟಕದಾದ್ಯಂತ ಆರ್ಥಿಕ ಚಟುವಟಿಕೆಗಳನ್ನು ಗಮನಾರ್ಹವಾಗಿ ಹೆಚ್ಚಿಸಲಿದೆ. ಬೆಂಗಳೂರನ್ನು ಚೆನ್ನೈ ಮತ್ತು ಹೈದರಾಬಾದ್‌ನೊಂದಿಗೆ ಸಂಪರ್ಕಿಸುವ ಇತ್ತೀಚೆಗೆ ಘೋಷಿಸಲಾದ ಹೈ–ಸ್ಪೀಡ್ ರೈಲು ಕಾರಿಡಾರ್‌ಗಳಂತೆಯೇ ಬೆಂಗಳೂರು–ಮುಂಬೈ ಕಾರಿಡಾರ್ ಕೂಡ ಕರ್ನಾಟಕದ ದೀರ್ಘಕಾಲೀನ ಆರ್ಥಿಕ ಬೆಳವಣಿಗೆಗೆ ಪೂರಕವಾಗಲಿದೆ ಎಂದು ಅವರು ಗಮನ ಸೆಳೆದಿದ್ದಾರೆ. ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ ಮತ್ತು ಇತರ ಗಣ್ಯರ ಸಮ್ಮುಖದಲ್ಲಿ ನಡೆದ ನೂತನ, ಎಸ್‌ಎಂವಿಟಿ ಬೆಂಗಳೂರು – ಲೋಕಮಾನ್ಯ ತಿಲಕ್ ಟರ್ಮಿನಲ್ ದ್ವಿ–ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲಿನ ಹಸಿರು ನಿಶಾನೆ ತೋರುವ ಸಮಾರಂಭದಲ್ಲಿ ವರ್ಚುವಲ್ ಆಗಿ ಭಾಗವಹಿಸಿ ತೇಜಸ್ವಿ ಸೂರ್ಯ ಈ ಮನವಿ ಮಾಡಿದ್ದಾರೆ. ಬೆಂಗಳೂರು ಮತ್ತು ಮುಂಬೈ ಭಾರತದ ಎರಡು ಪ್ರಮುಖ ಆರ್ಥಿಕ ರಾಜಧಾನಿಗಳಾಗಿವೆ. ಬೆಂಗಳೂರು ದೇಶದ ತಂತ್ರಜ್ಞಾನ ರಾಜಧಾನಿಯಾಗಿ ಮತ್ತು ಮುಂಬೈ ವಾಣಿಜ್ಯ ರಾಜಧಾನಿಯಾಗಿ ಹೊರಹೊಮ್ಮಿದೆ. ಪ್ರತಿ ವರ್ಷ ಲಕ್ಷಾಂತರ ಜನರು ಬೆಂಗಳೂರು ಮತ್ತು ಮುಂಬೈ ನಡುವೆ ಪ್ರಯಾಣಿಸುತ್ತಾರೆ. ದಾವಣಗೆರೆ ಮತ್ತು ಹುಬ್ಬಳ್ಳಿ ಮೂಲಕ ಈ ಎರಡು ನಗರಗಳನ್ನು ಸಂಪರ್ಕಿಸುವ ಹೈ–ಸ್ಪೀಡ್ ರೈಲು ಕಾರಿಡಾರ್ ಕೇವಲ ಸಂಪರ್ಕವನ್ನು ಸುಧಾರಿಸುವುದಲ್ಲದೆ, ಮಧ್ಯ ಮತ್ತು ಉತ್ತರ ಕರ್ನಾಟಕದಲ್ಲಿ ಆರ್ಥಿಕ ಚಟುವಟಿಕೆಗಳಿಗೆ ದೊಡ್ಡ ಉತ್ತೇಜನ ನೀಡುತ್ತದೆ. ಈ ಯೋಜನೆಯನ್ನು ಪರಿಗಣಿಸಿ ಅನುಷ್ಠಾನಗೊಳಿಸಿದರೆ ರಾಜ್ಯದ ಆರ್ಥಿಕ ಭವಿಷ್ಯವನ್ನು ಬಲಪಡಿಸಲು ನೀಡಿದ ಈ ಕೊಡುಗೆಯನ್ನು ಕರ್ನಾಟಕ ಮತ್ತು ಬೆಂಗಳೂರಿನ ಜನರು ಯಾವಾಗಲೂ ನೆನಪಿಸಿಕೊಳ್ಳುತ್ತಾರೆ ಎಂದು ವಿವರಿಸಿದ್ದಾರೆ.

ಸಂಪಾದಕೀಯ

ಕೇರಳ: ಕಾಂಗ್ರೆಸ್ ಗಜಪ್ರಸವ

ಕೇರಳದ ನೂತನ ಮುಖ್ಯಮಂತ್ರಿಯನ್ನು ಆಯ್ಕೆ ಮಾಡುವುದು ಕಾಂಗ್ರೆಸಿನ ಪಾಲಿಗೆ ಗಜಪ್ರಸವವೇ ಆದಂತಾಯಿತು. ಚುನಾವಣಾ ಫಲಿತಾಂಶ ಪ್ರಕಟವಾಗಿ ಹತ್ತು ದಿನಗಳ ಬಳಿಕ ಈ ಆಯ್ಕೆ ನಡೆದುದು ಕಾಂಗ್ರೆಸ್ ಅನುಭವಿಸಿದ ಇಕ್ಕಟ್ಟನ್ನು ಮತ್ತು ಧರ್ಮಸಂಕಟವನ್ನು ಸಾರಿ ಹೇಳುತ್ತದೆ. ಮೊದಲಿಗೆ ಮೂವರು ಸ್ಪರ್ಧಿಗಳಿದ್ದರೂ ಬಳಿಕ ಇಬ್ಬರು ಪ್ರಮುಖ ಸ್ಪರ್ಧಿಗಳಾಗಿ ಉಳಿದಿದ್ದರು. ಕೊನೆಗೆ ಡಿ.ಸತೀಶನ್ ಅವರು ಮುಖ್ಯಮಂತ್ರಿ ಹುದ್ದೆಗೆ ಆರಿಸಲ್ಪಟ್ಟರು. ಅಚ್ಚರಿಯೆಂದರೆ ಡಿ. ಸತೀಶನ್ ಅವರನ್ನು ಮುಖ್ಯಮಂತ್ರಿಯಾಗಿ ಹೈಕಮಾಂಡ್ ಅರಿಸಿದ್ದೆಂದು ಹೇಳಲಾಗುತ್ತಿದ್ದರೂ ಅವರು



ಆಯ್ಕೆಯಾಗಿರುವುದು ಕಾಂಗ್ರೆಸ್ ಹೈಕಮಾಂಡ್ ಪಾಲಿಗೆ, ಅದರಲ್ಲೂ ಮುಖ್ಯವಾಗಿ ರಾಹುಲ್ ಗಾಂಧಿ ಪಾಲಿಗೆ ದೊಡ್ಡ ಹಿನ್ನಡೆಯೆಂದೇ ಪರಿಗಣಿಸಲಾಗಿದೆ. ರಾಹುಲ್ ಗಾಂಧಿಗೆ ಪರಮಾಪ್ತರಾಗಿರುವ ವೇಣುಗೋಪಾಲ್ ಅವರೇ ಮುಖ್ಯಮಂತ್ರಿಯಾಗುವರೆಂಬುದು ಬಹುತೇಕರ ನಿರೀಕ್ಷೆಯಾಗಿತ್ತು. ರಾಹುಲ್ ಗಾಂಧಿ ಕೂಡಾ ವೇಣುಗೋಪಾಲ್ ಅವರನ್ನೇ ಮುಖ್ಯಮಂತ್ರಿ ಮಾಡಲು ಒಲವು ತೋರಿದ್ದರು. ಆದರೆ ಸ್ಥಳೀಯ ಕಾಂಗ್ರೆಸ್ ಮುಖಂಡರು ಸತೀಶನ್ ಪರವಾಗಿ ಪಟ್ಟು ಹಿಡಿದ ಕಾರಣದಿಂದಾಗಿ ಕಾಂಗ್ರೆಸ್ ಹೈಕಮಾಂಡ್ ಮಣಿಯಲೇ ಬೇಕಾಗಿದೆ ಬಂದಿದೆ. ಅದಕ್ಕಿಂತಲೂ ಮುಖ್ಯವಾಗಿ ಯುಡಿಎಫ್‌ನ ಪ್ರಮುಖ ಅಂಗಪಕ್ಷವಾಗಿರುವ ಮುಸ್ಲಿಂಲೀಗ್ ಒತ್ತಡಕ್ಕೆ ಕಾಂಗ್ರೆಸ್ ಮಣಿಯಿತೆಂದು ಹೇಳುವುದು ಹೆಚ್ಚು ಸೂಕ್ತವಾದೀತು.

ಸತೀಶನ್ ಅವರನ್ನೆ ಮುಖ್ಯಮಂತ್ರಿಯಾಗಿ ಮಾಡಬೇಕೆಂಬುದು ಮುಸ್ಲಿಂಲೀಗ್‌ನ ಒತ್ತಾಯವಾಗಿತ್ತು ಎಂಬುದು ರಹಸ್ಯ ವಿಚಾರವೇನಲ್ಲ. ಮೈತ್ರಿ ಪಕ್ಷವೊಂದು ಕಾಂಗ್ರೆಸಿನ ಮುಖ್ಯಮಂತ್ರಿ ಅಭ್ಯರ್ಥಿಯನ್ನು ನಿರ್ಧರಿಸುವಲ್ಲಿ ಒತ್ತಡ ತಂತ್ರ ಪ್ರಯೋಗಿಸಿತೆಂಬುದು ಮತ್ತು ಅದರಲ್ಲಿ ಸಫಲವೂ ಆಯಿತೆಂಬುದು ಕಾಂಗ್ರೆಸಿನ ಹೈಕಮಾಂಡ್ ಹಾಗೂ ರಾಹುಲ್ ಗಾಂಧಿಯ ವರ್ಚಸ್ಸಿಗೆ ಬಿದ್ದ ಪೆಟ್ಟು.

ಆದರೆ ಕಾಂಗ್ರೆಸಿನ ಮುಖ್ಯಮಂತ್ರಿಯಾಗಲು ಸತೀಶನ್ ಅವರೇ ಹೆಚ್ಚು ಅರ್ಹರಾಗಿದ್ದರು ಎಂಬುದರಲ್ಲಿ ಎರಡು ಮಾತಿಲ್ಲ. ಕಳೆದ ಐದು ವರ್ಷಗಳಲ್ಲಿ ವಿಪಕ್ಷ ನಾಯಕರಾಗಿ ಅವರು ಪಿಣರಾಯಿ ಸರಕಾರದ ವಿರುದ್ಧ ಸಮರ್ಥವಾಗಿ ಹೋರಾಟ ಸಂಘಟಿಸಿದ್ದರು. ಚುನಾವಣೆಯಲ್ಲಿ ಕಾಂಗ್ರೆಸಿನ ಮುಂಚೂಣಿ ನಾಯಕರಾಗಿಯೂ ಕಾರ್ಯ ನಿರ್ವಹಿಸಿದ್ದರು. ಕಾಂಗ್ರೆಸ್ ಅಧಿಕೃತವಾಗಿ ಪ್ರಕಟಿಸಿರದಿದ್ದರೂ ಜನರು ಅವರನ್ನೇ ಮುಖ್ಯಮಂತ್ರಿಯಾಗಿ ಕಣ್ಣ ಮುಂದಿಟ್ಟುಕೊಂಡೇ ಮತ ಚಲಾಯಿಸಿದ್ದರು. ಹಾಗಾಗಿ ಅವರ ಬದಲಾಗಿ ಹೈಕಮಾಂಡ್ ಬೇರೆ ಮುಖ್ಯಮಂತ್ರಿಯನ್ನು ಹೇರಿದ್ದರೆ, ಅದು ಕರ್ನಾಟಕ, ಹರ್ಯಾನಗಳಲ್ಲಿ ಮಾಡಿದ ತಪ್ಪನ್ನೇ ಪುನರಾವರ್ತಿಸಿದಂತಾಗುತ್ತಿತ್ತು. ಕಾಂಗ್ರೆಸ್ ಮತ್ತೊಂದು ಬಿಕ್ಕಟ್ಟನ್ನು ತಾನಾಗಿ ಆಹ್ವಾನಿಸಿದಂತಾಗುತ್ತಿತ್ತು.

ಹೊಸ ಮುಖ್ಯಮಂತ್ರಿಯ ಮುಂದೆ ದೊಡ್ಡ ಸವಾಲುಗಳಿರುವುದೂ ಸುಳ್ಳಲ್ಲ.ಅವನ್ನು ಹೇಗೆ ನಿಭಾಯಿಸುವರೆಂದು ಕಾದು ನೋಡಬೇಕು.

ಮಿತವ್ಯಯ ಕರೆ: ಈ ಪರಿಯ ಆಕ್ರೋಶ ಏಕೆ?

ಪ್ರಧಾನಿ ಮೋದಿ ಅವರ ಮಿತವ್ಯಯ ಕರೆಯ ವಿರುದ್ಧ ಒಂದು ವರ್ಗ, ಕೆಲವು ರಾಜಕೀಯ ಪಕ್ಷಗಳು ಆಕ್ರೋಶ ವ್ಯಕ್ತಪಡಿಸುತ್ತಿರುವುದು ಏಕೆ?

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ಅಮೆರಿಕ -ಇರಾನ್, ರಷ್ಯಾ-ಉಕ್ರೇನ್ ನಡುವಿನ ದೀರ್ಘಕಾಲದ ಸಂಘರ್ಷದಿಂದಾಗಿ ಹೆಚ್ಚು ತೊಂದರೆ, ಸಂಕಟ ಪಡುತ್ತಿರುವ ದೇಶಗಳಲ್ಲಿ ಭಾರತ ಪ್ರಮುಖವಾದುದು. 140 ಕೋಟಿ ಜನಸಂಖ್ಯೆಯುಳ್ಳ ಬೃಹತ್ ದೇಶ ಭಾರತ ಕಚ್ಚಾ ಇಂಧನಕ್ಕಾಗಿ ಇರಾನ್, ಇರಾಕ್, ಸೌದಿ ಅರೇಬಿಯಾ ಹಾಗೂ ರಷ್ಯಾ ದೇಶಗಳ ಮೇಲೆ ಅವಲಂಬಿತವಾಗಿರಬೇಕಾದದು ಅನಿವಾರ್ಯ. ಯಾವುದೇ ಒಂದು ದೇಶ ತನಗೆ ಅಗತ್ಯವಿರುವ ಎಲ್ಲಾ ಸಾಮಗ್ರಿ ವಸ್ತುಗಳನ್ನು ತಾನೇ ಉತ್ಪಾದಿಸಿ ಆತ್ಮನಿರ್ಭರವೆನಿಸಿಕೊಳ್ಳುವುದು ಅಸಾಧ್ಯ. ತನ್ನಲ್ಲಿಲ್ಲದ ಆಗತ್ಯ ವಸ್ತುಗಳಿಗೆ ಪರದೇಶಗಳ ನೆರವು ಪಡೆಯಲೇಬೇಕಾಗುತ್ತದೆ. ಅದು ಸಹಜ ಜಾಗತಿಕ ವ್ಯಾಪಾರ -ವ್ಯವಹಾರ ಸೂತ್ರವೂ ಹೌದು. ಭಾರತದಲ್ಲಿ ಕಚ್ಚಾತೈಲದ ಉತ್ಪಾದನೆ ಕೇವಲ ಶೇಕಡ 15-18 ರಷ್ಟು ಮಾತ್ರ. ಶೇಕಡ 85ರಷ್ಟು ಕಚ್ಚಾತೈಲವನ್ನು ಭಾರತ ವಿದೇಶಗಳಿಂದಲೇ ಆಮದು ಮಾಡಿಕೊಳ್ಳಬೇಕಾಗುತ್ತದೆ ಎಂಬುದು ಆರ್ಥಿಕ ಕ್ಷೇತ್ರದ ತಿಳುವಳಿಕೆಯುಳ್ಳವರಿಗೆಲ್ಲ ತಿಳಿದಿರುವ ಸಂಗತಿಯೇ.

ಅಮೆರಿಕ -ಇರಾನ್ ನಡುವೆ ಭೀಕರ ಕದನ ಶುರುವಾದಾಗಲೇ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲದ ಬೆಲೆ ಗಗನಕ್ಕೇರಲಿದೆ ಎಂಬುದನ್ನು ಬಹುತೇಕರು ಊಹಿಸಿದ್ದರು. ಹಾಗಿದ್ದರೂ ಕೇಂದ್ರದ ಮೋದಿ ಸರಕಾರ ಇದುವರೆಗೂ ಬೆಲೆ ಏರಿಸಿರಲಿಲ್ಲ. ಯುದ್ಧ ಶೀಘ್ರವೇ ಸ್ಥಗಿತಗೊಂಡು ಪರಿಸ್ಥಿತಿ ತಿಳಿಯಾಗಬಹುದು ಎಂಬ ಆಶಯವೇ ಬೆಲೆ ಏರಿಸದಿರುವುದಕ್ಕೆ ಮುಖ್ಯ ಕಾರಣ ಇದ್ದಿರಬಹುದು. ಆದರೆ ಈಗಿನ ಸ್ಥಿತಿ ಗಮನಿಸಿದರೆ ಸದ್ಯಕ್ಕೆ ಯುದ್ಧ ನಿಲ್ಲುವಂತೆ ಕಾಣಿಸುತ್ತಿಲ್ಲ. ಯುದ್ಧ ನಿಂತರೂ ತೈಲ ಹೊತ್ತ ಹಡಗುಗಳು ಹೊರ್ಮುಜ್ ಜಲಸಂಧಿಯನ್ನು ಅನಾಯಾಸವಾಗಿ ದಾಟಿ ಬರುವ ಸನ್ನಿವೇಶ ಕಂಡುಬರುತ್ತಿಲ್ಲ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಈಗ ಅನಿವಾರ್ಯವಾಗಿ ಪೆಟ್ರೋಲ್ ಡೀಸೆಲ್‌ಗಳ ಬೆಲೆಯಲ್ಲಿ ಕೊಂಚ ಏರಿಕೆ ಮಾಡಿದೆ. ಹಾಗೆ ನೋಡಿದರೆ ಬೇರೆ ದೇಶಗಳ ಹೋಲಿಕೆಯಲ್ಲಿ ಇದೇನು ದೊಡ್ಡ ಮೊತ್ತದ ಏರಿಕೆಯಲ್ಲ. ಭಾರತೀಯ ಕರೆನ್ಸಿಯಲ್ಲಿ ಅಮೆರಿಕದಲ್ಲಿ ಲೀಟರ್‌ಗೆ ರೂ. 103, ಸಿಂಗಾಪುರದಲ್ಲಿ ರೂ.240, ಯುರೋಪ್‌ನಲ್ಲಿ ರೂ.210, ಬ್ರೆಜಿಲ್‌ನಲ್ಲಿ ರೂ.128.63, ಇಟಲಿಯಲ್ಲಿ ರೂ.202.54, ಶ್ರೀಲಂಕಾದಲ್ಲಿ ರೂ.140.15, ಜರ್ಮನಿಯಲ್ಲಿ ರೂ.237.10, ಮೆಕ್ಸಿಕೋದಲ್ಲಿ ರೂ.129.59...ಭಾರತದಲ್ಲಾದರೂ ಈಗ ರೂ.106.17. ಬೇರೆ ದೇಶಗಳಿಗೆ ಹೋಲಿಸಿದರೆ ಭಾರತದ್ದು ಕಡಿಮೆ ಬೆಲೆ ಏರಿಕೆ.

ಭಾರತ ಪ್ರತಿದಿನ ಅಂದಾಜು 48 ಲಕ್ಷ ಬ್ಯಾರೆಲ್ ಕಚ್ಚಾತೈಲ ಆಮದು ಮಾಡಿಕೊಳ್ಳುತ್ತಿದೆ. ಇದು ನಮ್ಮ ಒಟ್ಟು ತೈಲ ಬೇಡಿಕೆಯ ಶೇಕಡ 89 ರಷ್ಟು. ಒಂದು ಬ್ಯಾರಲ್‌ಗೆ ಇದುವರೆಗೆ ಇದ್ದ ಬೆಲೆ 110 ಡಾಲರ್. ಒಂದು ಡಾಲರ್‌ಗೆ 84 ರೂಪಾಯಿ ಎಂದಿಟ್ಟುಕೊಳ್ಳಿ. (ರೂಪಾಯಿ ಬೆಲೆ ದಿನೇ ದಿನೇ ಕುಸಿಯುತ್ತಲೇ ಇದೆ ಕೂಡಾ) ಒಂದು ದಿನಕ್ಕೆ ವಿದೇಶಕ್ಕೆ ಹೋಗುವ ಹಣ ರೂ. 4,435 ಕೋಟಿ. ಒಂದು ತಿಂಗಳಿಗೆ ರೂ.1,33,000 ಕೋಟಿ. ಒಂದು ವರ್ಷಕ್ಕೆ ರೂ.16 ಲಕ್ಷ ಕೋಟಿ. ಪ್ರತಿ ನಿಮಿಷಕ್ಕೆ 3 ಕೋಟಿ ರೂಪಾಯಿ ಹಣ ಈ ದೇಶ ಬಿಟ್ಟು ಹೋಗುತ್ತಿದೆ.

ಇದಲ್ಲದೆ ಐಓಸಿ, ಬಿಪಿಸಿಎಲ್, ಎಚ್‌ಪಿಸಿಎಲ್ ಎಂಬ ರಾಷ್ಟ್ರೀಯ ತೈಲ ಶುದ್ಧೀಕರಣ ಕಂಪನಿಗಳು ತಿಂಗಳಿಗೆ 30,000 ಕೋಟಿ ರೂಪಾಯಿ ನಷ್ಟ ಭರಿಸುತ್ತಿವೆ. ಪ್ರತಿ ಲೀಟರ್ ಪೆಟ್ರೋಲ್‌ಗೆ ರೂ.18-20 ನಷ್ಟ, ಡೀಸಿಲಿಗೆ ರೂ.35ರಿಂದ 100 ನಷ್ಟವನ್ನು ಸ್ವತಃ ಹೊರುತ್ತಿವೆ. ಹೀಗಿದ್ದರೂ 2022 ಏಪ್ರಿಲ್‌ನಿಂದ ಇಲ್ಲಿವರೆಗೆ ಪೆಟ್ರೋಲ್ ಬೆಲೆ ಏರಿಕೆಯಾಗದೆ ಹಾಗೆ ಉಳಿದಿದೆ. ಹಾಗಿರುವಾಗ ಈಗ ಅತ್ಯಲ್ಪ ಪ್ರಮಾಣದ ಏರಿಕೆ ಮಾಡಿದರೆ ಅದಕ್ಕೆ ಏಕಿಷ್ಟು ಆಕ್ರೋಶ?

ಅಷ್ಟಕ್ಕೂ ಪ್ರಾಕೃತಿಕ ಕೊಡುಗೆಯಾಗಿರುವ ಪೆಟ್ರೋಲನ್ನು ಎಲ್ಲೆಂದರಲ್ಲಿ ಬಾವಿ ತೋಡಿ ಹೊರತೆಗೆಯಲು ಸಾಧ್ಯವೇ? ಅದು ಎಲ್ಲಿ ಲಭ್ಯವೋ ಅಲ್ಲಿಂದಲೇ ತರಬೇಕು. ವಿದೇಶಗಳಿಂದ ತರಿಸಬೇಕಾಗಿರುವುದರಿಂದಲೇ ಇಂಧನದ ಬೆಲೆ ದುಬಾರಿಯಾಗಲು ಕಾರಣ.

1973ರಲ್ಲಿ ಅರಬ್ ದೇಶಗಳು 'ಅರಬ್ ಆಯಿಲ್ ಎಂಬಾರ್ಗೋ' ಸೂತ್ರದಂತೆ ತೈಲ ಪೂರೈಕೆ ನಿಲ್ಲಿಸಿದಾಗ ಭಾರತ ಮೊದಲ ಬಾರಿ ತೈಲಾಘಾತ ಎದುರಿಸಬೇಕಾಗಿತ್ತು. ಆ ಬಿಕ್ಕಟ್ಟು ಭಾರತಕ್ಕೊಂದು ಸ್ಪಷ್ಟ ಸಂದೇಶ ನೀಡಿತು. ಇನ್ನಾದರೂ ವಿದೇಶಿ ತೈಲ ಅವಲಂಬನೆಗೆ ಮಂಗಳ ಹಾಡಿ ಎಂಬ ಸಂದೇಶ ಅದು. ವಿದೇಶಿ ತೈಲ ಅವಲಂಬನೆ ರಾಷ್ಟ್ರೀಯ ಸಾರ್ವಭೌಮತ್ವಕ್ಕೆ ಅಪಾಯ ಎಂಬ ಸಂದೇಶವದು. ಭಾರತ ಮಾಡಿದ್ದೇನು? ಏನೂ ಮಾಡಲಿಲ್ಲ. 50 ವರ್ಷಗಳು ಕಳೆದಿದ್ದರೂ ನಮಗೆ ಈಗಲೂ ಅರಬ್ ತೈಲವೇ ಗತಿ. ವಿಶ್ವದ ಒಟ್ಟು ತೈಲ ಪ್ರಮಾಣದ ಶೇಕಡ 20ರಷ್ಟು ಹಡಗು ಹಾದು ಹೋಗುವ ಹೊರ್ಮುಜ್ ಜಲಸಂಧಿ ಯುದ್ಧದ ಕರಿ ನೆರಳಲ್ಲಿ ಈಗ ಮುಚ್ಚಿ ಹೋಗಿದೆ. ಭಾರತಕ್ಕೆ ತೈಲ ಬರುವುದಾದರೂ ಹೇಗೆ ?

ಬೇರೆ ದೇಶಗಳಿಗೂ ಆಗ ನಮ್ಮದೇ ಸ್ಥಿತಿಯಿತ್ತು. ಆದರೆ ಅವೆಲ್ಲ ಸುಮ್ಮನೆ ಕೂರಲಿಲ್ಲ. ನಾರ್ವೆ ತಾನೇ ತೈಲ ಉತ್ಪಾದಿಸುವ ದೇಶವಾಗಿದ್ದರೂ ಅಲ್ಲಿ ಎಲೆಕ್ಟ್ರಿಕ್ ವಾಹನಗಳಿಗೆ ಆದ್ಯತೆ ನೀಡಲಾಯಿತು. ಹಾಗಾಗಿ 2023ರಲ್ಲಿ ಅಲ್ಲಿ ಮಾರಾಟವಾದ ಹೊಸ ವಾಹನಗಳಲ್ಲಿ ಶೇಕಡ 90ರಷ್ಟು ಎಲೆಕ್ಟ್ರಿಕ್ ವಾಹನಗಳು. ಚೀನಾದಲ್ಲಿ 2023ರಲ್ಲಿ ಮಾರಾಟವಾದ ಎಲೆಕ್ಟ್ರಿಕ್ ವಾಹನ 60 ಲಕ್ಷ. ಅದು ಲಿಥಿಯಂ ಬ್ಯಾಟರಿ ತಯಾರಿಕೆಯಲ್ಲಿ ವಿಶ್ವಕ್ಕೆ ನಂಬರ್ ಒನ್ ಆಯಿತು. ಸಾವಿರಾರು ಕೋಟಿ ಹೂಡಿಕೆ ಮಾಡಿ 'ಶಕ್ತಿ ಕ್ರಾಂತಿ' ಮಾಡಿತು. ಆದರಿಂದಾಗಿ ಚೀನಾಕ್ಕೆ ಇಂದು ತೈಲ ದೇಶಗಳ ಹಂಗಿಲ್ಲ. ಇಸ್ರೇಲ್‌ನಲ್ಲಿ ಒಂದು ಹನಿ ತೈಲ ಉತ್ಪಾದನೆಯಾಗದು. ಅದು ಅವಲಂಬಿಸಿದ್ದು ಪೂರ್ತಿ ಸೌರ ಶಕ್ತಿಯನ್ನು. ಇಂದು ಸೌರ ಶಕ್ತಿಯಲ್ಲಿ ಅದು ಸ್ವಾವಲಂಬಿ.



ಭಾರತದಲ್ಲಾದರೋ 300 ದಶಲಕ್ಷ ಮನೆಗಳು, ವರ್ಷದಲ್ಲಿ 300 ಬಿಸಿಲಿನ ದಿನಗಳು, ಜಗತ್ತಿನ ಅತಿ ಹೆಚ್ಚು ಯುವ ಜನಸಂಖ್ಯೆ. ಆದರೆ ಸೌರಶಕ್ತಿಯ ಬಳಕೆಯಲ್ಲಿ ನಾವು ಚೀನಾ, ನಾರ್ವೆ, ಇಸ್ರೇಲಿಗಿಂತ ಹಿಂದೆ. ಬಿಸಿಲಿಗೇನೂ ದುಡ್ಡು ಕೊಟ್ಟು ಖರೀದಿಸುವ ಅಗತ್ಯವಿಲ್ಲ. ಆದರೆ ಬೇಸಿಗೆ ಕಾಲದ ಸುಡುಬಿಸಲು ವ್ಯರ್ಥವಾಗಿ ಹೋಗುತ್ತಿದೆ. ಬಿಸಿಲು ಬಳಸಿ ಸೌರಶಕ್ತಿ ನಿರ್ಮಿಸುವ ಕಾರ್ಯದಲ್ಲಿ ನಿರೀಕ್ಷಿತ ವೇಗ ಇಲ್ಲಿಲ್ಲ. ಪರ್ಯಾಯ ಇಂಧನ ತಯಾರಿಕೆಗೆ ಅಗತ್ಯವಿರುವ ಕಚ್ಚಾ ಸಾಮಗ್ರಿಯನ್ನು ಪ್ರಕೃತಿ ಧಾರಾಳವಾಗಿ ನೀಡಿದೆ. ಆದರೆ ಅದರ ಸದುಪಯೋಗದ ಬಗ್ಗೆ ನಮಗೆ ಗೊತ್ತಿಲ್ಲ. ಹಾಗಾಗಿ ತೈಲ ದೇಶಗಳಿಗೆ ಜೋತು ಬಿದ್ದು ಸಂಕಟ ಅನುಭವಿಸಬೇಕಾಗಿದೆ.

ಕೇಂದ್ರ ಸರ್ಕಾರ ಸೌರಶಕ್ತಿಗೆ ಗಮನ ಹರಿಸಿಯೇ ಇಲ್ಲ ಎಂದು ಇದರ ಅರ್ಥವಲ್ಲ . 2014ರ ಬಳಿಕ ಸಾಕಷ್ಟು ಗಮನಹರಿಸಲಾಗಿದೆ. 'ಪಿಎಂ ಸೂರ್ಯ ಘರ್ ಯೋಜನಾ' ಅಡಿಯಲ್ಲಿ ಸೋಲಾರ್ ಅಳವಡಿಕೆಗೆ ಶೇಕಡ 40 ಸಬ್ಸಿಡಿ ಲಭ್ಯವಿದೆ. ಆದರೆ ಇದನ್ನು ಅಳವಡಿಸಿದವರೆಷ್ಟು? ನಮ್ಮ ಜನಪ್ರತಿನಿಧಿಗಳು ಈ ಬಗ್ಗೆ ಜನರ ಗಮನ ಸೆಳೆಯುವ ಕೆಲಸಕ್ಕೆ ಏಕೆ ಮುಂದಾಗಿಲ್ಲ ?

ಇನ್ನು, ಚಿನ್ನ ಖರೀದಿಸಲೇಬೇಡಿ ಎಂದು ಪ್ರಧಾನಿ ಮೋದಿ ಹೇಳಿಲ್ಲ. ಚಿನ್ನ ಖರೀದಿಯನ್ನು ಮಿತಗೊಳಿಸಿ ಎಂದಷ್ಟೇ ಹೇಳಿದ್ದು. ಭಾರತಕ್ಕೆ ಬೇಕಾದ ಚಿನ್ನ ಕೂಡ ಬರಬೇಕಿರುವುದು ವಿದೇಶಗಳಿಂದಲೇ. ಅದಕ್ಕೆ ಪ್ರತಿಯಾಗಿ ಭಾರತ ಡಾಲರ್ ಕೊಡಬೇಕು. ಡಾಲರ್ ಹೆಚ್ಚು ಬೇಕಾದಷ್ಟು ರೂಪಾಯಿ ದುರ್ಬಲವಾಗುತ್ತದೆ. ದೇಶದ ಆರ್ಥಿಕತೆಗೆ ಪೆಟ್ಟು ಬೀಳುತ್ತದೆ. ಒಂದು ಕುಟುಂಬ 10 ಗ್ರಾಂ ಚಿನ್ನ ಕಡಿಮೆ ಖರೀದಿಸಿದರೆ ರೂ.1.06 ಲಕ್ಷ ರೂ. ಉಳಿತಾಯವಾಗಲಿದೆ. ಇದೇ ನಿರ್ಧಾರವನ್ನು 5 ಕೋಟಿ ಕುಟುಂಬ ಕೈಗೊಂಡರೆ 8 ಲಕ್ಷ ಕೋಟಿ ಉಳಿತಾಯವಾಗಲಿದೆ. ಇದೇನೂ ಕಡಿಮೆ ಮೊತ್ತವಲ್ಲ. ದೇಶದ ರಕ್ಷಣಾ ಬಜೆಟಿನ ಮೂರುಪಟ್ಟು. ಒಂದೊಂದು ಹನಿ ಸೇರಿ ಸಾಗರವಾದಂತೆ. ದೇಶ ಸಂಕಟದ ಪರಿಸ್ಥಿತಿ ಎದುರಿಸುತ್ತಿರುವಾಗ ನಾವು ಇಷ್ಟನ್ನೂ ಮಾಡಲಾರೆವೆ?

ಪ್ರಧಾನಿ ಮೋದಿ ಅವರ ಮಿತವ್ಯಯ ಕರೆಯ ವಿರುದ್ಧ ಒಂದು ವರ್ಗ, ಕೆಲವು ರಾಜಕೀಯ ಪಕ್ಷಗಳು ಭಾರೀ ಆಕ್ರೋಶ ವ್ಯಕ್ತಪಡಿಸುತ್ತಿವೆ. ಅದೇಕೆ ಎಂಬುದೇ ಆಶ್ಚರ್ಯ. ದೇಶ ಆರ್ಥಿಕ ಸಂಕಟ ಪರಿಸ್ಥಿತಿ ಎದುರಿಸಿದಾಗ ಈ ಹಿಂದೆ ಪ್ರಧಾನಿಗಳಾಗಿದ್ದ ಇಂದಿರಾ ಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿ ಕೂಡ ಇಂಥದ್ದೇ ಕರೆ ಕೊಟ್ಟಿದ್ದರು ಎಂಬುದನ್ನು ಮರೆತರೆ ಹೇಗೆ? ಶಾಸ್ತ್ರಿ ಪ್ರತಿ ಸೋಮವಾರ ಒಂದು ಹೊತ್ತಿನ ಊಟ ತ್ಯಜಿಸಿ ಎಂದು ಕರೆ ನೀಡಿದ್ದರು. ಆಗ ತೀವ್ರ ಬರಗಾಲ ಕಾಡಿತ್ತು. ಪ್ರಧಾನಿ ಮೋದಿ ನೀವು ಊಟ ತ್ಯಜಿಸಿ, ಚಹಾ ಕುಡಿಯಬೇಡಿ ಎಂದೇನು ಕರೆ ಕೊಟ್ಟಿಲ್ಲವಲ್ಲ. ಚಿನ್ನ ಕಡಿಮೆ ಖರೀದಿಸಿ, ನಿಮ್ಮ ಹೊರಗಿನ ಓಡಾಟಗಳಿಗೆ ಮಿತಿಹಾಕಿ ಇಂಧನ ಉಳಿಸಿ ಎಂಬರ್ಥದ ಕರೆಗೂ ಆಕ್ರೋಶವೆ? 'ನಮ್ ದುಡ್ಡು ನಮ್ಮಿಷ್ಟ. ಮೋದಿ ಯಾರು ಇದನ್ನೆಲ್ಲ ಹೇಳೋಕೆ?' ಎಂದು ತೀರಾ ಬಾಲಿಶವಾಗಿ ಆಡುವವರಿಗೇನು ಮಾಡಲಾದೀತು. ಪ್ರಧಾನಿಯ ಕರೆಯನ್ನು ಅಪಾರ್ಥ ಮಾಡಿಕೊಂಡ ಶತಮೂರ್ಖರು ಎಂದಷ್ಟೇ ಹೇಳಬಹುದು .

ಆದರೆ ಪ್ರಧಾನಿಯ ಮಿತವ್ಯಯ ಕರೆಗೆ ಬಹಳಷ್ಟು ಮಂದಿ ಸ್ಪಂದಿಸಿರುವುದು ಈ ದೇಶದಲ್ಲಿ ಪ್ರಜ್ಞಾವಂತ ಮನಸ್ಸುಗಳು ಸಾಕಷ್ಟಿವೆ ಎಂಬುದಕ್ಕೆ ಧ್ಯೋತಕ. ಎಲ್ಲರಿಗಿಂತಲೂ ನ್ಯಾಯಾಂಗ ಮಿತವ್ಯಯ ಮಂತ್ರ ಪಠಿಸಿರುವುದು ಶುಭ ಸಂಕೇತ. ಸುಪ್ರೀಂ ಕೋರ್ಟ್ ಶೇಕಡ 50ರಷ್ಟು ಸಿಬ್ಬಂದಿಗೆ ವಾರಕ್ಕೆ ಎರಡು ದಿನ ವರ್ಕ್ ಫ್ರಮ್ ಹೋಮ್‌ಗೆ ಅವಕಾಶ ಕಲ್ಪಿಸಲು ನಿರ್ಧರಿಸಿದೆ. ಜೊತೆಗೆ ನ್ಯಾಯಮೂರ್ತಿಗಳ ನಡುವೆ ಕಾರ್ ಪೂಲಿಂಗ್ ವ್ಯವಸ್ಥೆ ಮಾಡಿಕೊಳ್ಳಲು ತಿಳಿಸಿದೆ. ಮಧ್ಯಪ್ರದೇಶ ಹೈಕೋರ್ಟ್ ನ್ಯಾಯಾಧೀಶರೊಬ್ಬರು ಸೈಕಲ್‌ನಲ್ಲಿ ಕೋರ್ಟಿಗೆ ಆಗಮಿಸಿ ಮೋದಿ ಕರೆಗೆ ಬೆಂಬಲ ನೀಡಿದ್ದಾರೆ. ಸ್ವತಃ ಪ್ರಧಾನಿ ಅವರೇ ತಮ್ಮ ಬೆಂಗಾವಲು ವಾಹನ ಕಡಿತಕ್ಕೆ ಆದೇಶಿಸಿದ್ದಾರೆ. ಸಚಿವರು ಅಧಿಕಾರಿಗಳ ಅನವಶ್ಯಕ ದೇಶಿಯ- ವಿದೇಶಿಯ ಪ್ರಯಾಣಕ್ಕೆ ಕಡಿವಾಣ, ಸೆಮಿನಾರ್-ಸಮ್ಮೇಳನಗಳನ್ನು ಆನ್ಲೈನ್ ನಲ್ಲಿ ನಡೆಸುವುದು, ಅಧಿಕಾರಿಗಳು ಮೆಟ್ರೋ- ಸಾರ್ವಜನಿಕ ಸಾರಿಗೆ ಬಳಸಲು ಸೂಚನೆ, ವಿಜೃಂಭಣೆ ಕಾರ್ಯಕ್ರಮ, ಸಭೆಗಳಿಗೆ ಕಡಿವಾಣ ಮುಂತಾದ ಸ್ವಾಗತಾರ್ಹ ಉಪಕ್ರಮಗಳನ್ನು ಕೈಗೊಂಡಿರುವುದು ಒಳ್ಳೆಯ ಮೇಲ್ಪಂಕ್ತಿ.

ಈ ಹಿನ್ನೆಲೆಯಲ್ಲಿ ಮೊದಲು ಎಲ್ಲ ಪಕ್ಷದ ರಾಜಕಾರಣಿಗಳು ತಮ್ಮ ಎಗ್ಗಿಲ್ಲದ ದುಂದುವೆಚ್ಚ, ಓಡಾಟಗಳಿಗೆ ಕಡಿವಾಣ ಹಾಕಬೇಕು. ಸಾಧನಾ ಸಮಾವೇಶ, ಅಭಿಮಾನೋತ್ಸವ, ದುಂದುವೆಚ್ಚದ ಅದ್ದೂರಿ ಮದುವೆಗಳು, ಜಯಂತಿ, ಪಾರ್ಟಿ ಇತ್ಯಾದಿ ರಾಜಕೀಯ ಲಾಭ ಗಿಟ್ಟಿಸುವ ಕಾರ್ಯಗಳನ್ನು ಮುಲಾಜಿಲ್ಲದೆ ಸ್ಥಗಿತಗೊಳಿಸಬೇಕು. ಒಂದಿನಿತೂ ಪ್ರಾಣಬೆದರಿಕೆಯಿಲ್ಲದಿದ್ದರೂ ಹಿಂದೆಮುಂದೆ ಬೆಂಗಾವಲು ವಾಹನ, ಗನ್ ಮ್ಯಾನ್ ಸೌಲಭ್ಯ ಸವಿಯುತ್ತಿರುವ ರಾಜಕಾರಣಿಗಳು ಅವೆಲ್ಲವನ್ನು ತ್ಯಜಿಸಿ ಸಾಮಾನ್ಯರಂತೆ ಓಡಾಡಬೇಕು. ಆಗ ಸಾಮಾನ್ಯ ಜನರೂ ಮಿತವ್ಯಯ ಸಾಧಿಸಲು ಮುಂದಾಗುತ್ತಾರೆ. 'ಯಥಾ ರಾಜಾ ತಥಾ ಪ್ರಜಾ' ಎಂಬ ಮಾತೇ ಇದೆಯಲ್ಲವೆ.


ಗೇಮಿಂಗ್ ಡಿಸಾರ್ಡರ್

ತಾರುಣ್ಯ ತಲ್ಲಣ
• ಡಾ.ಕೆ,ಆರ್, ಶ್ರೀಧರ್
drkrsridhar208@gmail.com



ಗೇಮಿಂಗ್ ಡಿಸಾರ್ಡರ್ ಎಂಬ ಈ ಲೇಖನದ ಶೀರ್ಷಿಕೆಯೇ ಓದುಗರಿಗೆ ಅರೇ ಇದೇನು, ಎಂದು ಆಶ್ಚರ್ಯ ಮೂಡಿಸಲು ಸಾಕು. ಗೇಮಿಂಗ್ ಡಿಸಾರ್ಡರ್ ಎಂಬುದು ಆಧುನಿಕ ಇಂಟರ್ ನೆಟ್, ಮೊಬೈಲ್‌ಗಳಲ್ಲಿ ಪ್ರದರ್ಶಿತವಾಗುವ ಆಟಗಳು. ನಾವು ಮದ್ಯ, ಮಾದಕ ವಸ್ತುಗಳು, ಗಾಂಜಾ, ಧೂಮಪಾನ, ಮತ್ತು ಕೊಕೇನ್ ವ್ಯಸನಗಳ ಕುರಿತು ಕೇಳಿದ್ದೇವೆ. ಜೂಜಾಟದ ಜಾಲದಲ್ಲಿ ಬಿದ್ದು ಲಕ್ಷಗಟ್ಟಲೇ ಹಣ ಕಳೆದುಕೊಂಡವರಿದ್ದಾರೆ. ಗೇಮಿಂಗ್ ಡಿಸಾರ್ಡರ್ ಎಂದರೇನು ಎಂಬುದನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಒಂದು ಉದಾಹರಣೆಯನ್ನು ಓದುಗರು ನೆನಪಿಸಿಕೊಳ್ಳಬಹುದು.

ಕಳೆದ ಫೆಬ್ರವರಿ ನಾಲ್ಕನೇ ದಿನಾಂಕದಂದು ಉತ್ತರ ಪ್ರದೇಶದ ಗಜಿಯಾಬಾದ್‌ನಲ್ಲಿ ಹರೆಯದ ಮೂವರು ಸಹೋದರಿಯರು ಒಟ್ಟಿಗೇ ಆತ್ಮಹತ್ಯೆ ಮಾಡಿಕೊಂಡ ಘಟನೆ ಓದುಗರಿಗೆ ನೆನಪಿರಬಹುದು. ಇದಕ್ಕೆ ಕಾರಣ ಕೊರಿಯನ್ ಗೇಮ್ (Korean game) ಎಂಬ ಆನ್‌ಲೈನ್ ಆಟ. ಇದರಂತೆ ಪಬ್ಜೀ ಮತ್ತು ಇತರೆ ಆನ್‌ಲೈನ್ ಆಟಗಳಿವೆ. ಈ ಆಟಗಳ ಒಂದು ವಿಶಿಷ್ಟತೆ ಎಂದರೆ ಆಟವನ್ನು ಗೆಲ್ಲಲು ಹಲವು ಹಂತಗಳನ್ನು ದಾಟಬೇಕು. ಹರೆಯದವರು ಆನ್‌ಲೈನ್ ಆಟ ಆಡುವಾಗ ತಾವು ಪ್ರತಿ ಹಂತವನ್ನು ದಾಟಬಲ್ಲೆವೆಂಬ ಸ್ಪರ್ಧಾ ಭಾವನೆ ಉಂಟಾಗುತ್ತದೆ. ಅದರ ಆಗುಹೋಗುಗಳನ್ನು ತಿಳಿಯದೇ ಅದೇ ಆಟದಲ್ಲಿ ಮಗ್ನರಾಗಿ, ಕೊನೆಯ ಹಂತದಲ್ಲಿ ಆಟವು ಒಡ್ಡುವ ಷರತ್ತುಗಳಿಗೆ ಮಾರು ಹೋಗಿ ತಮ್ಮ ಜೀವವನ್ನೇ ಕಳೆದುಕೊಳ್ಳುತ್ತಾರೆ. ಗೇಮಿಂಗ್ ಡಿಸಾರ್ಡರ್ ಎನ್ನುವುದು ಹರೆಯದವರನ್ನು ಒಂದು ವಿಧದ ವ್ಯಸನಿಗಳನ್ನಾಗಿ ಮಾಡಿ ಅದರಿಂದ ಹಲವಾರು ದುಷ್ಪರಿಣಾಮಗಳಾಗಬಹುದು. ಅದೇ ರೀತಿ ವೀಡಿಯೋ ಗೇಮ್ಸ್‌ಗಳು ಹರೆಯದವರ ಮನಸ್ಸಿನ ಮೇಲೆ ಋಣಾತ್ಮಕ ಪರಿಣಾಮ ಬೀರುತ್ತವೆ.



ಹರೆಯದವರು ಏಕೆ ಗೇಮಿಂಗ್ ಡಿಸಾರ್ಡರ್ ವ್ಯಸನಕ್ಕೊಳಗಾಗುವಲ್ಲಿ ಹರೆಯದ ಮೆದುಳಿನ ಪಾತ್ರ ಮುಖ್ಯವಾದದ್ದು. ಆಟಗಳಲ್ಲಿ ಎದುರಿಸಬೇಕಾದ ಸವಾಲುಗಳಲ್ಲಿ ಯಶಸ್ವಿಯಾದಾಗ ಅದಕ್ಕೆ ಪ್ರತಿಫಲವಾಗಿ ಸಂತೋಷ ನೀಡುವ ಕೇಂದ್ರಗಳು ಸೂಕ್ಷ್ಮವಾದ ಹರೆಯದ ಮಿದುಳಿನ ನರಕೋಶಗಳಲ್ಲಿರುತ್ತವೆ. ಒಂದು ಸವಾಲಿನಲ್ಲಿ ಗೆದ್ದರೆ, ಆ ಕೂಡಲೇ ಡೋಪಮೀನ್ ಎಂಬ ನರವಾಹಕವು ಹೆಚ್ಚು ಸ್ರವಿಕೆಯಾಗುತ್ತದೆ. ಡೋಪಮೀನ್ ನರವಾಹಕವು ಮನಸ್ಸನ್ನು ಪುಳಕಿತಗೊಳಿಸಿ ಮುಂದಿನ ಹಂತದ ಸವಾಲನ್ನು ಎದುರಿಸಲು ಅಣಿಯಾಗುವ ಭಾವನೆಯನ್ನುಂಟು ಮಾಡುತ್ತದೆ. ಸೋತಾಗ, ಸೋತ ಸವಾಲನ್ನು ಪುನಃ ಎದುರಿಸಿ ಗೆಲ್ಲಲು ಹರೆಯದ ಮನಸ್ಸು ಇಚ್ಛಿಸುತ್ತದೆ. ಛಲ ಬಿಡದ ತ್ರಿಕ್ರಮನಂತೆ ಸೋಲು ಗೆಲುವುಗಳ ಸುಳಿಯಲ್ಲಿ ಸಿಕ್ಕು ಹರೆಯದ ಮನಸ್ಸಿನಲ್ಲಿ ಏನು ಮಾಡಬೇಕೆಂಬ ಗೊಂದಲವುಂಟಾಗುತ್ತದೆ. ಇದರೊಂದಿಗೆ ಜಾಲತಾಣಗಳಲ್ಲಿ ಕಾಣುವ ಸ್ನೇಹಿತರು, ಅವರು ಹುರಿದುಂಬಿಸುವ ವಿಧಗಳು ವಾಸ್ತವ ಎಂದು ಭಾವಿಸಿ ಪುನಃ ಆಡಲು ಮನಸ್ಸು ಹಾತೊರೆಯುತ್ತದೆ. ಇದರಿಂದ ಹರೆಯದ ಮನಸ್ಸಿಗೆ ಹೆಚ್ಚು ಗೊಂದಲ ಉಂಟಾಗಿ ಒತ್ತಡ ಹೆಚ್ಚಾಗುತ್ತದೆ. ಒಂದು ಹಂತದಲ್ಲಿ ಯಶಸ್ಸು ಸಾಧಿಸಲಾಗದೇ ಮನಸ್ಸು ಖಿನ್ನತೆಗೆ ಜಾರುತ್ತದೆ.

ಆನ್‌ಲೈನ್ ಆಟಗಳಂತೆ ಬೇರೆ ಬೇರೆ ಆಟಗಳಲ್ಲಿ, ಯಾಕೆ ವ್ಯಸನಗಳು ಅಂಟಿಕೊಳ್ಳುವುದಿಲ್ಲ ಎಂಬುದು ಓದುಗರ ಪ್ರಶ್ನೆ. ಆನ್‌ಲೈನ್ ಆಟಗಳನ್ನು ವಿಶಿಷ್ಠ ರೀತಿಯಲ್ಲಿ ವಿನ್ಯಾಸಗೊಳಿಸಿರುತ್ತಾರೆ. ಆಟದ ಸವಾಲುಗಳ ಹಂತಗಳನ್ನು ಯಶಸ್ವಿಯಾಗಿ ಪೂರೈಸಿದಾಗ, ಹೆಚ್ಚು ಹೆಚ್ಚು ಡೋಪಮೀನ್ ನರವಾಹಕವು ಸ್ರವಿಸಿ, ಅದರಿಂದ ಸಂತೋಷ ಹೆಚ್ಚಾಗಿ ಮುಂದಿನ ಹಂತವನ್ನು ಸಾಧಿಸಲು ಮನಸ್ಸು ಕಾತುರಪಡುತ್ತದೆ. ಇದೇ ಒಂದು ಗೀಳಾಗಿ ಪರಿಣಮಿಸಿ, ಹರೆಯದ ಮನಸ್ಸು ವ್ಯಸನಕ್ಕೆ ಬಲಿಯಾಗುತ್ತದೆ. ಈ ವಿಧದಲ್ಲಿ ಹರೆಯದವರು ಒಂದು ಸುಳಿಯಲ್ಲಿ ಸಿಕ್ಕು ಹೊರಬರಲು ಅಸಹಾಯಕರಾಗುತ್ತಾರೆ. ಇಮೋಜೀ ಮೂಲಕ ಹೊಗಳುವ ಸಂದೇಶ ಕಳಿಸುತ್ತಾರೆ. ಆಟದಲ್ಲಿ ಒಂದು ಹಂತದಲ್ಲಿ ಸೋತರೆ, ಇಲ್ಲಿ ಇನ್ನೂ ಮುಂದುವರೆಸು ಎಂಬ ಸಲಹೆಗಳು ಸಂದೇಶಗಳು ವೀಕ್ಷಕರಿಂದ ಬರುತ್ತವೆ. ಇದನ್ನು ನೋಡಿದ ಹರೆಯದ ಮನಸ್ಸಿಗೆ ಏನಾದರಾಗಲೀ ತಾನು ಗೆಲ್ಲಲೇಬೇಕೆಂಬ ಹಟ ಪ್ರಾರಂಭವಾಗಿ ಅಂತಿಮ ಹಂತ ತಲುಪಲು ತೀರ್ಮಾನಿಸುತ್ತದೆ. ಇದು ಒಂದು ವಿಧದಲ್ಲಿ ವಿಷವರ್ತುಲವಾಗಿ ಪರಿಣಮಿಸುತ್ತದೆ. ಇದರಿಂದ ಹರೆಯದವರ ಮನೋಸ್ಥಿತಿಯು ನಕಾರಾತ್ಮಕ ಭಾವನೆಗಳಿಗೆ ತುತ್ತಾಗಿ ಅದು ಆತ್ಮಹತ್ಯೆಯಲ್ಲಿ ಕೊನೆಗೊಳ್ಳಬಹುದು.

ಅತಿಯಾಗಿ ಆನ್‌ಲೈನ್ ಆಟ ಆಡುವುದರಿಂದ ಹರೆಯದವರಲ್ಲಿ ಹಲವಾರು ನಡವಳಿಕಾ ಸಮಸ್ಯೆಗಳು ಪ್ರಾರಂಭವಾಗುತ್ತವೆ. ಕಲಿಕೆಯಲ್ಲಿ ಹಿಂದುಳಿಯುತ್ತಾರೆ. ಆಟದಲ್ಲಿ ತಲ್ಲೀನರಾಗಿ ರಾತ್ರಿಯಲ್ಲಿ ನಿದ್ದೆಗೆಟ್ಟಾಗ ನಿದ್ರೆಯಲ್ಲಿ ವ್ಯತ್ಯಾಸವಾಗುತ್ತದೆ. ಕೆಲವರು ಹಗಲೆಲ್ಲಾ ಮಲಗಿ ರಾತ್ರಿ ಒಂಟಿಯಾಗಿ ಆಡಲು ಬಯಸುತ್ತಾರೆ. ಓದುವುದರಲ್ಲಿ ಏಕಾಗ್ರತೆಯ ಕೊರತೆ, ಪಠ್ಯೇತರ ಚಟುವಟಿಕೆಗಳಲ್ಲಿ ನಿರಾಸಕ್ತಿ ಉಂಟಾಗುತ್ತದೆ. ಕುಟುಂಬದ ಸದಸ್ಯರೊಂದಿಗೆ ಬೆರೆಯುವುದಿಲ್ಲ. ರೂಮಿಗೇ ಸೀಮಿತವಾಗಿ ಒಂಟಿತನ ಉಂಟಾಗುತ್ತದೆ. ಸಾಮಾಜಿಕ ಮತ್ತು ಪಠ್ಯೇತರ ಚಟುವಟಿಕೆಗಳಿಂದ ದೂರವಾಗುತ್ತಾರೆ. ಗೆಳೆಯರೊಂದಿಗೆ ಬೆರೆಯಲು ಇಚ್ಛಿಸುವುದಿಲ್ಲ. ಹೇಗೆ ಆಡಬೇಕು, ಹೇಗೆ ಮುಂದಿನ ಹಂತಕ್ಕೆ ತಲುಪಬೇಕು ಎಂಬ ಗುಂಗಿನಲ್ಲೇ ಯಾವಾಗಲೂ ಮನಸ್ಸು ಮುಳುಗಿರುತ್ತದೆ. ಓದಿನ ಕಡೆ ಗಮನವಿಲ್ಲದೇ ಪರೀಕ್ಷೆಗಳಲ್ಲಿ ಫೇಲಾಗಿ ಖಿನ್ನತೆಗೀಡಾಗುತ್ತಾರೆ. ಇದರಿಂದ ಪಾಪಪ್ರಜ್ಞೆ ಉಂಟಾಗಿ ಮದ್ಯ, ಮಾದಕ ವಸ್ತುಗಳ ವ್ಯಸನಕ್ಕೆ ತುತ್ತಾಗಬಹುದು. ತಾವು ಕಲಿಕೆಯಲ್ಲಿ ಹಿಂದುಳಿದು ಮುಂದೆ ಸಾಧನೆ ಮಾಡಲಾಗುವುದಿಲ್ಲ ಎಂದು ಅನಿಸಿದರೂ ಆಟ ಆಡುವುದನ್ನು ಬಿಡಲು ಇಷ್ಟವಾಗದೆ ಖಿನ್ನತೆಗೊಳಗಾಗುತ್ತಾರೆ.

ಆನ್‌ಲೈನ್ ಗೇಮಿಂಗ್ ವ್ಯಸನವನ್ನು ತಡೆಯುವುದು ಬಹು ಮುಖ್ಯ. ಇದಕ್ಕೆ ಅವಶ್ಯವಿರುವುದು ಪೋಷಕ ಮಕ್ಕಳ ಆತ್ಮೀಯ ಸಂಬಂಧ ಮತ್ತು ಮುಕ್ತ ಸಂವಾದ. ಸ್ಮಾರ್ಟ್‌ಫೋನ್‌ಗಳನ್ನು ಕೊಡಿಸುವಾಗ ವೀಡಿಯೋ ಗೇಮ್‌ಗಳು ಮತ್ತು ಇತರೇ ದೃಶ್ಯಗಳನ್ನು ನೋಡುವುದು, ಅವುಗಳಲ್ಲಿ ಭಾಗವಹಿಸುವುದು ಎಷ್ಟು ಹಾನಿಕರ ಎಂಬುದನ್ನು ಸಮಾಧಾನ ಚಿತ್ತದಿಂದ ಮಕ್ಕಳಿಗೆ ತಿಳಿಸಬೇಕು. ಅವುಗಳನ್ನು ನೋಡಲೇಬಾರದು ಎಂದು ಬುದ್ಧಿವಾದ ಹೇಳಿದರೆ ಹರೆಯದ ಮನಸ್ಸಿಗೆ ಇನ್ನಷ್ಟು ಕುತೂಹಲ ಹೆಚ್ಚಿ ಅವುಗಳ ವ್ಯಸನಕ್ಕೆ ಈಡಾಗಬಹುದು. ಅದಕ್ಕಿಂತ ಅವುಗಳನ್ನು ನೋಡಲು, ನಾವೇ ಮಿತಿ ಹಾಕಿಕೊಳ್ಳಬೇಕು. "ಸ್ಕ್ರೀನ್ ಟೈಂ"ಗೆ ಮಿತಿಹಾಕಿಕೊಂಡು ಅದಕ್ಕಿಂತ ಹೆಚ್ಚಿನ ಸಮಯ ಕಳೆದರೆ, ಶಿಕ್ಷಣದ ಮತ್ತು ಸಾಮಾಜಿಕ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳನ್ನು ನಿಧಾನವಾಗಿ ಉದಾಹರಣೆಗಳೊಂದಿಗೆ ವಿವರಿಸಬೇಕು.

ಮಕ್ಕಳು ಮತ್ತು ಹರೆಯದವರಿಗೆ ಮನರಂಜನೆಗೋಸ್ಕರ ಸ್ನೇಹಿತರೊಂದಿಗೆ ಬೆರೆಯಲು, ಹವ್ಯಾಸಗಳನ್ನು ರೂಢಿಸಿಕೊಳ್ಳಲು ಪ್ರೋತ್ಸಾಹಿಸಬೇಕು. ಬಾಲ್ಯದಿಂದಲೇ ಜೀವನ ಕೌಶಲಗಳನ್ನು ಕಲಿಸಿ, ಹರೆಯಕ್ಕೆ ಬಂದಾಗ ಅವುಗಳು ಹೇಗೆ ಹರೆಯದ ಸವಾಲುಗಳನ್ನೆದುರಿಸಲು, ಒತ್ತಡಗಳನ್ನು ಪರಿಹರಿಸಿಕೊಳ್ಳಲು ಸಹಾಯಕ ಎಂಬುದನ್ನು ಪ್ರೀತಿ ಮತ್ತು ಆತ್ಮೀಯತೆಯಿಂದ ಹಂಚಿಕೊಳ್ಳಬೇಕು. ಹರೆಯದವರಿಗೆ ದಿನವಿಡೀ ಓದು, ಟೆಸ್ಟು, ಪರೀಕ್ಷೆ ಪಾಠ ಹೀಗೆ ಹಲವಾರು ಒತ್ತಡಗಳು ಮನಸ್ಸನ್ನು ಸುಳಿಯಲ್ಲಿ ಸಿಕ್ಕಿಸುತ್ತವೆ. ಹರೆಯದ ಮನಸ್ಸು ತನ್ನನ್ನು ಬೇರೆಯವರೊಂದಿಗೆ ಹೋಲಿಸಿಕೊಂಡು ತಾನು ಇನ್ನೂ ಹೆಚ್ಚಿಗೆ ಸಾಧಿಸಬೇಕು, ಇಲ್ಲದಿದ್ದಲ್ಲಿ ಅದು ತನಗೆ ಅವಮಾನ ಎಂದು ಭಾವಿಸುವುದು ಸಹಜ. ಇತರರೊಂದಿಗೆ ಹೋಲಿಕೆ ಒಳ್ಳೆಯದೇ ಆದರೆ ಹೋಲಿಕೆ ಎಂಬುದು ಸಕಾರಾತ್ಮಕವಾಗಿರಬೇಕು.

ತನಗಿಂತ ತನ್ನ ಸ್ನೇಹಿತರಿಗೆ ಪರೀಕ್ಷೆಯಲ್ಲಿ ಹೆಚ್ಚು ಅಂಕ ಬಂದಾಗ, ಅವನು ಬುದ್ಧಿವಂತ, ತಾನು ದಡ್ಡ ಎಂದು ಭಾವಿಸುವುದಕ್ಕಿಂತ ಗೆಳೆಯನು ಹೇಗೆ ಪ್ರಯತ್ನಿಸಿದನು, ತಾನೂ ಹಾಗೆ ಪ್ರಯತ್ನಿಸಿದರೆ ಅಷ್ಟೇ ಸಾಧನೆ ಮಾಡಬಹುದು ಎಂಬ ಆತ್ಮವಿಶ್ವಾಸ ತಳೆಯಬೇಕು. ತನ್ನ ಸಾಮರ್ಥ್ಯದ ಕುರಿತು ಯೋಚಿಸಿ ತನಗೆ ಇಷ್ಟು ಸಾಧ್ಯ, ಅದಕ್ಕಿಂತ ಹೆಚ್ಚು ಪ್ರಯತ್ನಿಸುತ್ತೇನೆ. ಅದೂ ಸಾಧ್ಯವಾಗದಿದ್ದಾಗ, ಬೇರೆ ದಾರಿಯನ್ನು ಕಂಡುಕೊಂಡು ಅದರಲ್ಲಿ ಸಾಧನೆ ಮಾಡುತ್ತೇನೆ ಎಂಬ ನಿರ್ಧಾರಕ್ಕೆ ಬಂದು, ಈ ಆನ್‌ಲೈನ್ ಗೇಮ್ ಎಂದೂ ಆಡುವುದಿಲ್ಲ ಎಂಬ ನಿರ್ಧಾರಕ್ಕೆ ಬರಬೇಕು.

ಬೌದ್ಧಿಕ ಮಟ್ಟ ಅಂಕಗಳಿಂದಷ್ಟೇ ಅಳೆಯಬಹುದೇ?

▸ ಪ್ರಸಾದ್ ಕುಮಾರ್

ಮಕ್ಕಳಿಗೆ ಏನು ಶಿಕ್ಷಣ ಕೊಡಬೇಕೆಂಬುದು ಈಗ ಬದಿಗೆ ಸರಿದು, ಮಕ್ಕಳಿಂದ ಹೇಗೆ ಅಂಕಗಳನ್ನು ಪಡೆಯುವುದು ಎಂಬುದೇ ಸದ್ಯದ ಶಿಕ್ಷಣದ ಗುರಿಯಾಗಿದೆ!

ಸಾಮಾಜಿಕ ಮಾಧ್ಯಮದಲ್ಲಿ ಇತ್ತೀಚೆಗೆ ಕಂಡು ಬಂದ ಒಂದು ಹಾಸ್ಯಾಸ್ಪದ ಬರಹ ಹೀಗಿತ್ತು...

Nowadays children get 'marks' in Fahrenheit 96.7, 97, 98.50...

We used to get same in Celsius 36.5, 37.00, 40.5...

(ಇಂದು ವಿದ್ಯಾರ್ಥಿಗಳ ಅಂಕಗಳು 96.7, 97, 98.50 ಹೀಗೆ ಫ್ಯಾರನ್‌ಹೀಟ್ ಲೆಕ್ಕದಲ್ಲಿದ್ದರೆ ಅಂದು ನಾವು ಪಡೆಯುತ್ತಿದ್ದದು ಮಾತ್ರ ಸೆಲ್ಸಿಯಸ್ ಲೆಕ್ಕದಲ್ಲಿ 36.5, 37.00, 40.5)

ವಿಚಾರ ತಮಾಷೆಯದ್ದೇ ಇರಬಹುದು. ಆದರೆ ಒಪ್ಪುವಂತಹುದು ಎಂಬುದು ಮಾತ್ರ ಸತ್ಯವೇ. ಇತ್ತೀಚಿನ ದಿನಗಳಲ್ಲಿ ಹತ್ತನೇ ತರಗತಿಯ ವಿದ್ಯಾರ್ಥಿಗಳ ಮಾರ್ಕ್‌ಗಳನ್ನು ನೋಡಿದರೆ ಒಂದು ಕ್ಷಣ ಹುಬ್ಬೇರದೆ ಇರದು. ಯಾರಿಗೆ ನೋಡಿದರು ಶೇಕಡಾ 80- 90 ರ ಮೇಲೇನೆ. ಯಾವ ಶಾಲೆಯ ಮುಂದೆ ನೀವು ಅಡ್ಡಾಡಿದರು ಕನಿಷ್ಟ 20 ಮಕ್ಕಳ ಫೋಟೋ ಬ್ಯಾನರ್‌ನಲ್ಲಿ ರಾರಾಜಿಸುತ್ತಿರುತ್ತದೆ. ಒಂದು ತರಗತಿಯಲ್ಲಿ 40 ಮಕ್ಕಳಿದ್ದರೆ ಅದರಲ್ಲಿ ಕನಿಷ್ಟವೆಂದರೂ 25 ಮಕ್ಕಳು ಶೇಕಾಡ 85 ರ ಮೇಲೆ ಇರುತ್ತಾರೆ! ದಡ್ಡ ಶಿಖಾಮಣಿ ಎಂದೆನ್ನಿಸುವ ವಿದ್ಯಾರ್ಥಿ ಕೂಡ 60-70 ಗಡಿಯಲ್ಲಿ ಇರುವುದು ತೀರಾ ಸಾಮಾನ್ಯ! ಇನ್ನು ಫೇಲ್ ಆದವರು ಯಾರು ಎಂಬುದನ್ನು ಭೂತಗನ್ನಡಿ ಹಿಡಿದು ನೋಡಬೇಕಷ್ಟೇ!

ಯಾಕೆ ಇದು ಹೀಗೆ? ಹಾಗಾದರೆ ಇಂದಿನ ಎಲ್ಲಾ ವಿದ್ಯಾರ್ಥಿಗಳ ಐಕ್ಯೂ ಮಟ್ಟ ಉನ್ನತ ಮಟ್ಟದಲ್ಲಿಯೇ ಇದೆಯೇ? ಅಥವಾ ನಮ್ಮ ಕಾಲದಲ್ಲಿ ಯಾರು ಕೂಡ ಈ ಪಾಟಿ ಬುದ್ಧಿವಂತರಿರಲಿಲ್ಲವೇ? ಒಂದು 25-30 ವರ್ಷದ ಹಿಂದಿನ ಮಾರ್ಕ್ಸನ್ನು ತೆಗೆದು ನೋಡಿದರೆ ಖಂಡಿತವಾಗಿಯೂ ನಿಮಗೆ ಹೀಗೆಯೇ ಅನ್ನಿಸಬಹುದು. 'ಸೆಲ್ಸಿಯಸ್' ಲೆಕ್ಕದಲ್ಲಿ ಸಿಗುತ್ತಿದ್ದ ಆವಾಗಿನ ಮಾರ್ಕ್‌ಗಳೇ ದೊಡ್ಡ ಸಾಧನೆ ಎಂಬಂತಿತ್ತು. ಆವಾಗೆಲ್ಲಾ ಶೇಕಡಾ 80% ಆಸುಪಾಸು ಸುಳಿಯುವುದೇ ಒಂದು ಸೋಜಿಗ. ಪ್ರಥಮ ದರ್ಜೆಯಲ್ಲಿ ಪಾಸ್ ಆಗುವುದೆಂದರೆ ಅದೇ ಒಂದು ದೊಡ್ಡ ಸಾಧನೆ. ಊರಿಗೆ ಊರೇ ಸಂಭ್ರಮ ಪಡುವ ವಿಚಾರವದು. ಅಷ್ಟೇ ಏಕೆ ಬರೇ ಪಾಸ್ ಆದರೆ ಸಾಕು ಚಾಕಲೇಟ್ ಹಂಚುತ್ತಿದ್ದ ಕಾಲವದು! ಫಸ್ಟ್ ಕ್ಲಾಸ್ ಇದ್ದರೆ ಸಾಕು ಕಾಲೇಜುಗಳು ಕರೆದು ಸೀಟು ಕೊಡುತ್ತಿತ್ತು ಎಂಬುದು ಬೇರೆ ಮಾತು!



ಆದರೆ ಇಂದು ಪಾಸ್ ಬಿಡಿ 80 ರ ಮೇಲೆ ಬಂದರೂ ಅದು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಹ ಪರಿಸ್ಥಿತಿ! ಬರೆ ಅಂಕಗಳ ಮೇಲೆ ಕಣ್ಣಿಟ್ಟಿರುವ ಇಂದಿನ ಕಾಲದಲ್ಲಿ 95% ದಾಟಿದ ವಿದ್ಯಾರ್ಥಿಗೂ ಇದು ಸಾಕು ಎಂಬ ಸಂತೃಪ್ತಿಯಿಲ್ಲ. ಬದಲಾಗಿ ಮರು ಮೌಲ್ಯಮಾಪನಕ್ಕೆ ಹಾಕಿ ಮತ್ತೆರಡು ಮಾರ್ಕ್ ಪಡೆಯುವ ಆಸೆ. 90, 95, 100 ಕ್ಕೆ 100 ಇವೆಲ್ಲಾ ಇಂದು ಸರ್ವೇ ಸಾಮಾನ್ಯವೆಂಬಂತಾಗಿದೆ.

ಹಾಗೆಂದು ಇಂದಿನ ವಿದ್ಯಾರ್ಥಿಗಳು ಸೂಪರ್ ಪವರ್ ಇರುವವರೇನೂ ಅಲ್ಲ. ನೀಟಾಗಿ ಒಂದು ಅರ್ಜಿ ಬರೆಯಲು, ಬ್ಯಾಂಕ್‌ಗಳಲ್ಲಿರುವ ಕ್ಯಾಷ್ ವೋಚರನ್ನು ನೀಟಾಗಿ ತುಂಬಲು ಕೆಲವು ವಿದ್ಯಾರ್ಥಿಗಳು ಕಷ್ಟ ಪಡುತ್ತಾರೆ. ಪಡೆಯುತ್ತಿರುವ ಮಾರ್ಕ್‌ಗೂ, ಪಡೆದ ಶಿಕ್ಷಣಕ್ಕೂ ಇಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ತಪ್ಪು ಯಾರದ್ದು ಎಂಬುದೇ ಇಲ್ಲಿ ಪ್ರಶ್ನೆ. ನಿಜವಾಗಿಯೂ ಇಲ್ಲಿ ವಿದ್ಯಾರ್ಥಿಗಳನ್ನು ದೂಷಿಸುವುದು ತರವಲ್ಲ.

ಮಾರ್ಕ್ ನೋಡಿ ಇಂದಿನ ಮಕ್ಕಳ ಬುದ್ಧಿವಂತಿಕೆಯನ್ನು ಅಳೆಯುವಂತೆ ಮಾಡಿರುವುದೇ ನಮ್ಮ ಇಂದಿನ ಶಿಕ್ಷಣ ವ್ಯವಸ್ಥೆ! ಚೆನ್ನಾಗಿ ಓದಿಸಿ, ಉತ್ತೀರ್ಣ-ಅನುತ್ತೀರ್ಣ ಎಂಬ ಜರಡಿ ಹಿಡಿಯುತ್ತಾ ವಿದ್ಯಾರ್ಥಿಗಳನ್ನು ಮುಂದೆ ಸಾಗಿಸುವುದನ್ನು ಬಿಟ್ಟು ಅದ್ಯಾವ ರೀತಿಯಲ್ಲಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿದರೆ ವಿದ್ಯಾರ್ಥಿಗಳು ನೂರಕ್ಕೆ ನೂರ ಅಂಕ ಪಡೆಯಬಹುದು ಎಂಬುದರತ್ತ ನಮ್ಮ ಶಿಕ್ಷಣ ಕ್ರಮವನ್ನು, ಪರೀಕ್ಷೆಯನ್ನು, ಮೌಲ್ಯಮಾಪನವನ್ನು ನವೀಕರಿಸಿದ್ದರ ಪರಿಣಾಮವಿದು! ದುರದೃಷ್ಟಾವಶಾತ್ ನಮ್ಮ ಶಿಕ್ಷಣ ಇಲಾಖೆಗೂ ಬೇಕಿರುವುದು ನಂಬರ್ ಗೇಮ್. ಎಲ್ಲರನ್ನೂ ಪಾಸ್ ಮಾಡಿಸಿ ನೂರಕ್ಕೆ ನೂರನ್ನು ಪಡೆದು ಶಹಬಾಷ್‌ಗಿರಿ ಪಡೆಯಬೇಕೆಂಬ ತರಾತುರಿ. ಅದಕ್ಕಾಗಿಯೇ ಶಿಕ್ಷಣ ಇಲಾಖೆ ಪ್ರತಿ ಜಿಲ್ಲೆಗಳಿಗೆ, ಅಲ್ಲಿಂದ ಶಾಲೆಗೆ ಒತ್ತಡವನ್ನು ರವಾನಿಸುತ್ತಿದೆ. ನಾಪಾಸ್ ಸಂಖ್ಯೆ ಎಲ್ಲಿ ಜಾಸ್ತಿಯಾಗಿ ಶಾಲೆ ರದ್ದಾಗುವುದೋ ಎಂಬ ಭೀತಿ ಸರಕಾರಿ ಶಿಕ್ಷಕರದ್ದಾದರೆ, ಎಲ್ಲಿ ಅಡ್ಮಿಷನ್ ಕೊರತೆಯಾಗುತ್ತದೋ ಎಂಬ ಭೀತಿ ಖಾಸಾಗಿ ಶಾಲೆಗಳದ್ದು! ಇವೆಲ್ಲದರ ಒಟ್ಟು ಪರಿಣಾಮ ಶಿಕ್ಷಣ ಶೈಲಿಯನ್ನೇ ಬುಡಮೇಲುಗೊಳಿಸಿಕೊಂಡು ಅಂಕಗಳ ಮೇಲೆ ಅಂಕಗಳ ಏರಿಕೆಗಷ್ಟೇ ಗಮನ ಹರಿಸುವಂತಾಗಿದೆ ಶಾಲೆಗಳು! ಮಕ್ಕಳಿಗೆ ಏನು ಶಿಕ್ಷಣ ಕೊಡಬೇಕೆಂಬುದು ಬದಿಗೆ ಸರಿದು, ಮಕ್ಕಳಿಂದ ಹೇಗೆ ಅಂಕಗಳನ್ನು ಪಡೆಯುವುದು ಎಂಬುದೇ ಸದ್ಯದ ಶಿಕ್ಷಣದ ಗುರಿಯಾಗಿದೆ!

ಇರುವ ಸಿಲೆಬಸ್‌ನ್ನು ಚೆನ್ನಾಗಿ ಓದಿಕೊಂಡು ಕೇಳುವ ಪ್ರಶ್ನೆಗಳಿಗೆ ಉತ್ತರವನ್ನು ತಮ್ಮದೇ ವಿಶ್ಲೇಷಣೆಯ ಮೂಲಕ ಬರೆಯುವ ಕಾಲ ಅಂದಿನದ್ದಾದರೆ, ಮುಖ್ಯ ಪರೀಕ್ಷೆಯಲ್ಲಿ ಯಾವೆಲ್ಲಾ ಪಾಠದಿಂದ ಅದ್ಯಾವ ರೀತಿಯ ಪ್ರಶ್ನೆಗಳನ್ನು ಕೇಳಲಾಗುವುದು ಎಂಬುನ್ನು ಮೊದಲೇ ಹೇಳುವ ಬ್ಲೂಪ್ರಿಂಟನ್ನು ವಿದ್ಯಾರ್ಥಿಗಳಿಗೆ ನೀಡುತ್ತಾ ಅಂಕಗಳ ಬೆನ್ನು ಬೀಳುವಂತೆ ಮಾಡುವ ಕಾಲ ಇಂದಿನದ್ದು.

ಮುಖ್ಯ ಪರೀಕ್ಷೆಗೆ 3-4 ತಿಂಗಳು ಇರುವಾಗಲೇ (ಸಿಲೆಬಸ್ ಮುಗಿದರೂ ಮುಗಿಯದಿದ್ದರೂ) ಪಾಠವನ್ನು ನಿಲ್ಲಿಸಿ ಬಂದಿರುವ ಬ್ಲೂಪ್ರಿಂಟ್‌ನ್ನು ಹಿಡಿದುಕೊಂಡು ಮುಖ್ಯ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಅಣಿಯಾಗಿಸುವುದು ಇಂದಿನ ಶಿಕ್ಷಣ ವ್ಯವಸ್ಥೆಯ ಒಂದು ಸೊಗಡು! ಇನ್ನು ಮುಖ್ಯ ಪರೀಕ್ಷೆ ಬರುವ ಮೊದಲೇ ಒಂಡೆರಡು ರಿಹರ್ಸಲ್‌ಗಳನ್ನು (ಪೂರ್ವ ಸಿದ್ಧತಾ ಪರೀಕ್ಷೆಗಳನ್ನು) ಕೂಡ ಮಾಡಿಕೊಂಡು ವಿದ್ಯಾರ್ಥಿಯನ್ನು ಮಾರ್ಕ್ ಬೇಟೆಗೆ ಅಣಿಗೊಳಿಸಲಾಗುವುದು. ಇನ್ನು ಪ್ರಶ್ನೆಗೆ ಉತ್ತರವೂ ಅಷ್ಟೇ. ಎಲ್ಲವೂ ರೆಡಿಮೇಡ್ ಇದ್ದ ಹಾಗೆ. ವಿಶ್ಲೇಷಣಾತ್ಮಕ, ಸ್ವ ಚಿಂತನೆಯ ಉತ್ತರಗಳಿಗೆ ಆಸ್ಪದ ಕಡಿಮೆ ಅಥವಾ ಇಲ್ಲವೇ ಇಲ್ಲ. ನಾಲ್ಕು ಸಾಲುಗಳ ಉತ್ತರದಲ್ಲಿ ಒಂದು ಸಾಲು ಸರಿಯಾಗಿದ್ದರೂ ಒಂದಷ್ಟು ಮಾರ್ಕ್ ಕೊಡುವ ವ್ಯವಸ್ಥೆ. ಅದನ್ನೇ ಗುರರಾಜ್ ಕರ್ಜಗಿ ಅವರು ಸೊಗಸಾಗಿ ಹೇಳಿದ್ದು. "ಎಲ್ಲಾದರೂ ದನಕ್ಕೆ ಎಷ್ಟು ಕಾಲು ಎಂದು ನಾಲ್ಕು ಅಂಕದ ಪ್ರಶ್ನೆಯೇನಾದರು ಇದ್ದರೆ ಅದಕ್ಕೆ ಮೂರು ಕಾಲು ಎಂದು ಉತ್ತರ ಬರೆದವನಿಗೂ ಝೀರೋ ಕೊಡುವ ಹಾಗಿಲ್ಲ. ಬದಲಾಗಿ 3 ಮಾರ್ಕ್ ಕೊಡಲಾಗುವುದು. ಯಾಕೆಂದರೆ ಕಾಲಿಗೊಂದು ಮಾರ್ಕ್ ಎಂಬ ಲೆಕ್ಕಾಚಾರದ ಮೌಲ್ಯಮಾಪನ ಇವತ್ತಿನದ್ದು..."

ಅಂಕಗಳ ಪಾಡು ಇದೇ ತರ ಮುನ್ನುಗ್ಗುತ್ತಾ ಹೋದರೆ ಪಡೆಯುವ ಶಿಕ್ಷಣಕ್ಕೆ ಬೆಲೆ ಉಳಿದೀತೆ? ಅಂಕ ಗಳಿಕೆಯೇ ಶಿಕ್ಷಣದ ಉದ್ದೇಶವೇ? ಸ್ವಸ್ಥ ಸಮಾಜಕ್ಕೆ ಶಿಕ್ಷಣದ ಬುನಾದಿ ನೆಟ್ಟಗಿರಬೇಕು. ಅದುವೇ ಅಡ್ಡ ಬಿದ್ದರೆ ಗತಿ ಏನು? ಸದ್ಯದ ಸಮಾಜದಲ್ಲಿ ನೈತಿಕತೆಯ ಅಧಃಪತನವಾಗಿರುವುದು ಇದೇ ಕಾರಣಕ್ಕೆ.

ಮಕ್ಕಳು ಓದಬೇಕು, ಉತ್ತಮ ಪ್ರಜೆಯಾಗಬೇಕು ಎಂಬ ಒಂದು ಕಾಲದಲ್ಲಿದ್ದ ಬಯಕೆ ಇಂದು ಇಲ್ಲ ಎಂಬುದೇ ದುರಂತ. ಇಂದಿನ ಪೋಷಕರು ಬಯಸುವುದು ಮಕ್ಕಳು ಓದಬೇಕು, ಓದಿ ಪ್ರತಿಷ್ಠಿತ ಕಂಪೆನಿಯಲ್ಲಿ 6 ಅಂಕೆಯ ಸಂಬಳ ಪಡೆಯುವಂತಾಗಬೇಕು ಎಂಬುದಷ್ಟೇ. ಅದಕ್ಕಾಗಿಯೇ ಕೂಸು ಹುಟ್ಟುವ ಮೊದಲೇ ಶಾಲೆಯ ಬಗ್ಗೆ ಯೋಚಿಸಲಾಗುತ್ತದೆ! ಯಾರು ಎಲ್ಲಿ ಏನು ಕಲಿಯುತ್ತಿದ್ದಾರೆ ಎಂಬುದೆಲ್ಲಾ ಗೌಣವಾಗಿ ಎಲ್ಲಿ ಕಲಿತರೆ ನೂರಕ್ಕೆ ನೂರು ಅಂಕಗಳು ಬರುತ್ತವೆ ಎಂಬುದಷ್ಟೇ ಲೆಕ್ಕಾಚಾರವಾಗಿ ಉಳಿದಿವೆ. ಓದಿದ ಮೇಲೆ ಡಾಕ್ಟರೋ, ಇಂಜಿನಿಯರೋ ಆಗುವ ಎರಡೇ ಬಯಕೆ ಇಂದಿನ ಬಹುತೇಕ ವಿದ್ಯಾರ್ಥಿಗಳದ್ದು (ಪೋಷಕರದ್ದು ಕೂಡ).

ಉತ್ತಮ ಅಂಕ ಅಥವಾ 85-90% ಗೂ ಅಧಿಕ ಅಂಕ ಪಡೆದ ಯಾವುದೇ ವಿದ್ಯಾರ್ಥಿಯನ್ನು ನೀವು ತಡೆದು ಕೇಳಿ ಮುಂದೆ ಏನಾಗಬೇಕೆಂದಿರುವೆ ಎಂದು. ಇಂಜಿನಿಯರ್, ವೈದ್ಯಕೀಯ ಇಲ್ಲವೇ ತಪ್ಪಿದರೆ ಒಂದಷ್ಟು ವಿದ್ಯಾರ್ಥಿಗಳು ಸಿಎ ಎನ್ನುವುದನ್ನು ಬಿಟ್ಟರೆ ಬೇರೆ ಇನ್ನಾವುದೇ ಉತ್ತರಗಳು ಸಿಗುವುದಿಲ್ಲ. ಯಾಕೆಂದರೆ ಕೈ ತುಂಬಾ ದುಡ್ಡುಗಳಿಸಬಹುದಾದ ಆಯ್ಕೆಗಳಿವು! ನೈತಿಕತೆಯನ್ನು ಬೋಧಿಸಿ ಉತ್ತಮ ಸಮಾಜ ನಿರ್ಮಾಣಗೈಯುವ ಶಿಕ್ಷಕ ವೃತ್ತಿಯನ್ನಾಗಲೀ, ನ್ಯಾಯವನ್ನು ಎತ್ತಿ ಹಿಡಿಯುವ ವಕೀಲಿವೃತ್ತಿ ಇಲ್ಲವೇ ನ್ಯಾಯಾಧೀಶನ ವೃತ್ತಿಯನ್ನಾಗಲಿ ಹೇಳುವ ಒಂದೇ ಒಂದು ವಿದ್ಯಾರ್ಥಿ ಸಿಗುವುದು ಇಂದು ಅಪರೂಪ! ಹಾಗಾದರೆ ಇಂದಿನ ಎಲ್ಲಾ ಉತ್ತಮ ಅತ್ಯುತ್ತಮ ವಿದ್ಯಾರ್ಥಿಗಳು ಡಾಕ್ಟರೋ, ಇಂಜಿನಿಯರೋ ಆಗುವುದಾದರೆ ಮುಂಬರುವ ದಿನಗಳಲ್ಲಿ ಸ್ವಸ್ಥ ಸಮಾಜವನ್ನು ಕಟ್ಟಬೇಕಾದ ಶ್ರೇಷ್ಠ ಶಿಕ್ಷಕ ವೃತ್ತಿಗೆ ಬರುವವರ್ಯಾರು!? ಬರೇ ಜಸ್ಟ್ ಪಾಸ್ ವಿದ್ಯಾರ್ಥಿಗಳೇ!? ಯೋಚಿಸಿದರೆ ಭಯವಾಗುತ್ತದೆ! ಬುದ್ಧಿವಂತ ವಿದ್ಯಾರ್ಥಿಗಳು ಶಿಕ್ಷಕ ವೃತ್ತಿಗೆ ಬಾರದೇ ಹೋದರೆ ಭವಿಷ್ಯದಲ್ಲಿ ಉತ್ತಮ ವೈದ್ಯ, ಉತ್ತಮ ಇಂಜಿನಿಯರ್, ಉತ್ತಮ ನ್ಯಾಯಾಧೀಶ ಎಂಬುದೆಲ್ಲಾ ಮರೀಚಿಕೆಯಾಗಬಹುದೇನೋ!

ಸರಕಾರ, ಶಿಕ್ಷಣ ಇಲಾಖೆಯಿಂದ ಹಿಡಿದು ಪ್ರತೀ ಶಿಕ್ಷಿತ ಪೋಷಕ ವರ್ಗವು ಯೋಚಿಸಬೇಕಾದ ವಿಷಯವಿದು ಅಲ್ಲವೇ?

ಕಿರುಸುದ್ದಿ

ಸಂಚರಿಸುತ್ತಿದ್ದ ಕಾರು ಬೆಂಕಿಗಾಹುತಿ: ಗರ್ಭಿಣಿ ಸಾವು

ಕಾಸರಗೋಡು: ಸಂಚರಿಸುತ್ತಿದ್ದ ಕಾರು ಬೆಂಕಿಗಾಹುತಿಯಾಗಿ ಗರ್ಭಿಣಿ ಮೃತಪಟ್ಟ ದಾರುಣ ಘಟನೆ ಕಲ್ಲಿಕೋಟೆ ಕಕ್ಕರಮುಕ್‌ನಲ್ಲಿ ನಡೆದಿದೆ. ಕಕ್ಕರಮುಕ್ ನಿವಾಸಿ ರಜಿಲ್ ಲಾಲು ಎಂಬವರ ಪತ್ನಿ ಸೋನಾ (27) ಮೃತಪಟ್ಟವರು. ಕಾರು ಚಲಾಯಿಸುತ್ತಿದ್ದ ರೆಜಿಲ್‌ಲಾಲ್ ಅವರನ್ನು ಗಂಭೀರ ಗಾಯಗಳೊಂದಿಗೆ ಕಲ್ಲಿಕೋಟೆ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದೆ. ಆರು ತಿಂಗಳ ಗರ್ಭಿಣಿ ಸೋನಾ ಅವರನ್ನು ಪೇರಾಂಬ್ರ ಆಸ್ಪತ್ರೆಗೆ ಕರೆದೊಯ್ದು ತಪಾಸಣೆಗೈದ ಬಳಿಕ ಮನೆಗೆ ಹಿಂತಿರುಗುತ್ತಿದ್ದ ವೇಳೆ ಕಾರು ಬೆಂಕಿಗಾಹುತಿಯಾಗಿದೆ. ಕಾರಿನ ಮುಂಭಾಗದಿಂದ ಬೆಂಕಿ ಹಾಗೂ ಹೊಗೆ ಕಂಡ ತಕ್ಷಣ ರೆಜಿಲ್ ಲಾಲ್ ಕಾರಿನಿಂದಿಳಿದಿದ್ದರು. ಈ ವೇಳೆ ಸೋನಾ ಕಾರಿನ ಹಿಂಬದಿ ಸೀಟಿನಲ್ಲಿ ಮಲಗಿದ್ದರೆನ್ನಲಾಗಿದೆ. ಕೂಡಲೇ ರೆಜಿಲ್ ಲಾಲ್ ಸೋನಾರನ್ನು ಹೊರಕ್ಕೆಳೆಸಲು ಪ್ರಯತ್ನಿಸಿದರೂ ಬಾಗಿಲು ತೆರೆಯಲು ಸಾಧ್ಯವಾಗಲಿಲ್ಲವೆನ್ನಲಾಗಿದೆ.

ಲಾರಿಗಳು ಡಿಕ್ಕಿಯಾಗಿ ಚಾಲಕ ಗಂಭೀರ

ಕಾಞಂಗಾಡು: ಪಿಲಾತ್ತರ ಪಯಂಗಾಡಿಯಲ್ಲಿ ಮೀನು ಸಾಗಾಟ ಲಾರಿ ಮತ್ತು ನ್ಯಾಶನಲ್ ಪರ್ಮಿಟ್ ಲಾರಿ ಡಿಕ್ಕಿಯಾಗಿ ಮೀನು ಸಾಗಾಟ ಲಾರಿ ಚಾಲಕ ಗಂಭೀರ ಗಾಯಗೊಂಡಿದ್ದಾರೆ. ಡಿಕ್ಕಿಯ ರಭಸಕ್ಕೆ ಲಾರಿಯೆಡೆಯಲ್ಲಿ ಸಿಲುಕಿದ ಮುಹಮ್ಮದ್ ಅಸ್ಟಾಕ್ ಅವರನ್ನು ಹೊರಕ್ಕೆ ತೆಗೆಯಲಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಪಯಂಗಾಡಿ ಭಾಗಕ್ಕೆ ಬರುತ್ತಿದ್ದ ಮೀನು ಸಾಗಾಟ ಲಾರಿ ಮತ್ತು ಪಿಲಾತ್ತರ ಭಾಗದಿಂದ ತೆರಳುತ್ತಿದ್ದ ನ್ಯಾಶನಲ್ ಲಾರಿ ಡಿಕ್ಕಿಯಾಗಿ ಅಪಘಾತ ಸಂಭವಿಸಿತು. ಮೀನು ಸಾಗಾಟ ಲಾರಿಯ ಕೇಬಿನ್‌ನಲ್ಲಿ ಸಿಲುಕಿಕೊಂಡಿದ್ದ ಹೊರ ತೆಗೆಯಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಬಳಿಕ ಕ್ಯಾಬಿನ್ ಮುರಿದು ಹೊರ ತೆಗೆಯಲಾಯಿತು.

ನೇಣು ಬಿಗಿದುಕೊಂಡು ಯುವಕ ಆತ್ಮಹತ್ಯೆ

ಮಡಿಕೇರಿ: ಮನೆಯಲ್ಲಿ ಯಾರೂ ಇಲ್ಲದಿದ್ದ ಸಂದರ್ಭ ಯುವಕನೊಬ್ಬ ಆತ್ಮಹತ್ಯೆ ಶರಣಾದ ಘಟನೆ ಸಿದ್ದಾಪುರ ಸಮೀಪದ ಕೂಡುಗದ್ದೆ ಗ್ರಾಮದಲ್ಲಿ ನಡೆದಿದೆ. ಕೂಡುಗದ್ದೆ ನಿವಾಸಿ ಮಧುಸೂಧನ್ ಎಂಬವರ ಪುತ್ರ ಅಭಿಜಿತ್ (21) ಆತ್ಮಹತ್ಯೆಗೆ ಶರಣಾದ ಯುವಕ. ಪ್ರಥಮ ವರ್ಷದ ಪದವಿ ವ್ಯಾಸಂಗ ಮಾಡುತ್ತಿದ್ದ ಅಭಿಜಿತ್ ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡು ಮೃತದೇಹವನ್ನು ಮುಂದಿನ ಕ್ರಮಕ್ಕಾಗಿ ವೀರಾಜಪೇಟೆ ಸರಕಾರಿ ಆಸ್ಪತ್ರೆಗೆ ರವಾನಿಸಿದ್ದಾರೆ.

ಬಾವಿಗೆ ಬಿದ್ದ ಕಾರ್ಮಿಕರ ರಕ್ಷಣೆ

ಬಂಟ್ವಾಳ: ತಾಲೂಕಿನ ಕುರಿಯಾಳ ಎಂಬಲ್ಲಿ ಬಾವಿ ಕೆಲಸ ಮಾಡುತ್ತಿದ್ದ ಇಬ್ಬರು ಕಾರ್ಮಿಕರನ್ನು ಭಾನುವಾರ ಸಂಜೆ ಅಗ್ನಿಶಾಮಕ ದಳ ಸಿಬ್ಬಂದಿ ರಕ್ಷಿಸಿರುವ ಘಟನೆ ನಡೆದಿದೆ. ಕಾರ್ಮಿಕರಾದ ಬರಿಮಾರು ನಿವಾಸಿಗಳಾದ ಪದ್ಮನಾಭ ಮತ್ತು ರಾಮ ಗಾಯಗೊಂಡವರಾಗಿದ್ದಾರೆ. ಕುರಿಯಾಳ ಗ್ರಾಮದ ಕುಕ್ಕಾಜೆಯ ಕೇಶವ ಪೂಜಾರಿ ಎಂಬವರ ಮನೆಗೆ ಈ ಕೂಲಿಯಾಳುಗಳಿಬ್ಬರು ಆಗಮಿಸಿದ್ದರು. ಕೆಲಸ ಮುಗಿಸಿ ಮೇಲಕ್ಕೆ ಹತ್ತುವ ವೇಳೆ ಜಾರಿ ಬಿದ್ದಿದ್ದಾರೆ. ಕೂಡಲೇ ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಲಾಗಿದೆ. ಬಳಿಕ ಸ್ಥಳೀಯರ ಸಹಾಯದಿಂದ ಅಗ್ನಿಶಾಮಕ ಸಿಬ್ಬಂದಿ ಇಬ್ಬರನ್ನೂ ಮೇಲಕ್ಕೆತ್ತುವಲ್ಲಿ ಸಫಲರಾದರು.

ಗದ್ದೆಗೆ ಉರುಳಿದ ಜೀಪು: ಸ್ಥಳದಲ್ಲೇ ಚಾಲಕ ಸಾವು

ಮಡಿಕೇರಿ: ಜೀಪೊಂದು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯ ಗದ್ದೆಗೆ ಉರುಳಿದ ಪರಿಣಾಮ ಚಾಲಕ ಸ್ಥಳದಲ್ಲೇ ಸಾವಿಗೀಡಾದ ಘಟನೆ ಶನಿವಾರ ವೀರಾಜಪೇಟೆ ಸಮೀಪದ ಕುಕ್ಲೂರು– ಚೆಂಬೆಬೆಳ್ಳೂರು ಮುಖ್ಯ ರಸ್ತೆಯಲ್ಲಿ ನಡೆದಿದೆ. ಮೂಲತಃ ಕೊಡಗಿನ ಪಾಲಿಬೆಟ್ಟದವರಾಗಿದ್ದು, ಚೆಂಬೆಬೆಳ್ಳೂರು ಗ್ರಾಮದ ದೇವಯ್ಯ ಎಂಬವರ ಲೈನ್ ಮನೆಯಲ್ಲಿ ವಾಸವಿದ್ದ ವಸಂತ (59) ಎಂಬವರೇ ಸಾವಿಗೀಡಾದವರು. ಚೆಂಬೆಬೆಳ್ಳೂರು ಗ್ರಾಮದ ದೇವಯ್ಯ ಎಂಬವರ ತೋಟದ ಕೆಲಸಕ್ಕೆ ನಾಲ್ಕು ವರ್ಷಗಳ ಹಿಂದೆ ಆಗಮಿಸಿದ್ದ ವಸಂತ ವಾಹನ ಚಾಲಕನಾಗಿ ಕರ್ತವ್ಯ ನಿರ್ವಹಿಸುತಿದ್ದರು. ಮಾಲಕರ ಸೂಚನೆಯಂತೆ ಶನಿವಾರ ಸಂಜೆ 4 ಗಂಟೆಗೆ ದೇವಯ್ಯ ಅವರ ಮಹೀಂದ್ರಾ ಜೀಪಿನಲ್ಲಿ ವೀರಾಜಪೇಟೆ ನಗರಕ್ಕೆ ತೆರಳಿ ಮನೆಗೆ ಮರಳುವಾಗ, ಕುಕ್ಲೂರು– ಚೆಂಬೆಬೆಳ್ಳೂರು ಮುಖ್ಯ ರಸ್ತೆಯಲ್ಲಿ ವಾಹನ ಚಾಲಕನ ನಿಯಂತ್ರಣ ತಪ್ಪಿ ಗದ್ದೆ ಭಾಗಕ್ಕೆ ಮಗುಚಿಕೊಂಡಿದೆ. ಈ ಸಂದರ್ಭ ಚಾಲಕನ ದೇಹದ ಮೇಲೆಯೇ ವಾಹನ ಬಿದ್ದ ಪರಿಣಾಮ, ತಲೆ ಹಾಗೂ ಕಾಲಿನ ಭಾಗಕ್ಕೆ ಗಂಭೀರವಾದ ಗಾಯಗೊಂಡ ವಸಂತ ಅಧಿಕ ರಕ್ತ ಸ್ರಾವಗೊಂಡು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ದಾರಿ ಹೋಕರು ನೀಡಿದ ಮಾಹಿತಿ ಮೇರೆಗೆ ವೀರಾಜಪೇಟೆ ಗ್ರಾಮಾಂತರ ಪೊಲೀಸರು ಸ್ಥಳ ಪರಿಶೀಲನೆ ನಡೆಸಿ, ಮೃತ ದೇಹವನ್ನು ವೀರಾಜಪೇಟೆ ಸರ್ಕಾರಿ ಆಸ್ಪತ್ರೆಗೆ ರವಾನಿಸಿದ್ದಾರೆ. ತೋಟದ ಮಾಲಕ ದೇವಯ್ಯ ಅವರು ನೀಡಿದ ದೂರಿನ ಮೇರೆಗೆ ಆಕಸ್ಮಿಕ ಅಪಘಾತ ಮರಣ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ಕ್ರಮ ಜರುಗಿಸಿದ್ದಾರೆ.

ಹುಲಿ ಗಣತಿಯ ಕ್ಯಾಮರಾ ಕಳವು

ಬೆಳ್ತಂಗಡಿ: ಸವಣಾಲು ಗ್ರಾಮದ ಪೇಲ ಎಂಬಲ್ಲಿ ಹುಲಿ ಗಣತಿಯ ಸಲುವಾಗಿ ಹಾಕಲಾಗಿದ್ದ ಎರಡು ಕ್ಯಾಮೆರಾಗಳನ್ನು ಕಳ್ಳರು ಕಳ್ಳತನ ಮಾಡಿರುವ ಬಗ್ಗೆ ಅರಣ್ಯ ಇಲಾಖೆಯ ವನ್ಯಜೀವಿ ವಿಭಾಗದ ಉಪವಲಯ ಅರಣ್ಯಾಧಿಕಾರಿ ರವೀಂದ್ರ ಕೆ. ಅವರು ಬೆಳ್ತಂಗಡಿ ಪೊಲೀಸರಿಗೆ ದೂರು ನೀಡಿದ್ದಾರೆ.

ಸವಣಾಲು ಗ್ರಾಮದ ಪೇಲ ಎಂಬಲ್ಲಿ ಮೇ ಒಂದರಂದು ಹುಲಿ ಗಣತಿಗಾಗಿ ಕ್ಯಾಮೆರಗಳನ್ನು ಅಳವಡಿಸಲಾಗಿತ್ತು. ಮೇ 13 ರಂದು ಪರಿಶೀಲಿಸಿದಾಗ ಎರಡು ಕ್ಯಾಮರಾಗಳನ್ನು ಯಾರೋ ಕಳ್ಳರು ಕಳವು ಮಾಡಿಕೊಂಡು ಹೋಗಿರುವುದಾಗಿ ಕಂಡು ಬಂದಿದೆ ಕಳವಾದ ಕ್ಯಾಮರಾಗಳ ಅಂದಾಜು ಮೌಲ್ಯ ರೂ 48000 ಆಗಿದ್ದು ಈ ಬಗ್ಗೆ ಬೆಳ್ತಂಗಡಿ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಕೋಳಿ ಅಂಕಕ್ಕೆ ದಾಳಿ : 8 ಮಂದಿಯ ಬಂಧನ

ಬಂಟ್ವಾಳ: ತಾಲೂಕಿನ ಮೊಡನಡುಗೋಡು ಗ್ರಾಮದ ಪಿಲಿಂಗಾಲು ಎಂಬಲ್ಲಿ ನಡೆಯುತ್ತಿದ್ದ ಅಕ್ರಮ ಕೋಳಿ ಅಂಕ ಜೂಜಾಟದ ಸ್ಥಳಕ್ಕೆ ದಾಳಿ ನಡೆಸಿದ ಬಂಟ್ವಾಳ ಗ್ರಾಮಾಂತರ ಠಾಣಾ ಪೊಲೀಸರು 8 ಮಂದಿಯನ್ನು ವಶಕ್ಕೆ ಪಡೆದುಕೊಂಡ ಘಟನೆ ನಡೆದಿದೆ. ಪೊಲೀಸರ ವೇಳೆ ಉಳಿದವರು ಪರಾರಿಯಾಗಿದ್ದು, ಬಂಧಿತರಿಂದ 2,210 ರೂಪಾಯಿ ನಗದು ಹಾಗೂ ಸ್ಥಳದಲ್ಲಿದ್ದ 8 ಕೋಳಿಗಳನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.



ಬಂಟ್ವಾಳ : ಸಿಡಿಲು ಬಡಿದು ಹಾನಿಗೊಳಗಾದ ಇಳಿಯೂರು ಶ್ರೀ ಮಹಾವಿಷ್ಣು ದೇವಸ್ಥಾನಕ್ಕೆ ಬಿಜೆಪಿ ಮುಖಂಡ ಸಂದೇಶ್ ಶೆಟ್ಟಿ ಅರೆಬೆಟ್ಟು ಅವರು ರಾತ್ರಿ ವೇಳೆ ಭೇಟಿ ನೀಡಿ ಪರಿಶೀಲಿಸಿದರು. ಶನಿವಾರ ಸಂಜೆ ತಾಲೂಕಿನ ಮಣಿನಾಲ್ಕೂರು ಗ್ರಾಮದ ಇಳಿಯೂರು ಶ್ರೀ ಮಹಾವಿಷ್ಣು ದೇವಸ್ಥಾನದ ದೇವರ ಗರ್ಭಗುಡಿಯ ಮೇಲಿನ ಪ್ರಾಕಾರಕ್ಕೆ ಸಿಡಿಲು ಬಡಿದು ಅಪಾರ ನಷ್ಟವುಂಟಾಗಿತ್ತು. ಸುದ್ದಿ ತಿಳಿದ ಬಿಜೆಪಿ ಮುಖಂಡ ಸಂದೇಶ್ ಶೆಟ್ಟಿ ಅವರು ಭೇಟಿ ನೀಡಿ ದೇವಸ್ಥಾನದ ಪ್ರಮುಖರ ಜೊತೆ ಮಾತನಾಡಿದರು. ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷ ಸಂಪತ್ ಕುಮಾರ್ ಶೆಟ್ಟಿ, ಪ್ರಮುಖರಾದ ಪದ್ಮಶೇಖರ್ ಜೈನ್ ,ಪುರುಷೋತ್ತಮ ಪೂಜಾರಿ ಮತ್ತಿತರರು ಹಾಜರಿದ್ದರು.

ಕೊಲ್ಲೂರು ಬಳಿ ಜೀಪು–ಟೆಂಪೋ ಮುಖಾಮುಖಿ
ಮೃತರ ಸಂಖ್ಯೆ ಎರಡಕ್ಕೇರಿಕೆ

ಉಡುಪಿ: ಕೊಡಚಾದ್ರಿಯಿಂದ ಕೇರಳದ ಪ್ರವಾಸಿಗರನ್ನು ಕರೆದೊಯ್ಯುತ್ತಿದ್ದ ಜೀಪು ಹಾಗೂ ಟೆಂಪೋ ಮಧ್ಯೆ ಕೊಲ್ಲೂರು ದಳಿ ಎಂಬಲ್ಲಿ ಭಾನುವಾರ ಮಧ್ಯಾಹ್ನ ಸಂಭವಿಸಿದ ಅಪಘಾತದಲ್ಲಿ ಮತ್ತೋರ್ವ ಮೃತಪಟ್ಟಿದ್ದು, ಈ ಮೂಲಕ ಈ ಘಟನೆಯಲ್ಲಿ ಇಬ್ಬರು ಮೃತಪಟ್ಟು ಎಂಟು ಮಂದಿ ಗಾಯಗೊಂಡಿದ್ದಾರೆ.

ಮೃತರನ್ನು ಕೇರಳದ ಜ್ಯೋತಿ (35) ಹಾಗೂ ಆರ್ಯ ಅನೂಪ್ (28) ಎಂದು ಗುರುತಿಸಲಾಗಿದೆ. ಆಯನ್ (5), ಅವನಿ (8), ಅರ್ಜುನ್ (9), ಮಿನಿ (60), ಅಭಿ (36), ಅನೂಪ್ (37), ಜ್ಯೋತಿಷ್ (43), ಜೀಪು ಚಾಲಕ ದೇವರಾಜ್ ಎಂಬವರು ತೀವ್ರವಾಗಿ ಗಾಯಗೊಂಡು ಕುಂದಾಪುರ ಹಾಗೂ ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇವರೆಲ್ಲರು ಕೇರಳ ರಾಜ್ಯದವರು ಎಂದು ತಿಳಿದುಬಂದಿದೆ. ಕೊಡಚಾದ್ರಿಯಿಂದ ಕೊಲ್ಲೂರಿನತ್ತ ಪ್ರವಾಸಿಗರನ್ನು ಕರೆದೊಯ್ಯುತ್ತಿದ್ದ ಜೀಪು ಹಾಗೂ ಕೊಲ್ಲೂರು ಕಡೆಯಿಂದ ನಾಗೋಡಿ ಕಡೆಯತ್ತ ಸಾಗುತ್ತಿದ್ದ ಟೆಂಪೋ ಮಧ್ಯೆ ಈ ಅಪಘಾತ ನಡೆದಿದೆ.



ಕೊಲ್ಲೂರು ಠಾಣೆ ಪಿಎಸ್‌ಐಗಳಾದ ವಿನಯ್ ಎಂ.ಕೊರ್ಲಹಳ್ಳಿ ಭೀಮಾ ಶಂಕರ್ ಸ್ಥಳಕ್ಕೆ ಹಾಗೂ ಗಾಯಾಳುಗಳಿರುವ ಆಸ್ಪತ್ರೆಗಳಿಗೆ ಭೇಟಿ ನೀಡಿ ಮಾಹಿತಿ ಕಲೆಹಾಕುತ್ತಿದ್ದಾರೆ. ಈ ಬಗ್ಗೆ ಕೊಲ್ಲೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುದುರೆಮುಖ ಪುನರ್ವಸತಿ ಯೋಜನೆ: 2.38 ಕೋಟಿ ರೂ. ಚೆಕ್ ವಿತರಿಸಿದ ಸಚಿವ ಈಶ್ವರ ಖಂಡ್ರೆ
ಪುನರ್ವಸತಿಗೆ ಹೆಚ್ಚುವರಿಯಾಗಿ ₹ 20 ಕೋಟಿ

ಮಂಗಳೂರು: ಕುದುರೆಮುಖ ಸೇರಿದಂತೆ ರಾಜ್ಯದ ಅರಣ್ಯದೊಳಗಿರುವ ವಸತಿ ಪ್ರದೇಶಗಳ ಸ್ಥಳಾಂತರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ತಿಳಿಸಿದರು.

ನಗರದ ಕದ್ರಿ ಪಾರ್ಕ್‌ನಲ್ಲಿ ಭಾನುವಾರ ಗೇರು ಮೇಳದಲ್ಲಿ, ಕೆಲ ತಿಂಗಳ ಹಿಂದೆ ಆನೆ ದಾಳಿಗೆ ಇಬ್ಬರು ಮೃತಪಟ್ಟಿದ್ದ ಹಾಗೂ ಶೃಂಗೇರಿ ಕೆರೆಕಟ್ಟೆ ಪ್ರದೇಶ ಸೇರಿದಂತೆ ಕುದುರೆಮುಖ ಅರಣ್ಯದಿಂದ ಸ್ವಯಂ ಪ್ರೇರಿತರಾಗಿ ಹೊರಬರಲು ಅರ್ಜಿ ಸಲ್ಲಿಸಿದ್ದ 5 ಕುಟುಂಬಗಳಿಗೆ 2.38 ಕೋಟಿ ರೂ. ಚೆಕ್ ವಿತರಿಸಿ ಅವರು ಮಾತನಾಡಿದರು.

ಇಬ್ಬರ ಮೇಲೆ ಕಾಡಾನೆ ದಾಳಿ ಮಾಡಿದಾಗ, ಪುಂಡಾನೆಯನ್ನು ಸೆರೆ ಹಿಡಿಯಲು ಸೂಚನೆ ನೀಡಲಾಗಿತ್ತು. ಆನೆ ಸೆರೆ ಮಾತ್ರವೇ ಪರಿಹಾರ ಆಗುವುದಿಲ್ಲ. ಹೀಗಾಗಿ ಅರಣ್ಯದೊಳಗಿನ ಜನರ ಸ್ಥಳಾಂತರದ ಮೂಲಕ ಅರಣ್ಯ ಪ್ರದೇಶ ವಿಸ್ತರಣೆ, ಸಂರಕ್ಷಣೆ ಮಾಡಲು ಸರ್ಕಾರ ಕ್ರಮ ವಹಿಸಿದೆ ಎಂದರು

ಕುದುರೆಮುಖ ಅರಣ್ಯದೊಳಗೆ 1300 ಕುಟುಂಬಗಳಿದ್ದವು. 350 ಕುಟುಂಬಗಳಿಗೆ ಪರಿಹಾರ ನೀಡಿ ಸ್ಥಳಾಂತರಿಸಲಾಗಿದೆ. ಇನ್ನೂ 300 ಕುಟುಂಬಗಳು ಸ್ವಯಂ ಇಚ್ಛೆಯಿಂದ ಸ್ಥಳಾಂತರ ಗೊಳ್ಳಲು ಅರ್ಜಿ ಸಲ್ಲಿಸಿದ್ದು, ಹಂತ ಹಂತವಾಗಿ ಪುನರ್ವಸತಿ ಯೋಜನೆ ಜಾರಿಗೆ ತರಲಾಗುವುದು ಎಂದರು.



ಆನೆದಾಳಿ ಘಟನೆ ನಡೆದ ಬಳಿಕ ಬಹಳ ವರ್ಷದಿಂದ ಅರ್ಜಿ ಹಾಕಿ ಕಾಯುತ್ತಿದ್ದ ಅರಣ್ಯದೊಳಗಿನ ವಸತಿ ಪ್ರದೇಶಗಳ ಸ್ಥಳಾಂತರ ಯೋಜನೆಯನ್ನು ಆರ್ಥಿಕ ಲಭ್ಯತೆಯ ಇತಿಮಿತಿಯಲ್ಲಿ ಪುನಾರಂಭಿಸಲು ನಿರ್ಧರಿಸಲಾಗಿದ್ದು. ಈ ಬಗ್ಗೆ ನಾನು ಅಧಿಕಾರಿಗಳಿಗೆ ಸೂಚನೆ ನೀಡಿ ಕೂಡಲೇ ಸ್ವಯಂ ಇಚ್ಛೆಯಿಂದ ಕಾಡಿನಿಂದ ಹೊರಗೆ ಬರಲು ಅರ್ಜಿ ಸಲ್ಲಿಸಿರುವ ಕುಟುಂಬಗಳನ್ನು ಗುರುತಿಸಿ ಸ್ಥಳಾಂತರಿಸಲು ಸೂಚಿಸಿದ್ದೆ ಇಂದು 5 ಕುಟುಂಬಕ್ಕೆ ಚೆಕ್ ನೀಡಲಾಗಿದೆ. ಜೊತೆಗೆ 20 ಕೋಟಿ ರೂಪಾಯಿಗಳನ್ನು ಪುನರ್ವಸತಿ ಯೋಜನೆಗೆ ಹೆಚ್ಚುವರಿಯಾಗಿ ಹಂಚಿಕೆ ಮಾಡಲಾಗಿದೆ ಎಂದು ತಿಳಿಸಿದರು.

ವನ ಪ್ರದೇಶ ಇರುವ ಜಿಲ್ಲೆಗಳಲ್ಲಿ ಮಾನವ–ಆನೆ ಸಂಘರ್ಷ ಹೆಚ್ಚಾಗಿದೆ. ಮಂಗಳೂರು ಭಾಗದಲ್ಲೂ ಈ ಸಮಸ್ಯೆ ಇದೆ. ತಾವು ಸಚಿವರಾದ ಬಳಿಕ ದಕ್ಷಿಣ ಕನ್ನಡ ಜಿಲ್ಲೆಗೆ ಸಮರ್ಪಿತ ಆನೆ ಕಾರ್ಯಪಡೆ ಮಂಜೂರು ಮಾಡಲಾಗಿದ್ದು, 25 ಸಿಬ್ಬಂದಿಗೆ ತರಬೇತಿ ನೀಡಲಾಗಿದೆ. ರೈಲ್ವೆ ಬ್ಯಾರಿಕೇಡ್ ಅಳವಡಿಸುತ್ತಿದ್ದೇವೆ. ಕಾಡಿನಲ್ಲಿ ವನ್ಯಜೀವಿಗಳಿಗೆ ನೀರು, ಆಹಾರದ ಕೊರತೆ ಆಗದಂತೆ ನೋಡಿಕೊಳ್ಳುತ್ತಿದ್ದೇವೆ. ಸಿಬ್ಬಂದಿ ನೇಮಕಾತಿ ಮಾಡುತ್ತಿದ್ದೇವೆ. ಕಮಾಂಡ್ ಸೆಂಟರ್ ಆರಂಭಿಸಿದ್ದೇವೆ ಎಂದರು.

ಇತ್ತೀಚೆಗೆ ಇಲಾಖೆ ಸಿದ್ಧಪಡಿಸಿರುವ ಚಾರಣಿಗರ ಸುರಕ್ಷತೆಯ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್.ಓ.ಪಿ.)ಯ ಕಟ್ಟುನಿಟ್ಟಿನ ಪಾಲನೆಗೆ ಸೂಚನೆ ನೀಡಿದ ಸಚಿವರು, ಇದೇ ಸಂದರ್ಭದಲ್ಲಿ ಟ್ರೆಕ್ ಪಾಸ್ ಪೋರ್ಟ್ ಮತ್ತು ಟ್ರೆಕ್ ಗೈಡ್ ಕೈಪಿಡಿ ಹಾಗೂ ಚಾರಣದಲ್ಲಿ ಭಾಗಿಯಾಗುವ ಪ್ರಕೃತಿ ಮಾರ್ಗದರ್ಶಕರಿಗೆ ಪ್ರಥಮ ಚಿಕಿತ್ಸೆಯ ಕಿಟ್ ಅನ್ನು ವಿತರಿಸಿದರು.

ಕುದುರೆಮುಖ ವನ್ಯಜೀವಿ ವಲಯದ ವ್ಯಾಪ್ತಿಯಲ್ಲಿನ ಶೋಲಾ ಸಫಾರಿಗಾಗಿ ಕ್ಯಾಂಪರ್ ವಾಹನಕ್ಕೂ ಚಾಲನೆ ನೀಡಿದರು. ಚಾರಣಿಗರ ಅನುಕೂಲಕ್ಕಾಗಿ ಕೈಪಿಡಿಯನ್ನೂ ಬಿಡುಗಡೆ ಮಾಡಿದರು.

ರಾಜ್ಯದಲ್ಲಿ ಕಳೆದ 3 ವರ್ಷದಲ್ಲಿ 11 ಕೋಟಿ ಸಸಿಗಳನ್ನು ನೆಟ್ಟು ಬೆಳೆಸಲಾಗಿದೆ. ಅರಣ್ಯ ಒತ್ತುವರಿಯನ್ನು ತೆರವು ಮಾಡಲು ಆದ್ಯತೆ ನೀಡಲಾಗಿದ್ದು ಸಾವಿರಾರು ಕೋಟಿ ರೂ. ಬೆಲೆ ಬಾಳುವ ಅರಣ್ಯ ಒತ್ತುವರಿಯನ್ನು ಹಂತ ಹಂತವಾಗಿ ತೆರವು ಮಾಡಿಸಲಾಗುತ್ತಿದೆ ಎಂದರು.

ಬಡ ರೈತರ ಶೋಷಣೆ ಆಗದ ರೀತಿಯಲ್ಲಿ ಸೆಕ್ಷನ್ 4 ಮತ್ತು ಡೀಮ್ಡ್ ಅರಣ್ಯದ ಬಗ್ಗೆ ಅಧಿಕಾರಿಗಳು ಕ್ರಮ ವಹಿಸಬೇಕು ಎಂದರು.

ಆನೆ ದಾಳಿಯಿಂದ ಮೃತಪಟ್ಟ ಕುಟುಂಬಕ್ಕೆ ಹೊರಗುತ್ತಿಗೆ ಕೆಲಸ

ಪ್ರತಿಯೊಂದು ಜೀವವೂ ಅಮೂಲ್ಯ. ಹೋದ ಜೀವ ಮರಳಿ ತರಲು ಸಾಧ್ಯವಿಲ್ಲ. ಆದರೆ ಅವರನ್ನು ಆಶ್ರಯಿಸಿದ್ದ ಕುಟುಂಬಗಳಿಗೆ ಆಸರೆಯಾಗಲು ಸರ್ಕಾರ ವನ್ಯಜೀವಿ ದಾಳಿಯಿಂದ ಮೃತಪಟ್ಟ ಕುಟುಂಬಗಳಿಗೆ 20 ಲಕ್ಷ ರೂ. ಪರಿಹಾರ ನೀಡಲಾಗಿದೆ. ಕೆರೆಕಟ್ಟೆಯ ಮುಡಬಿಯಲ್ಲಿ ನಡೆದ ದುರ್ಘಟನೆಯಲ್ಲಿ ಮೃತಪಟ್ಟವರ ಕುಟುಂಬದ ಸ್ಥಿತಿಯನ್ನು ಪರಿಗಣಿಸಿ ಮಾನವೀಯ ನೆಲೆಗಟ್ಟಿನಲ್ಲಿ ಆ ಕುಟುಂಬದ ಇಬ್ಬರಿಗೆ ಹೊರಗುತ್ತಿಗೆ ಆಧಾರದಲ್ಲಿ ಅರಣ್ಯ ಇಲಾಖೆಯಲ್ಲಿ ಉದ್ಯೋಗವನ್ನೂ ನೀಡಲಾಗಿದೆ ಎಂದು ಈಶ್ವರ ಖಂಡ್ರೆ ತಿಳಿಸಿದರು.

ನಿರ್ಲಕ್ಷಿತ ಬಂಧುಗಳ ವಸತಿಯಲ್ಲಿ ಚಿತ್ರಾಪುರ ಶ್ರೀಗಳಿಂದ ಪಾದಯಾತ್ರೆ



ಮಂಗಳೂರು: ವಿಶ್ವ ಹಿಂದೂ ಪರಿಷತ್ ಮಂಗಳೂರು ಜಿಲ್ಲೆಯ ಧರ್ಮ ಪ್ರಸಾರ ಹಾಗೂ ಸಾಮಾಜಿಕ ಸಮರಸತಾ ವಿಭಾಗದ ವತಿಯಿಂದ ಚಿಲಿಂಬಿ ಗುಡ್ಡೆಯ ನಿರ್ಲಕ್ಷಿತ ಬಂಧುಗಳ ವಸತಿಯಲ್ಲಿ ಚಿತ್ರಾಪುರ ಶ್ರೀಗಳಿಂದ ಸಂತರ ಪಾದ ಯಾತ್ರೆ ಕಾರ್ಯಕ್ರಮ ಭಾನುವಾರ ನಡೆಯಿತು.

ಶ್ರೀಪಾದರು ಹತ್ತಕ್ಕೂ ಹೆಚ್ಚು ಉಪೇಕ್ಷಿತ ಬಂಧುಗಳ ಮನೆಗೆ ತೆರಳಿ ಧರ್ಮ ಪಾಲನೆ ಮತ್ತು ರಕ್ಷಣೆಯ ಮಹತ್ವವನ್ನು ತಿಳಿಸಿದರು. ಚಿಲಿಂಬಿ ಗುಡ್ಡೆ ಶ್ರೀ ರಾಮಾಂಜನೆಯ ಭಜನಾ ಮಂದಿರದಲ್ಲಿ ಶ್ರೀಪಾದರನ್ನು ಗೌರವಿಸಲಾಯಿತು. ಈ ಕಾರ್ಯಕ್ರಮಕ್ಕೆ ಶ್ರೀ ರಾಮಾಂಜನೆಯ ಯುವಕ ಮಂಡಲದ ಪದಾಧಿಕಾರಿಗಳು ಪೂರ್ಣ ಸಹಕಾರವನ್ನಿತ್ತರು.

ಈ ಸಂದರ್ಭದಲ್ಲಿ ವಿಹಿಂಪ ಜಿಲ್ಲಾಧ್ಯಕ್ಷ ಎಚ್.ಕೆ. ಪುರುಷೋತ್ತಮ್, ವಿಹಿಂಪ ಜಿಲ್ಲಾ ಪ್ರಮುಖರಾದ ಗುರುಪ್ರಸಾದ್ ಕಡಂಬಾರ್, ಜಯರಾಮ್ ಆಚಾರ್ಯ, ರವಿ ಕಾಪಿಕ್ಕಾಡ್, ರಾಜು ಕುಲಾಲ್, ವಸಂತ ಶೇಟ್, ಸತೀಶ್ ಶೆಟ್ಟಿ ನೆಕ್ಕಿಲ, ಪ್ರಸಾದ್ ಕೊಂಚಾಡಿ, ಹರೀಶ್ ಶೇಟ್ ಮತ್ತು ಮಣ್ಣಗುಡ್ಡೆ ಪ್ರಖಂಡ ಪ್ರಮುಖರಾದ ಲೋಕೇಶ್ ಶೆಟ್ಟಿ ಪ್ರಶಾಂತ್ ನಾಯ್ಕ್ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಉಜಿರೆಯಲ್ಲಿ ನಡೆದ 5 ನೇ ವರ್ಷದ ಸಾಂಪ್ರದಾಯಿಕ ವಿಷುಕಣಿ ಆಚರಣೆ

ಬೆಳ್ತಂಗಡಿ: ತಾಲೂಕಿನಲ್ಲಿ ನಡೆ ಯುವ ಎಲ್ಲಾ ಜನಪರ ವಿಶೇಷ ಕಾರ್ಯಕ್ರಮಗಳು ಇನ್ನು ಮುಂದೆಯೂ ಶಾಸಕರ ನೇತೃತ್ವದಲ್ಲಿ ನಡೆಯಲಿ. ನಾವೆಲ್ಲಾ ಹಿಂದು ಎಲ್ಲಾ ಸಮುದಾಯದವರು ನನ್ನವರು ಎಂದು ಭಾವನೆ ಇನ್ನಷ್ಟು ಮೂಡಲಿ ಎಂದು ಪ್ರಸಾದ್ ನೇತ್ರಾಲಯದ ಮುಖ್ಯಸ್ಥ ಡಾ. ಕೃಷ್ಣಪ್ರಸಾದ್ ಹೇಳಿದರು.

ಅವರು ವಿಷುಕಣಿ ಆಚರಣಾ ಸಮಿತಿ ಯಿಂದ ಭಾನುವಾರ ಉಜಿರೆಯಲ್ಲಿ ನಡೆದ 5 ನೇ ವರ್ಷದ ಸಾಂಪ್ರದಾಯಿಕ ವಿಷುಕಣಿ ಆಚರಣೆಯಲ್ಲಿ ಮಾತನಾಡಿದರು.

ಶಾಸಕರ ಪತ್ರಮುಖೇನ ನಮ್ಮ ನೇತ್ರಾಲಯಕ್ಕೆ ಅಂಥ ವ್ಯಕ್ತಿಗಳು ಬಂದರೆ ಅಂತಹವರಿಗೆ ಉಚಿತ ಕಣ್ಣಿನ ಶಸ್ತ್ರಚಿಕಿತ್ಸೆ ನಡೆಸಲಾಗುವುದು. ಶಾಸಕರ ಸಹಯೋಗದೊಂದಿಗೆ ಬೆಳ್ತಂಗಡಿಯನ್ನು ಅಂಧಮುಕ್ತ ತಾಲೂಕನ್ನಾಗಿ ಮಾಡಲಾಗುವುದು ಎಂದರು.

ಶಾಸಕ ಕಾರ್ಯಕ್ರಮವನ್ನು ಹರೀಶ್ ಪೂಂಜ ಉದ್ಘಾಟಿಸಿ ತಾಲೂಕಿನಲ್ಲಿರುವ ಎಲ್ಲಾ ಕೇರಳ ಸಂಪ್ರದಾಯದವರನ್ನು ಒಗ್ಗೂಡಿಸುವ ಕಾರ್ಯಕ್ರಮ ರಾಜ್ಯದಲ್ಲಿ ಇಲ್ಲಿ ಮಾತ್ರ ನಡೆಯುತ್ತಿರುವುದು ವಿಶೇಷ ಎಂದರು.




ವಕೀಲ ಉಮೇಶ್ ಟಿ, ಬಿಜೆಪಿ ಮಂಡಲ ಅಧ್ಯಕ್ಷ ಶ್ರೀನಿವಾಸ್ ರಾವ್, ಮಂಡಲ ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ಪಾರೆಂಕಿ, ಜಿಲ್ಲಾ ಮನ್ ಕಿ ಭಾತ್ ಪ್ರಮುಖ ಸೀತಾರಾಮ ಬೆಳಾಲು, ಬಿಜೆಪಿ ಮಹಾಶಕ್ತಿಕೇಂದ್ರ ಅಧ್ಯಕ್ಷ ಹರಿಪ್ರಸಾದ್ ಕಳೆಂಜ, ಯಶವಂತ್ ಪುದುವೆಟ್ಟು, ಉಜಿರೆ ಗ್ರಾಮ ಪಂಚಾಯತ್ ನಿಕಟಪೂರ್ವ ಅಧ್ಯಕ್ಷರುಗಳಾದ ಉಷಾ ಕಾರಂತ್, ಪುಷ್ಪ ಆರ್. ಶೆಟ್ಟಿ, ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಪೂರ್ಣಿಮಾ, ವಿಷು ಕಣಿ ಆಚರಣಾ ಸಮಿತಿಯ ಅನಿಲ್ ಶಿಬಾಜೆ, ಬಾಲಕೃಷ್ಣ ನೈಮಿಷ, ಪ್ರಸಾದ್ ಬಿ.ಎಸ್, ದಿವಿನೇಶ್ ಹಾಗೂ ಸದಸ್ಯರು, ಮುಖಂಡರಾದ ಸದಾನಂದ ಉಂಗಿಲಬೈಲು, ಸುಪ್ರಿತ್ ಜೈನ್, ಶಶಿಕಲಾ ಆರಳಿ, ಪ್ರಸಾದ್ ಕೆವಿ, ಉಪಸ್ಥಿತರಿದ್ದರು.

ಬದುಕಿನಲ್ಲಿ ಆಸಕ್ತಿ, ಉತ್ಸಾಹ, ಪರಿಶ್ರಮಗಳಿಗೆ ವಯಸ್ಸು ಅಡ್ಡಿಯಲ್ಲ ಎಂಬುದಕ್ಕೆ ನಿದರ್ಶನ ಶಿರೂರಿನ ಈ ನಿವೃತ್ತ ಸೈನಿಕ
66ರ ಹರೆಯದಲ್ಲೂ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಮಿಂಚಿಂಗ್ !

ಬೈಂದೂರು: ಆಸಕ್ತಿ, ಉತ್ಸಾಹ, ಪರಿಶ್ರಮಗಳಿದ್ದಾಗ ವಯಸ್ಸಿನ ಅಡ್ಡಿಯಾಗದು ಅನ್ನೋದಕ್ಕೆ ಶಿರೂರಿನ ಬಾಬು ಪೂಜಾರಿ ಎನ್ನುವ ನಿವೃತ್ತ ಸೈನಿಕ ಉದಾಹರಣೆಯಾಗಿದ್ದಾರೆ. 66ರ ವಯಸ್ಸಿನಲ್ಲಿ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಭಾಗವಹಿಸುತ್ತಾ ಹತ್ತಾರು ಪ್ರಶಸ್ತಿ ಪಡೆಯುತ್ತಿರುವ ಈ ನಿವೃತ್ತ ಸೇನಾನಿ ಯುವ ಸಮುದಾಯಕ್ಕೆ ಸ್ಫೂರ್ತಿಯಾಗಿದ್ದಾರೆ.

ಕೂಲಿಯಿಂದ ಸೇವಿಯವರೆಗೆ

ಬಾಬು ಪೂಜಾರಿ ಮೂಲತಃ ಕುಂದಾಪುರದ ಆನಗಳ್ಳಿಯವರು ಕಡು ಬಡತನದಿಂದಾಗಿ ಕುಂದಾಪುರ ಶರೋನ್ ಹೋಟೇಲ್ ನಿರ್ಮಾಣ ಹಂತದಲ್ಲಿ ಕಾರ್ಮಿಕರಾಗಿ ಕೆಲಸ ಮಾಡಿದ ಇವರು ಬಾಲ್ಯದಿಂದಲೂ ಹಿಂದಿ ಸಿನಿಮಾಗಳನ್ನು ನೋಡಿ ದೇಹದಾರ್ಢ್ಯದ ಬಗ್ಗೆ ವಿಶೇಷವಾದ ಆಸಕ್ತಿ ಹೊಂದಿದ್ದರು. ಹೊಟ್ಟೆಪಾಡಿಗಾಗಿ ಮುಂಬೈಗೆ ತೆರಳಿ ರಾತ್ರಿ ಶಾಲೆಯಲ್ಲಿ ಓದಿದರು. ಪಾರ್ಕ್‌ಗಳಲ್ಲಿ ವರ್ಕ್‌ಔಟ್ ಮಾಡಿ ದೇಹವನ್ನು ಹುರಿಗೊಳಿಸಿದ ಇವರು ಮುಂಬೈ ನಗರದ ಬಾಡಿಬಿಲ್ಡರ್ ಆಗಿ ರೂಪುಗೊಂಡರು. ಸ್ಥಳೀಯ ಹತ್ತಾರು ಸ್ಪರ್ಧೆಗಳಲ್ಲಿ ಭಾಗವಹಿಸಿ ಅಮೆಚೂರ್ ಬಾಡಿ ಬಿಲ್ಡರ್, ಭಾರತ್ ಕುವಾರ್, ಮುಂಬೈಶ್ರೀ, ಮಹಾರಾಷ್ಟ್ರಶ್ರೀ, ಭಾರತಶ್ರೇಷ್ಠ, ಪಶ್ಚಿಮ ಭಾರತಶ್ರೀ ಸೇರಿದಂತೆ ರಾಜ್ಯ, ರಾಷ್ಟ್ರಮಟ್ಟದ ದೇಹದಾರ್ಢ್ಯ ಸ್ಪರ್ಧೆಯ ವಿನ್ನರ್ ಆಗಿ ಮೂಡಿಬಂದಿದ್ದರು. 1990ರಲ್ಲಿ ಭಾರತೀಯ ನೌಕಸೇನಾ ಜವಾನರಾಗಿ ದೇಶ ಸೇವೆಗೆ ದುಡಿದ ಇವರು ನಾಲ್ಕಕ್ಕೂ ಹೆಚ್ಚು ಬಾರಿ ಮಿಸ್ಟರ್ ಇಂಡಿಯಾ ಪ್ರಶಸ್ತಿ ಪಡೆದಿದ್ದಾರೆ. ಭಾರತೀಯ ನೌಕಪಡೆಯಲ್ಲಿ 15 ವರ್ಷ ಸೇವೆ ಸಲ್ಲಿಸಿ ಚೀಫ್ ಪೆಟ್ಟಿ ಆಫಿಸರ್ ಆಗಿ ನಿವೃತ್ತಿ ಹೊಂದಿದ್ದಾರೆ. ಸತತ 15 ವರ್ಷ ಮಿಸ್ಟರ್ ಸರ್ವಿಸಸ್ ಪ್ರಶಸ್ತಿ ಇವರ ಸಾಧನೆಯ ಗರಿಯಾಗಿದೆ.



ದೇಹದಾರ್ಢ್ಯ ಪಟು ಬಾಬು ಪೂಜಾರಿ



ಬಾಬು ಪೂಜಾರಿ ಸೇನಾನಿ ದಿರಿಸಿನಲ್ಲಿ

ದುಶ್ಚಟಗಳಿಂದ ದೂರವಿರುವುದೇ ನನ್ನ ದೇಹದಾರ್ಢ್ಯತೆಯ ಗುಟ್ಟು. ಶಿಸ್ತಿನ ಆಹಾರ ಸ್ವತಃ ಸಿದ್ಧಪಡಿಸಿಕೊಳ್ಳುತ್ತೇನೆ. ಸ್ಪರ್ಧೆಗಳ ಸಮಯದಲ್ಲಿ ನಾಲ್ಕು ಗಂಟೆ, ಇತರ ದಿನಗಳಲ್ಲಿ ಒಂದು ಗಂಟೆ ವ್ಯಾಯಾಮ ಮಾಡುತ್ತೇನೆ. ಈ ರೀತಿಯಲ್ಲಿ ನನ್ನ ಜೀವನವು ಸಮತೋಲನದಿಂದ ಸಾಗುತ್ತಿದೆ. ಇಂದಿನ ಯುವಕರು ತಾಳ್ಮೆ ಹಾಗೂ ಪ್ರಯತ್ನದಿಂದ ಗುರಿ ಮುಟ್ಟಬಹುದು.

■ ಬಾಬು ಪೂಜಾರಿ, ನಿವೃತ್ತ ಸೇನಾನಿ

ನಿವೃತ್ತಿ ಬಳಿಕ ಯುವಕರಿಗೆ ಸ್ಫೂರ್ತಿ

2005ರಲ್ಲಿ ಸೇವಾ ನಿವೃತ್ತಿಯಾದ ಬಳಿಕ ಹುಟ್ಟೂರಿಗೆ ಮರಳಿದ ಇವರು ಯುವಕರಿಗೆ ಸ್ಫೂರ್ತಿಯಾಗಬೇಕು ಮತ್ತು ಸೇನೆ ಹಾಗೂ ದೇಹದಾರ್ಢ್ಯ ವಿಷಯದಲ್ಲಿ ಗ್ರಾಮೀಣ ಭಾಗದ ಯುವಕರಿಗೆ ಮಾಹಿತಿ ನೀಡಬೇಕು ಎನ್ನುವ ಉದ್ದೇಶದಿಂದ ಶಿರೂರಿನಲ್ಲಿ ವ್ಯಾಯಾಮ ಶಾಲೆ ಆರಂಭಿಸಿ ಪ್ರಸ್ತುತ ಉಪ್ಪುಂದದಲ್ಲಿ ಗೋಲ್ಡನ್ ಜಿಮ್ ಮೂಲಕ ನೂರಾರು ಯುವಕರಿಗೆ ದೇಹದಾರ್ಢ್ಯ ತರಬೇತಿ ನೀಡುತಿದ್ದಾರೆ. ಪ್ರಸ್ತುತ ಬಾಬು ಪೂಜಾರಿಯವರಿಗೆ 66 ವರ್ಷ. ಈ ವಯಸ್ಸಿನಲ್ಲಿ ಇವರ ಆಸಕ್ತಿ ಕುಂದಿಲ್ಲ. ಯುವಕರನ್ನು ನಾಚಿಸುವ ದೇಹದಾರ್ಢ್ಯ ಪಟುವಾಗಿ ಕಳೆದ ಎರಡು ತಿಂಗಳಲ್ಲಿ ಕಾರವಾರದಿಂದ ಮಂಗಳೂರಿನ ವರೆಗೆ ಹತ್ತಾರು ಸ್ಪರ್ಧೆಯಲ್ಲಿ ಭಾಗವಹಿಸಿ ಹಿರಿಯರ ವಿಭಾಗದ ಪ್ರಶಸ್ತಿ ಪಡೆದಿದ್ದಾರೆ. ನಿವೃತ್ತ ಸೈನಿಕನಾಗಿ ಶಿಸ್ತು ಮತ್ತು ಪರಿಣತಿ, ಅನುಭವ ಇವರ ಹಿರಿಮೆಯಾಗಿದೆ. 66ರ ವಯಸ್ಸಿನಲ್ಲಿ ದೇಹದಾರ್ಢ್ಯದ ಬಗ್ಗೆ ಇವರ ಆಸಕ್ತಿ ಇಂದಿನ ಯುವಕರಿಗೆ ಪ್ರೇರಣೆಯಾಗಿದೆ.

ಹಿಜಾಬ್‌ಗೆ ಅವಕಾಶ: ಆದೇಶ ಹಿಂಪಡೆಗೆ ಹಿಂಜಾವೇ ಆಗ್ರಹ

ಬೆಂಗಳೂರು: ರಾಜ್ಯದ ಶಾಲಾ-ಕಾಲೇಜುಗಳಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡಿ ಸರ್ಕಾರ ಹೊರಡಿಸಿರುವ ಆದೇಶವನ್ನು ತಕ್ಷಣವೇ ಹಿಂಪಡೆಯಬೇಕು, ಇಲ್ಲದಿದ್ದರೆ ರಾಜ್ಯಾದ್ಯಂತ ತೀವ್ರ ಸ್ವರೂಪದ ಆಂದೋಲನ ಹಮ್ಮಿಕೊಳ್ಳಲಾಗುವುದು ಎಂದು ಹಿಂದೂ ಜಾಗರಣ ವೇದಿಕೆ (ಕರ್ನಾಟಕ ದಕ್ಷಿಣ) ಎಚ್ಚರಿಕೆ ನೀಡಿದೆ.

ಈ ಕುರಿತು ಜಂಟಿ ಪ್ರಕಟಣೆ ನೀಡಿರುವ ಹಿಂದೂ ಜಾಗರಣ ವೇದಿಕೆಯ ಪ್ರಾಂತ ಸಂಚಾಲಕರಾದ ಕೇಶವಮೂರ್ತಿ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಮುಸ್ಲಿಂ ತುಷ್ಟೀಕರಣ ಮತ್ತು ಓಲೈಕೆಯ ರಾಜಕಾರಣದ ಭಾಗವಾಗಿ ಈ ನಿರ್ಧಾರ ಕೈಗೊಂಡಿದೆ. ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ನಡುವೆ ಸಮಾನತೆ ಮೂಡಿಸುವ ಸಲುವಾಗಿಯೇ ಸಮವಸ್ತ್ರ ಸಂಹಿತೆಯನ್ನು ಜಾರಿಗೆ ತರಲಾಗಿದೆ. ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಆಶಯವೂ ಸಹ ವಿದ್ಯಾರ್ಥಿಗಳಲ್ಲಿ ಸಮಾನತೆ ತರಲು ಏಕರೂಪದ ಸಮವಸ್ತ್ರ ಇರಬೇಕು ಎಂಬುದೇ ಆಗಿತ್ತು. ಆದರೆ, ಹಿಜಾಬ್ ಯಾವುದೇ ಕಾರಣಕ್ಕೂ ಸಮವಸ್ತ್ರದ ಭಾಗವಾಗಲು ಸಾಧ್ಯವಿಲ್ಲ ಎಂದು ಅವರು ಪ್ರತಿಪಾದಿಸಿದ್ದಾರೆ.

ಕಾಂಗ್ರೆಸ್ ಸರ್ಕಾರದ ಅತಿಯಾದ ಓಲೈಕೆ ರಾಜಕಾರಣದಿಂದಾಗಿ ಈಗಾಗಲೇ ರಾಜ್ಯದ ಹಲವೆಡೆ ಮತೀಯ ಸಂಘರ್ಷಗಳು ನಡೆದಿವೆ. ತನ್ನ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಮುಸ್ಲಿಮರನ್ನು ರಾಷ್ಟ್ರವಿರೋಧಿ ಹಾಗೂ ಹಿಂದೂ ವಿರೋಧಿಗಳಂತೆ ಬಿಂಬಿಸುವ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ. ಸರ್ಕಾರದ ಆದೇಶದಲ್ಲಿ ಜನಿವಾರ, ಶಿವಧಾರ ಮುಂತಾದವುಗಳನ್ನು ಉಲ್ಲೇಖಿಸಲಾಗಿದೆ. ಸರ್ಕಾರವು ಈ ವಿವಾದಾತ್ಮಕ ಆದೇಶವನ್ನು ತಕ್ಷಣವೇ ಕೈಬಿಟ್ಟು, ಎಲ್ಲಾ ವಿದ್ಯಾರ್ಥಿಗಳಿಗೆ ಸಮಾನ ರೀತಿಯ ಸಮವಸ್ತ್ರವನ್ನು ಕಡ್ಡಾಯಗೊಳಿಸಲು ಕ್ರಮ ಕೈಗೊಳ್ಳಬೇಕು. ಒಂದು ವೇಳೆ ಸರ್ಕಾರ ತನ್ನ ಪಟ್ಟನ್ನು ಸಡಿಲಿಸದಿದ್ದರೆ, ಮುಂದಿನ ದಿನಗಳಲ್ಲಿ ಹಿಂದೂ ಸಮಾಜವನ್ನು ಒಗ್ಗೂಡಿಸಿ ರಾಜ್ಯವ್ಯಾಪಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಕೇಶವಮೂರ್ತಿ ಅವರು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಚಾಲನೆ



ವಿಜಯಪುರ ನಗರದ ಬಿಎಲ್‌ಡಿಇ ಒಳಾಂಗಣ ಕ್ರೀಡಾಂಗಣ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಒಳಾಂಗಣ ಕ್ರೀಡಾಂಗಣದಲ್ಲಿ ಮೇ 23ರವರೆಗೆ ನಡೆಯುವ ರಾಜ್ಯ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಚಾಲನೆ ನಿಡಿದರು. ರಾಜ್ಯ ಬ್ಯಾಡ್ಮಿಂಟನ್ ಅಸೋಸಿಯೇಷನ್ ಅಧ್ಯಕ್ಷ ಕುಮಾರ ಬಂಗಾರಪ್ಪ, ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ವಿಠ್ಠಲ ಕಟಕದೊಂಡ, ಜಿಲ್ಲಾಧಿಕಾರಿ ಡಾ. ಆನಂದ್ ಕೆ., ಜಿ.ಪಂ. ಸಿಇಒ ರಿಷಿ ಆನಂದ್, ವಿಡಿಎ ಅಧ್ಯಕ್ಷ ಡಾ. ಗಂಗಾಧರ ಸಂಬಣ್ಣಿ ಉಪಸ್ಥಿತರಿದ್ದರು.

ಇಂದಿನಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ-2

ಬೆಂಗಳೂರು: ರಾಜ್ಯಾದ್ಯಂತ ಮೇ 18 ರಿಂದ ಮೇ 25ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ-2 ನಡೆಯುಲಿದ್ದು, ಪರೀಕ್ಷೆಗೆ ಒಟ್ಟು 1,15,112 ವಿದ್ಯಾರ್ಥಿಗಳು ನೋಂದಣಿಯಾಗಿದ್ದಾರೆ. ಫಲಿತಾಂಶವನ್ನು ಉತ್ತಮಪಡಿಸಿಕೊಳ್ಳಲು ಬಯಸುವ 11,881 ವಿದ್ಯಾರ್ಥಿಗಳು ಹಾಗೂ ಹಾಜರಾತಿ ಕೊರತೆಯಿಂದ ಪರೀಕ್ಷೆ-1ಕ್ಕೆ ಹಾಜರಾಗಲು ಸಾಧ್ಯವಾಗದ 7,658 ವಿದ್ಯಾರ್ಥಿಗಳು ಪರೀಕ್ಷೆ-2ಕ್ಕೆ ನೋಂದಣಿಯಾಗಿದ್ದಾರೆ.

ರಾಜ್ಯದಲ್ಲಿ 358 ಕೇಂದ್ರಗಳಲ್ಲಿ ಪರೀಕ್ಷೆಯು ನಡೆಯುತ್ತಿದ್ದು, ಒಟ್ಟು ನೋಂದಣಿಯಾದ ವಿದ್ಯಾರ್ಥಿಗಳ ಪೈಕಿ 76,673 ವಿದ್ಯಾರ್ಥಿಗಳು ಮತ್ತು 38,439 ವಿದ್ಯಾರ್ಥಿನಿಯಾಗಿದ್ದಾರೆ. 5,488 ಸರ್ಕಾರಿ ಶಾಲೆಗಳ ಪೈಕಿ 55,403 ವಿದ್ಯಾರ್ಥಿಗಳು, 3,250 ಅನುದಾನಿತ ಶಾಲೆಗಳಿಂದ 31,436 ವಿದ್ಯಾರ್ಥಿಗಳು ಮತ್ತು 5,060 ಅನುದಾನರಹಿತ ಶಾಲೆಗಳಿಂದ 28,273 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ-2ಕ್ಕೆ ನೋಂದಣಿಯಾಗಿದ್ದಾರೆ.

ಪರೀಕ್ಷೆ-2 ವೇಳಾಪಟ್ಟಿ

- ಮೇ 18 -ಪ್ರಥಮ ಭಾಷೆ,
- ಮೇ 19 - ವಿಜ್ಞಾನ, ರಾಜ್ಯಶಾಸ್ತ್ರ, ಹಿಂದೂಸ್ಥಾನಿ ಸಂಗೀತ ಮತ್ತು ಕರ್ನಾಟಕ ಸಂಗೀತ ಪರೀಕ್ಷೆ
- ಮೇ 20 - ದ್ವಿತೀಯ ಭಾಷೆ
- ಮೇ 21 - ಗಣಿತ
- ಮೇ 22 - ತೃತೀಯ ಭಾಷೆ
- ಮೇ 23 - ಸಮಾಜ ವಿಜ್ಞಾನ,
- ಮೇ 25 - ಎಲಿಮೆಂಟ್ಸ್ ಆಫ್ ಎಲೆಕ್ಟ್ರಿಕಲ್ ಇಂಜಿನಿಯರಿಂಗ್, ಎಲಿಮೆಂಟ್ಸ್ ಆಫ್ ಮೆಕ್ಯಾನಿಕಲ್ ಇಂಜಿನಿಯರಿಂಗ್, ಎಲಿಮೆಂಟ್ಸ್ ಆಫ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್, ಪ್ರೋಗ್ರಾಮಿಂಗ್ ಇನ್ ಸಿ ಮತ್ತು ಅರ್ಥಶಾಸ್ತ್ರ ವಿಷಯ

ಕಿರುಸುದ್ದಿ

ಟಯರ್ ಸ್ಫೋಟ: ಬಸ್ ಬೆಂಕಿಗಾಹುತಿ

ಹಾಸನ: ಚಲಿಸುತ್ತಿದ್ದ ಖಾಸಗಿ ಬಸ್‌ನ ಟಯರ್ ಸ್ಫೋಟದಿಂದ ಇಡೀ ಬಸ್‌ಗೆ ಬೆಂಕಿ ಹೊತ್ತಿಕೊಂಡು ಸಂಪೂರ್ಣ ಸುಟ್ಟು ಕರಕಲಾಗಿರುವ ಘಟನೆ ತಾಲೂಕಿನ ಶಾಂತಿಗ್ರಾಮದ ಬಳಿ ಸಂಭವಿಸಿದೆ. ಚಾಲಕನ ಸಮಯಪ್ರಜ್ಞೆಯಿಂದಾಗಿ ಬಸ್‌ನಲ್ಲಿದ್ದ 36 ಪ್ರಯಾಣಿಕರು ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮಂಗಳೂರಿನಿಂದ ಬೆಂಗಳೂರಿಗೆ ತೆರಳುತ್ತಿದ್ದ ಖಾಸಗಿ ಬಸ್ ಶಾಂತಿಗ್ರಾಮದ ಬಳಿ ತಲುಪಿದಾಗ ಈ ದುರ್ಘಟನೆ ನಡೆದಿದೆ. ಬಸ್ ಅತಿವೇಗವಾಗಿ ಚಲಿಸುತ್ತಿದ್ದ ಹಿನ್ನೆಲೆಯಲ್ಲಿ ಏಕಾಏಕಿ ಟಯರ್ ಸ್ಫೋಟಗೊಂಡಿದೆ ಎನ್ನಲಾಗಿದೆ. ಟಯರ್ ಸ್ಫೋಟಗೊಳ್ಳುತ್ತಿದ್ದಂತೆ ಬಸ್‌ನಲ್ಲಿ ದಟ್ಟವಾದ ಹೊಗೆಯೊಂದಿಗೆ ಬೆಂಕಿ ಕಾಣಿಸಿಕೊಂಡಿದೆ. ಚಾಲಕನ ಸಮಯಪ್ರಜ್ಞೆ ಪ್ರಯಾಣಿಕರ ರಕ್ಷಣೆ ಬಸ್‌ನಲ್ಲಿ ಬೆಂಕಿ ಕಾಣಿಸಿಕೊಳ್ಳುತ್ತಿದ್ದಂತೆ ಎಚ್ಚೆತ್ತ ಚಾಲಕ ತಕ್ಷಣವೇ ರಸ್ತೆ ಬದಿಗೆ ವಾಹನವನ್ನು ನಿಲ್ಲಿಸಿದ್ದಾನೆ. ಅಪಾಯವನ್ನು ಅರಿತ ಪ್ರಯಾಣಿಕರು ಬಸ್ ನಿಲ್ಲಿಸುತ್ತಿದ್ದಂತೆ ತರಾತುರಿಯಲ್ಲಿ ಕೆಳಗಿಳಿದು ಓಡಿದ್ದಾರೆ. ಪ್ರಯಾಣಿಕರೆಲ್ಲರೂ ಕೆಳಗಿಳಿಯುತ್ತಿದ್ದಂತೆ ಬೆಂಕಿ ಇಡೀ ಬಸ್‌ಗೆ ಆವರಿಸಿದ್ದು, ಧಗಧಗನೆ ಹೊತ್ತಿ ಉರಿದಿದೆ.

ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರಾದರೂ, ತರಾತುರಿಯಲ್ಲಿ ಕೆಳಗಿಳಿದ ಕಾರಣ ಹಲವರ ಮೊಬೈಲ್ ಫೋನ್‌ಗಳು ಹಾಗೂ ಬೆಲೆಬಾಳುವ ಲಗೇಜ್‌ಗಳು ಬಸ್ ಒಳಗಡೆಯೇ ಉಳಿದು ಬೆಕಿಗಾಹುತಿಯಾಗಿವೆ. ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕದಳ ಘಟನೆಯ ಬಗ್ಗೆ ಮಾಹಿತಿ ತಿಳಿಯುತ್ತಿದ್ದಂತೆ ಅಗ್ನಿಶಾಮಕ ದಳದ ಸಿಬ್ಬಂದಿ ತಕ್ಷಣ ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸಿದರು. ಆದರೆ, ಅಷ್ಟರಲ್ಲಾಗಲೇ ಇಡೀ ಬಸ್ ಸಂಪೂರ್ಣವಾಗಿ ಸುಟ್ಟು ಕರಕಲಾಗಿತ್ತು. ತದನಂತರ ಪ್ರಯಾಣಿಕರನ್ನು ಪರ್ಯಾಯ ಬಸ್ ವ್ಯವಸ್ಥೆಯ ಮೂಲಕ ಬೆಂಗಳೂರಿಗೆ ಕಳುಹಿಸಿಕೊಡಲಾಯಿತು.

ಈ ಭೀಕರ ಅಪಘಾತದ ಕುರಿತು ಶಾಂತಿಗ್ರಾಮ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಶಿಕ್ಷಣ ನೀತಿ ಶಿಫಾರಸು ಅಧ್ಯಯನಕ್ಕೆ ಉಪಸಮಿತಿ

ಬೆಂಗಳೂರು: ರಾಜ್ಯ ಶಿಕ್ಷಣ ನೀತಿ ಆಯೋಗವು ಸಲ್ಲಿಸಿರುವ ಅಂತಿಮ ವರದಿಯ ಬಗ್ಗೆ ಪರಾಮರ್ಶಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪಸಮಿತಿಯನ್ನು ರಚಿಸಿ ರಾಜ್ಯ ಸರ್ಕಾರ ಆದೇಶಿಸಿದೆ. ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್, ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಎಚ್. ಸಿ. ಮಹದೇವಪ್ಪ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ್ ಹಾಗೂ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಅವರು ಸಚಿವ ಸಂಪುಟ ಉಪಸಮಿತಿಗೆ ಸದಸ್ಯರಾಗಿದ್ದಾರೆ ಎಂದು ಸಚಿವ ಸಂಪುಟ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ ಚಂದ್ರಶೇಖರ್ ಆರ್. ತಿಳಿಸಿದ್ದಾರೆ.

ರಾಹುಲ್, ಪ್ರಿಯಾಂಕಾ ವಿರುದ್ಧ ಕಾಂಗ್ರೆಸಿಗರ ಪೋಸ್ಟರ್ ಸಮರ :ಈಗ ಕೇಸ್ !

ತಿರುವನಂತಪುರಂ:ಕೇರಳ ವಿಧಾನಸಭಾ ಚುನಾವಣೆಯ ಬಳಿಕ ಮುಖ್ಯಮಂತ್ರಿ ಆಯ್ಕೆಯ ವೇಳೆ ತೆರೆಮರೆಯ ಕಸರತ್ತುಗಳು ಮತ್ತು ಕಾಂಗ್ರೆಸಿನೊಳಗಣ ಗೊಂದಲ ಈಗ ಹೊಸ ತಿರುವು ಪಡೆದಿದೆ.ವಿ.ಡಿ.ಸತೀಶನ್ ಆಯ್ಕೆ ಬದಲು ಗಾಂಧಿ ಕುಟುಂಬದ ಆಪ್ತ ಹಾಗೂ ಆಲಪ್ಪುಳ ಸಂಸದ ಕೆ.ಸಿ.ವೇಣುಗೋಪಾಲ್ ಅವರನ್ನು ಮುಖ್ಯಮಂತ್ರಿ ಗಾದಿಯಲ್ಲಿ ಕೂರಿಸುವ ಕಾಂಗ್ರೆಸ್ ಹೈಕಮಾಂಡ್ ಯತ್ನದ ವಿರುದ್ಧ ಕಾಂಗ್ರೆಸಿಗರು ವಯನಾಡಿನಲ್ಲಿ ನಡೆಸಿದ ಪೋಸ್ಟರ್ ಸಮರವೀಗ ಗಂಭೀರ ತಿರುವು ಪಡೆದಿದೆ. ರಾಹುಲ್ ಗಾಂಧಿ, ಪ್ರಿಯಾಂಕಾ ವಾದ್ರಾ, ಮಲ್ಲಿಕಾರ್ಜುನ ಖರ್ಗೆ ವಿರುದ್ಧದ ಪೋಸ್ಟರ್ ಗಳಿಗೆ ಸಂಬಂಧಿಸಿ ಈಗ ಕೇಸು ದಾಖಲಾಗಿದೆ. ಈ ಸಂಬಂಧ ಸ್ಥಳೀಯ ಕಾಂಗ್ರೆಸ್ ಶಾಸಕ ಟಿ.ಸಿದ್ದಿಕ್ ಕಲ್ಪೆಟ್ಟ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.ಈ ಪೋಸ್ಟರ್‌ಗಳನ್ನು ನಿಯೋಜಿತ ಮುಖ್ಯಮಂತ್ರಿ ವಿ.ಡಿ.ಸತೀಶನ್ ಬೆಂಬಲಿಗರು ದಾಖಲಿಸಿದ್ದರೆಂದು ಹೇಳಲಾಗಿದೆ.ಮೇ13ರಂದು ನೂತನ ಮುಖ್ಯಮಂತ್ರಿ ಆಯ್ಕೆ ಬಗ್ಗೆ ಗೊಂದಲ ಉಂಟಾಗುತ್ತಿದ್ದಂತೆಯೇ ವಯನಾಡು ಕಾಂಗ್ರೆಸ್ ಕಚೇರಿಯ ಆವರಣ ಗೋಡೆ ಮತ್ತು ಸಮೀಪದ ಜಾಗಗಳಲ್ಲಿ ಈ ಪೋಸ್ಟರ್‌ಗಳು ಕಂಡುಬಂದಿದ್ದವು. ಈ ಪೋಸ್ಟರ್‌ಗಳಲ್ಲಿ, 'ರಾಹುಲ್ ಮತ್ತು ಪ್ರಿಯಾಂಕಾ ವಯನಾಡನ್ನು ಮರೆತುಬಿಡಿ.ಮತ್ತೆ ಇಲ್ಲಿಂದ ನೀವು ಗೆಲ್ಲುವುದಿಲ್ಲ 'ಎಂದು ಬರೆಯಲಾಗಿತ್ತು.ಇನ್ನೊಂದು ಪೋಸ್ಟರ್‌ನಲ್ಲಿ 'ರಾಹುಲ್ , ಕೆ.ಸಿ.(ವೇಣುಗೋಪಾಲ್)ನಿಮ್ಮ ಬ್ಯಾಗ್ ತುಂಬಿರಬಹುದು, ಆದರೆ ಕೇರಳದ ಜನರು ಎಂದಿಗೂ ಕ್ಷಮಿಸುವುದಿಲ್ಲ 'ಎಂದು ಎಚ್ಚರಿಸಲಾಗಿತ್ತು.ಮತ್ತೊಂದು ಪೋಸ್ಟರ್‌ನಲ್ಲಿ ಕೆ.ಸಿ.ವೇಣುಗೋಪಾಲ್ ಅವರನ್ನು ಸಿಎಂ ಮಾಡಿದ್ದೇ ಆದರೆ ವಯನಾಡ್ ಮುಂದಿನ ಅಮೇಥಿಯಾಗಲಿದೆ ಎಂದು ಎಚ್ಚರಿಕೆ ನೀಡಲಾಗಿತ್ತು.ಈ ಪೋಸ್ಟರ್‌ಗಳ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಬಳಿಕ ಈ ಪೋಸ್ಟರ್‌ಗಳನ್ನು ತೆಗೆದುಹಾಕಲಾಗಿತ್ತು.

ಫಲಾನುಭವಿಗಳಿಗೆ ಸವಲತ್ತು, ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

ನಾಳೆ ಸಾರ್ಥಕ ಸೇವೆಗಳ ಸಮರ್ಪಣೆ ಕಾರ್ಯಕ್ರಮ

ಬೆಂಗಳೂರು: ಮೇ 20ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ 3 ವರ್ಷಗಳು ತುಂಬಲಿದ್ದು, ಈ ದಿನ ತುಮಕೂರಿನಲ್ಲಿ ರಾಜ್ಯದ ಜನತೆಗೆ ಆಗಿರುವ ಪ್ರಯೋಜನಗಳ ಸೌಲಭ್ಯ ವಿತರಣೆ ಕಾರ್ಯಕ್ರಮವಾಗಿ ಸಾರ್ಥಕ ಸೇವೆಗಳ ಸಮರ್ಪಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಆದರೆ ಕಾರಣಾಂತರಗಳಿಂದ ಅದಕ್ಕೆ ಮುನ್ನಾ ದಿನ ಮೇ 19ಕ್ಕೆ ಅಧಿಕೃತವಾಗಿ ಕಾರ್ಯಕ್ರಮ ನಿಗದಿಯಾಗಿದೆ.

ತುಮಕೂರಿನ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ಕಾರ್ಯಕ್ರಮ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಹತ್ತಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಹಲವಾರು ಯೋಜನೆಗಳನ್ನು ರಾಜ್ಯ ಸರ್ಕಾರ ಚಾಲನೆ ನೀಡಿ ಅವುಗಳನ್ನು ಆದ್ಯತಾ ಕಾರ್ಯಕ್ರಮಗಳಾಗಿ ತೆಗೆದುಕೊಂಡು ಸಮರ್ಪಕವಾಗಿ ಅನುಷ್ಠಾನಗೊಳಿಸಿದೆ. ಈ ವಿಷಯವನ್ನು ಜನಸಮುದಾಯದೊಂದಿಗೆ ಹಂಚಿಕೊಳ್ಳಬೇಕಿತ್ತು, ಮೇ 20ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ 2ನೇ ಅವಧಿಯ ಸರ್ಕಾರ ಅಧಿಕಾರಕ್ಕೆ ಬಂದು 3 ವರ್ಷ ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಆ ದಿನದಂದು ಕಾರ್ಯಕ್ರಮ ಆಯೋಜಿಸಲು ಆರಂಭದಲ್ಲಿ ನಿರ್ಧರಿಸಲಾಗಿತ್ತು. ಪ್ರಮುಖವಾಗಿ



> ಕಳೆದ ಒಂದೂವರೆ ವರ್ಷದಲ್ಲಿ ತುಮಕೂರು ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಅಭೂತಪೂರ್ವ ಅಭಿವೃದ್ಧಿ ಕೆಲಸಗಳು ನಡೆದಿದ್ದು, ಮೇ 19ರ ಕಾರ್ಯಕ್ರಮದಲ್ಲಿ ಇ-ಪೌತಿ ಖಾತೆ, ದರಖಾಸ್ತು ಪೋಡಿ, ಕಂದಾಯ ಗ್ರಾಮ ಹಕ್ಕುಪತ್ರಗಳು, ಪಿಂಚಣಿ ಸೇರಿದಂತೆ ಸುಮಾರು 1,52,492 ಫಲಾನುಭವಿಗಳಿಗೆ ಹಕ್ಕುಪತ್ರ ಮತ್ತು ಸೌಲಭ್ಯಗಳನ್ನು ವಿತರಿಸಲಾಗುತ್ತಿದೆ.
> ■ ಡಾ.ಜಿ.ಪರಮೇಶ್ವರ್, ಗೃಹ ಸಚಿವ

ಕಂದಾಯ ಇಲಾಖೆಯಲ್ಲಿ ಬಹುಕಾಲದಿಂದ ಜಮೀನು ವಾರಸುದಾರರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದರು. ತುಮಕೂರು ಜಿಲ್ಲೆಯಲ್ಲಿ ಆಗಿರುವ ಇತರೆ ಇಲಾಖೆಗಳ ಅಭಿವೃದ್ಧಿ ಸಂಬಂಧಿಸಿದಂತೆ ಸುಮಾರು 682 ಕೋಟಿ ರೂ.ಗಳ ಕಾಮಗಾರಿಗಳಿಗೆ ಅಡಿಗಲ್ಲು ಹಾಗೂ ಉದ್ಘಾಟನೆ ಕಾರ್ಯಕ್ರಮಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೆರವೇರಿಸಲಿದ್ದಾರೆ. ಇದು ಸರ್ಕಾರಿ ಕಾರ್ಯಕ್ರಮವಾಗಿದ್ದು, ಪಕ್ಷಾತೀತ ಕಾರ್ಯಕ್ರಮ ಆಗಿರಲಿದೆ. ಈ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಸಚಿವ ಸಂಪುಟದ ಎಲ್ಲಾ ಮಂತ್ರಿಗಳು, ವಿರೋಧ ಪಕ್ಷದ ನಾಯಕರು, ಸಂಸದರು, ಮುಖಂಡರು ಆಗಮಿಸಲಿದ್ದಾರೆ. ಕಾರ್ಯಕ್ರಮಕ್ಕೆ ತುಮಕೂರು ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ಸುಮಾರು 2 ಲಕ್ಷಕ್ಕೂ ಹೆಚ್ಚು ಜನ ಆಗಮಿಸಲಿದ್ದು, ಅವರಿಗೆ ಬಸ್ಸುಗಳ ವ್ಯವಸ್ಥೆ ಹಾಗೂ ಊಟದ ವ್ಯವಸ್ಥೆ ಮಾಡಲಾಗಿದೆ.

1 ದಿನ ಮುಂಚಿತವಾಗಿ ಕಾರ್ಯಕ್ರಮ

ಆದರೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೌಕರರು ಬೇಡಿಕೆ ಈಡೇರಿಸುವಂತೆ ಅಂದೇ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸುವುದಾಗಿ ತಿಳಿಸಿರುವ ಹಿನ್ನೆಲೆಯಲ್ಲಿ ಕಾರ್ಯಕ್ರಮಕ್ಕೆ ತೊಂದರೆಯಾಗದಂತೆ ಅದಕ್ಕೆ ಮುನ್ನಾ ದಿನ ಮೇ 19ರಂದೇ ಕಾರ್ಯಕ್ರಮ ಆಯೋಜಿಸಲು ಸಿಎಂಯವರು ಸೂಚಿಸಿದ ಹಿನ್ನೆಲೆಯಲ್ಲಿ ದಿನಾಂಕ ಮಾತ್ರ ಬದಲಾಗಿದೆ. ಉಳಿದಂತೆ ಎಲ್ಲ ಕಾರ್ಯಕ್ರಮಗಳು ಪೂರ್ವ ಯೋಜಿತದಂತೆ ನಡೆಯಲಿವೆ.

ಸರ್ಕಾರಕ್ಕೆ ಬದ್ಧತೆ ಇಲ್ಲ: ಕಾರಜೋಳ ಸುಪ್ರೀಂ ಆದೇಶ ಪಾಲಿಸಲಿ

ಕಲಬುರಗಿ: ದೇಶದಲ್ಲಿ ಒಕ್ಕೂಟ ವ್ಯವಸ್ಥೆ ಇರುವುದರಿಂದ ಕೇಂದ್ರ ಸರ್ಕಾರವಾಗಲಿ ಹಾಗೂ ಸುಪ್ರೀಂಕೋರ್ಟ್ ಆಗಲಿ ನೀಡಿರುವ ಆದೇಶಗಳನ್ನು ಪಾಲನೆ ಮಾಡುವುದು ರಾಜ್ಯ ಸರ್ಕಾರದ ಜವಾಬ್ದಾರಿ ಮತ್ತು ಕರ್ತವ್ಯವಾಗಿದೆ ಎಂದು ಸಂಸದ ಗೋವಿಂದ ಕಾರಜೋಳ ಹೇಳಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರ ಯಾವುದೇ ಕಾನೂನು ತಂದರೆ, ಅದು ಈ ನೆಲದ ಕಾನೂನಾಗಿರುತ್ತದೆ. ಅದೇ ರೀತಿ ಸುಪ್ರೀಂಕೋರ್ಟ್ ಯಾವುದೇ ಆದೇಶ ಮಾಡಿದ್ರೂ ಅದು ಈ ನೆಲದ ಆದೇಶವಾಗಿರುತ್ತದೆ. ಈ ನೆಲದ ಆದೇಶಗಳನ್ನು ಸ್ವೀಕರಿಸಿ ಗೌರವಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿರಬೇಕು ಎಂದರು. ಒಳಮೀಸಲಾತಿ ವಿಚಾರಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಆದೇಶವಿದೆ. ಆದರೂ ಸಿಎಂ ಸಿದ್ದರಾಮಯ್ಯ ಮಾಡಲಿಲ್ಲ. ಅವರದ್ದೆ ಸರ್ಕಾರ ನೇಮಿಸಿದ ಮೂರು ಮೂರು ಆಯೋಗ, ನ್ಯಾಯಮೂರ್ತಿ ಸದಾಶಿವ ಆಯೋಗ, ನಾಗಮೋಹನ್ ದಾಸ್ ಆಯೋಗ ಹಾಗೂ ಬಸವರಾಜ ಬೊಮ್ಮಾಯಿ ಆಡಳಿತದಲ್ಲಿನ ಮಾಧುಸ್ವಾಮಿ ಕಮಿಟಿ ವರದಿ ಯಾವುದನ್ನೂ ತೆಗೆದುಕೊಳ್ಳಲಿಲ್ಲ ಎಂದ ಅವರು, ಕಾಂಗ್ರೆಸ್ ಸರ್ಕಾರಕ್ಕೆ ಯಾವುದೇ ರೀತಿಯ ಬದ್ಧತೆಯಿಲ್ಲ ಎಂದು ಹೇಳಿದರು.

ಅಪರಾಧ ಪ್ರಕರಣಗಳು ಹೆಚ್ಚಳ

ಸಿಎಂ ಸಿದ್ದರಾಮಯ್ಯ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ದಲಿತರ ಮೇಲೆ ದೌರ್ಜನ್ಯ ಹೆಚ್ಚಾಗಿವೆ. ದಲಿತ ಮಹಿಳೆಯರ ಮೇಲಿನ ಅತ್ಯಾಚಾರ, ಕೊಲೆ ಪ್ರಕರಣ ಜಾಸ್ತಿಯಾಗಿವೆ. ದೇಶದಲ್ಲೇ ಅತಿ ಹೆಚ್ಚು ದಲಿತ ಮಹಿಳೆಯರ ಮೇಲೆ ಕೊಲೆ, ಅತ್ಯಾಚಾರ ಪ್ರಕರಣಗಳಲ್ಲಿ ಕರ್ನಾಟಕ ರಾಜ್ಯ ಮುಂಚೂಣಿಯಲ್ಲಿದೆ. ಅಹಿಂದ ನಾಯಕ ಎಂದು ಹೇಳಿಕೊಳ್ಳುವ ಸಿದ್ದರಾಮಯ್ಯನವರಿಂದಲೇ ದಲಿತರಿಗೆ ರಕ್ಷಣೆ ಕೊಡಲು ಸಾಧ್ಯವಾಗುತ್ತಿಲ್ಲ. ದಲಿತರ ಜನಸಂಖ್ಯೆಗೆ ಅನುಗುಣವಾಗಿ ಅನುದಾನ ಕೊಡುವುದಾಗಿ ಹೇಳಿದ ಸಿಎಂ ಸಿದ್ದರಾಮಯ್ಯ, ದಲಿತರಿಗಾಗಿ ಕಳೆದ ಮೂರು ವರ್ಷಗಳಲ್ಲಿ ಇಡಲಾದ 48 ಸಾವಿರ ಕೋಟಿ ಹಣವನ್ನು ಬೇರೆ ಉದ್ದೇಶಗಳಿಗೆ ಬಳಸಿದ್ದಾರೆ. ಈ ಹಣವನ್ನು ವಾಪಸ್ ಕೊಟ್ಟು ದಲಿತ ಮಕ್ಕಳ ಶಿಕ್ಷಣಕ್ಕೆ, ಉದ್ಯೋಗಕ್ಕೆ ಹಾಗೂ ಭೂ ಒಡೆತನದ ಯೋಜನೆಗೆ , ಶಾಲಾ ಕಟ್ಟಡಕ್ಕೆ ಉಪಯೋಗ ಮಾಡಲಿ ಎಂದು ಗೋವಿಂದ ಕಾರಜೋಳ ಒತ್ತಾಯಿಸಿದರು.

ವರಿಷ್ಠರ ತೀರ್ಮಾನಕ್ಕೆ ಬದ್ಧ: ಸಚಿವ ಈಶ್ವರ ಖಂಡ್ರೆ

ಮಂಗಳೂರು: ಸಚಿವ ಸಂಪುಟ ಪುನರ್‌ರಚನೆ ಮಾಡುವುದು ಮುಖ್ಯಮಂತ್ರಿ ಹಾಗೂ ಪಕ್ಷದ ವರಿಷ್ಠರ ಪರಮಾಧಿಕಾರ. ಯಾವುದೇ ಸಮಯದಲ್ಲಿ ಸಂಪುಟ ಪುನರ್‌ರಚನೆ ಮಾಡಬಹುದು ಅಥವಾ ಮಾಡದೆಯೂ ಇರಬಹುದು. ಏನೇ ತೀರ್ಮಾನ ಕೈಗೊಂಡರೂ ಅದಕ್ಕೆ ನಾವೆಲ್ಲರೂ ಬದ್ಧ. ನಮ್ಮಲ್ಲಿ ಯಾವುದೇ ರೀತಿಯ ಗೊಂದಲ ಇಲ್ಲ ಎಂದು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಹೇಳಿದರು.



ಕರ್ನಾಟಕ ಗೇರು ಅಭಿವೃದ್ಧಿ ನಿಗಮ ವತಿಯಿಂದ ನಗರದ ಕದ್ರಿಪಾರ್ಕ್‌ನಲ್ಲಿ ಏರ್ಪಡಿಸಿರುವ ಎರಡು ದಿನಗಳ ಗೇರು ಮೇಳಕ್ಕೆ ಚಾಲನೆ ನೀಡಿದ ವೇಳೆ ಸುದ್ದಿಗಾರರ ಜತೆ ಭಾನುವಾರ ಅವರು ಮಾತನಾಡಿದರು.

ರಾಜ್ಯ ಸರಕಾರ ಭದ್ರವಾಗಿದೆ. ಉತ್ತಮ ಆಡಳಿತ ನೀಡಿದ್ದೇವೆ. ಇನ್ನೂ ಎರಡು ವರ್ಷ ಉತ್ತಮ ಆಡಳಿತ ನೀಡುತ್ತೇವೆ. ಜನಪರ, ಜೀವಪರ ಆಡಳಿತ ನೀಡಿದ ಕಾರಣವೇ ನಾವು ಎಲ್ಲ ಉಪಚುನಾವಣೆಯಲ್ಲಿ ಗೆದ್ದಿದ್ದೇವೆ. ಮುಂದೆಯೂ ನಾವೇ ಅಧಿಕಾರಕ್ಕೆ ಬರುತ್ತೇವೆ ಎಂದರು. ನೀವು ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಖಂಡ್ರೆ, ನಾನು ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತ. ಶಿಸ್ತಿನ ಸಿಪಾಯಿ. ಯಾವುದೇ ಜವಾಬ್ದಾರಿ ನೀಡಿದರೂ ಸಮರ್ಥವಾಗಿ ನಿಭಾಯಿಸಿದ್ದೇನೆ. ಈಗ ಯಾವುದೇ ಹುದ್ದೆ ಖಾಲಿ ಇಲ್ಲ. ಹೀಗಾಗಿ ಪ್ರತಿಕ್ರಿಯೆ ನೀಡುವುದಿಲ್ಲ ಎಂದರು. ಗೇರು ಅಭಿವೃದ್ಧಿ ನಿಗಮದ 48 ವರ್ಷದ ಇತಿಹಾಸದಲ್ಲಿ ಮೊದಲ ಬಾರಿ ಗೇರು ಮೇಳ ಆಯೋಜಿಸಲಾಗಿದೆ. ಗೋಡಂಬಿ ಉತ್ಪಾದನೆ ದಿನೇ ದಿನೇ ಕುಸಿಯುತ್ತಿದೆ. ನಮ್ಮ ದೇಶದಲ್ಲಿ ಗೇರು ಉತ್ಪನ್ನಗಳಿಗೆ ಬೇಡಿಕೆ ಇದೆ. ಗೇರು ಬೆಳೆಗೆ ಪ್ರೋತ್ಸಾಹ ನೀಡಬೇಕು. ಗೇರು ಉತ್ಪನ್ನಗಳನ್ನು ವಿದೇಶದಿಂದ ಆಮದು ಮಾಡಿಕೊಂಡು ವಿದೇಶಿ ವಿನಿಮಯವೂ ನಷ್ಟವಾಗುತ್ತಿದೆ.

ಈ ಹಿನ್ನೆಲೆಯಲ್ಲಿ ನಿಗಮದ ವತಿಯಿಂದ ಗೇರು ಬೆಳೆಗೆ ಪ್ರೋತ್ಸಾಹ ನೀಡಲು ಗೇರು ಮೇಳ ಆಯೋಜಿಸಲಾಗಿದೆ ಎಂದರು.

ನಾಳೆ ಮೃಗಾಲಯ ಲೋಕಾರ್ಪಣೆ

ಬೆಂಗಳೂರು: ಕಲಬುರಗಿಯಲ್ಲಿ ಆಧುನೀಕರಿಸಲಾಗಿರುವ ನೂತನ ಮೃಗಾಲಯವನ್ನು ಮೇ 18ರಂದು ಲೋಕಾರ್ಪಣೆ ಮಾಡಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

ಚಿತ್ತಾಪುರ ತಾಲೂಕು ಮಾಡಬ್ಲೋಲ್‌ನ ಸುಮಾರು 23 ಎಕರೆ ಪ್ರದೇಶದಲ್ಲಿ ಅಭಿವೃದ್ಧಿ ಪಡಿಸಲಾಗಿರುವ ಈ ಮೃಗಾಲಯದಲ್ಲಿ 23 ಪ್ರತ್ಯೇಕ ಪ್ರದೇಶಗಳಿವೆ. ಹುಲಿ, ಸಿಂಹ, ಕರಡಿ, ಆಮೆ, ಮೊಸಳೆ, ಚುಕ್ಕೆ ಚಿಂಕೆ, ಚಿನ್ನದ ಬಣ್ಣದ ನರಿ, ಜೀಬ್ರಾ, ಲಂಗೂರ್ ಸೇರಿದಂತೆ ಹಲವು ಪ್ರಾಣಿಗಳು ಹಾಗೂ ವಿವಿಧ ಪ್ರಭೇದದ ಪಕ್ಷಿಗಳ ಸುಂದರ ಕೋಣೆಗಳನ್ನು ವಿನ್ಯಾಸಗೊಳಿಸಲಾಗಿದೆ.

ಚಿತ್ತಾಪುರದ ಶಾಸಕ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ ಖರ್ಗೆ ಅವರೂ ಈ ಮೃಗಾಲ ಯದ ಅಭಿವೃದ್ಧಿಗೆ ಆಸಕ್ತಿಯಿಂದ ಶ್ರಮಿಸಿದ್ದಾರೆ. ಈ ಮೃಗಾಲಯ ನಿರ್ಮಾಣಕ್ಕೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ 27.61 ಕೋಟಿ ರೂ., ಕರ್ನಾಟಕ ಮೃಗಾಲಯ ಪ್ರಾಧಿಕಾರದಿಂದ 6 ಕೋಟಿ ರೂ. ಒದಗಿಸಲಾಗಿದೆ. ಕರ್ನಾಟಕ ಅರಣ್ಯ ಇಲಾಖೆ 50 ಲಕ್ಷ ರೂ. ವೆಚ್ಚದಲ್ಲಿ ಮೃಗಾಲಯದಲ್ಲಿ ಹುಲ್ಲುಗಾವಲು, ವೃಕ್ಷಾರೋಪಣ ಕಾರ್ಯ ಮಾಡಿದೆ ಎಂದು ಸಚಿವರು ತಿಳಿಸಿದ್ದಾರೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಹಂಪಿಯಲ್ಲಿ ಈಗಾಗಲೇ ಮೃಗಾಲ ಯವಿದೆ. ಕಲಬುರಗಿಯಲ್ಲಿ ಸೋಮವಾರ ಉದ್ಘಾಟನೆಯಾಗಲಿರುವ ಮೃಗಾಲಯ ಹಲವು ದಶಕಗಳ ಬೇಡಿಕೆಯನ್ನು ಈಡೇರಿಸಿದೆ.

₹75 ಪ್ರವೇಶ ದರ ನಿಗದಿ

ಅರಣ್ಯ ಪ್ರದೇಶ ಕಡಿಮೆ ಇರುವ ಕಲಬುರಗಿ ಮತ್ತು ಕಲ್ಯಾಣ ಕರ್ನಾಟಕದ ಜನರಿಗೆ ವಿವಿಧ ಪ್ರಾಣಿಗಳನ್ನು ಒಟ್ಟಿಗೆ ನೋಡುವ ಅವಕಾಶ ಈ ಮೃಗಾಲಯದಲ್ಲಿ ಲಭಿಸಲಿದೆ. 12 ವರ್ಷ ವಯಸ್ಸು ಮೇಲ್ಪಟ್ಟವರಿಗೆ 75 ರೂ., 5ರಿಂದ 12 ವರ್ಷ ವಯಸ್ಸಿನ ಮಕ್ಕಳಿಗೆ 40 ರೂ. ಹಾಗೂ ಸರ್ಕಾರಿ ಶಾಲಾ ಮಕ್ಕಳಿಗೆ ತಲಾ 25 ರೂ. ನಿಗದಿ ಮಾಡಲಾಗಿದೆ. ಟಿಕೆಟ್‌ಗಳನ್ನು ಮೃಗಾಲಯದ ಕೌಂಟರ್‌ನಲ್ಲಿ ಪಡೆಯಬಹುದು. ಈ ಮೃಗಾಲಯದಲ್ಲಿ 50 ಕಾರು ಮತ್ತು 20 ದ್ವಿಚಕ್ರ ವಾಹನಗಳ ನಿಲುಗಡೆಗೆ ವ್ಯವಸ್ಥೆ ಕಲ್ಪಿಸಲಾಗಿದೆ ಎಂದೂ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಶಾಲಾ ಮಕ್ಕಳಿಗೆ ಮೃಗಾಲಯ ಭೇಟಿಯಿಂದ ವಿವಿಧ ವನ್ಯಜೀವಿಗಳ ಬಗ್ಗೆ ಮಾಹಿತಿ ದೊರಕುವುದರ ಜೊತೆಗೆ ವಿವಿಧ ಜಾತಿಯ ಸಸ್ಯ ಪ್ರಭೇದಗಳ ಪರಿಚಯವೂ ಆಗುತ್ತದೆ. ಇದು ಮಕ್ಕಳಲ್ಲಿ ಪ್ರಕೃತಿ ಪರಿಸರದ ಬಗ್ಗೆ ಪ್ರೀತಿ ಮೂಡಿಸುತ್ತದೆ ಎಂದು ಸಚಿವ ಈಶ್ವರ ಖಂಡ್ರೆ ಮಾಧ್ಯಮ ಪ್ರಕಟಣೆಯಲ್ಲಿ ಹೇಳಿದ್ದಾರೆ.

ಧಾರವಾಡದಲ್ಲಿ ಧಾರಾಕಾರ ಮಳೆಗೆ ಜನಜೀವನ ಅಸ್ತವ್ಯಸ್ತ

ಧಾರವಾಡ: ತಂಪಾದ ಹವಾಮಾನಕ್ಕೆ ಹೆಸರಾದ ಧಾರವಾಡ ಜಿಲ್ಲೆಯಲ್ಲಿ ಮಧ್ಯಾಹ್ನ ದಿಢೀರ್ ಹವಾಮಾನ ವೈಪರೀತ್ಯ ಉಂಟಾಗಿ, ಜೀವರಾಶಿಗೆ ತಂಪು ಎರೆಯುವ ಬದಲು ಜನಜೀವನವನ್ನೇ ಅಸ್ತವ್ಯಸ್ತಗೊಳಿಸುವ ಧಾರಾಕಾರ ಮಳೆ ಭಾನುವಾರ ಸುರಿದಿದೆ. ಸುಡು ಬಿಸಲಿನಿಂದ ಕಂಗಾಲಾಗಿದ್ದ ಧಾರವಾಡಿಗರಿಗೆ ಈ ಮಳೆ ಆರಂಭದಲ್ಲಿ ತಂಪು ನೀಡಿದರೂ, ಸುಮಾರು 1ಗಂಟೆಗೂ ಅಧಿಕ ಹೊತ್ತು ನಿರಂತರ ಸುರಿದ ಗುಡುಗು, ಮಿಂಚು ಹಾಗೂ ಬಿರುಗಾಳಿ ಮಿಶ್ರಿತ ಮಳೆಯು ಜನರಿಗೆ ಸಂಕಷ್ಟ ತಂದೊಡ್ಡಿತು. ಮಳೆಯಿಂದ ಚರಂಡಿಗಳು ತುಂಬಿ ನೀರು ರಸ್ತೆಯ ಮೇಲೆ ಹರಿಯಿತು. ನಗರದ ಕೋರ್ಟ್ ಸರ್ಕಲ್ ಹತ್ತಿರದ ರಸ್ತೆ ಜಲಾವೃತವಾಗಿ ವಾಹನ ಸಂಚಾರ ಸ್ಥಗಿತಗೊಂಡ ಪರಿಣಾಮ ಸವಾರರು ಪೇಚೆಗೆ ಸಿಲುಕಿದರು.

ಗದಗನಲ್ಲಿ ಗುಡುಗು, ಸಿಡಿಲುಸಹಿತ ಮಳೆ

ಗದಗ: ಗದಗ-ಬೆಟಗೇರಿ ಅವಳಿ ನಗರ ಸೇರಿದಂತೆ ಜಿಲ್ಲಾದ್ಯಂತ ಭಾನುವಾರ ಗುಡುಗು-ಸಿಡಿಲಿನ ಮಧ್ಯೆ ಇಡೀ ದಿನ ಧಾರಾಕಾರ ಮಳೆ ಸುರಿಯಿತು. ಪರಿಣಾಮ ರೈತರ ಮುಖದಲ್ಲಿ ಮಂದಹಾಸ ಮೂಡಿದೆ. ಜಿಲ್ಲೆಯ ಗಜೇಂದ್ರಗಡ, ರೋಣ, ಮುಂಡರಗಿ, ಶಿರಹಟ್ಟಿ ಸೇರಿದಂತೆ ವಿವಿಧೆಡೆ ಮಳೆ ಸುರಿತು. ಕೆಲವೆಡೆ ಮೋಡ ಕವಿದ ವಾತಾವರಣ ಜತೆಗೆ ಭರ್ಜರಿ ಮಳೆ ಸುರಿಯಿತು. ಮಳೆಯ ಪರಿಣಾಮ ತಗ್ಗು ಪ್ರದೇಶದಲ್ಲಿರುವ ರಸ್ತೆಗಳು ಜಲಾವೃತಗೊಂಡಿದ್ದವು.

ಸೇವೆಯ ಗಂಗೋತ್ರಿ-ಮಾಧವರಾವ್ ಪರಲ್ಕರ್

▸ ಗಿರಿಧರ್ ಉದ್ಯಾವರ



ಪ್ರಜ್ಞಾಹೀನ ಮಗುವಿನ ದೇಹದ ಮೇಲೆ ವೈದ್ಯರ ಬೆರಳುಗಳು ಚಲಿಸುತ್ತಿದ್ದಂತೆಲ್ಲ ಮಗುವಿನಲ್ಲಿಉಂಟಾಗುತ್ತಿದ್ದ ಚಲನೆಯನ್ನು ಕಂಡು ತಾಯಿಯ ಕಣ್ಣುಗಳಲ್ಲಿ ಸಂತಸದ ಹೊಳಪು ಹೆಚ್ಚುತ್ತಿತ್ತು. ಮಗನ ಚಿಕಿತ್ಸೆ ಗಾಗಿ ನೀರಿನಂತೆ ಹಣವನ್ನು ವ್ಯಯಿಸಿದ ನಂತರವೂ ಚೇತರಿಸಿಕೊಳ್ಳುವ ಯಾವುದೇ ಭರವಸೆ ಆ ತಾಯಿಗೆಇರಲಿಲ್ಲ. ಅಲ್ಲದೇ, ವೈದ್ಯ ಪರಲ್ಕರ್‌ರವರು ಶುಲ್ಕದ ರೂಪದಲ್ಲಿ ಒಂದು ರೂಪಾಯಿಯನ್ನೂ ಪಡೆದಿರ ಲಿಲ್ಲ. ಆದರೆ ಈ ಪವಾಡ ಪರಲ್ಕರರ ಕೈಗಳ ಮಸಾಜಿನಿಂದಾದದ್ದೋ ಅಥವಾ ಅವರಲ್ಲಿ ರಕ್ತಗತವಾಗಿರುವ ನಿಸ್ವಾರ್ಥ ಸೇವೆಯಿಂದಾದದ್ದೋ ತಿಳಿಯದು. ಗಂಭೀರ ಪಾರ್ಶ್ವವಾಯುವಿಗೆ ತುತ್ತಾಗಿದ್ದ ಆ ಮಗು 6 ಗಂಟೆಯೊಳಗೆ ಎದ್ದು ಕುಳಿತಿತ್ತು.ಅದೇ ಬಾಲಕ ಇಂದು ಮುಂಬಯಿನ ಅತ್ಯಂತ ಪ್ರತಿಷ್ಠಿತ ಚಾರ್ಟರ್ಡ್ ಅಕೌಂಟೆಂಟ್ಗಳಲ್ಲಿಒಬ್ಬನಾಗಿದ್ದಾನೆ.

ಸಿ. ಎ. ಕಂಚನ್ ನಾರಂಗ್ ರಂತಹ ಅದೆಷ್ಟೋ ರೋಗಿಗಳಿಗೆ ಮತ್ತು ಅವರ ಕುಟುಂಬದ ಸದಸ್ಯರ ಪಾಲಿಗೆ ಮಾಧವ್ ರಾವ್ಪರಲ್ಕರ್‌ರವರು ದೇವರೇ ಆಗಿದ್ದರು. ಡಾ.ಪರಲ್ಕರರು ಎಂತಹ ಪ್ರಚಾರಕರಾಗಿದ್ದರೆಂದರೆ ಅವರ ಅಮೂಲ್ಯವಾದ ಜೀವನ ಸೇವಾ ಗಂಗೋತ್ರಿಯೇ ಆಗಿತ್ತು. ಅದೆಷ್ಟೋ ರೋಗಿಗಳ ಮತ್ತು ಅವರ ಪರಿವಾರದವರ ಕಷ್ಟಗಳನ್ನು ಪರಿಹರಿಸಿದ್ದರು. ಡಾಕ್ಟರ್ ಪರಲ್ಕರರಿಂದ ಸ್ಥಾಪಿಸಲ್ಪಟ್ಟ ನಾನಾ ಪಾಲ್ಕರ್ ರುಗ್ಣ ಸೇವಾ ಸದನವು, ಮುಂಬೈನಲ್ಲಿ ಚಿಕಿತ್ಸೆ ಪಡೆಯುತ್ತಿರುವ ಬಡ ರೋಗಿಗಳಿಗೆ ಒಂದು ವರದಾನವೇ ಸರಿ.

ಸೇವಾಗಾಥ
ಕಥೆ-6

ರಾಷ್ಟ್ರೀಯ ಸ್ವಯಂಸೇವಕ

ಬಾಲ್ಯದಿಂದಲೇ ಸಂಘದ ಸ್ವಯಂಸೇವಕರಾಗಿದ್ದ ಮಾಧವರಾವ್ ಪರಲ್ಕರ್, ವಿದ್ಯಾರ್ಥಿಯಾಗಿದ್ದಾಗ ಕಲಿಕೆಯಲ್ಲಿ ಬುದ್ಧಿವಂತರಾಗಿದ್ದರು. 1947ರಲ್ಲಿ ಆಯುರ್ವೇದಚಿಕಿತ್ಸೆಯಲ್ಲಿಪದವಿ ಪೂರ್ಣಗೊಳಿಸಿ, ಕೆಲ ದಿನಗಳ ಕಾಲ ಕ್ಲಿನಿಕ್ ನಡೆಸಿದ ಅವರು ನಂತರ ಸಂಘದ ಪ್ರಚಾರಕರಾದರು. ಆ ದಿನಗಳಲ್ಲಿ ಅವರು ಬಾಂದ್ರಾದಿಂದ ವಿರಾರ್ ಮತ್ತು ಚೆಂಬೂರಿಗೆ ಸೈಕಲ್ಲಿನಲ್ಲೇ ಓಡಾಡುತ್ತಿದ್ದರು. ಅವರು ತಮ್ಮ ವಾಕ್ಚಾತುರ್ಯ ಮತ್ತು ಧೀಮಂತ ವ್ಯಕ್ತಿತ್ವದಿಂದಾಗಿ ಯುವಜನ ವಲಯದಲ್ಲಿ ಬಹಳ ಜನಪ್ರಿಯರಾಗಿದ್ದರು. ಇವರು ಹಲವಾರು ವರ್ಷಗಳ ಕಾಲ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಅಖಿಲ ಭಾರತೀಯ ಸಂಘಟನಾ ಕಾರ್ಯದರ್ಶಿಯಾಗಿದ್ದರು. ಆದಾಗ್ಯೂ ಅವರ ಮನಸ್ಸಿನಲ್ಲಿ ಬಡ ರೋಗಿಗಳ ಬಗೆಗಿನ ಸೇವಾ ಮನೋಭಾವವನ್ನು ಗುರುತಿಸಿದ ಅಂದಿನ ಸರಸಂಘಸಂಚಾಲಕರಾದ ಪರಮ ಪೂಜನೀಯ ಶ್ರೀ ಗುರೂಜಿ ಗೋಳವಲ್ಕರ್‌ರವರು, ಡಾಕ್ಟರ್ ಪರಲ್ಕರರಿಗೆ ರೋಗಿಗಳು ಮತ್ತು ಅವರ ಕುಟುಂಬದ ಸದಸ್ಯರ ಊಟ, ವಸತಿಯ ಸೌಲಭ್ಯಕ್ಕಾಗಿ ಒಂದು ಸೇವಾಸದನವನ್ನು ಸ್ಥಾಪಿಸುವ ಗುರುತರ ಜವಾಬ್ದಾರಿಯನ್ನು ನೀಡಿದರು. ಕ್ಯಾನ್ಸರ್ ಮತ್ತು ಟಿ. ಬಿ. ಯಂತಹ ಗಂಭೀರ ಕಾಯಿಲೆಗಳ ಚಿಕಿತ್ಸೆಯು ದುಬಾರಿ ಹಾಗೂ ದೀರ್ಘಕಾಲದ್ದಾಗಿರುತ್ತದೆ. ರೋಗಿಗಳಿಗೇನೋ ಆಸ್ಪತ್ರೆಯಲ್ಲಿಯೇ ಆಹಾರವನ್ನು ನೀಡಲಾಗುತ್ತದೆ. ಆದರೆ ಕುಟುಂಬದ ಸದಸ್ಯರಿಗೆ ಮುಂಬೈನಂಥ ಮಹಾನಗರದಲ್ಲಿ ವಸತಿ ಹಾಗೂ ಊಟದ ವೆಚ್ಚವನ್ನು ನಿಭಾಯಿಸುವುದು ಕಷ್ಟಸಾಧ್ಯ. ಇಂದು ಟಾಟಾ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆಯಿಂದ ಅರ್ಧ ಕಿಲೋಮೀಟರ್ ದೂರದಲ್ಲಿರುವ 10 ಅಂತಸ್ತಿನ 'ನಾನಾ ಪಾಲ್ಕರ್ ಸ್ಮಾರಕ ರುಗ್ಣ ಸೇವಾಸದನವ' ನೂರಾರು ರೋಗಿಗಳಿಗೆ ಹಾಗೂ ಕುಟುಂಬದವರಿಗೆ ಆಪದ್ಬಾಂಧವನೆನಿಸಿದೆ. 10 ರೂಪಾಯಿಗೆ ಊಟ ಮತ್ತು 1 ತಿಂಗಳವರೆಗೆ ಉಚಿತ ವಸತಿಯು ಬಡ ಪರಿವಾರದವರಿಗೆ ದೊಡ್ಡ ವರದಾನವೇ ಸರಿ.

ತಮ್ಮ ಅವಿರತ ಪರಿಶ್ರಮ ಹಾಗೂ ಸೇವಾಭಾವದ ಬಲದಿಂದ ಪರಲ್ಕರರು ಈ ಸೇವಾಸದನವನ್ನು ಕಟ್ಟಿ ಬೆಳೆಸಿದರು. ಪರಲ್ಕರರು ಸಮಾಜದ ಪ್ರತಿಯೊಂದು ವರ್ಗದವರ ಸಹಕಾರವನ್ನು ಪಡೆದರು. ಸಾಮಾನ್ಯ ಸ್ವಯಂಸೇವಕ ಕುಟುಂಬಗಳಿಂದ ವಾರ್ಷಿಕ 500 ರೂಪಾಯಿ ಪಡೆದರೆ, ಬಿರ್ಲಾ ಫೌಂಡೇಶನ್‌ನ ಮಾಲೀಕ ಆದಿತ್ಯ ಬಿರ್ಲಾರಿಂದ 75 ಲಕ್ಷ ಬೆಲೆಯುಳ್ಳ ಲಿಥೋಟ್ರೆಪ್ಸಿ ಯಂತ್ರವನ್ನು ದಾನವಾಗಿ ಪಡೆದರು. ಅಂತೆಯೇ, ಆಸ್ಪತ್ರೆಯಲ್ಲಿನ ಬಡ ರೋಗಿಗಳಿಗೆ ಉಚಿತವಾಗಿ ಲೇಜರ್ ಶಸ್ತ್ರಚಿಕಿತ್ಸೆ ಮಾಡಲೆಂದು ಡಾಕ್ಟರ್ ಅಜಿತ್ ಫಡಕೆ ಅವರನ್ನು ಮನವೊಲಿಸಿದರು.

ಪರಲ್ಕರ್ ರವರ ಸತತ ಪ್ರಯತ್ನದಿಂದ ಪ್ರಾರಂಭವಾದ ಗೋಖಲೆ ಡಯಾಲಿಸಿಸ್ ಕೇಂದ್ರದಲ್ಲಿ ಇಂದು 14 ಯಂತ್ರಗಳ ಸಹಾಯದಿಂದ ಹಲವು ಶಿಫ್ಟ್ ಗಳಲ್ಲಿ ಬಡ ರೋಗಿಗಳಿಗೆ ಉಚಿತವಾಗಿ ಡಯಾಲಿಸಿಸ್ ಸೇವೆ ನೀಡಲಾಗುತ್ತಿದೆ. ಸೇವಾ ಸದನದ ಟ್ರಸ್ಟಿ ಹಾಗೂ ಪರಲ್ಕರರ ಸಹೋದ್ಯೋಗಿಯಾಗಿದ್ದ ವಿವೇಕ್ ಛತ್ರೆಯವರ ಅಭಿಪ್ರಾಯದಂತೆ ವೈದ್ಯಕೀಯ ವಲಯದ ಪ್ರತಿಷ್ಠಿತ ವ್ಯಕ್ತಿಗಳಲ್ಲಿ ಪರಲ್ಕರ್ ಅಗ್ರಗಣ್ಯರು. ಪರಲ್ಕರರ ಅಪ್ರತಿಮ ಸೇವೆಯಿಂದ ಪ್ರಭಾವಿತರಾಗಿದ್ದ ಮುಂಬೈ ಆಸ್ಪತ್ರೆಯ ಡೀನ್ ಗೋಯಲ್ ರಿಂದ ಹಿಡಿದು ಎಲ್ಲಾ ವೈದ್ಯರೂ, ಸರಳವಾದ ಧೋತಿ ಕುರ್ತಾದಲ್ಲಿರುವ ಈ ಆಯುರ್ವೇದ ವೈದ್ಯರಿಗೆ ಎಲ್ಲಾ ರೀತಿಯ ಸಹಾಯ ಮಾಡಲು ಸದಾ ಸಿದ್ಧರಾಗಿರುತ್ತಿದ್ದರು.

ತುರ್ತು ಪರಿಸ್ಥಿತಿಯಲ್ಲಿ ಜೈಲಿನಲ್ಲಿದ್ದು, ಖೈದಿಗಳಿಗೆ ಯೋಗ ಕಲಿಸಿದ್ದು ಮಾತ್ರವಲ್ಲದೆ ಮಸಾಜ್ ನ ಅದ್ಭುತ ಕಲೆಯಿಂದ ಉಚಿತವಾಗಿ ನೂರಾರು ರೋಗಿಗಳನ್ನು ಗುಣಪಡಿಸಿದ್ದರು. 22 ಫೆಬ್ರವರಿ 2008ರಲ್ಲಿ, ತಮ್ಮ 81ನೇ ವಯಸ್ಸಿನಲ್ಲಿ, ಕೊನೆಯುಸಿರೆಳೆವ ಮುನ್ನ ಅವರು, ಪಾಲ್ಕರ್ ಸ್ಮೃತಿ ಸಂಸ್ಥಾನವನ್ನು ಏಳನೇ ಮಹಡಿಯವರೆಗೆ ಎತ್ತರಿಸಿದ್ದರು.

ಕಿರುಸುದ್ದಿ

ಡಾ. ಬಿ. ಆರ್. ಅಂಬೇಡ್ಕರ್ ಮಹಿಳಾ ಸಂಘದ ವತಿಯಿಂದ ಸ್ವಚ್ಛತಾ ಅಭಿಯಾನ

ಬೈಂದೂರು: ಇಲ್ಲಿನ ಡಾ. ಬಿ. ಆರ್. ಅಂಬೇಡ್ಕರ್ ಮಹಿಳಾ ಸಂಘದ ವತಿಯಿಂದ ಭಾನುವಾರ ನಗರದ ವಿವಿಧ ಪ್ರಮುಖ ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತಾ ಅಭಿಯಾನ ನಡೆಯಿತು. ತಾಲೂಕು ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ವಾದ ಇದರ ಸಂಚಾಲಕ ಶಿವರಾಜ್ ಬೈಂದೂರು, ಜಿಲ್ಲಾ ಮುಖಂಡ ಸುರೇಶ್ ಬಾರ್ಕೂರು ಹಾಗೂ ಅಂಬೇಡ್ಕರ್ ಯುವಕ ಸಂಘದ ದಯಾನಂದ ಪಿ. ಅವರು ಜಂಟಿಯಾಗಿ ಚಾಲನೆ ನೀಡಿ, ಶುಭ ಹಾರೈಸಿದರು.

ಬೈಂದೂರಿನ ರತ್ತುಬಾಯಿ ಜನತಾ ಪ್ರೌಢ ಶಾಲಾ ವಠಾರದಿಂದ ಆರಂಭಗೊಂಡ ಈ ಸ್ವಚ್ಛತಾ ಅಭಿಯಾನವು ಪ್ರಮುಖ ರಸ್ತೆಯ ಮೂಲಕ ಬಸ್‌ನಿಲ್ದಾಣದವರೆಗೆ ಹಾಗೂ ತಹಶೀಲ್ದಾರ್ ಕಚೇರಿಯ ಆವರಣದಾದ್ಯಂತ ನಡೆಯಿತು. ಸಂಘದ ಸದಸ್ಯರು ಶ್ರಮದಾನದ ಮೂಲಕ ಸಾರ್ವಜನಿಕ ಪ್ರದೇಶವನ್ನು ಸ್ವಚ್ಛಗೊಳಿಸುವ ಮೂಲಕ ಪರಿಸರ ಜಾಗೃತಿ ಮೂಡಿಸಿದರು. ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಮಹಿಳಾ ಒಕ್ಕೂಟದ ಸದಸ್ಯೆ ಗೀತಾ ಎಸ್., ಬೈಂದೂರು ತಾಲೂಕು ಮಹಿಳಾ ಒಕ್ಕೂಟದ ಅಧ್ಯಕ್ಷೆ ವಿನಯಾ ಹಾಗೂ ಡಾ. ಬಿ. ಆರ್. ಅಂಬೇಡ್ಕರ್ ಮಹಿಳಾ ಸಂಘದ ಅಧ್ಯಕ್ಷೆ ಸುಶೀಲಾ ಉಪಸ್ಥಿತರಿದ್ದರು. ಸಂಘಟನೆಯ ಪದಾಧಿಕಾರಿಗಳು, ದಲಿತ ಸಂಘರ್ಷ ಸಮಿತಿಯ ಮುಖಂಡರು ಹಾಗೂ ಅಂಬೇಡ್ಕರ್ ಮಹಿಳಾ ಸಂಘದ ಆಸಕ್ತ ಸದಸ್ಯರು ಶ್ರಮದಾನವನ್ನು ಯಶಸ್ವಿಗೊಳಿಸಿದರು.

ಕೆ.ಪಿ.ಟಿ- ಪ್ರಥಮ ಸೆಮಿಸ್ಟರ್ ಡಿಪ್ಲೊಮಾ ಕೋರ್ಸ್ ಸೀಟು ಹಂಚಿಕೆ

ಮಂಗಳೂರು: ಕರ್ನಾಟಕ (ಸರ್ಕಾರಿ) ಪಾಲಿಟೆಕ್ನಿಕ್‌ನಲ್ಲಿ 2026 ನೇ ಸಾಲಿನಲ್ಲಿ ಪ್ರಥಮ ಸೆಮಿಸ್ಟರ್ ಇಂಜಿನಿಯರಿಂಗ್ ಡಿಪ್ಲೊಮಾ ಪೂರ್ಣಾವಧಿಯ ಕೋರ್ಸ್‌ಗಳ ಪ್ರವೇಶಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅಭ್ಯರ್ಥಿಗಳು ನೀಡಿರುವ ಆದ್ಯತೆ ಮತ್ತು ಮೆರಿಟ್ ಹಾಗೂ ರೋಷ್ಟರ್‌ಗನುಗುಣವಾಗಿ ಆಫ್‌ಲೈನ್ ಮೂಲಕ ಸೀಟು ಹಂಚಿಕೆ ಮಾಡಲಾಗುತ್ತದೆ. ಅರ್ಹ ಆಸಕ್ತ ಅಭ್ಯರ್ಥಿಗಳು ಈ ಸಂಸ್ಥೆಯಲ್ಲಿ ಸೂಕ್ತ ಮೂಲ ದಾಖಲೆಗಳೊಂದಿಗೆ ಪ್ರವೇಶ ಪಡೆಯಬಹುದು. ಡ್ರಾಫ್ಟ್ ಮೆರಿಟ್ ಪಟ್ಟಿ ಮೇ 25 ರಂದು ಸಂಜೆ 5 ಗಂಟೆಗೆ ಹಾಗೂ ಅಂತಿಮ ಮೆರಿಟ್ ಪಟ್ಟಿ ಮೇ 26 ರಂದು ಸಂಜೆ 5 ಗಂಟೆಗೆ ಪ್ರಕಟಣೆ, ವಿಶೇಷ ಮೀಸಲಾತಿ ಕೌನ್ಸೆಲಿಂಗ್, ಸಂಜೆ ಪಾಳಿ ಪ್ರವೇಶದ ಕೌನ್ಸೆಲಿಂಗ್‌ಮೇ 27 ರಂದು ಬೆಳಿಗ್ಗೆ 8 ರಿಂದ ನಡೆಯಲಿದೆ. ಪ್ರಥಮ ಸುತ್ತಿನ ಕೌನ್ಸೆಲಿಂಗ್ ಮೇ 29 ರಿಂದ ಜೂನ್ 6 ರವರೆಗೆ, ದ್ವಿತೀಯ ಸುತ್ತಿನ ಕೌನ್ಸೆಲಿಂಗ್ ಜೂನ್ 2 ರಿಂದ 3 ರವರೆಗೆ ಮತ್ತು ಅಂತಿಮ ಸುತ್ತಿನ ಕೌನ್ಸೆಲಿಂಗ್ ಜೂನ್ 4 ರಿಂದ 5 ರವರೆಗೆ ನಡೆಯಲಿದೆ.ಎಲ್ಲಾ ಸುತ್ತಿನ ಕೌನ್ಸಿಲಿಂಗ್ ಮುಗಿದ ನಂತರ ಭರ್ತಿಯಾಗದ ಉಳಿಕೆ ಸೀಟುಗಳನ್ನು ಪ್ರಾಂಶುಪಾಲರ ಹಂತದಲ್ಲಿಯೇ ಆಫ್ ಲೈನ್ ಮೂಲಕ ಮೆರಿಟ್ ಮತ್ತು ರೋಷ್ಟರ್‌ಗನುಗುಣವಾಗಿ ಮೇಲೆ ತಿಳಿಸಿದ ಹಂತಗಳನ್ನು ಪುನರಾವರ್ತಿಸಿ ಸೀಟು ಹಂಚಿಕೆ ಮಾಡಲು ಜೂನ್ 6 ಪ್ರಾರಂಭದಿನ ಮತ್ತು ಜೂನ್ 13 ಅಂತಿಮ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ಇಲಾಖೆಯ ವೆಬ್‌ಸೈಟ್ ಅಥವಾ ಕರ್ನಾಟಕ (ಸರ್ಕಾರಿ) ಪಾಲಿಟೆಕ್ನಿಕ್ ಮಂಗಳೂರು ಕಛೇರಿಯ ದೂರವಾಣಿ ಸಂಖ್ಯೆ: 0824-2211636/ 3516910 ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ಸಂಸ್ಥೆಯ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮನೆಯೊಳಗೆ ಶವ ಪತ್ತೆ

ಕಾಸರಗೋಡು: ಮಾಂಜಾಡ್ ಅಣೆಂಙ ಬಳಿಯ ಕಾಯಲಿಂಕಾಲ್ ನಿವಾಸಿ ಪಿ.ಮಧುಸೂದನನ್ (47) ಎಂಬವರ ಮೃತದೇಹ ಮನೆಯೊಳಗೆ ನೇಣುಬಿಗಿದು ಆತ್ಮಹತ್ಯೆಗೈದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಶನಿವಾರ ಮುಂಜಾನೆ ಮೃತದೇಹ ಗೋಚರಿಸಿದೆ. ಅವರು ಚಾಲಕರಾಗಿ ದುಡಿಯುತ್ತಿದ್ದರು. ಘಟನೆ ಬಗ್ಗೆ ಮೇಲ್ಪರಂಬ ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿದ್ದಾರೆ. ಮೃತರು ಸಹೋದರ ಸುಧಾಕರನ್, ಸಹೋದರಿಯರಾದ ಬೇಬಿ, ಬಿಂದು ಅವರನ್ನು ಅಗಲಿದ್ದಾರೆ.

ಸ್ವಚ್ಛತಾ ಅಭಿಯಾನ

ಕೋಟ: ಇಲ್ಲಿನ ಪಾಂಡೇಶ್ವರ ಗ್ರಾಮಪಂಚಾಯತ್ ವ್ಯಾಪ್ತಿಯಲ್ಲಿ ಜಿಲ್ಲಾಡಳಿತ ನಿರ್ದೇಶನದ ಮೇರೆಗೆ ಪಂಚಾಯತ್ ವ್ಯಾಪ್ತಿಯ ವಿವಿಧ ರಸ್ತೆ ರಾಷ್ಟ್ರೀಯ ಹೆದ್ದಾರಿ ಸ್ವಚ್ಛತಾ ಅಭಿಯಾನ ಇತ್ತೀಚಿಗೆ ಜರಗಿತು. ಪಾಂಡೇಶ್ವರ ಗ್ರಾಮಪಂಚಾಯತ್ ಪಿಡಿಓ ವಂದನಾ ,ಎಸ್ ಎಲ್ ಆರ್ ಎಂ ಘಟಕ,ಪಂಚಾಯತ್ ಸಿಬ್ಬಂದಿ ವರ್ಗ ಈ ಕಾರ್ಯದಲ್ಲಿ ಕೈಜೋಡಿಸಿಕೊಂಡರು. ಪಾಂಡೇಶ್ವರ ಗ್ರಾಮಪಂಚಾಯತ್ ವಿವಿಧ ರಸ್ತೆ ಒಳರಸ್ತೆ ಸೇರಿದಂತೆ ವಿವಿಧ ವ್ಯಾಪ್ತಿಯಲ್ಲಿ ಕಸ ಎಸೆದವರಿಗೆ 5000 ರೂ ದಂಡ ಹಾಗೂ ಅಲ್ಲಲ್ಲಿ ಸಿಸಿ ಕ್ಯಾಮರಗಳ ಕಣ್ಗಾಲು ಇರಿಸಲಾಗಿದೆ ಎಂದು ಪಂಚಾಯತ್ ಪ್ರಕಟಣೆಯಲ್ಲಿ ತಿಳಿಸಿದೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ದಿ। ಸುಬ್ಬು ಸೇರಿಗಾರ್ ಸ್ಮರಣಾರ್ಥ ಪತ್ನಿ, ಮಕ್ಕಳು, ಶೇಡಿಗುಳಿ, ಕಟೀಲು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
2. ಮೋನಪ್ಪ ಪೂಜಾರಿ, ಅಂಗಡಿಮನೆ, ಬಿಲ್ಲುಗುಡ್ಡೆ ರೋಡ್, ಮೂಡು ಮಾರ್ನಾಡು.
3. ಶಶಿಕಲಾ ಶೆಟ್ಟಿ, ಕಲ್ಲತಡಮೆ ಹೌಸ್, ಪರಂಗಿಪೇಟೆ, ಬಂಟ್ವಾಳ (ತಾ) – ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
4. ಸಾವಿತ್ರಿ, 'ಗಣೇಶ', ಮಜಲು ಹೌಸ್, ಗೋಳ್ತಮಜಲು, ಕಲ್ಲಡ್ಕ, ಬಂಟ್ವಾಳ – ಕಟೀಲು ಪಿ.ಯು. ಕಾಲೇಜ್ ವಠಾರ.
5. ಮೀನಾಕ್ಷಿ ಬಿ. ಶೆಟ್ಟಿ, ಮಕ್ಕಳು, ಅಳಿಯ, ಯಳಂಗೂರು ಹೌಸ್, ಮೂಡುಶೆಡ್ಡೆ – ಕಟೀಲು ಸಾನಿಧ್ಯ ಹಾಲ್‌ನಲ್ಲಿ.
6. ತಿಮ್ಮಪ್ಪ ಪೂಜಾರಿ, 'ಶ್ರೀ ದುರ್ಗಾ', ಪಡ್ರೆ, ಶ್ರೀನಿವಾಸ ನಗರ, ಸುರತ್ಕಲ್ಲು – ಕಟೀಲು ಅಜಾರು ಬಿಲ್ಲವ ಸಂಘದ ವಠಾರದಲ್ಲಿ.
7. ಸದಾನಂದ ಕೋಟ್ಯಾನ್, ಶ್ರೀ ಕ್ಷೇತ್ರ ಗುಡ್ಡೆದ ಮೇಲು ದರ್ಬಾರು, ಮೂಡು ಮಾರ್ನಾಡು.

ಶ್ರೀ ಧರ್ಮಸ್ಥಳ ಮೇಳ
ಕೊಡಪಾಡಿಯಲ್ಲಿ
ಶ್ರೀ ಕೇಶವ ಗಾಣಿಗ S/o. ನರಸಿಂಹ ಗಾಣಿಗ, ಆನಂದ ನಿಲಯ, ಗುಡ್ಡಿಮನೆ

ಶ್ರೀ ಹನುಮಗಿರಿ ಮೇಳ
ಮೈಸೂರಿನಲ್ಲಿ

ಶ್ರೀ ಪಾವಂಜೆ ಮೇಳ
ನಾಗವೃಜ ಕ್ಷೇತ್ರ ಪಾವಂಜೆಯಲ್ಲಿ
ಕೃಷ್ಣಸ್ತು ಭಗವಾನ ಸ್ವಯಂ



ಎಂಆರ್‌ಪಿಎಲ್‌ನ ಸಿಎಸ್‌ಆರ್ ನಿಧಿಯಿಂದ ಆರೋಗ್ಯ ಇಲಾಖೆಗೆ ನೀಡಲಾದ ವಾಹನವನ್ನು ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಆರ್.ಹೆಬ್ಬಾಳಕರ್ ಶನಿವಾರ ಮಣಿಪಾಲ ರಜತಾದ್ರಿಯ ಜಿಲ್ಲಾ ಪಂಚಾಯತ್ ಆವರಣದಲ್ಲಿ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಕರಾವಳಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಂ.ಎ. ಗಫೂರ್, ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ., ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರತೀಕ್ ಬಾಯಲ್, ಡಿಎಚ್‌ಓ ಡಾ.ಬಸವರಾಜ್ ಹುಬ್ಬಳ್ಳಿ, ಎಂಆರ್‌ಪಿಎಲ್ ಸಂಸ್ಥೆಯ ಚೀಫ್ ಜನರಲ್ ಮ್ಯಾನೇಜರ್ ಬಿ.ಪ್ರಶಾಂತ್ ಬಾಳಿಗ ಮೊದಲಾದವರು ಉಪಸ್ಥಿತರಿದ್ದರು.

ವಿರಾಜಪೇಟೆ ಬಿಜೆಪಿ ತೀವ್ರ ಖಂಡನೆ

ಸರಕಾರ ಹಿಜಾಬ್ ರಾಜಕಾರಣಕ್ಕಿಳಿದಿದೆ

ಮಡಿಕೇರಿ: ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗದ ರಾಜ್ಯ ಕಾಂಗ್ರೆಸ್ ಸರಕಾರ ವಿದ್ಯಾರ್ಥಿಗಳಿಗೆ ಸಮಾನತೆಯ ಪಾಠ ಮಾಡುವ ಬದಲು ಹಿಜಾಬ್ ರಾಜಕಾರಣದ ಮೂಲಕ ಸಮಾಜದಲ್ಲಿ ಒಡಕು ಮೂಡಿಸುವ ಪ್ರಯತ್ನ ಮಾಡುತ್ತಿದೆ ಎಂದು ವಿರಾಜಪೇಟೆ ಬಿಜೆಪಿ ಮಂಡಲದ ವಕ್ತಾರ ಚೆಪ್ಪುಡಿರ ರಾಕೇಶ್ ದೇವಯ್ಯ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು ಅಭಿವೃದ್ಧಿ ಶೂನ್ಯ ರಾಜ್ಯ ಸರಕಾರ ರಾಜಕೀಯ ಲಾಭಕ್ಕಾಗಿ ವಿದ್ಯಾರ್ಥಿಗಳಲ್ಲಿ ಅಸಮಾನತೆ ಮೂಡಿಸುತ್ತಿದೆ. ಸಮವಸ್ತ್ರ ಮತ್ತು ಸಮಾನತೆಯ ಅರಿವಿಲ್ಲದ ಕಾಂಗ್ರೆಸ್ ಧರ್ಮ ಧರ್ಮಗಳ ನಡುವೆ ಕಂದಕ ಸೃಷ್ಟಿಸುತ್ತಿದೆ. ಒಂದು ಧರ್ಮದವರನ್ನು ಓಲೈಸಿಕೊಳ್ಳುವ ಭರದಲ್ಲಿ ಮತ್ತೊಂದು ಧರ್ಮದವರ ಮೇಲೆ ಗದಾ ಪ್ರಹಾರ ಮಾಡುತ್ತಿದೆ. ವಿದ್ಯಾರ್ಥಿಗಳಲ್ಲಿ ಸಮಾನತೆ ಮೂಡಿಸಲಾಗದವರು ಸಮಾಜದಲ್ಲಿ ಐಕ್ಯತೆ ಕಾಪಾಡುವ ಪಾಠ ಮಾಡುತ್ತಿದ್ದಾರೆ ಎಂದು ವ್ಯಂಗ್ಯವಾಡಿದ್ದಾರೆ.

ಕಾಂಗ್ರೆಸ್ ಸರಕಾರದ ಹಿಜಾಬ್ ಅನುಮತಿಯ ನಿಲುವು ಒಡೆದು ಆಳುವ ನೀತಿ ಎನ್ನುವುದು ಮತ್ತೊಮ್ಮೆ ರಾಜ್ಯದ ಜನತೆಗೆ ಸ್ಪಷ್ಟವಾಗಿದೆ. ಕಾಂಗ್ರೆಸ್ ಪಕ್ಷದಲ್ಲಿರುವ ಹಿಂದೂ ಕಾರ್ಯಕರ್ತರು ಮೌನಕ್ಕೆ ಶರಣಾಗಿರುವುದು ದುರದೃಷ್ಟಕರ. 'ಸಬ್ ಕಾ ಸಾತ್ ಸಬ್ ಕಾ ವಿಕಾಸ್' ಪರಿಕಲ್ಪನೆಯ ಬಿಜೆಪಿಯಿಂದ ಮಾತ್ರ ಈ ದೇಶದಲ್ಲಿ ಸಮಾನತೆ ನೆಲೆಸಲು ಸಾಧ್ಯ ಎನ್ನುವುದನ್ನು ಎಲ್ಲಾ ಧರ್ಮದವರು ಅರ್ಥ ಮಾಡಿಕೊಳ್ಳಬೇಕಾಗಿದೆ ಎಂದು ತಿಳಿಸಿದ್ದಾರೆ.

ಕಾಂಗ್ರೆಸ್‌ನ ಈ ನಿಲುವೇ ಆ ಪಕ್ಷಕ್ಕೆ ಮಾರಕವಾಗಿದ್ದು, ದೇಶದ ಎಲ್ಲಾ ಭಾಗಗಳಲ್ಲೂ ವಿನಾಶದಂಚಿನಲ್ಲಿದೆ. ಮುಂದಿನ ದಿನಗಳಲ್ಲಿ ಕರ್ನಾಟಕ ಕೂಡ ಕಾಂಗ್ರೆಸ್ ಮುಕ್ತವಾಗಲಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಒಂದು ಧರ್ಮದವರ ಓಲೈಕೆಗಾಗಿ ಹಿಂದೂಗಳ ಹಕ್ಕನ್ನು ಕಸಿದುಕೊಳ್ಳುವ ಪ್ರಯತ್ನಕ್ಕೆ ರಾಜ್ಯ ಸರಕಾರ ಮುಂದಾದರೆ ಪರಿಣಾಮವನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿರುವ ರಾಕೇಶ್ ದೇವಯ್ಯ, ಹಿಜಾಬ್ ಧರಿಸಲು ನೀಡಿರುವ ಅನುಮತಿಯನ್ನು ತಕ್ಷಣ ಹಿಂಪಡೆಯಬೇಕು ಎಂದು ಆಗ್ರಹಿಸಿದ್ದಾರೆ.

ನೆಲ್ಯಾಡಿಯಲ್ಲಿ ಕೊನೆಗೂ ಅಂತಿಮ ಹಂತ ತಲುಪಿದ ಹೆದ್ದಾರಿ ಅಗಲೀಕರಣ ಕಾಮಗಾರಿ

ಮೇಲ್ಸೇತುವೆಯಲ್ಲಿ ವಾಹನ ಸಂಚಾರ ಆರಂಭ

ಉಪ್ಪಿನಂಗಡಿ: ರಾಜಕೀಯ ಅಪ್ರಬುದ್ಧತೆಯ ಕಾರಣದಿಂದ ನೆನೆಗುದಿಗೆ ಬಿದ್ದಿದ್ದ ನೆಲ್ಯಾಡಿ ಪೇಟೆಯಲ್ಲಿನ ಎತ್ತರಿಸಿದ ರಸ್ತೆಯ ಕಾಮಗಾರಿ ಅಂತಿಮ ಹಂತಕ್ಕೆ ತಲುಪಿದ್ದು 1 ಬದಿ ವಾಹನ ಸಂಚಾರ ಆರಂಭಗೊಂಡಿದೆ. ಪ್ರಸಕ್ತ ಮಂಗಳೂರಿನಿಂದ ಬೆಂಗಳೂರು ಕಡೆಗೆ ಓಡಾಟ ನಡೆಸುವ ವಾಹನಗಳ ಸಂಚಾರಕ್ಕೆ ಮೇಲ್ಸೇತುವೆಯಲ್ಲಿ ಅವಕಾಶ ಮಾಡಿಕೊಡಲಾಗಿದೆ.

ರಾಷ್ಟ್ರೀಯ ಹೆದ್ದಾರಿ 75ರ ಅಡ್ಡಹೊಳೆ-ಬಿಸಿರೋಡು ನಡುವೆ ಚತುಷ್ಪಥ ರಸ್ತೆ ನಿರ್ಮಾಣ ಕಾಮಗಾರಿ ನಡೆಯುತ್ತಿದ್ದು ಈ ಪೈಕಿ ಪೆರಿಯಶಾಂತಿಯಿಂದ ಬಿ.ಸಿ.ರೋಡು ತನಕ ಹೆದ್ದಾರಿ ನಿರ್ಮಾಣ ಕಾಮಗಾರಿಯನ್ನು ಕೆಎನ್‌ಆರ್ ಕಂಪನಿ ನಿರ್ವಹಿಸುತ್ತಿದೆ. ಬಿ.ಸಿ.ರೋಡು-ಪೆರಿಯಶಾಂತಿ ನಡುವಿನ ಬಹುತೇಕ ಕಡೆ ಮೇಲ್ಸೇತುವೆ ಕಾಮಗಾರಿ ಪೂರ್ಣಗೊಂಡು ವಾಹನ ಓಡಾಟ ನಡೆಸುತ್ತಿದ್ದರೂ ನೆಲ್ಯಾಡಿಯಲ್ಲಿ ವೇಗ ಪಡೆದಿದ್ದ ಎತ್ತರಿಸಿದ ರಸ್ತೆಯ ನಿರ್ಮಾಣ ಕಾರ್ಯ ಸ್ಥಳೀಯರ ಮೇಲ್ಸೇತುವೆ ನಿರ್ಮಾಣದ ಬೇಡಿಕೆಯಿಂದಾಗಿ ಸ್ಥಗಿತಗೊಂಡಿತ್ತು. ಎತ್ತರಿಸಿದ ರಸ್ತೆ ನಿರ್ಮಾಣವಾಗುತ್ತಿದ್ದಂತೆಯೇ ರಸ್ತೆ ಮಧ್ಯೆ ಕೋಟೆ ನಿರ್ಮಾಣವಾದ ಭಾವನೆ ಮೂಡಿ ರಸ್ತೆಯ ಒಂದು ಕಡೆಯ ಕಟ್ಟಡಗಳು ಇನ್ನೊಂದು ಕಡೆಗೆ ಕಾಣಿಸದೇ ಹೋದಾಗ ನಮಗೆ ಕಲ್ಲಡ್ಕ ಮಾದರಿಯ ಮೇಲ್ಸೇತುವೆಯೇ ಬೇಕೆಂಬ ಬೇಡಿಕೆ ಸ್ಥಳೀಯರಿಂದ ವ್ಯಕ್ತವಾಗಿತ್ತು. ಈ ಬೇಡಿಕೆಯ ಅನುಷ್ಠಾನ ಸಾಧ್ಯತೆಯ ಬಗ್ಗೆ ಯಾವುದೇ ನಿಖರತೆ ಇಲ್ಲದೆ ಅಂದಿನ ರಾಜಕೀಯ ಮುಖಂಡರು ಭರವಸೆ ನೀಡುತ್ತಿದ್ದರಿಂದ ಸ್ಥಳೀಯರು ತಮ್ಮ ಬೇಡಿಕೆಯ ಈಡೇರಿಕೆಗೆ ಪಟ್ಟು ಹಿಡಿದಿದ್ದರು. ತನ್ಮೂಲಕ 2 ವರ್ಷ ಕಾಮಗಾರಿ ಸ್ಥಗಿತವಾಗಿತ್ತು.



ಆದರೆ ಪ್ರಸಕ್ತ ಸಂಸದರಾಗಿರುವ ಕ್ಯಾ. ಬ್ರಿಜೇಶ್ ಚೌಟ ಸ್ಥಳೀಯರಿಗೆ ವಸ್ತು ಸ್ಥಿತಿಯ ಬಗ್ಗೆ ಮನವರಿಕೆ ಮಾಡಿ, ಬಹಳಷ್ಟು ಪ್ರಗತಿ ಕಂಡ ಕಾಮಗಾರಿಯನ್ನು ಪುನರ್ ಬದಲಾಯಿಸಲು ಅವಕಾಶವಿಲ್ಲವೆಂದೂ ತಿಳಿಸಿ, ಜನತೆಯ ಅನುಕೂಲತೆಗಾಗಿ ಈ ಗಾಗಲೇ ಇರುವ 2 ಅಂಡರ್ ಪಾಸ್‌ಗಳನ್ನು ಬೇಕಾದರೆ ಹೆಚ್ಚಿಸುವ ಪ್ರಸ್ತಾಪವನ್ನು ಜನರ ಮುಂದಿರಿಸಿ ಒಪ್ಪಿಸಿದ ಕಾರಣಕ್ಕೆ ಕಾಮಗಾರಿ ಮರು ಚಾಲನೆ ಪಡೆದಿತ್ತು.

> ▸▸ ಪ್ರಸಕ್ತ ಮಂಗಳೂರಿನಿಂದ ಬೆಂಗಳೂರು ಕಡೆಗೆ ಓಡಾಟ ನಡೆಸುವ ವಾಹನಗಳ ಸಂಚಾರಕ್ಕೆ ಮೇಲ್ಸೇತುವೆಯಲ್ಲಿ ಅವಕಾಶ ಮಾಡಿಕೊಡಲಾಗಿದೆ.

ಅದರಂತೆ ಕೆಲ ತಿಂಗಳ ಹಿಂದೆ ನೆಲ್ಯಾಡಿ ಪೇಟೆಯಲ್ಲಿ ಹೆಚ್ಚುವರಿ ಮೂರು ಅಂಡರ್‌ಪಾಸ್ ನಿರ್ಮಾಣ ಕಾಮಗಾರಿಯೂ ಆರಂಭಿಸಲಾಗಿತ್ತು. ಇದೀಗ ಈ ಕಾಮಗಾರಿ ಬಹುತೇಕ ಅಂತಿಮ ಹಂತಕ್ಕೆ ಬಂದಿದ್ದು ಹೆದ್ದಾರಿಯ ಒಂದು ಪಾರ್ಶ್ವದಲ್ಲಿ ಎತ್ತರಿಸಿದ ರಸ್ತೆಯ ಮೂಲಕ ವಾಹನ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಗಿದೆ. ಪ್ರಸಕ್ತ ಮಂಗಳೂರಿನಿಂದ ಬೆಂಗಳೂರು ಕಡೆಗೆ ಓಡಾಟ ನಡೆಸುವ ಎಲ್ಲಾ ವಾಹನಗಳು ಎತ್ತರಿಸಿದ ರಸ್ತೆಯ ಮೂಲಕ ಓಡಾಟ ನಡೆಸುತ್ತಿವೆ. ಬೆಂಗಳೂರಿನಿಂದ ಮಂಗಳೂರು ಕಡೆಗೆ ಬರುವ ವಾಹನಗಳು ಸರ್ವೀಸ್ ರಸ್ತೆ ಮೂಲಕವೇ ಓಡಾಟ ನಡೆಸುತ್ತಿವೆ. ಇನ್ನೊಂದು ತಿಂಗಳೊಳಗೆ ಇನ್ನೊಂದು ಪಾರ್ಶ್ವದ ಕಾಮಗಾರಿಯೂ ಪೂರ್ಣಗೊಂಡು ಎರಡೂ ಬದಿಯೂ ವಾಹನ ಸಂಚಾರಕ್ಕೆ ಮುಕ್ತಗೊಳ್ಳಲಿದೆ ಎಂದು ಹೇಳಲಾಗಿದೆ.

> **ವ್ಯವಸ್ಥಿತ ಚರಂಡಿ ಸಹಿತ ಸರ್ವೀಸ್ ರಸ್ತೆ ಶೀಘ್ರ ದುರಸ್ತಿಗೊಳಿಸಲಿ**
>
> **ಹೆದ್ದಾರಿ ನಿರ್ಮಾಣ ಕಾಮಗಾರಿ ಆರಂಭಗೊಂಡ ದಿನದಿಂದಲೇ ನೆಲ್ಯಾಡಿ ಪೇಟೆಯಲ್ಲಿ ಜನ ಬಹಳಷ್ಟು ಸಂಕಷ್ಟ ಪಡುತ್ತಿದ್ದಾರೆ. ಸರ್ವೀಸ್ ರಸ್ತೆ ಅವ್ಯವಸ್ಥೆಯಿಂದ ಕೂಡಿದೆ. ಇದೀಗ ಎತ್ತರಿಸಿದ ರಸ್ತೆಯಲ್ಲಿ 1 ಬದಿ ವಾಹನ ಸಂಚಾರ ಆರಂಭಗೊಂಡಿದೆ. ಆದ್ದರಿಂದ ಸರ್ವೀಸ್ ರಸ್ತೆಯ ಕೆಲಸ ಶೀಘ್ರ ಪೂರ್ಣಗೊಳಿಸಬೇಕು. ಚರಂಡಿ ವ್ಯವಸ್ಥೆ ಸರಿಪಡಿಸಬೇಕು. ಅಲ್ಲದೇ ಎಲ್ಲಾ ಬಸ್ಸುಗಳು ಬಸ್ಸು ನಿಲ್ದಾಣಕ್ಕೆ ಬಂದು ಹೋಗಲು ಹೈವೇ ಪ್ರಾಧಿಕಾರದವರು ಅನುಕೂಲ ಮಾಡಿಕೊಡಬೇಕು. ಡಿಪೋ ಮೇನೇಜರ್‌ಗಳು ಇದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.**
>
> ■ ಸತೀಶ್ ಕೆ.ಎಸ್. ಅಧ್ಯಕ್ಷರು, ವರ್ತಕರ ಸಂಘ ನೆಲ್ಯಾಡಿ

ರಾಜ್ಯ ಟೈಲರ್ ಅಸೋಸಿಯೇಷನ್ 27ನೇ ವಾರ್ಷಿಕೋತ್ಸವ

ಮಂಗಳೂರು: ಕರ್ನಾಟಕ ರಾಜ್ಯ ಟೈಲರ್ ಅಸೋಸಿಯೇಷನ್ (ಕೆಎಸ್ ಟಿಎ) ಮಂಗಳಾದೇವಿ ವಲಯ ಸಮಿತಿಯಿಂದ 27ನೇ ವರ್ಷದ ವಾರ್ಷಿಕೋತ್ಸವ ಅದ್ದೂರಿಯಾಗಿ ನಡೆಯಿತು. ವಾರ್ಷಿಕೋತ್ಸವದ ಅಂಗವಾಗಿ ಗೋರಿಗುಡ್ಡದಲ್ಲಿರುವ ಪ್ರಧಾನ ಕಚೇರಿ ಟೈಲರ್ ಭವನದಲ್ಲಿ ಸತ್ಯನಾರಾಯಣ ಪೂಜೆ ನೆರವೇರಿತು. ಕರ್ನಾಟಕ ಟೈಲರ್ ಅಸೋಸಿಯೇಷನ್ಸ್‌ನ ರಾಜ್ಯ ಅಧ್ಯಕ್ಷರು ಹಾಗೂ ಜಿಲ್ಲೆಯ ಕ್ಷೇತ್ರ ಅಧ್ಯಕ್ಷರು, ಸಂಘದ ಪದಾಧಿಕಾರಿಗಳು, ಸದಸ್ಯರು ಸೇರಿದಂತೆ ಹಲವು ಮಂದಿ ಭಾಗವಹಿಸಿದ್ದರು. ಸಂಘದ ಬೆಳವಣಿಗೆಗೆ ಸಹಕರಿಸಿದ ಹಿರಿಯ ಸದಸ್ಯರನ್ನು ಇದೇ ಸಂದರ್ಭ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷೆ ರಾಜೇಶ್ವರಿ, ಕಾರ್ಯದರ್ಶಿ ನಳಿನಿ ಸದಾಶಿವ, ಕೋಶಾಧಿಕಾರಿ ಹರಿಣಾಕ್ಷಿ, ಜಿಲ್ಲಾ ಉಪಾಧ್ಯಕ್ಷ ವಿಶ್ವನಾಥ್ ಬಜಾಲ್, ಪದಾಽಕಾರಿಗಳಾದ ಅಶೋಕ್, ಸಬಿತಾ ಸತೀಶ್, ಸುಜಾತಾ ಜೋಗಿ, ಹಿರಿಯ ಸದಸ್ಯರು ಸೀತಾರಾಮ್ ಅಮೀನ್, ಪದ್ಮನಾಭ ಜಲ್ಲಿಗುಡ್ಡೆ , ವಲಯ ಉಪಾಧ್ಯಕ್ಷರು ಅನಂತ್ ರಾಮ್ ಉಪಸ್ಥಿತರಿದ್ದರು.



ಕೂಡಿಗೆ ಕ್ರೀಡಾಶಾಲೆಯಲ್ಲಿ ರೂ.3 ಕೋಟಿ ವೆಚ್ಚದ ಆಸ್ಟ್ರೋಟರ್ಫ್ ಹೆಚ್ಚುವರಿ ಕಾಮಗಾರಿ

ಕುಶಾಲನಗರ: ಇಲ್ಲಿಗೆ ಸಮೀಪದ ಕೂಡಿಗೆಯಲ್ಲಿರುವ ಕ್ರೀಡಾ ಪ್ರೌಢಶಾಲೆಯಲ್ಲಿ 3 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ಹಾಕಿ ಮೈದಾನದ ಆಸ್ಟ್ರೋಟರ್ಫ್ ಹೆಚ್ಚುವರಿ ಕಾಮಗಾರಿಗಳಿಗೆ ಮಡಿಕೇರಿ ಕ್ಷೇತ್ರದ ಶಾಸಕ ಡಾ. ಮಂಥರ್ ಗೌಡ ಅವರು ಭೂಮಿ ಪೂಜೆ ನೆರವೇರಿಸಿದರು.

ಈ ಸಂದರ್ಭ ಮಾತನಾಡಿದ ಅವರು, ರಾಷ್ಟ್ರೀಯ ಕ್ರೀಡಾ ನಿಯಮಾನುಸಾರ ಗ್ರಾಮೀಣ ಪ್ರದೇಶದ ಯುವಕ ಯುವತಿಯರು, ಕ್ರೀಡಾ ಶಾಲೆಗೆ ಆಯ್ಕೆಗೊಂಡ ನಂತರ ತಮ್ಮ ಸಾಮರ್ಥ್ಯವನ್ನು ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶಿಸಲು ಇಂತಹ ಮೈದಾನದ ಅವಶ್ಯಕತೆ ಇದೆ. ಆದ್ದರಿಂದಲೇ ರಾಜ್ಯ ಸರ್ಕಾರ ಕ್ರೀಡಾ ಇಲಾಖೆಯ ನಿಯಮದಡಿಯಲ್ಲಿ ಕ್ರೀಡಾ ಶಾಲೆಗಳ ಮತ್ತು ಮೈದಾನದ ಅಭಿವೃದ್ಧಿಗೆ ಪೂರಕವಾದ ಯೋಜನೆಯನ್ನು ಜಾರಿಗೆ ತಂದಿದ್ದು, ಕೂಡಿಗೆ ಕ್ರೀಡಾ ಶಾಲೆಯ ಕ್ರೀಡಾಂಗಣವನ್ನು 3 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ ಎಂದರು.

ಮುಖ್ಯ ಅತಿಥಿಯಾಗಿದ್ದ ರಾಜ್ಯ ಕ್ರೀಡಾ ಪ್ರಾಧಿಕಾರ ಉಪಾಧ್ಯಕ್ಷ ಅರುಣ್ ಮಾಚಯ್ಯ ಮಾತನಾಡಿ, ಕ್ರೀಡಾಂಗಣದ ಅಭಿವೃದ್ಧಿ, ಕ್ರೀಡಾ ಶಾಲಾ ವಿದ್ಯಾರ್ಥಿಗಳ ಪ್ರಗತಿಗೆ ಪೂರಕವಾಗಲಿದೆ. ಶಾಲೆಗೆ ಸಂಬಂಧಿಸಿದ ಸುಸಜ್ಜಿತ ಕ್ರೀಡಾಂಗಣ ಕಾಮಗಾರಿಗಳನ್ನು ಕೈಗೊಳ್ಳುವ ಮೂಲಕ ಕ್ರೀಡಾ ಶಾಲೆಯ ಅಭಿವೃದ್ಧಿಯೂ ಸಾಧ್ಯ ಎಂದರು. ಜಿಲ್ಲೆಯ ಕ್ರೀಡಾಂಗಣಗಳನ್ನು ಮೇಲ್ದರ್ಜೆಗೆ ಏರಿಸುವ ಮೂಲಕ ಕ್ರೀಡಾ ಇಲಾಖೆಯ ಕಟ್ಟಡಗಳ ಉನ್ನತೀಕರಣದ ಜೊತೆಗೆ ದಸರಾ ಕ್ರೀಡೋತ್ಸವ ಸಂದರ್ಭದಲ್ಲಿ ನೀಡುವ ಪ್ರಶಸ್ತಿ ಪತ್ರವನ್ನು ಮರು ಪರಿಷ್ಕರಣೆಗೊಳಿಸುವುದರೊಂದಿಗೆ ಕ್ರೀಡಾ ಪ್ರತಿಭೆಯು ತನ್ನ ಬದುಕಿಗೆ ಪೂರಕವಾದ ಉದ್ಯೋಗವನ್ನು ಪಡೆಯುಲು ಅನುಕೂಲ ಕಲ್ಪಿಸುವ ವ್ಯವಸ್ಥೆ ಆಗಬೇಕಾಗಿದೆ. ಇದಕ್ಕೆ ಸಂಬಂಧಿಸಿದಂತೆ ಇಲಾಖೆ ಸಚಿವರೊಂದಿಗೆ ಚರ್ಚಿಸಲಾಗುವುದು. ರಾಜ್ಯದಲ್ಲಿ ಕ್ರೀಡಾಪಟುಗಳಿಗೆ ಉದ್ಯೋಗದಲ್ಲಿ ಶೇಕಡಾ ಎರಡರಷ್ಟು ರಿಯಾಯಿತಿ ಇರುವುದರಿಂದ ಪ್ರಶಸ್ತಿ ಪತ್ರದ ಬದಲಾವಣೆ ಅತ್ಯಗತ್ಯ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.



ಈ ಸಂದರ್ಭ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಜಿಲ್ಲಾ ಸಹಾಯಕ ನಿರ್ದೇಶಕಿ ವಿಸ್ಮಯಿ ಚಕ್ರವರ್ತಿ, ಟಿ.ಪಿ. ಹಮೀದ್, ಪದವಿಪೂರ್ವ ಕಾಲೇಜು ಉಪಾಧ್ಯಕ್ಷ ಸೋಮಶೇಖರ್, ಫಿಲೋಮಿನಾ, ಈರಪ್ಪ, ಚಂದ್ರ, ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಜಯಪ್ರಕಾಶ್, ಕ್ರೀಡಾ ತರಬೇತುದಾರರಾದ ವೆಂಕಟೇಶ್, ದಿನಮಣಿ, ಸುರೇಶ್, ಗುತ್ತಿಗೆದಾರ ಮಂಜುನಾಥ, ಶಾಲಾ ಮುಖ್ಯೋಪಾಧ್ಯಾಯನಿ ಅಶ್ವಿತ್, ಶಿಕ್ಷಕರ ವೃಂದ ಸೇರಿದಂತೆ ವಿವಿಧ ವಿಭಾಗದ ತರಬೇತುದಾರರು, ಶಾಲಾ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಹಾಜರಿದ್ದರು.

ಕೋಡಿ ತಲೆ ಪಂಚಶಕ್ತಿ ಸಂಘದಿಂದ ಉಚಿತ ಕಣ್ಣಿನ ತಪಾಸಣಾ ಶಿಬಿರ

ಕೋಟ: ಪಂಚಶಕ್ತಿ ಸಂಘ ಕೋಡಿತಲೆ ಹೊಸಬೆಂಗ್ರೆ ಇದರ 24ನೇ ವಾರ್ಷಿಕೋತ್ಸವದ ಪ್ರಯುಕ್ತ ನೇತ್ರಜ್ಯೋತಿ ಚಾರಿಟೇಬಲ್ ಟ್ರಸ್ಟ್ ಉಡುಪಿ, ಪ್ರಸಾದ್ ನೇತ್ರಾಲಯ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ ಉಡುಪಿ ಇವರ ಸಹಯೋಗದೊಂದಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಕೋಡಿತಲೆಯಲ್ಲಿ ಆಯೋಜಿಸಿತು.

ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಖ್ಯಾತ ಮನೋರೋಗ ತಜ್ಞರಾದ ಡಾ.ಕೆ. ಎಸ್ ಕಾರಂತ್ ಆರೋಗ್ಯ ಶಿಬಿರಗಳನ್ನು ನಡಿಸುವುದು ಮಾತ್ರವಲ್ಲದೆ ಅದು ಸರಿಯಾದ ವ್ಯಕ್ತಿಗಳಿಗೆ ತಲುಪಿಸುವಂತಹ ಆಗಬೇಕು ಹಾಗೂ ಅದರ ಪ್ರಯೋಜನವನ್ನು ಪ್ರತಿಯೊಬ್ಬರು ಪಡೆದುಕೊಳ್ಳುವುದರ ಮೂಲಕ ಉಚಿತ ಶಿಬಿರಗಳು ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು. ಕೋಡಿ ಶಾಲೆಯ ಮುಖ್ಯೋಪಾಧ್ಯಾಯರಾದ ನಾಗರತ್ನ ಟೀಚರ್, ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ರಾಮ ಖಾರ್ವಿ, ಹಿರಿಯರಾದ ಗಿರಿಜ ಪೂಜಾರ್ತಿ, ಪ್ರಸಾದ್ ನೇತ್ರಾಲಯದ ಸಂಪರ್ಕಾಧಿಕಾರಿ ಗಣೇಶ್, ಅಧ್ಯಾಪಕಿ ಹೇಮಾ, ಕುಮಾರಿ ಸುಪ್ರೀತ, ಪಂಚಶಕ್ತಿ ಸಂಘದ ಅಧ್ಯಕ್ಷರಾದ ಪ್ರವೀಣ್ ಖಾರ್ವಿ ಗೌರವಾಧ್ಯಕ್ಷರಾದ ಮಡಿ ವಿಶ್ವನಾಥ ಖಾರ್ವಿ, ಕಾರ್ಯದರ್ಶಿ ಸಂದೀಪ್, ಖಾರ್ವಿ ಸಂಘದ ಪದಾಽಕಾರಿಗಳಾದ ಲಕ್ಷ್ಮಣ ಖಾರ್ವಿ, ಸಂದೇಶ್, ಅನಿಲ, ಸಂದೀಪ, ವಿಕೇಶ್ ಬಂಗೇರ, ದಿನೇಶ್, ಪ್ರವೀಣ್, ವಿಜಯ ಖಾರ್ವಿ ಮೊದಲಾದವರು ಉಪಸ್ಥಿತರಿದ್ದರು. ಹಲವಾರು ಮಂದಿ ಕಣ್ಣಿನ ತಪಾಸಣಾ ಶಿಬಿರದಲ್ಲಿ ಪಾಲ್ಗೊಂಡರು.

ರಫ್ತು ಉತ್ತೇಜನಕ್ಕೆ ಕೆನರಾ ವಾಣಿಜ್ಯ -ಕೈಗಾರಿಕಾ ಸಂಸ್ಥೆಯಿಂದ ನಡೆದ ಜಾಗೃತಿ ಕಾರ್ಯಾಗಾರದಲ್ಲಿ ದಿವಾಕರ್ ಪೈ

ಜಾಗತಿಕ ಮಾರುಕಟ್ಟೆ ಪ್ರವೇಶಿಸಲು ಕಾರ್ಯಾಗಾರ ಸಹಕಾರಿ

ಮಂಗಳೂರು: ಇಲ್ಲಿನ ಕೆನರಾ ವಾಣಿಜ್ಯ ಮತ್ತು ಕೈಗಾರಿಕಾ (ಕೆಸಿಸಿಐ) ಸಂಸ್ಥೆಯ ಆಶ್ರಯದಲ್ಲಿ 'ರಫ್ತು ಸೌಲಭ್ಯ, ವಿದೇಶಿ ಮಾರುಕಟ್ಟೆ ವಿಸ್ತರಣೆಯಲ್ಲಿ ಇಪಿಸಿಎಚ್‌ನ ಪಾತ್ರ ಮತ್ತು ಸೇವೆಗಳು'' ಕುರಿತ ಜಾಗೃತಿ ಕಾರ್ಯಾಗಾರ ಶನಿವಾರ ಕೆಸಿಸಿಐ ಸಭಾಂಗಣದಲ್ಲಿ ನಡೆಯಿತು.

ಕೆಸಿಸಿಐ ಉಪಾಧ್ಯಕ್ಷ ದಿವಾಕರ್ ಪೈ ಕೊಚ್ಚಿಕಾರ್, ಭಾರತದಲ್ಲಿ ಹಸ್ತಕಲಾ ವಲಯವು 33,000 ಕೋಟಿಗೂ ಅಧಿಕ ಮೌಲ್ಯದ ರಫ್ತಿಗೆ ಕಾರಣವಾಗಿದ್ದು, ದೇಶದ 70 ಲಕ್ಷಕ್ಕೂ ಹೆಚ್ಚು ಕಲಾವಿದರಿಗೆ ಉದ್ಯೋಗ ಒದಗಿಸುತ್ತಿದೆ ಎಂದು ತಿಳಿಸಿದರು. ದಕ್ಷಿಣ ಕನ್ನಡ, ಉಡುಪಿ ಮತ್ತು ನೆರೆಯ ಭಾಗಗಳ ಉದ್ಯಮಿಗಳು ಹಾಗೂ ಕಲಾವಿದರಿಗೆ ಜಾಗತಿಕ ಮಾರುಕಟ್ಟೆ ಪ್ರವೇಶಿಸಲು ಈ ಕಾರ್ಯಾಗಾರ ಸಹಕಾರಿಯಾಗಲಿದೆ ಎಂದರು.

ಉಡುಪಿ ಕಾಟನ್ ಸೀರೆ, ಮಂಗಳೂರಿನ ಬೆಲ್ ಮೆಟಲ್ ಕೈಗಾರಿಕೆ, ಮರ ಮತ್ತು ಕಲ್ಲಿನ ಶಿಲ್ಪಕಲೆ, ಮಹಿಳಾ ನೇತೃತ್ವದ ಕೊಯರ್ ಹಾಗೂ ಕಾಟೇಜ್ ಕೈಗಾರಿಕೆಗಳಿಗೆ ಉತ್ತಮ ರಫ್ತು ಅವಕಾಶಗಳಿವೆ ಎಂದು ಅವರು ಹೇಳಿದರು.



ಕೆಸಿಸಿಐ ಸ್ಟಾರ್ಟ್‌ಅಪ್ ಉಪಸಮಿತಿಯ ಅಧ್ಯಕ್ಷ ವಿಶ್ವಾಸ್ ಶಿಶಿರ್ ಮಾತನಾಡಿ, ಇಪಿಸಿಎಚ್ ಹಾಗೂ ಸಂಬಂಧಿತ ಸಂಸ್ಥೆಗಳ ಸಹಯೋಗದೊಂದಿಗೆ ಉದ್ಯಮಿಗಳು, ಸ್ವಸಹಾಯ ಸಂಘಗಳು ಮತ್ತು ಕಲಾವಿದರಿಗೆ ರಫ್ತು ಆಧಾರಿತ ಉದ್ಯಮ ಅಭಿವೃದ್ಧಿಗೆ ದೀರ್ಘಕಾಲಿಕ ಸಹಕಾರ ನೀಡಲಾಗುವುದು ಎಂದರು.


ಹ್ಯಾಂಡಿಕ್ರಾಫ್ಟ್ಸ್ ಮತ್ತು ಕಾರ್ಪೆಟ್ ಸೆಕ್ಟರ್ ಸ್ಕಿಲ್ ಕೌನ್ಸಿಲ್ ಅಧ್ಯಕ್ಷ ಕೆ.ಎಲ್. ರಮೇಶ್ ಮಾತನಾಡಿ, ರಫ್ತು ವ್ಯವಹಾರದಲ್ಲಿ ಗುಣಮಟ್ಟ ಮತ್ತು ಪರಿಣಾಮಕಾರಿ ಮಾರುಕಟ್ಟೆ ವ್ಯವಸ್ಥೆ ಅತ್ಯಂತ ಮುಖ್ಯವಾಗಿದೆ ಎಂದು ಹೇಳಿದರು. ಮಂಗಳೂರಿನ ಕೊಯರ್ ಹಸ್ತಕಲಾ ಉತ್ಪನ್ನಗಳ ರಫ್ತು ಬೆಳವಣಿಗೆಯ ಬಗ್ಗೆ ಅವರು ಮಾಹಿತಿ ನೀಡಿದರು.

> ▸▸ **ಭಾರತದಲ್ಲಿ ಹಸ್ತಕಲಾ ವಲಯವು 33,000 ಕೋಟಿಗೂ ಅಧಿಕ ಮೌಲ್ಯದ ರಫ್ತಿಗೆ ಕಾರಣವಾಗಿದ್ದು, ದೇಶದ 70 ಲಕ್ಷಕ್ಕೂ ಹೆಚ್ಚು ಕಲಾವಿದರಿಗೆ ಉದ್ಯೋಗ ಒದಗಿಸುತ್ತಿದೆ.**

ಇಪಿಸಿಎಚ್ ದಕ್ಷಿಣ ಪ್ರಾದೇಶಿಕ ಮುಖ್ಯಸ್ಥೆ ಪಿ.ಎಲ್. ಶ್ರೀದೇವಿ ಮಾತನಾಡಿ, ತಾಂತ್ರಿಕ ನವೀಕರಣ, ಕಲಾವಿದರ ತರಬೇತಿ, ಖರೀದಿದಾರ-ಮಾರಾಟಗಾರರ ಸಭೆಗಳು, ಅಂತರರಾಷ್ಟ್ರೀಯ ಪ್ರದರ್ಶನಗಳು ಹಾಗೂ ಜಿಐ ಟ್ಯಾಗ್ ಉತ್ಪನ್ನಗಳ ಪ್ರಚಾರ ಸೇರಿದಂತೆ ಹಲವು ಸೇವೆಗಳ ಬಗ್ಗೆ ವಿವರಿಸಿದರು.

ಇಸಿಜಿಸಿ ಮಂಗಳೂರು ಶಾಖಾ ಮುಖ್ಯಸ್ಥ ವಿಕಾಶ್ ಕುಮಾರ್ ಪ್ರಸಾದ್ ಮಾತನಾಡಿ, ವಿದೇಶಿ ಖರೀದಿದಾರರಿಂದ ಹಣ ಪಾವತಿಯಾಗದ ಸಂದರ್ಭಗಳಲ್ಲಿ ರಫ್ತುದಾರರಿಗೆ ವಿಮಾ ರಕ್ಷಣೆ ನೀಡುವ ಯೋಜನೆಗಳ ಕುರಿತು ಮಾಹಿತಿ ನೀಡಿದರು. ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಹಿನ್ನೆಲೆ ಕೇಂದ್ರ ಸರ್ಕಾರ ಜಾರಿಗೆ ತಂದಿರುವ "ರಿಲೀಫ್" ಯೋಜನೆಯ ಸೌಲಭ್ಯಗಳನ್ನು ಬಳಸಿಕೊಳ್ಳುವಂತೆ ಅವರು ಕರೆ ನೀಡಿದರು.

ಇಂಡಿಯನ್ ಬ್ಯಾಂಕ್ ಮೈಸೂರು ವಲಯ ವ್ಯವಸ್ಥಾಪಕ ಸೂರಜ್ ಪ್ರಸನ್ನ ದಾಸ್ ಮಾತನಾಡಿ, ಪ್ರಧಾನಮಂತ್ರಿ ಮುದ್ರಾ ಯೋಜನೆ, ಸ್ಟಾರ್ಟ್ ಅಪ್ ಇಂಡಿಯಾ, ಸ್ಟ್ಯಾಂಡ್‌ಅಪ್ ಇಂಡಿಯಾ ಹಾಗೂ JTJC ಹಣಕಾಸು ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಉದ್ಯಮಿಗಳು, ರಫ್ತುದಾರರು, ವಿದ್ಯಾರ್ಥಿಗಳು ಮತ್ತು ವಿವಿಧ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ಭಾಗವಹಿಸಿದ್ದರು. ಕೆಸಿಸಿಐ ಗೌರವ ಕಾರ್ಯದರ್ಶಿ ಅಶ್ವಿನ್ ಪೈ ಮರೂರ್ ವಂದಿಸಿದರು.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ (Q)	13	9	4	0	18	+1.065
ಗುಜರಾತ್	13	8	5	0	16	+0.400
ಹೈದರಾಬಾದ್	12	7	5	0	14	+0.331
ಪಂಜಾಬ್	13	6	6	1	13	+0.227
ರಾಜಸ್ಥಾನ	11	6	5	0	12	+0.082
ಚೆನ್ನೈ	12	6	6	0	12	+0.027
ಕೆಕೆಆರ್	12	5	6	1	11	-0.038
ದಿಲ್ಲಿ	12	5	7	0	10	-0.993
ಮುಂಬೈ	12	4	8	0	8	-0.504
ಲಖನೌ	12	4	8	0	8	-0.701

ಪಂಜಾಬ್ ವಿರುದ್ಧ 23 ರನ್‌ಗಳ ಗೆಲುವು | ವೆಂಕಟೇಶ್, ಕೊಹ್ಲಿ ಅಬ್ಬರ | ರಸಿಖ್ ಕೈಚಳಕ

ಪ್ಲೇಆಫ್‌ಗೆ ಬೆಂಗಳೂರು ರಾಯಲ್ ಎಂಟ್ರಿ

• ಧರ್ಮಶಾಲಾ: ಪಂಜಾಬ್ ತಂಡವನ್ನು 23 ರನ್‌ಗಳಿಂದ ಸೋಲಿಸಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಈ ಬಾರಿಯ ಐಪಿಎಲ್‌ನಲ್ಲಿ ಪ್ಲೇಆಫ್‌ಗೇರಿದ ಮೊದಲ ತಂಡ ಎನಿಸಿಕೊಂಡಿದೆ.

ಭಾನುವಾರದ ರಜೆ ಮಜೆಯಲ್ಲಿದ್ದ ಆರ್‌ಸಿಬಿ ಅಭಿಮಾನಿಗಳಿಗೆ ಬೆಂಗಳೂರು ಗೆಲುವು ಇನ್ನಷ್ಟು ಖುಷಿ ತಂದಿದೆ. ಧರ್ಮಶಾಲಾದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 222 ರನ್ ಗಳಿಸಿತು. ಇದೇ ಪಂದ್ಯದಲ್ಲಿ ಬಡ್ತಿ ಪಡೆದ ವೆಂಕಟೇಶ್ ಅಯ್ಯರ್(73*; 40ಎ, 8ಬೌ, 4ಸಿ) ಗಳಿಸಿ ಗಮನ ಸೆಳೆದರೆ, ವಿರಾಟ್ ಕೊಹ್ಲಿ(58; 37ಎ, 4 ಬೌ, 3ಸಿ) ಮತ್ತೊಮ್ಮೆ ಮಿಂಚಿನಾಟ ಪ್ರದರ್ಶಿಸಿದರು. ದೇವದತ್ತ ಪಡಿಕ್ಕಲ್ 45, ಟಿಮ್ ಡೇವಿಡ್ 28 ರನ್‌ಗಳೊಂದಿಗೆ ಸ್ಕೋರ್ ಹಿಗ್ಗಿಸಿದರು. ಪಂಜಾಬ್ ಪರ ಹರ್ಷದೀಪ್ ಬ್ರಾರ್ 2 ವಿಕೆಟ್ ಪಡೆದುಕೊಂಡರು.

ಗುರಿ ಬೆನ್ನತ್ತಿದ ಪಂಜಾಬ್ ಕಿಂಗ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 199 ರನ್ ಗಳಿಸಲಷ್ಟೇ ಶಕ್ತವಾಯಿತು. ಶಶಾಂಕ್ ಸಿಂಗ್ (56; 27ಎ, 4ಬೌ, 4ಸಿ) ಗಳಿಸಿ ಹೋರಾಡಿದರು. ಇನ್ನುಳಿದಂತೆ ಮಧ್ಯಮ ಕ್ರಮಾಂಕದ ಬ್ಯಾಟರುಗಳಾದ ಕೂಪರ್ 37, ಸೂರ್ಯಾಂಶ್ 35, ಸ್ಟೋಯಿನಿಸ್ 37 ಕೂಡ ಪ್ರಯತ್ನ ಪಟ್ಟರು. ಬೆಂಗಳೂರು ಪರ ರಸೀಖ್ ಸಲಾಂ ಧಾರ್ 3, ಭುವನೇಶ್ವರ್ ಕುಮಾರ್ 2 ವಿಕೆಟ್ ಪಡೆದರೆ, ಸುಯಶ್, ಶೆಫರ್ಡ್ ಹಾಗೂ ಹ್ಯಾಜೆಲ್ವುಡ್ ತಲಾ 1 ವಿಕೆಟ್ ಪಡೆದರು. ಈ ಗೆಲುವಿನೊಂದಿಗೆ ಆರ್‌ಸಿಬಿ ಪಂದ್ಯಾವಳಿಯ ಫೈನಲ್‌ಗೇರಿದ್ದಲ್ಲದೆ, ಅಗ್ರ ಎರಡರಲ್ಲಿ ಮುಗಿಸುವ ಭರವಸೆ ಹೆಚ್ಚಿಸಿಕೊಂಡಿದೆ. ಸತತ ಆರನೇ ಸೋಲು ಕಂಡಿರುವ ಪಂಜಾಬ್ ಕಿಂಗ್ಸ್‌ಗೆ ಪ್ಲೇಆಫ್‌ಗೇರುವುದೇ ಸವಾಲಾಗಲಿದೆ. 13 ಅಂಕಗಳನ್ನು ಹೊಂದಿರುವ ಪಂಜಾಬ್ ಕೊನೆಯ ಪಂದ್ಯದಲ್ಲಿ ಗೆಲ್ಲಲೇಬೇಕಾದ ಅನಿವಾರ್ಯತೆಯಲ್ಲಿದ್ದು, ಆದಾಗ್ಯೂ ಬೇರೆ ತಂಡಗಳ ಗೆಲುವು-ಸೋಲುಗಳ ಮೇಲೆ ಅವಲಂಬಿತವಾಗಿರಬೇಕಿದೆ.

ರನ್ ಮಟ್ಟ: ಕೊಹ್ಲಿ ಅವರ ಕ್ಲಾಸಿಕ್ ಬ್ಯಾಟಿಂಗ್‌ನೊಂದಿಗೆ ಅಬ್ಬರದ ಆರಂಭ ಪಡೆದ ಬೆಂಗಳೂರು 1 ವಿಕೆಟ್ ನಷ್ಟಕ್ಕೆ ಪವರ್‌ಪ್ಲೇನಲ್ಲಿ 61 ರನ್ ಗಳಿಸಿತು. ಮೂರನೇ ಕ್ರಮಾಂಕದಲ್ಲಿ ಬಂದಿದ್ದ ಪಡಿಕ್ಕಲ್ ಕೂಡ ಉತ್ತಮ ಬ್ಯಾಟಿಂಗ್ ಮಾಡಿದರು. ಅತ್ತ ಪಂಜಾಬ್ ಭುವನೇಶ್ವರ್ ಕುಮಾರ್ ದಾಳಿಗೆ ಮತ್ತೊಮ್ಮೆ ಸಿಲುಕಿಕೊಂಡು 6 ಓವರ್‌ನಲ್ಲಿ 49 ರನ್ ಮಾತ್ರ ಗಳಿಸಿ 3 ಪ್ರಮುಖ ವಿಕೆಟ್ ಕಳೆದುಕೊಂಡಿತು. ಮಧ್ಯಮ ಓವರ್‌ಗಳಲ್ಲಿ ಕೊಹ್ಲಿ ಅರ್ಧಶತಕ ಬಾರಿಸಿದರೆ, ಪಡಿಕ್ಕಲ್ 45 ರನ್‌ಗೆ ವಿಕೆಟ್ ಒಪ್ಪಿಸಿದರು. ಬಳಿಕ ಬಂದ ವೆಂಕಟೇಶ್ ಸ್ಫೋಟಕ ಬ್ಯಾಟಿಂಗ್‌ಗೆ ಅಣಿಯಾದರು. ಕೊಹ್ಲಿ ವಿಕೆಟ್ ಒಪ್ಪಿಸಿದರೂ, ವೆಂಕಿ ಅಬ್ಬರ ನಿಲ್ಲಲಿಲ್ಲ. 31 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿ ನಂತರ ಇನ್ನಷ್ಟು ಆಕ್ರಮಣಕಾರಿಯಾಗಿ ಕಾಣಿಸಿಕೊಂಡರು. ಆರ್‌ಸಿಬಿ ಮಧ್ಯಮ ಓವರ್‌ಗಳಲ್ಲಿ 107 ರನ್ ಗಳಿಸಿತು.

ಅತ್ತ ಪಂಜಾಬ್ ಪರ ಕೊನೊಲಿ ಮತ್ತು ಸೂರ್ಯಾಂಶ್ ಕೊಂಚ ಹೊತ್ತು ಉತ್ತಮ ಬ್ಯಾಟಿಂಗ್ ಮಾಡಿದರು. ಆರ್‌ಸಿಬಿ ಕೊಟ್ಟಿದ್ದ ದೊಡ್ಡ ಟಾರ್ಗೆಟ್ ಮತ್ತು ಪವರ್‌ಪ್ಲೇನಲ್ಲಿ ಅನುಭವಿಸಿದ ಹಿನ್ನಡೆ ಪಂಜಾಬ್‌ಗೆ ಒತ್ತಡ ಹಾಕುತ್ತಲೇ ಇತ್ತು. ಕೊನೊಲಿ 37, ಸೂರ್ಯಾಂಶ್ 35ಕ್ಕೆ ಔಟಾದರು. ಕೊನೆಯಲ್ಲಿ ಬಂದ ಶಶಾಂಕ್ ಸಿಂಗ್ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಬಂದ ಬೌಲರ್‌ಗಳನ್ನೆಲ್ಲಾ ದಂಡಿಸುತ್ತಾ ಪಂದ್ಯವನ್ನು ಜಿದ್ದಾಜಿದ್ದಿ ಮಾಡಿ ಪಂಜಾಬ್ ಹೋಪ್ ಜಾರಿಯಲ್ಲೇ ಇಟ್ಟರು. ಪಂಜಾಬ್ ಮಧ್ಯಮ ಓವರ್‌ಗಳಲ್ಲಿ 111 ರನ್ ಗಳಿಸಿತು.

ಡೆತ್ ಓವರ್‌ನಲ್ಲಿ ಆರ್‌ಸಿಬಿ ಪರ ವೆಂಕಿ ಅಬ್ಬರಿಸಿದರು. ಅವರಿಗೆ ಡೇವಿಡ್ ಸಾಥ್ ಕೂಡ ಸಿಕ್ಕಿತು. 73* ರನ್ ಗಳಿಸಿದ ವೆಂಕಿ ಸ್ಕೋರ್ 220ರ ಗಡಿ ಮುಟ್ಟಿಸಿದರು. ಡೇವಿಡ್ ಕೂಡ ಅಬ್ಬರಿಸಿದರು. ಡೆತ್ ಓವರ್‌ಗಳಲ್ಲಿ ಆರ್‌ಸಿಬಿ 54 ರನ್ ಗಳಿಸಿತು. ಇತ್ತ ಪಂಜಾಬ್ ಪರ ಶಶಾಂಕ್ ಫೈಟ್ ಕೊಟ್ಟರು. ಸ್ಟೋಯಿನಿಸ್ ಸಾಥ್ ಕೊಟ್ಟ ನಂತರ ಪಂಜಾಬ್ ಗೆಲುವಿನ ಹಾದಿಗೆ ಬಂದಂತಿತ್ತು. ಆದರೆ ಡೆತ್‌ನಲ್ಲಿ ಭುವಿ ಮತ್ತು ಹ್ಯಾಜೆಲ್ವುಡ್ ಅಬ್ಬರಿಸಿದ್ದಲ್ಲದೆ, ರಸೀಕ್ ಕೂಡ ಮಿಂಚಿದರು. ಕೊನೆಯಲ್ಲಿ ಆರ್‌ಸಿಬಿ 23 ರನ್ ಗಳಿಂದ ಗೆಲುವು ಸಾಧಿಸಿತು.



ಸತತ 3ನೇ ಬಾರಿ ಪ್ಲೇಆಫ್‌ಗೆ ಆರ್‌ಸಿಬಿ

ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಆರ್‌ಸಿಬಿ ಪಾರುಪತ್ಯ ಮುಂದುವರಿದಿದ್ದು, ಸತತ ಮೂರನೇ ಬಾರಿ ಪ್ಲೇಆಫ್‌ಗೇರಿದೆ. 2024ರಲ್ಲಿ ಫಾಫ್ ಡು ಪ್ಲೆಸಿಸ್ ನಾಯಕತ್ವದಲ್ಲಿ ಪ್ಲೇಆಫ್‌ಗೇರಿತ್ತು. ಕಳೆದ ಬಾರಿ ಚಾಂಪಿಯನ್ ಪಟ್ಟ ಅಲಂಕರಿಸಿದ ಆರ್‌ಸಿಬಿ ಎರಡನೇ ಬಾರಿ, ಇದೀಗ ಮೂರನೇ ಬಾರಿ ಪ್ಲೇಆಫ್‌ಗೇರಿದೆ. ಇದಲ್ಲದೆ, ಆರ್‌ಸಿಬಿ ಲೀಗ್‌ನಲ್ಲಿ ಅತಿ ಹೆಚ್ಚು ಬಾರಿ ಪ್ಲೇಆಫ್‌ಗೇರಿದ ತಂಡಗಳ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿದೆ. ಮುಂಬೈನೊಂದಿಗೆ ಜಂಟಿ ಸ್ಥಾನ ಹೊಂದಿದೆ.

ಅತಿ ಹೆಚ್ಚು ಪ್ಲೇಆಫ್

ತಂಡ	ಪ್ಲೇಆಫ್
ಚೆನ್ನೈ	12
ಆರ್‌ಸಿಬಿ, ಮುಂಬೈ	11
ಕೆಕೆಆರ್	8
ಹೈದರಾಬಾದ್	7

ಪಂದ್ಯಶ್ರೇಷ್ಠ ಪ್ರಶಸ್ತಿ
ವೆಂಕಟೇಶ್ ಅಯ್ಯರ್ (73*) ರನ್

ಸ್ಕೋರ್ ಬೋರ್ಡ್

ಆರ್‌ಸಿಬಿ 20 ಓವರ್‌ಗಳಲ್ಲಿ 22/4

ಜೇಕಬ್	ಬಿ ಬ್ರಾರ್	11
ಕೊಹ್ಲಿ	ಸಿ ಪ್ರಿಯಾಂಶ್ ಬಿ ಚಾಹಲ್	58
ಪಡಿಕ್ಕಲ್	ಸಿ ಶ್ರೇಯಸ್ ಬಿ ಬ್ರಾರ್	45
ವೆಂಕಟೇಶ್	ನಾಟೌಟ್	73
ಡೇವಿಡ್	ಸಿ ಬ್ರಾರ್ ಬಿ ಅರ್ಷದೀಪ್	28
ಇತರ 7		

ಬೌಲಿಂಗ್ ವಿವರ

ಅರ್ಷದೀಪ್	4-0-43-1
ಓಮರ್‌ಝೈ	4-0-38-0
ಬ್ರಾರ್	4-0-35-2
ಫರ್ಗುಸನ್	3-0-43-0
ಚಾಹಲ್	3-0-42-1
ಶಶಾಂಕ್	2-0-20-0

ಪಂಜಾಬ್ 20 ಓವರ್‌ಗಳಲ್ಲಿ 199/8

ಪ್ರಿಯಾಂಶ್	ಸಿ ಶೆಫರ್ಡ್ ಬಿ ಭುವನೇಶ್ವರ್	0
ಪ್ರಭುಸಿಮ್ರನ್	ಸಿ ಪಡಿಕ್ಕಲ್ ಬಿ ಭುವನೇಶ್ವರ್	2
ಕೂಪರ್	ಸಿ ಜೇಕಬ್ ಬಿ ಶೆಫರ್ಡ್	37
ಶ್ರೇಯಸ್	ಸಿ ಜೇಕಬ್ ಬಿ ರಸೀಕ್	1
ಸೂರ್ಯಾಂಶ್	ಸಿ ಕೊಹ್ಲಿ ಬಿ ಸುಯಶ್	35
ಸ್ಟೋಯಿನಿಸ್	ಎಲ್‌ಬಿ ಬಿ ಹ್ಯಾಜೆಲ್ವುಡ್	37
ಶಶಾಂಕ್	ಸಿ ಕೊಹ್ಲಿ ಬಿ ರಸೀಕ್	56
ಓಮರ್‌ಝೈ	ಸಿ ಡೇವಿಡ್ ಬಿ ರಸೀಕ್	14
ಬ್ರಾರ್	ನಾಟೌಟ್	5
ಇತರ	12	

ಬೌಲಿಂಗ್ ವಿವರ

ಭುವನೇಶ್ವರ್	4-0-38-2
ಹ್ಯಾಜೆಲ್ವುಡ್	4-0-36-1
ರಸೀಕ್	4-0-36-3
ಸುಯಶ್	4-0-50-1
ಶೆಫರ್ಡ್	1-0-8-1
ಕೃನಾಲ್	3-0-27-0

ಕಿರುಸುದ್ದಿ

ಚೆಸ್: ಪ್ರಜ್ಞಾನಂದ ಪಂದ್ಯ ಡ್ರಾ

• ಹೊಸದಿಲ್ಲಿ: ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿರುವ ಸೂಪರ್ ಚೆಸ್ ಕ್ಲಾಸಿಕ್ ಟೂರ್ನಿಯ ಮೂರನೇ ಸುತ್ತಿನ ಬಳಿಕ ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್. ಪ್ರಜ್ಞಾನಂದ ಜಂಟಿ ಮುನ್ನಡೆಯನ್ನು ಕಾಯ್ದುಕೊಂಡಿದ್ದಾರೆ. ಜರ್ಮನಿಯ ವಿನ್ಸೆಂಟ್ ಕೀಮರ್ ವಿರುದ್ಧ ಅವರು ಡ್ರಾ ಸಾಧಿಸಿದರು. ಹಿಂದಿನ ಸುತ್ತಿನಲ್ಲಿ ಉಜ್ಬೇಕಿಸ್ತಾನದ ಜಾವೋಖಿರ್ ಸಿಂದಾರೋವ್ ವಿರುದ್ಧ ಗೆಲುವು ಸಾಧಿಸಿದ್ದ ಪ್ರಜ್ಞಾನಂದ ಇದೀಗ ಮೂರು ಸುತ್ತುಗಳ ಬಳಿಕ ಎರಡು ಅಂಕಗಳನ್ನು ಕಲೆಹಾಕಿದ್ದಾರೆ.



ಅವರು ಫ್ರಾನ್ಸ್‌ನ ಮ್ಯಾಕ್ಸಿಮ್ ವಶಿಯರ್-ಲಾಗ್ರಾವ್, ನೆದರ್‌ಲ್ಯಾಂಡ್ಸ್‌ನ ಜೋರ್ಡನ್ ವಾನ್ ಫೊರೆಸ್ಟ್ ಮತ್ತು ಅನೀಶ್ ಗಿರಿ, ಜೊತೆಗೆ ಕೀಮರ್ ಅವರೊಂದಿಗೆ ಜಂಟಿ ಮುನ್ನಡೆ ಹಂಚಿಕೊಂಡಿದ್ದಾರೆ. 10 ಆಟಗಾರರ ಟೂರ್ನಿಯಲ್ಲಿ ಅರ್ಧ ಭಾಗದ ಆಟಗಾರರು ಮುನ್ನಡೆ ಹಂಚಿಕೊಂಡಿರುವುದು ಸ್ಪರ್ಧೆಯನ್ನು ಇನ್ನಷ್ಟು ರೋಚಕಗೊಳಿಸಿದೆ. ಅಮೆರಿಕದ ಫ್ಯಾಬಿಯಾನೊ ಕಾರುವಾನಾ ಮತ್ತು ವೆಸ್ಲಿ ಸೋ ತಲಾ ಎಲ್ಲಾ ಪಂದ್ಯಗಳನ್ನೂ ಡ್ರಾ ಮಾಡಿಕೊಂಡು 1.5 ಅಂಕಗಳೊಂದಿಗೆ ಇದ್ದಾರೆ. ಫ್ರಾನ್ಸ್ ಪರ ಆಡುತ್ತಿರುವ ಅಲಿರೆಝಾ ಫಿರೋಜ್ಜಾ ಮತ್ತು ಆತಿಥೇಯ ಆಟಗಾರ ಡಿಯಾಕ್ ಬೋಗ್ದಾನ್-ಡೇನಿಯಲ್ ತಲಾ ಅರ್ಧ ಅಂಕ ಹೊಂದಿದ್ದಾರೆ. ಬಿಳಿ ಕಾಯಿಯೊಂದಿಗೆ ಆಡಿದ ಪ್ರಜ್ಞಾನಂದಗೆ ಪಂದ್ಯದಲ್ಲಿ ಹೆಚ್ಚಿನ ಅವಕಾಶಗಳು ಸಿಗಲಿಲ್ಲ. ಕೀಮರ್ ಇತ್ತೀಚಿನ ವರ್ಷಗಳಲ್ಲಿ ವಿಶ್ವದ ಅಗ್ರ ಆಟಗಾರರ ನಡುವೆ ಸ್ಥಿರ ಪ್ರದರ್ಶನ ನೀಡುತ್ತಿರುವ ಆಟಗಾರನಾಗಿದ್ದು, ಈ ಪಂದ್ಯದಲ್ಲೂ ಭಾರತೀಯ ಆಟಗಾರನಿಗೆ ಹೆಚ್ಚಿನ ಅವಕಾಶ ನೀಡಲಿಲ್ಲ. ಪ್ರಜ್ಞಾನಂದ ನಿಮ್ಜೋ-ಇಂಡಿಯನ್ ವಿರುದ್ಧ ಕಪಾಬ್ಲಾಂಕಾ ರೂಪಾಂತರವನ್ನು ಆಯ್ಕೆ ಮಾಡಿಕೊಂಡರು. ಆರಂಭದಲ್ಲೇ ಕೀಮರ್ ಒಂದು ಪಾನ್ ತ್ಯಾಗ ಮಾಡಿ ಸಮಬಲ ಸಾಧಿಸಿದರು. ನಂತರ ಪಂದ್ಯ ರೂಕ್ ಮತ್ತು ಸಣ್ಣ ಗೂಟಗಳ ಅಂತ್ಯಕ್ಕೆ ತಲುಪಿತು. ಪ್ರಜ್ಞಾನಂದ ಹೆಚ್ಚುವರಿ ಪಾನ್ ಹೊಂದಿದ್ದರೂ, ಕೀಮರ್ ಅದನ್ನು ಅತ್ಯುತ್ತಮ ನಿರ್ಬಂಧದ ಮೂಲಕ ನಿಯಂತ್ರಿಸಿದರು. ಕೊನೆಗೆ 64 ನಡೆಗಳ ಬಳಿಕ ಪಂದ್ಯ ಡ್ರಾದಲ್ಲಿ ಅಂತ್ಯವಾಯಿತು.

ಇಂದಿನಿಂದ ಎಸ್.ಎಂ. ಕೃಷ್ಣ ನೆನಪಿನ ಓಪನ್ ಟೆನಿಸ್

• ಬೆಂಗಳೂರು: ಇಲ್ಲಿನ ಎಸ್.ಎಂ. ಕೃಷ್ಣ ಮೆಮೋರಿಯಲ್ ಓಪನ್ ಟೆನಿಸ್ ಟೂರ್ನಿ ಈ ಬಾರಿ ಹೊಸ ಅಧ್ಯಾಯ ಆರಂಭಿಸಿದೆ. ಇದುವರೆಗೆ ಐಟಿಎಫ್ ಎಂ25 ಟೂರ್ನಿಯಾಗಿ ನಡೆದಿದ್ದ ಸ್ಪರ್ಧೆ, ಇದೀಗ ಎಟಿಪಿ ಚಾಲೆಂಜರ್ 50 ಹಂತಕ್ಕೆ ಮೇಲ್ದರ್ಜೆಗೊಂಡಿದ್ದು, 63 ಸಾವಿರ ಅಮೆರಿಕನ್ ಡಾಲರ್ ಬಹುಮಾನ ಮೊತ್ತದೊಂದಿಗೆ ಸೋಮವಾರದಿಂದ ಆರಂಭವಾಗುತ್ತಿದೆ. ಈ ಮೇಲ್ದರ್ಜೆಗೇರಿಕೆಯಿಂದ ಟೂರ್ನಿಗೆ ಬಲಿಷ್ಠ ಆಟಗಾರರ ಆಗಮನವಾಗಿದ್ದು, ಭಾರತೀಯ ಆಟಗಾರರಿಗೆ ತವರಿನಲ್ಲಿ ಹೆಚ್ಚಿನ ಎಟಿಪಿ ಶ್ರೇಯಾಂಕ ಅಂಕಗಳನ್ನು ಗಳಿಸುವ ಅವಕಾಶ ಸಿಕ್ಕಿದೆ. 32 ಆಟಗಾರರ ಮುಖ್ಯ ಡ್ರಾದಲ್ಲಿ ಎಂಟು ಭಾರತೀಯರು ಈಗಾಗಲೇ ಸ್ಥಾನ ಪಡೆದಿದ್ದು, ಅರ್ಹತಾ ಸುತ್ತಿನಿಂದ ಇನ್ನೂ ಮೂವರು ಪ್ರವೇಶಿಸುವ ಸಾಧ್ಯತೆ ಇದೆ. ಸ್ಥಳೀಯ ಅಭಿಮಾನಿಗಳ ಗಮನ ಸೆಳೆದಿರುವ ಆಟಗಾರ ಕ್ರಿಶ್ ತ್ಯಾಗಿ. ಕಳೆದ ವಾರ ಕರ್ನಾಟಕ ಓಪನ್ ಚಾಲೆಂಜರ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿ ಸಂಚಲನ ಮೂಡಿಸಿದ್ದ ಕ್ರಿಶ್, ಇದೀಗ ಚೈನೀಸ್ ತೈಪೆಯ ಕುವಾನ್-ಯಿ ಲೀ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ. ಮತ್ತೊಬ್ಬ ಭಾರತೀಯ ಮನೀಶ್ ಸುರೇಶ್‌ಕುಮಾರ್, ಕಳೆದ ವಾರ ತಮ್ಮ ಮೊದಲ ಚಾಲೆಂಜರ್ ಕ್ವಾರ್ಟರ್ ಫೈನಲ್ ತಲುಪಿದ್ದರು. ಆದರೆ ಈ ಬಾರಿ ಮೊದಲ ಸುತ್ತಿನಲ್ಲೇ ಅಗ್ರ ಶ್ರೇಯಾಂಕಿತ ಅಮೆರಿಕದ ಕೀಗನ್ ಸ್ಮಿತ್ ಅವರನ್ನು ಎದುರಿಸಲಿದ್ದಾರೆ. ಇತ್ತೀಚೆಗೆ ಕರ್ನಾಟಕ ಓಪನ್ ಪ್ರಶಸ್ತಿ ಗೆದ್ದ ಸ್ಮಿತ್ ಭರ್ಜರಿ ಫಾರ್ಮ್‌ನಲ್ಲಿದ್ದಾರೆ.

ಮಹತ್ವದ ಪಂದ್ಯದಲ್ಲಿ ಹೈದರಾಬಾದ್ ಎದುರಾಳಿ

ಚೆನ್ನೈಗಿಂದು ಮಾಡಿ ಇಲ್ಲವೇ ಮಡಿ ಪಂದ್ಯ

• ಚೆನ್ನೈ: ಮಾಡು ಇಲ್ಲವೇ ಮಡಿ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡ ಸೋಮವಾರದಂದು ಸನ್‌ರೈಸರ್ಸ್ ತಂಡವನ್ನು ಎದುರಿಸಲಿದೆ. ಪ್ಲೇಆಫ್ ರೇಸ್‌ನಲ್ಲಿ ಉಳಿಯಬೇಕಾದರೆ ಚೆನ್ನೈ ಈ ಪಂದ್ಯದಲ್ಲಿ ಗೆಲ್ಲಲೇಬೇಕು. ಸೋತರೆ ಪಂದ್ಯಾವಳಿಯಿಂದಲೇ ಹೊರಬೀಳಲಿದೆ. ಇತ್ತ ಸನ್‌ರೈಸರ್ಸ್ ಹೈದರಾಬಾದ್‌ಗೂ ಪಂದ್ಯಾವಳಿಯಲ್ಲಿ ಉಳಿಯಲು ಇದು ಮಹತ್ವದ ಪಂದ್ಯವಾಗಿದೆ. ಆರನೇ ಸ್ಥಾನದಲ್ಲಿರುವ ಚೆನ್ನೈ 16 ಅಂಕದೊಂದಿಗೆ ಪ್ಲೇಆಫ್‌ಗೆ ತಲುಪಲು ಗೆಲ್ಲಬೇಕಿದೆ. ಅತ್ತ ಸನ್‌ಗೂ ಇದು ಗೆಲ್ಲಲೇಬೇಕಾದ ಪಂದ್ಯವಾಗಿರಲಿದೆ.

ಲಖನೌ ಸೂಪರ್ ಜೇಂಟ್ಸ್ ವಿರುದ್ಧದ ಪಂದ್ಯದಲ್ಲಿ ಚೆನ್ನೈ ಭಾರೀ ಸೋಲನುಭವಿಸಿದೆ. ಅತ್ತ ಗುಜರಾತ್ ವಿರುದ್ಧ ಹೀನಾಯ ಸೋಲನುಭವಿಸಿರುವ ಹೈದರಾಬಾದ್ ಕೂಡ ಒತ್ತಡದಲ್ಲಿದೆ. ಎರಡೂ ತಂಡಗಳು ಸೋಲಿನಿಂದ ಹೊರಬರಬೇಕಿರುವುದರಿಂದ ಕುತೂಹಲ ಮೂಡಿಸಿದೆ. ಚೆನ್ನೈನ ಚೆಪಾಕ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದ್ದು, ಚೆನ್ನೈ ಪಂದ್ಯಾವಳಿಯ ಕೊನೆ ತವರು ಪಂದ್ಯವಾಡಲಿದೆ.

ಪುಟಿದೇಳುವುದೇ ಚೆನ್ನೈ?: ಒಬ್ಬರಾದ ಮೇಲೊಬ್ಬರು ಗಾಯಗೊಂಡು ಹೊರ ನಡೆಯುವುದು ಚೆನ್ನೈ ತಂಡ ದೊಡ್ಡ ಹಿನ್ನಡೆ. ಪಂದ್ಯಗಳನ್ನು ಗೆಲ್ಲಿಸುತ್ತಿದ್ದ ಜಿಮಿ ಓವರ್‌ಟನ್ ಕೂಡ ಗಾಯದಿಂದಾಗಿ ಹೊರನಡೆದಿದ್ದಾರೆ. ಈ ನಿಟ್ಟಿನಲ್ಲಿ ಲಖನೌ ವಿರುದ್ಧದ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ದೊಡ್ಡ ಹಿನ್ನಡೆ ಅನುಭವಿಸಿತ್ತು. ಮುಖ್ಯವಾಗಿ ಬೌಲಿಂಗ್ ವಿಚಾರದಲ್ಲಿ ಒತ್ತಡ ಎದುರಿಸುತ್ತಿರುವ ಚೆನ್ನೈ ತಂಡದಲ್ಲಿ ಅನುಭವಿ ವೇಗಿಗಳೇ ಇಲ್ಲ. ವಿಕೆಟ್ ಪಡೆದು ಪರ್ಪಲ್ ಕ್ಯಾಪ್ ಪೈಪೋಟಿಯಲ್ಲಿದ್ದ ಅನ್ಶುಲ್ ಕಂಬೋಜ್ ಭಾರೀ ದುಬಾರಿಯಾಗಿದ್ದಾರೆ. ಸ್ಪೆನ್ಸರ್ ಜಾನ್ಸನ್ ಕಳೆದ ಪಂದ್ಯದಲ್ಲಿ ಉತ್ತಮವಾಗಿ ಕಾಣಿಸಿಕೊಂಡಿದ್ದು, ಹೆಚ್ಚುವರಿ ಬೌಲರ್ ಆದ ಗುರ್ಜಪ್ನೀತ್ ಕೂಡ ದುಬಾರಿಯಾಗಿದ್ದಾರೆ. ಬ್ಯಾಟಿಂಗ್ ವಿಭಾಗದಲ್ಲಿ ಸಂಜು, ರುತುರಾಜ್ ನಿಂದ ರನ್ ಬರಬೇಕಿದೆ.

ಸನ್‌ಗೆ ಗೆಲುವಿನ ಹಂಬಲ: ಸನ್‌ರೈಸರ್ಸ್ ಹೈದರಾಬಾದ್ ಗೆಲುವಿನ ಹಳಿಗೆ ಮರಳುವ ತವಕದಲ್ಲಿದೆ. ಹಿಂದಿನ ಪಂದ್ಯದಲ್ಲಿ ಗುಜರಾತ್ ವಿರುದ್ಧ ಭಾರೀ ಸೋಲನುಭವಿಸಿದ್ದ ಸನ್‌ರೈಸರ್ಸ್ ದೊಡ್ಡ ಬ್ಯಾಟಿಂಗ್ ವೈಫಲ್ಯ ಕಂಡಿತ್ತು. 86 ರನ್‌ಗೆ ಆಲೌಟ್ ಆಗುವಾಗ ಯಾವುದೇ ಬ್ಯಾಟರ್ ಕೂಡ ಸಾಥ್ ಕೊಟ್ಟಿರಲಿಲ್ಲ. ಬೌಲಿಂಗ್ ವಿಭಾಗದಲ್ಲಿ ಎಲ್ಲರೂ ಯುವಕರೇ ಇದ್ದು ಅನುಭವದ ಕೊರತೆ ಕೂಡ ಅಲ್ಪ ಕಾಣಿಸಿಕೊಳ್ಳಲಿದೆ. ಇದೇ ಆವೃತ್ತಿಯಲ್ಲಿ ಚೆನ್ನೈ ವಿರುದ್ಧ ಗೆದ್ದಿರುವ ಹೈದರಾಬಾದ್ ಗೆದ್ದು ಪ್ಲೇಆಫ್‌ಗೇರುವ ತವಕದಲ್ಲಿದೆ.

ಪಿಚ್: ಚೆನ್ನೈನ ಚೆಪಾಕ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬ್ಯಾಟಿಂಗ್ ಮತ್ತು ಬೌಲರ್ ಇಬ್ಬರಿಗೂ ಲಾಭ ಸಿಗಲಿದೆ. ಇಬ್ಬನಿ ಬೌಲರ್‌ಗಳಿಗೆ ಕಾಟ ಕೊಟ್ಟರೆ, ಹೆಚ್ಚಿನ ಬೌನ್ಸ್ ಬ್ಯಾಟಿಗರಿಗೆ ಚಿಂತೆಯಾಗಿರಲಿದೆ.



ಧೋನಿಗೆ ಕೊನೆ ಪಂದ್ಯ?

ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿಗಿದು ಕೊನೆಯ ಪಂದ್ಯವಾಗಿರಲಿದ್ದು, ಸನ್ ವಿರುದ್ಧ ಮೈದಾನಕ್ಕಿಳಿಯಲಿದ್ದಾರೆ ಎನ್ನಲಾಗುತ್ತಿದೆ. 44 ವರ್ಷದ ಧೋನಿ, ಈ ಬಾರಿ ಒಂದು ಪಂದ್ಯವನ್ನೂ ಆಡಿಲ್ಲ. ಈ ಬೆನ್ನಲ್ಲೇ ನಿವೃತ್ತಿ ವದಂತಿಗಳೂ ಹರಿದಾಡುತ್ತಿವೆ. ಹಿಂದಿನ ಅವರ ಹೇಳಿಕೆ ಪರಿಗಣಿಸಿದರೆ, ಅವರು ಚೆನ್ನೈನಲ್ಲಿ ಕೊನೆಯ ಪಂದ್ಯ ಆಡುವುದಾಗಿ ಹೇಳಿದ್ದರು. ಚೆನ್ನೈಗಿದು ಕೊನೆಯ ತವರು ಪಂದ್ಯವಾಗಿರಲಿದ್ದು ಧೋನಿ ತಮ್ಮ ಕ್ರಿಕೆಟ್ ವೃತ್ತಿಯ ಕೊನೆಯ ಪಂದ್ಯವಾಡಲಿದ್ದಾರೆ ಎಂಬ ಮಾತುಗಳು ಕೇಳಿಬಂದಿವೆ.

ಥೈಲ್ಯಾಂಡ್ ಓಪನ್ | ಫೈನಲ್‌ನಲ್ಲಿ ಭಾರತ ಜೋಡಿಗೆ ಸೋಲು

ಸಾತ್ವಿಕ್-ಚಿರಾಗ್ ರನ್ನರ್-ಅಪ್

• ಬ್ಯಾಂಕಾಕ್: ಥೈಲ್ಯಾಂಡ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಅಗ್ರ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಈ ವರ್ಷದ ತಮ್ಮ ಮೊದಲ ಫೈನಲ್‌ನಲ್ಲಿ ಸೋಲು ಅನುಭವಿಸಿದರು. ಇದರೊಂದಿಗೆ ಭಾರತ ಥೈಲ್ಯಾಂಡ್ ಓಪನ್ ಪಮದ್ಯಾವಳಿಯಲ್ಲಿ ಬೆಳ್ಳಿ ಮಾತ್ರ ಗೆದ್ದಿತು. ಬ್ಯಾಂಕಾಕ್‌ನಲ್ಲಿ ಭಾನುವಾರ ನಡೆದ ಪುರುಷರ ಡಬಲ್ಸ್ ಫೈನಲ್‌ನಲ್ಲಿ ಇಂಡೋನೇಷ್ಯಾದ ಲಿಯೋ ರೋಲಿ ಕಾರ್ನಾಂಡೋ ಮತ್ತು ಡೇನಿಯಲ್ ಮಾರ್ಥಿನ್ ಜೋಡಿ 21-12, 25-23 ನೇರ ಗೇಮ್‌ಗಳಲ್ಲಿ ಗೆದ್ದು ಪ್ರಶಸ್ತಿ ಮುಡಿಗೇರಿಸಿಕೊಂಡಿತು.

53 ನಿಮಿಷಗಳ ಕಾಲ ನಡೆದ ಈ ಪಂದ್ಯದಲ್ಲಿ ಭಾರತೀಯ ಜೋಡಿ ಕೊನೆಯವರೆಗೂ ಹೋರಾಟ ನಡೆಸಿದರೂ, ಇಂಡೋನೇಷ್ಯಾ ಜೋಡಿ ಐದು ಮುಖಾಮುಖಿಗಳಲ್ಲಿ ಮೊದಲ ಬಾರಿಗೆ ಸಾತ್ವಿಕ್-ಚಿರಾಗ್ ವಿರುದ್ಧ ಜಯ ಸಾಧಿಸಿತು. ಎರಡು ವರ್ಷಗಳ ಹಿಂದೆ ಇದೇ ಥೈಲ್ಯಾಂಡ್ ಓಪನ್ ಪ್ರಶಸ್ತಿ ಗೆದ್ದಿದ್ದ ಭಾರತೀಯ ಜೋಡಿ, ಮತ್ತೊಮ್ಮೆ ಚಾಂಪಿಯನ್ ಆಗುವ ಕನಸಿನೊಂದಿಗೆ ಕಣಕ್ಕಿಳಿದಿತ್ತು. ಆದರೆ ಇಂಡೋನೇಷ್ಯಾ ಜೋಡಿಯ ಆಕ್ರಮಣಾತ್ಮಕ ಆಟದ ಎದುರು ನಿರ್ಣಾಯಕ ಕ್ಷಣಗಳಲ್ಲಿ ಮುಗ್ಗರಿಸಿತು.



ಮೊದಲ ಸುತ್ತು: ಮೊದಲ ಗೇಮ್‌ನಲ್ಲಿ ಸಾತ್ವಿಕ್-ಚಿರಾಗ್ ಆರಂಭದಲ್ಲೇ 1-4 ಹಿನ್ನಡೆ ಅನುಭವಿಸಿದರು. ಕೆಲ ಹೊತ್ತಿಗೆ ಅಂತರ ಕಡಿಮೆ ಮಾಡಿದರೂ, ಕಾರ್ನಾಂಡೋ ಮತ್ತು ಮಾರ್ಥಿನ್ 13-8 ಮುನ್ನಡೆ ಸಾಧಿಸಿ ಪಂದ್ಯವನ್ನು ಸಂಪೂರ್ಣ ನಿಯಂತ್ರಣಕ್ಕೆ ತೆಗೆದುಕೊಂಡರು. ಭಾರತೀಯ ಜೋಡಿ ಸರ್ವಿಸ್ ವೇಳೆ ತಪ್ಪುಗಳನ್ನು ಮಾಡಿದ್ದು ಹಾಗೂ ಅನಗತ್ಯ ದೋಷಗಳಿಂದ ಮೊದಲ ಗೇಮ್ 21-12 ಅಂತರದಲ್ಲಿ ಕೈತಪ್ಪಿತು.

ಸೆಟ್ 2: ಎರಡನೇ ಗೇಮ್ ಮಾತ್ರ ತೀವ್ರ ಪೈಪೋಟಿಯಿಂದ ಕೂಡಿತ್ತು. ಎರಡೂ ಜೋಡಿಗಳು ಭರ್ಜರಿ ಸ್ಮ್ಯಾಷ್‌ಗಳು ಮತ್ತು ವೇಗದ ನೆಟ್ ರ್‍ಯಾಲಿಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿದವು. ಸಾತ್ವಿಕ್-ಚಿರಾಗ್ ಕೆಲ ಹಂತಗಳಲ್ಲಿ ಮುನ್ನಡೆ ಪಡೆದರೂ, ಇಂಡೋನೇಷ್ಯಾ ಜೋಡಿ ಚತುರ ಸರ್ವಿಸ್ ಮತ್ತು ಬಲಿಷ್ಠ ಸ್ಮ್ಯಾಶ್‌ಗಳ ಮೂಲಕ ಮರುಹೋರಾಟ ನಡೆಸಿತು. 19-19 ಸಮಬಲದ ವೇಳೆ ಇಂಡೋನೇಷ್ಯಾ ಜೋಡಿಗೆ ಮೊದಲ ಪಂದ್ಯ ಪಾಯಿಂಟ್ ಸಿಕ್ಕಿತು. ಭಾರತೀಯರು ನಾಲ್ಕು ಪಂದ್ಯ ಪಾಯಿಂಟ್ ಉಳಿಸಿಕೊಂಡರೂ, ಕೊನೆಯಲ್ಲಿ ಮಾರ್ಥಿನ್ ಬಾರಿಸಿದ ನಿರ್ಣಾಯಕ ಸ್ಮ್ಯಾಷ್ ಪಂದ್ಯಕ್ಕೆ ತೆರೆ ಎಳೆದಿತು. ಈ ಸೋಲಿನೊಂದಿಗೆ ಸಾತ್ವಿಕ್-ಚಿರಾಗ್ ಅವರ ಬಿ.ಡಬ್ಲ್ಯು.ಎಫ್ ವರ್ಲ್ಡ್ ಟೂರ್ ಪ್ರಶಸ್ತಿಗಾಗಿ ಎರಡು ವರ್ಷಗಳ ನಿರೀಕ್ಷೆ ಮುಂದುವರಿದಿದೆ. ಕಳೆದ ವರ್ಷ ಚೈನಾ ಮಾಸ್ಟರ್ಸ್ ಮತ್ತು ಹಾಂಗ್ ಕಾಂಗ್ ಓಪನ್‌ಗಳಲ್ಲೂ ಅವರು ರನ್ನರ್-ಅಪ್ ಆಗಿದ್ದರು.

ದಿಲ್ಲಿ ಕ್ಯಾಪಿಟಲ್ಸ್‌ಗೆ ಸ್ಪರ್ಧಾತ್ಮಕ ಗುರಿ

• ಹೊಸದಿಲ್ಲಿ: ವೈಭವ್ ಸೂರ್ಯವಂಶಿ, ರಿಯಾನ್ ಪರಾಗ್ ಮತ್ತು ಧ್ರುವ್ ಜುರೇಲ್ ಅವರ ಭರ್ಜರಿ ಬ್ಯಾಟಿಂಗ್ ಪ್ರದರ್ಶನದಿಂದಾಗಿ ದಿಲ್ಲಿ ಕ್ಯಾಪಿಟಲ್ಸ್ ವಿರುದ್ಧ ರಾಜಸ್ಥಾನ ದೊಡ್ಡ ಸ್ಕೋರ್ ನಿರ್ಮಿಸಿತು.

ಗೆಲ್ಲಲೇಬೇಕಾದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆರ್‌ಆರ್ ಆರಂಭದಲ್ಲಿ ವೈಭವ್ ನಂತರ ರಿಯಾನ್ ಆಸರೆ ಪಡೆಯಿತು. ಆದಾಗ್ಯೂ ಲುಂಗಿ(24/2), ಸ್ಟಾರ್ಕ್(40/4) ಅವರ ಕರಾರುವಾಕ್ ಬೌಲಿಂಗ್ ದಾಳಿಯೊಂದಿಗೆ ಕಡಿವಾಣ ಹಾಕಿದ ದಿಲ್ಲಿ ನಿರೀಕ್ಷಿತ ದೊಡ್ಡ ಸ್ಕೋರ್ ಬಿಟ್ಟುಕೊಡಲಿಲ್ಲ.

ಅಂತಿಮವರೆಗೂ ತಾಳ್ಮೆ ಪ್ರದರ್ಶಿಸಿದ ಧ್ರುವ್ 190ರ ಗಡಿ ದಾಟಿಸಿದ ನಂತರ ರಾಜಸ್ಥಾನ 20 ಓವರ್‌ಗಳಲ್ಲಿ 193 ರನ್‌ಗಳಿಸಿತು. ದಿಲ್ಲಿ 8 ವಿಕೆಟ್ ಪಡೆದುಕೊಂಡಿತು.

ವೈಭವ್-ರಿಯಾನ್ ಅಬ್ಬರ: ಟಾಸ್ ಗೆದ್ದ ದಿಲ್ಲಿ ಕ್ಯಾಪಿಟಲ್ಸ್ ಬ್ಯಾಟಿಂಗ್ ಆಹ್ವಾನ ಕೊಟ್ಟಿತು.
ಯಥಾಪ್ರಕಾರ ಆರಂಭಿಕ ಬ್ಯಾಟರ್ ವೈಭವ್ ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಆದರೆ 12 ರನ್ ಗಳಿಸಿದ ಜೈಸ್ವಾಲ್ ವಿಕೆಟ್ ಒಪ್ಪಿಸಿದರು.
ಮೂರನೇ ಕ್ರಮಾಂಕದಲ್ಲಿ ಬಂದ ಜುರೇಲ್ ಸ್ಟ್ರೈಕ್ ಕೊಡುವ ಜವಾಬ್ದಾರಿಗೆ ಬಿದ್ದರೆ, ವೈಭವ್ ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. ಪವರ್‌ಪ್ಲೇನಲ್ಲಿ ರಾಜಸ್ಥಾನ 75 ರನ್‌ಗಳಿಸಿ 1 ವಿಕೆಟ್ ಕಳೆದುಕೊಂಡಿತು.

ವೈಭವ್ ಆಟ 5 ಬೌಂಡರಿ 3 ಸಿಕ್ಸರ್ ನಂತರ 46 ರನ್‌ಗೆ ನಿಂತಿತು. ನಾಲ್ಕನೇ ಕ್ರಮಾಂಕದಲ್ಲಿ ಬಂದ ನಾಯಕ ರಿಯಾನ್ ಪರಾಗ್ ಬರುತ್ತಲೇ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಮಧ್ಯಮ ಓವರ್‌ಗಳಲ್ಲಿ ಜುರೇಲ್ ಹಾಗೂ ರಿಯಾನ್ ಇನ್ನಿಂಗ್ಸ್ ಕಟ್ಟಿದರು.

5 ಭರ್ಜರಿ ಸಿಕ್ಸರ್ ಬಾರಿಸಿದ ರಿಯಾನ್ 25 ಬಾಲ್‌ಗಳಲ್ಲಿ 50 ರನ್ ಬಾರಿಸಿ ಮುಂದಿನ ಬಾಲ್‌ನಲ್ಲೇ ವಿಕೆಟ್ ಒಪ್ಪಿಸಿದರು. ಬಳಿಕ ದಿಢೀರ್ ಕುಸಿತ ಕಂಡ ಆರ್‌ಆರ್ ಫೆರೀರಾ 0, ರವಿ 4, ಶುಭಂ 5 ವಿಕೆಟ್ ಕಳೆದುಕೊಂಡಿತು.

ಜುರೇಲ್ ಮತ್ತೊಂದು ಬದಿಯಲ್ಲಿ ನಿಂತುಕೊಂಡರು. ಮಧ್ಯಮ ಓವರ್‌ಗಳಲ್ಲಿ ಆರ್‌ಆರ್ 96 ರನ್‌ಗಳಿಸಿ ನಾಲ್ಕು ವಿಕೆಟ್ ಕಳೆದುಕೊಂಡಿತು. ಡೆತ್ ಓವರ್‌ನಲ್ಲಿ ಹೆಚ್ಚಿನ ರನ್‌ಗಳು ಬರಲೇ ಇಲ್ಲ. ಶಣಕ 7 ರನ್‌ಗೆ ವಿಕೆಟ್ ಒಪ್ಪಿಸಿದರು. ಬಿಗಿ ದಾಳಿ ಸಂಘಟಿಸಿದ ಲುಂಗಿ ಕಡಿವಾಣ ಹಾಕಿದರು. ಧ್ರುವ್ 53 ರನ್‌ಗೆ ವಿಕೆಟ್ ಒಪ್ಪಿಸಿದರು. ಡೆತ್ ಓವರ್‌ನಲ್ಲಿ ರಾಜಸ್ಥಾನ ಕೇವಲ 22 ರನ್ ಮಾತ್ರ ಗಳಿಸಿತು.

ಗುಜರಾತ್ ಓಟಕ್ಕೆ ಕೋಲ್ಕತ್ತಾ ಬ್ರೇಕ್

• ಕೋಲ್ಕತ್ತಾ: ಗುಜರಾತ್ ಟೈಟಾನ್ಸ್ ತಂಡದ ಐದು ಪಂದ್ಯಗಳ ಗೆಲುವಿನೋಟಕ್ಕೆ ಬ್ರೇಕ್ ಹಾಕಿರುವ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವು ಐಪಿಎಲ್ ಪಂದ್ಯಾವಳಿಯಲ್ಲಿ ತನ್ನ ಸ್ಪರ್ಧೆ ಇನ್ನಷ್ಟು ಪ್ರಬಲಗೊಳಿಸಿದ್ದು, ಪ್ಲೇಆಫ್ ಫೈಟ್‌ಗೆ ಇನ್ನಷ್ಟು ಟ್ವಿಸ್ಟ್ ಕೊಟ್ಟಿದೆ. ಆಲೆನ್-ರಘು ಅವರ ಬ್ಯಾಟಿಂಗ್ ಮತ್ತು ತಂಡದ ಸಾಂಘಿಕ ಬೌಲಿಂಗ್ ಬಲದೊಂದಿಗೆ 29 ರನ್‌ಗಳಿಂದ ಗೆದ್ದಿರುವ ರಹಾನೆ ಪಡೆ ರೇಸ್‌ನಲ್ಲಿ ಉಳಿದಿದೆ.

ಶನಿವಾರದ ಪಂದ್ಯದಲ್ಲಿ ಕೆಕೆಆರ್ ಎರಡನೇ ಸ್ಥಾನದಲ್ಲಿರುವ ಗುಜರಾತ್ ತಂಡವನ್ನು ಎದುರಿಸಿತ್ತು. ಅಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ ಫಿನ್ ಆಲೆನ್(93), ಅಂಗ್ರಿಶ್ ರಘುವಂಶಿ(82*) ಬ್ಯಾಟಿಂಗ್‌ನೊಂದಿಗೆ 20 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 247 ರನ್ ಗಳಿಸಿತು. ಗುಜರಾತ್ ಪರ ಸಾಯಿ ಮತ್ತು ಸಿರಾಜ್ ವಿಕೆಟ್ ಪಡೆದರು. ಗುರಿ ಬೆನ್ನತ್ತಿದ ಗುಜರಾತ್ ಟೈಟಾನ್ಸ್ 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 218 ರನ್ ಗಳಿಸಿತು. ನಾಯಕ ಶುಭಮನ್ ಗಿಲ್ 85, ಬಟ್ಲರ್ 57 ಮತ್ತು ಸಾಯಿ ಸುದರ್ಶನ್ 53* ರನ್ ಗಳಿಸಿದರು. ಕೆಕೆಆರ್ ಪರ ನರೈನ್ 2, ಗ್ರೀನ್ ಮತ್ತು ಸೌರಭ್ ತಲಾ ಒಂದು ವಿಕೆಟ್ ಪಡೆದುಕೊಂಡರು.



ರನ್ ಮಟ್ಟ: ಪವರ್‌ಪ್ಲೇನಲ್ಲಿ ಕೆಕೆಆರ್ 56 ರನ್ ಮಾತ್ರ ಗಳಿಸಿತು. ಅತ್ತ ಗುಜರಾತ್ ಗಿಲ್ ಮತ್ತು ಸುದರ್ಶನ್ ಅವರ ಬ್ಯಾಟಿಂಗ್‌ನೊಂದಿಗೆ 56 ರನ್ ಗಳಿಸಿತು. ಮಧ್ಯಮ ಓವರ್‌ಗಳಲ್ಲಿ ಆಲೆನ್ ಮತ್ತು ರಘು ಅಬ್ಬರಿಸಿದ ನಂತರ ಕೆಕೆಆರ್ 136 ರನ್‌ಗಳಿಸಿತು. ಅಲ್ಲೇ ಸ್ಕೋರ್ ಹಿಗ್ಗಿಸಿಕೊಂಡ ಕೆಕೆಆರ್ ಉತ್ತಮ ಸ್ಥಿತಿಯಲ್ಲಿ ಕಾಣಿಸಿಕೊಂಡಿತು. ಆಲೆನ್ 93ಕ್ಕೆ ವಿಕೆಟ್ ಒಪ್ಪಿಸಿದ ನಂತರ ಗ್ರೀನ್ ಉತ್ತಮ ಬ್ಯಾಟಿಂಗ್ ಮಾಡಿದರು. ಇತ್ತ ಗುಜರಾತ್ ಪರ ಮಧ್ಯಮ ಓವರ್‌ಗಳಲ್ಲಿ ಗಿಲ್ ಮತ್ತು ಜಾಸ್ ಬಟ್ಲರ್ ಆಸರೆಯಾದರು. ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಹೋಪ್ ಉಳಿಸಿದ ಗಿಲ್ ಮತ್ತು ಬಟ್ಲರ್ ಅರ್ಧಶತಕಗಳನ್ನೂ ಬಾರಿಸಿದರು. ಗಿಲ್ 49 ಬಾಲ್‌ಗಳಲ್ಲಿ 85 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಡೆತ್ ಓವರ್‌ಗಳಲ್ಲಿ ಅಂಗ್ರಿಶ್ ರಘುವಂಶಿ ಮತ್ತು ಗ್ರೀನ್ ಸ್ಫೋಟಕ ಬ್ಯಾಟಿಂಗ್ ಮಾಡಿದ ಪರಿಣಾಮ ಕೆಕೆಆರ್ 55 ರನ್ ಗಳಿಸಿತು. ಅತ್ತ ಗುಜರಾತ್ ಬಟ್ಲರ್ ಮತ್ತು ಗಾಯದಿಂದ ಹೋಗಿ ಮರಳಿ ಬಂದ ಸುದರ್ಶನ್ ಅವರ ಅರ್ಧಶತಕಗಳ ನೆರವಿನಿಂದ 41 ರನ್ ಗಳಿಸಿದರೂ ಪಂದ್ಯವನ್ನು ಗೆಲ್ಲಲಾಗಲಿಲ್ಲ.


ಸಂಕ್ಷಿಪ್ತ ಸ್ಕೋರ್

ಕೆಕೆಆರ್ 20 ಓವರ್‌ಗಳಲ್ಲಿ 247/2: ಫಿನ್ 93, ರಘುವಂಶಿ 82; ಕಿಶೋರ್ 38/1
ಗುಜರಾತ್ 20 ಓವರ್‌ಗಳಲ್ಲಿ 218/4: ಗಿಲ್ 85, ಬಟ್ಲರ್ 57*; ನರೈನ್ 29/2

ಪದಬಂಧ

5987

» ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
1.ಒಂದು ನಾಡಿನ ಕಾನೂನುಬದ್ಧ ಪ್ರಜೆ (4)
3.ಕೈಯಲ್ಲಿ ತಂತಿವಾದ್ಯ ಹಿಡಿದವಳು-ಶಾರದೆ (4)
5.ಶತ್ರುಗಳ ನಡುವಿನ ಹೋರಾಟ (3)
6.ವಸು ಒಳಗೊಂಡ ಆವರಿಸು-ಅತ್ರಮಿಸುವಿಕೆ (4)
8.ಭಾರತದ ಮಗಳು ಇಲ್ಲಿ ತಿರುಗಿ ಕುಳಿತಿದ್ದಾಳೆ (4)
10.ದರಿಯ ನಡುವೆ ಮುಳ್ಳಿನ ಗಿಡವಿದೆ (3)
11.ಇದು ಮನುಷ್ಯ ನಿರ್ಮಿಸಿದ ಕೆರೆ (3)
13.ನಾಲ್ಕು ಸೇರುಗಳ ಒಟ್ಟು ಅಳತೆಯಿದು (3)
15.ತೆಗೆದುಹಾಕು-ವಜಾಗೊಳಿಸುವಿಕೆ (4)
16.ಈತ ಅರಸನ ಉತ್ತರಾಧಿಕಾರಿ (4)

ಮೇಲಿನಿಂದ ಕೆಳಕ್ಕೆ
1.ಹಳ್ಳಿಯ ಮುಖ್ಯಸ್ಥ-ಪಟೇಲ (4)
2.ಎಲ್ಲವನ್ನೂ ನುಂಗಿಹಾಕು (4)
3.ಕಲಿತನದ ಕುರಿತ ಹಾಡು (4)
4.ದಾಹ ತಣಿಸಿದ ನದಿ ತಲೆಕೆಳಗಾಗಿದೆ (4)
7.ಕೆಟ್ಟ ಉಪಕರಣ ಸರಿಮಾಡುವುದು (3)
9.ಜಾತದ ನಡುವೆ ಎಚ್ಚರಗೊಂಡವನಿದ್ದಾನೆ (3)
10.ದರ ಕೇಳದೆ ಕಾರಣದೆಡೆಗೆ ಹರಿಸಿದ ಲಕ್ಷ್ಯ (4)
12.ವಾನರನ ಲಾಂಛನವುಳ್ಳ ಬಾವುಟವುಳ್ಳವನು-ಅರ್ಜುನ (4)
13.ಇದು ಒಣಗಿದ ಮರದ ತುಂಡು (3)
14.ಕಳೆದ ಆಯಸ್ಸು-ಮುಪ್ಪಾದುದು (3)

5986 ಉತ್ತರ

ಎಡದಿಂದ ಬಲಕ್ಕೆ:
1.ಆತ್ಮಚರಿತ್ರೆ 4.ದಾವರ
5.ಪಕೋಡ 6.ಹಯ
8.ಕಂಬಿಕೀಳು
10.ಕರಡಿಗೆ 12.ತರ
14.ಬಿದಿರು 15.ಪಟಾಕಿ
16.ಬಿಚ್ಚುಮನಸ್ಸು

ಮೇಲಿನಿಂದ ಕೆಳಕ್ಕೆ:
1.ಆದಾಯ 2.ಬಿಲ್ವಪತ್ರೆ
3.ಬೇಡ 4.ರಣದವಕ
7.ಹಲಬಗೆ 8.ಕಂದಹಾರ
9.ಕಿರುಬೆರಳು
11.ಬಿರುನುಡಿ 13.ತಪಸ್ಸು
14.ಬಿಕೋ

ಸಾರಿಗೆ ಇಲಾಖೆ
TRANSPORT DEPARTMENT



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಸಾರಿಗೆ ಇಲಾಖೆ
ಮೂರು ವರ್ಷಗಳ ಸಾಧನೆಯ ಮೈಲಿಗಲ್ಲು



ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ



ಮೂಲಭೂತ ಸೌಕರ್ಯಗಳ ಅಭಿವೃದ್ಧಿ

ರೂ. 70.12 ಕೋಟಿ ವೆಚ್ಚದಲ್ಲಿ **15** ನೂತನ ಪ್ರಾದೇಶಿಕ ಸಾರಿಗೆ ಕಛೇರಿಗಳ ನಿರ್ಮಾಣ | **ರೂ. 39.25** ಕೋಟಿ ವೆಚ್ಚದಲ್ಲಿ **6** ನೂತನ ಪ್ರಾದೇಶಿಕ ಸಾರಿಗೆ ಕಛೇರಿಗಳ ನಿರ್ಮಾಣ ಪ್ರಗತಿ

ಸ್ವಯಂಚಾಲಿತ/ಗಣಕೀಕೃತ ಪರೀಕ್ಷಾ ಪಥ (ADTS)

ರೂ. 266.00 ಕೋಟಿ ವೆಚ್ಚದಲ್ಲಿ ರಾಜ್ಯದ ವಿವಿಧ **45** ಸ್ಥಳಗಳಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳ ಸ್ಥಾಪನೆ

ಸ್ವಯಂಚಾಲಿತ ವಾಹನ ತಪಾಸಣಾ ಕೇಂದ್ರ

ಪಿ.ಪಿ.ಪಿ. ಯೋಜನೆಯಡಿ DBFOT ಮಾದರಿಯಲ್ಲಿ **12** ಹಾಗೂ BOO ಮಾದರಿಯಲ್ಲಿ **20** ಸ್ಥಳಗಳಲ್ಲಿ ಸ್ವಯಂಚಾಲಿತ ವಾಹನ ತಪಾಸಣಾ ಕೇಂದ್ರಗಳ ನಿರ್ಮಾಣಕ್ಕೆ ಕ್ರಮ

ಭಾರಿ ವಾಹನ ಚಾಲಕರ ತರಬೇತಿ ಕೇಂದ್ರ

ಬೆಂಗಳೂರು, ಧಾರವಾಡ, ಕಲಬುರಗಿ ಮತ್ತು ಮಂಗಳೂರುಗಳಲ್ಲಿ **ರೂ. 46.00** ಕೋಟಿಗಳ ವೆಚ್ಚದಲ್ಲಿ, ಭಾರಿ ವಾಹನ ಚಾಲನಾ ತರಬೇತಿ ಕೇಂದ್ರ ನಿರ್ಮಾಣ | ಬಳ್ಳಾರಿ, ವಿಜಯಪುರ, ನಾಗಮಂಗಲ ಮತ್ತು ಶಿವಮೊಗ್ಗಗಳಲ್ಲಿ **ರೂ. 21.00** ಕೋಟಿ ವೆಚ್ಚದಲ್ಲಿ ಭಾರಿ ವಾಹನ ಚಾಲನಾ ತರಬೇತಿ ಕೇಂದ್ರ ನಿರ್ಮಾಣಕ್ಕೆ ಕ್ರಮ

ಸೀಝಿಂಗ್ ಯಾರ್ಡ್

ಬೆಂಗಳೂರಿನ ಚಂದಾಪುರದಲ್ಲಿ ಕೆ.ಎಸ್.ಆರ್.ಟಿ.ಸಿ ವತಿಯಿಂದ **ರೂ. 1.48** ಕೋಟಿ ವೆಚ್ಚದಲ್ಲಿ ಸೀಝಿಂಗ್ ಯಾರ್ಡ್ ನಿರ್ಮಾಣ | ಬೆಂಗಳೂರಿನ ದೇವನಹಳ್ಳಿ ಮತ್ತು ಮಂಗಳೂರಿನಲ್ಲಿ **ರೂ. 7.58** ಕೋಟಿಗಳ ವೆಚ್ಚದಲ್ಲಿ ಸೀಝಿಂಗ್ ಯಾರ್ಡ್ ನಿರ್ಮಾಣಕ್ಕೆ ಕ್ರಮ

ನೋಂದಾಯಿತ ವಾಹನಗಳ ನಿಷ್ಕ್ರಿಯಪಡಿಸುವ ನೀತಿ (RVSF)

ಹಳೆಯ ಮಾಲಿನ್ಯಕಾರಕ ವಾಹನಗಳನ್ನು ಸ್ಕ್ರ್ಯಾಪ್ ಮಾಡುವ RVSF ಯೋಜನೆ | ಇದುವರೆಗೂ **11,368** ವಾಹನಗಳ ನಿಷ್ಕ್ರಿಯಗೊಳಿಸಲಾಗಿದೆ

ಡ್ರೈವರ್ ಡ್ರೋಜಿನೆಸ್ & ಅಟೆನ್ಷನ್ ವಾರ್ನಿಂಗ್ ಸಿಸ್ಟಮ್ (DD & AWS)

300 ಕೆ ಎಸ್ ಆರ್ ಟಿ ಸಿ ಬಸ್ಸುಗಳಲ್ಲಿ **ರೂ. 2.50** ಕೋಟಿಗಳ ವೆಚ್ಚದಲ್ಲಿ Driver Drowsiness & Attention Warning ಸಾಧನಗಳ ಅಳವಡಿಕೆ

Vehicle Location Tracking Device & Emergency Button ಅಳವಡಿಸುವ ಯೋಜನೆ

ಮಹಿಳೆ ಮತ್ತು ಮಕ್ಕಳ ಸುರಕ್ಷತೆಗಾಗಿ **2,25,560** ಸಾರ್ವಜನಿಕ ಸೇವಾ ವಾಹನಗಳಲ್ಲಿ VLTD and Panic Button ಅಳವಡಿಕೆ | ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ - ಯೋಜನೆಯ ಭಾಗವಾಗಿ **ರೂ. 22.00** ಕೋಟಿಗಳ ವೆಚ್ಚದಲ್ಲಿ ಸಾರಿಗೆ ಆಯುಕ್ತರ ಕಛೇರಿಯಲ್ಲಿ Command and Control Centre ಸ್ಥಾಪನೆ

ಅತಿ ಸುರಕ್ಷಿತ ನೋಂದಣಿ ಫಲಕ (HSRP)

ಕರ್ನಾಟಕ ರಾಜ್ಯದಲ್ಲಿ ಒಟ್ಟು **59** ಲಕ್ಷಕ್ಕೂ ಅಧಿಕ ಸಂಖ್ಯೆಯ ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕಗಳ ಅಳವಡಿಕೆ

ಸ್ಮಾರ್ಟ್ ಎನ್‌ಫೋರ್ಸ್‌ಮೆಂಟ್

ರೂ. 5.65 ಕೋಟಿ ವೆಚ್ಚದಲ್ಲಿ ರಾಜ್ಯದಲ್ಲಿರುವ ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳ **7** ಟೋಲ್ ಪ್ಲಾಜಾಗಳಲ್ಲಿ ಮತ್ತು **80** ವಿವಿಧ ಸ್ಥಳಗಳಲ್ಲಿ **ರೂ. 70.00** ಕೋಟಿ ವೆಚ್ಚದಲ್ಲಿ AI ಆಧಾರಿತ ಕ್ಯಾಮರಾ ಅಳವಡಿಸಲು ಕ್ರಮ

ಸಂಪರ್ಕ ರಹಿತ / ಆನ್ ಲೈನ್ ಸೇವೆಗಳು

ಸಾರಥಿ - **15** ಕಾಂಟ್ಯಾಕ್ಟ್ ಲೆಸ್ ಸೇವೆಗಳು
ಸಾರಥಿ - **16** ನಾನ್ ಕಾಂಟ್ಯಾಕ್ಟ್ ಲೆಸ್ ಸೇವೆಗಳು
ವಾಹನ್ - **9** ಕಾಂಟ್ಯಾಕ್ಟ್ ಲೆಸ್ ಸೇವೆಗಳು
ವಾಹನ್ - **12** ನಾನ್ ಕಾಂಟ್ಯಾಕ್ಟ್ ಲೆಸ್ ಸೇವೆ

ಜಿಯೋ ಫೆನ್ಸಿಂಗ್

ಜಿಯೋ ಫೆನ್ಸಿಂಗ್ ಆಧಾರಿತ m-Vahan Fitness App ಅನ್ನು **66** ಆರ್‌ಟಿಓಗಳಲ್ಲಿ ಜಾರಿ | ಪರಿಶೀಲನೆ ಬಳಿಕವೇ ವಾಹನಗಳ ಅರ್ಹತಾ ಪ್ರಮಾಣ ಪತ್ರ ನೀಡಿಕೆ

ಕೇಂದ್ರೀಕೃತ ಮುದ್ರಣ ಸೌಲಭ್ಯ (CPF)

ಮೈಕ್ರೋಚಿಪ್ ಆಧಾರಿತ RC & DL Smart card ವ್ಯವಸ್ಥೆ | ಕೇಂದ್ರೀಕೃತ ಮುದ್ರಣ ಸೌಲಭ್ಯ | ಈ ಯೋಜನೆಯನ್ನು ಜಾರಿಗೆ ತರುವಲ್ಲಿ ರಾಜ್ಯವು **4ನೇ** ಸ್ಥಾನದಲ್ಲಿದೆ

ರೆಟ್ರೋರಿಫ್ಲೆಕ್ಟೀವ್ ಟೇಪ್

ಅಪಘಾತಗಳನ್ನು ನಿಯಂತ್ರಿಸಲು ವಾಹನಗಳಿಗೆ **Retro Reflective Tape & rear marking plate** ಅಳವಡಿಕೆ

ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮತ್ತು ಕಲ್ಯಾಣ ಮಂಡಳಿ

ಮೋಟಾರು ಸಾರಿಗೆ ಸಂಬಂಧಿತ ಕಾರ್ಮಿಕರ ಮಂಡಳಿಯು ಪ್ರಸ್ತುತ ಕಾರ್ಮಿಕ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ/ ಸಾರಿಗೆ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುವ ಸಂಬಂಧ ಸಂಪುಟ ಅನುಮೋದನೆ ದೊರಕಿದೆ/ ಮುಂದಿನ ವಿಧಾನಮಂಡಲ ಅಧಿವೇಶನದಲ್ಲಿ ಒಪ್ಪಿಗೆ ಪಡೆದು ಸಾರಿಗೆ ಇಲಾಖೆಯ ವ್ಯಾಪ್ತಿಗೆ ತರಲಾಗುವುದು | ಸದರಿ ಮಂಡಳಿಯಡಿಯಲ್ಲಿ ವಿದ್ಯಾರ್ಥಿ ವೇತನ, ಅಪಘಾತ ಪರಿಹಾರ, ನೈಸರ್ಗಿಕ ಮರಣ ಪರಿಹಾರ ಹಾಗೂ ಅಂತ್ಯ ಸಂಸ್ಕಾರ ವೆಚ್ಚ, ವಿವಾಹ ವೆಚ್ಚ, ಫಲಾನುಭವಿ/ಫಲಾನುಭವಿಯ ಪತ್ನಿಗೆ ಹೆರಿಗೆ ಭತ್ಯೆ, ಮಕ್ಕಳಿಗೆ ಶೈಕ್ಷಣಿಕ ಸಹಾಯ, ಭವಿಷ್ಯ ನಿಧಿ, ವಸತಿ ಹಾಗೂ ವೃದ್ಧಾಶ್ರಮ ಸೌಲಭ್ಯ ಒದಗಿಸಲಾಗುವುದು

ಹೊಗೆ ತಪಾಸಣೆ ಪ್ರಮಾಣ ಪತ್ರಕ್ಕೆ ಹೊಸ ತಂತ್ರಾಂಶ ಅಭಿವೃದ್ಧಿ

5,95,000 ವಾಹನಗಳ ತಪಾಸಣೆ ಹಾಗೂ ಪ್ರಮಾಣ ಪತ್ರಗಳ ನೀಡಿಕೆ



ಮಾನ್ಯ ಸಾರಿಗೆ ಹಾಗೂ ಮುಜರಾಯಿ ಇಲಾಖೆ ಸಚಿವರಾದ **ಶ್ರೀ ರಾಮಲಿಂಗಾ ರೆಡ್ಡಿ** ಅವರು ರಸ್ತೆ ಸುರಕ್ಷತಾ ಅಭಿಯಾನದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಂದರ್ಭ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಆಯುಕ್ತರು ಸಾರಿಗೆ ಮತ್ತು ರಸ್ತೆ ಸುರಕ್ಷತೆ
1ನೇ ಮಹಡಿ, ಟಿಟಿಎಂಸಿ ಕಟ್ಟಡ, 'ಎ' ಬ್ಲಾಕ್, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-560027
ವೆಬ್ ಸೈಟ್: www.transport.karnataka.gov.in ಇ-ಮೇಲ್: transcom@nic.in ದೂ.ಸಂ.: 080-22214900

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ

ದಕ್ಷಿಣ ಕನ್ನಡ	ಉಡುಪಿ
30° 26°	31° 26°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಸೋಮವಾರ 18, ಮೇ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 2

22 ಗ್ರಾ.ಪಂಗಳಿಂದ ರೂ. 3,45,95,093 ಸಂಗ್ರಹ!



ಪುಟ 6

ರಸ್ತೆ ಬದಿಯಲ್ಲೇ ಮಾಂಸದ ಅವಶೇಷ, ರಾಶಿ ರಾಶಿ ತ್ಯಾಜ್ಯಗಳು

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಮೆಲ್ಕಾರ್ ಹೆದ್ದಾರಿಯಲ್ಲಿ ಭಯಹುಟ್ಟಿಸಿತು ಗುಜರಿ ಸಾಗಾಟ ಲಾರಿಯಲ್ಲಿ ಕಾಣಿಸಿಕೊಂಡ ಹಠಾತ್ ಬೆಂಕಿ...



ಮಂಗಳೂರಿನಿಂದ ಬೆಂಗಳೂರು ಕಡೆಗೆ ಗುಜರಿ ಸಾಮಗ್ರಿ ಸಾಗಾಟ ನಡೆಸುತ್ತಿದ್ದ ಲಾರಿಯೊಂದರಲ್ಲಿ ಹಠಾತ್ ಬೆಂಕಿ ಕಾಣಿಸಿಕೊಂಡ ಘಟನೆ ಮಂಗಳೂರು ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಮೆಲ್ಕಾರ್‌ನಲ್ಲಿ ಭಾನುವಾರ ಸಂಜೆ ನಡೆದಿದೆ. ಬಂಟ್ವಾಳ ಅಗ್ನಿಶಾಮಕ ಸಿಬ್ಬಂದಿಗಳು ಸ್ಥಳಕ್ಕೆ ಧಾವಿಸಿ ಬಂದು ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬ್ಯಾಟರಿಯಲ್ಲಿ ಶಾರ್ಟ್ ಸರ್ಕ್ಯೂಟ್ ಘಟನೆಗೆ ಕಾರಣ ಎಂದು ಶಂಕಿಸಲಾಗಿದೆ.

ಸುತ್ತಮುತ್ತ

ಎಲ್ಲೆಡೆ ಮುಂದುವರಿದ ಮೋಡ, ಬಿಸಿಲಿನ ಜುಗಲ್ ಬಂದಿ: ಕೆಲವೆಡೆ ಹನಿ ಮಳೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಭಾನುವಾರ ಮೋಡ ಮುಸುಕಿದ ವಾತಾವರಣ ಕಂಡುಬಂದಿದ್ದು, ಕೆಲವೆಡೆ ಒಂದಿಷ್ಟು ಸಾಧಾರಣ ಮಳೆಯಾಗಿದೆ.

ಹವಾಮಾನ ಇಲಾಖೆ ಮುನ್ಸೂಚನೆಯಂತೆ ಮುಂದಿನ ಎರಡು ದಿನಗಳ ಕಾಲ ಮಳೆ ಬಿರುಸು ಪಡೆದುಕೊಳ್ಳುವ ಸಾಧ್ಯತೆ ಇದೆ. ಈ ನಡುವೆ ಸೆಕೆಯ ತೀವ್ರತೆ ಯಥಾಸ್ಥಿತಿಯಲ್ಲಿದ್ದು, ಧಗೆಗೆ ನಾಗರಿಕರು ನಿತ್ಯವೂ ಹೈರಾಣಾಗುತ್ತಿದ್ದಾರೆ.

ಈಗ ಮೀನುಗಾರಿಕೆಗೆ ಅಡ್ಡಿಯಾದ ಗಾಳಿ, ಮಳೆ: ಕಡಲಿಗಿಳಿಯದ ದೋಣಿ

ಮಂಗಳೂರು: ಕರಾವಳಿಯಲ್ಲಿನ ಮಳೆಯ ಛಾಯೆ ಹಾಗೂ ಭಾರೀ ಗಾಳಿಯ ಹೊಡೆತ ಮೀನುಗಾರಿಕಾ ಕ್ಷೇತ್ರಕ್ಕೂ ತಟ್ಟಿದ್ದು, ಕರಾವಳಿಯಲ್ಲಿ ನಾಡದೋಣಿ ಮೀನುಗಾರಿಕೆ ಭಾಗಶಃ ಸ್ಥಗಿತಗೊಂಡಿದೆ.

ಆಗಾಗ ಕಾಣಿಸಿಕೊಳ್ಳುತ್ತಿರುವ ಗಾಳಿಯಿಂದಾಗಿ ಮೀನುಗಾರರು ಕಡಲಿಗಿಳಿಯುತ್ತಿಲ್ಲ, ಬೋಟ್‌ಗಳು ಮೀನುಗಾರಿಕೆಗೆ ತೆರಳಿವೆಯಾದರೂ ನಿರೀಕ್ಷಿತ ಮಟ್ಟದಲ್ಲಿ ಮೀನುಗಳು ಲಭಿಸುತ್ತಿಲ್ಲ ಎಂದು ಮೀನುಗಾರರು ಅಳಲು ತೋಡಿಕೊಂಡಿದ್ದಾರೆ.

ಕೆಸರಿನ ಹೊಂಡದಲ್ಲಿ ಸಿಕ್ಕಿಬಿದ್ದು ಫಜೀತಿಪಟ್ಟ ವ್ಯಾನ್: ರಕ್ಷಣೆಗೆ ಜೆಸಿಬಿ!

ಕಾಸರಗೋಡು: ಪೈಪ್ ಒಡೆದು ಕುಡಿಯುವ ನೀರು ಹರಿದ ಪರಿಣಾಮ ರಸ್ತೆ ಬದಿಯ ಹೊಂಡದಲ್ಲಿ ಸಿಲುಕಿ ಡಿಸ್ಟ್ರಿಬ್ಯೂಟರ್ ಕಂಪೆನಿಯ ವ್ಯಾನ್ ಪರದಾಟ ನಡೆಸಿದ ಘಟನೆ ಚೌಕಿ ಉಳಿಯತ್ತಡ್ಕ ರಸ್ತೆಯಿಂದ ಮೈಲ್‌ಪಾರೆ ವರೆಗೆ ತಿರುಗುವ ರಸ್ತೆಯಲ್ಲಿ ನಡೆದಿದೆ. ಇಲ್ಲಿ ಕೆಸರು ಹೊಂಡ ಸೃಷ್ಟಿಯಾಗಿದೆ. ಈ ರಸ್ತೆ ಮೂಲಕ ತೆರಳುತ್ತಿದ್ದ ವ್ಯಾನ್ ಹೊಂಡದಲ್ಲಿ ಸಿಲುಕಿತು. ಬಳಿಕ ಒಳಗಿದ್ದ ಸಾಮಗ್ರಿಗಳನ್ನೆ ಖಾಲಿಮಾಡಿ ಜೆಸಿಬಿ ಮೂಲಕ ತೆರವುಗೊಳಿಸಲಾಯಿತು.

ಗುಡುಗು ಸಿಡಿಲಿನ ಘರ್ಜನೆಗೆ ಬೆಚ್ಚಿಬಿದ್ದರು ಮಂಗಳೂರಿನ ಜನತೆ

ಮಂಗಳೂರು: ಭಾನುವಾರ ರಾತ್ರಿ ಮಂಗಳೂರು ನಗರದಲ್ಲಿ ಹಠಾತ್ ಕಾಣಿಸಿಕೊಂಡ ಭಾರೀ ಗುಡುಗು ಸಿಡಿಲಿಗೆ ನಾಗರಿಕರು ಕ್ಷಣಕಾಲ ಆತಂಕಕ್ಕೊಳಗಾದರು. ಭಾರೀ ಮಳೆಯ ಸಾಧ್ಯತೆ ಕಂಡುಬಂತಾದರೂ ಮಳೆ ಮಾತ್ರ ಕೆಲವು ಹನಿ ಸುರಿಸಿ ಮರೆಯಾಗಿದೆ.

ಗಂಟೆಗೆ 50 ಕಿಮೀ ವೇಗದಲ್ಲಿ ಬಿರುಗಾಳಿ?

ಕಡಲ ಅಬ್ಬರ ಶುರು

ಸಮುದ್ರಕ್ಕೆ ಇಳಿಯದಂತೆ ಮುನ್ನೆಚ್ಚರಿಕೆ

ಮಂಗಳೂರು/ ಉಡುಪಿ: ಕರಾವಳಿ ಭಾಗಗಳಲ್ಲಿ ಮಳೆಯ ಬಿರುಸು ತೀವ್ರಗೊಂಡ ಹಿನ್ನೆಲೆಯಲ್ಲಿ ಸಮುದ್ರದಲ್ಲಿ ಅಲೆಗಳ ಅಬ್ಬರ ಮತ್ತು ಭಾರೀ ಗಾಳಿ ಹೆಚ್ಚಾಗುವ ಸಾಧ್ಯತೆಗಳು ದಟ್ಟವಾಗಿದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

ಕೋಸ್ಟ್ ಗಾರ್ಡ್‌ನಿಂದ ಎಚ್ಚರಿಕೆ

ಕರಾವಳಿ ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡದಲ್ಲಿ ಮುಂದಿನ ಐದು ದಿನಗಳ ಕಾಲ ಭಾರಿ ಗಾಳಿ ಸಹಿತ ಕಡಲು ಪ್ರಕ್ಷುಬ್ಧವಾಗಿರಲಿದ್ದು, ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಹವಾಮಾನ ಇಲಾಖೆಯ ಮುನ್ಸೂಚನೆ ಆಧರಿಸಿ ಕರಾವಳಿ ಕಾವಲು ಪಡೆ ತೀವ್ರ ಮುನ್ನೆಚ್ಚರಿಕೆ ನೀಡಿದೆ. ಕೇಂದ್ರ ಗೃಹ ಸಚಿವಾಲಯದ ತುರ್ತು ಸ್ಪಂದನಾ ನಿಯಂತ್ರಣ ಕೊಠಡಿ ಈ ಕುರಿತು ಅಧಿಕೃತ ಜಾಗೃತಿ ಪತ್ರ ಹೊರಡಿಸಿದ್ದು, ಕರಾವಳಿ ತೀರದಲ್ಲಿ ಗಂಟೆಗೆ 40 ರಿಂದ 50 ಕಿಲೋಮೀಟರ್ ವೇಗದಲ್ಲಿ ಬಿರುಗಾಳಿ ಬೀಸುವ ಸಾಧ್ಯತೆಯಿದೆ ಎಂದು ತಿಳಿಸಿದೆ.



ಮುಲ್ಕಿಯಲ್ಲಿ ರಾಜ್ಯದಲ್ಲೇ ಗರಿಷ್ಠ 7 ಸೆ.ಮೀ. ಮಳೆ

ಕರಾವಳಿ ಕರ್ನಾಟಕದ ಹಲವೆಡೆ ಉತ್ತಮ ಮಳೆಯಾಗಿದ್ದು, ದಕ್ಷಿಣ ಒಳನಾಡು ಮತ್ತು ಉತ್ತರ ಒಳನಾಡಿನ ಕೆಲವು ಭಾಗಗಳಲ್ಲಿಯೂ ಗುಡುಗು ಸಹಿತ ಮಳೆಯಾಗಿದೆ. ಈ ನಡುವೆ ಮುಲ್ಕಿಯಲ್ಲಿ ರಾಜ್ಯದಲ್ಲೇ ಗರಿಷ್ಠ 7 ಸೆ.ಮೀ. ಮಳೆ ದಾಖಲಾಗಿದೆ. ಉಳಿದಂತೆ ಹಾವೇರಿಯಲ್ಲಿ 5, ಮೂಡಬಿದ್ರೆ, ಶಿವಮೊಗ್ಗ, ಹುಂಚದಕಟ್ಟೆ, ಕೊಟ್ಟಿಗೆಹಾರ ತಲಾ 4 ಸೆಂ.ಮೀ, ಉಪ್ಪಿನಂಗಡಿ, ಪುತ್ತೂರು, ಸುಳ್ಯ, ಶೃಂಗೇರಿ, ಭಾಗಮಂಡಲದಲ್ಲಿ ತಲಾ 3 ಸೆಂ.ಮೀ ಮಳೆಯಾಗಿದೆ.

ಕಡಲ ತೀರ ಪ್ರದೇಶಗಳಲ್ಲಿ ಗಾಳಿಯ ತೀವ್ರತೆ ಇನ್ನಷ್ಟು ಹೆಚ್ಚಾಗಿರುವುದರಿಂದ ಕರಾವಳಿ ಕಾವಲು ಪಡೆಯು ಈಗ ಈ ಭಾಗದಲ್ಲಿ ನಿರಂತರ ನಿಗಾ ಇರಿಸಿದೆ.

ತಕ್ಷಣವೇ ಸುರಕ್ಷಿತ ತೀರಕ್ಕೆ ಮರಳಿ ಬನ್ನಿ

ಈ ಅವಧಿಗಳಲ್ಲಿ ಕೆಲವೊಮ್ಮೆ ಗಾಳಿಯ ವೇಗ ಗಂಟೆಗೆ 60 ಕಿಲೋ ಮೀಟರ್ ವರೆಗೂ ಹೆಚ್ಚಾಗುವ ಸಂಭವ ಇರುವುದರಿಂದ ಉಡುಪಿ ಮತ್ತು ಮಂಗಳೂರಿನ ಮೀನುಗಾರಿಕಾ ಧಕ್ಕೆಗಳಲ್ಲಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆಳ ಸಮುದ್ರದಲ್ಲಿರುವ ಮೀನುಗಾರರು ತಕ್ಷಣವೇ ಸುರಕ್ಷಿತ ತೀರಕ್ಕೆ ಮರಳುವಂತೆ ಸೂಚಿಸಲಾಗಿದ್ದು, ಸಾರ್ವಜನಿಕರು ಹಾಗೂ ಪ್ರವಾಸಿಗರು ಕೂಡ ಸಮುದ್ರ ತೀರಕ್ಕೆ ಇಳಿಯದಂತೆ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರಗಳು ಕಟ್ಟೆಚ್ಚರ ವಹಿಸಿವೆ.

ಕೊಡಗಿನಲ್ಲಿ ಆಘಾತಕಾರಿ ಘಟನೆ

ಬೈಕ್‌ನ ಮೇಲೆ ಕಾಡಾನೆ ದಾಳಿ!

ಸವಾರರು ಪವಾಡ ಸದೃಶ ಪಾರು

ಮಡಿಕೇರಿ: ಮೈಸೂರು– ಮಡಿಕೇರಿ ನಡುವಿನ ರಾಷ್ಟ್ರೀಯ ಹೆದ್ದಾರಿ 275ಯ ಆನೆಕಾಡು ಬಳಿ ಕಾಡಾನೆಯೊಂದು ದ್ವಿಚಕ್ರ ಸವಾರರ ಮೇಲೆ ದಾಳಿ ನಡೆಸಲು ಯತ್ನಿಸಿದ ಘಟನೆ ಶನಿವಾರ ರಾತ್ರಿ ನಡೆದಿದ್ದು, ಅದೃಷ್ಟವಶಾತ್ ಇಬ್ಬರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಆನೆಕಾಡು ಬಳಿ ಏನಿದು ಘಟನೆ?

ಮಡಿಕೇರಿ ಕಡೆಯಿಂದ ಕುಶಾಲನಗರದತ್ತ ಬೈಕ್‌ನಲ್ಲಿ ಸಾಗುತ್ತಿದ್ದ ಸವಾರರಿಬ್ಬರು ಆನೆಕಾಡು ಬಳಿಯ ಮೆಟ್ನಳ್ಳ ಇಳಿಜಾರಿನಲ್ಲಿ ಹೆದ್ದಾರಿ ಮಧ್ಯದಲ್ಲಿ ಕಾಡಾನೆ ಸಾಗುತ್ತಿರುವುದನ್ನು ಕಂಡು ಭಯಭೀತರಾಗಿದ್ದಾರೆ. ಬೈಕ್ ಮತ್ತು ಕಾಡಾನೆ ನಡುವೆ ಅಂತರ ಕಡಿಮೆಯಿದ್ದ ಕಾರಣ ಬೈಕ್‌ನ್ನು ವಾಪಸ್ ತಿರುಗಿಸುವ ಸಂದರ್ಭ ಕಾಡಾನೆಯು ದಾಳಿಗೆ ಮುಂದಾಗಿದೆ. ಕೂಡಲೆ ಬೈಕ್‌ನ್ನು ರಸ್ತೆಯಲ್ಲಿ ಬಿಟ್ಟು ಸವಾರರಿಬ್ಬರು ಓಡಿ ತಪ್ಪಿಸಿಕೊಂಡಿರುವ ದೃಶ್ಯ ಹಿಂಬದಿಯಲ್ಲಿದ್ದ ವಾಹನದ ಕ್ಯಾಮರಾದಲ್ಲಿ ಸೆರೆಯಾಗಿದೆ. ಕಾಡಾನೆ ದಾಳಿಗೆ ಮುಂದಾಗುತ್ತಿದ್ದಂತೆ ಹಿಂದೆ ಇದ್ದ ವಾಹನದವರು ಹಾರ್ನ್ ಮಾಡಿ ಕಾಡಾನೆಯನ್ನು ಬೆದರಿಸಿದ್ದಾರೆ.



ಸೂಕ್ತ ಕ್ರಮಕ್ಕಾಗಿ ಅರಣ್ಯ ಇಲಾಖೆಗೆ ಆಗ್ರಹ

ಈ ರಸ್ತೆಯಲ್ಲಿ ಪ್ರತಿನಿತ್ಯ ರಾತ್ರಿ ಈ ಕಾಡಾನೆ ರಾಜಾರೋಷವಾಗಿ ಸಂಚರಿಸುತ್ತಿರುವ ಕಾರಣ ಸವಾರರು ಎಚ್ಚರವಹಿಸಬೇಕು, ಯಾವುದೇ ಜೀವಹಾನಿ ಸಂಭವಿಸುವ ಮುನ್ನ ಅರಣ್ಯ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಬಹುಕಾಲದ ಬಹುಬೇಡಿಕೆಯ ಅರಮನೆಗಯ ಸೇತುವೆ ಲೋಕಾರ್ಪಣೆ

ಎರಡು ಗ್ರಾಮಗಳ ಸಂಪರ್ಕ ಇನ್ನಷ್ಟು ಬಿಗಿ!

ಸುಳ್ಯ: ಬಹು ಕಾಲದ ಬೇಡಿಕೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಅರಮನೆಗಯ ಎಂಬಲ್ಲಿ ಎರಡು ಗ್ರಾಮ ಸಂಪರ್ಕಿತ ಸೇತುವೆ ನಿರ್ಮಾಣಗೊಂಡು ಉದ್ಘಾಟನೆ ಭಾನುವಾರ ನಡೆಯಿತು.


ಕೊಟ್ಟಿದ್ದ ಭರವಸೆ ಈಡೇರಿಸಲಾಗಿದೆ

ಶಾಸಕಿ ಭಾಗೀರಥಿ ಮುರುಳ್ಯ ಉದ್ಘಾಟಿಸಿ ಮಾತನಾಡಿ, ಚುನಾವಣಾ ಸಂದರ್ಭದಲ್ಲಿ ನೀಡಿದ ಭರವಸೆಯನ್ನು ಈಡೇರಿಸಲು ಸಾಧ್ಯವಾಗಿದೆ. ಅರಮನೆಗಯ ಸೇತುವೆ ಸೇರಿದಂತೆ ಸುಳ್ಯ ಮತ್ತು ಕಡಬ ತಾಲೂಕಿನ ಕೆಲ ಆದ್ಯತೆಯ 5 ಸೇತುವೆಗೆ ಅನುದಾನ ಮೀಸಲಿರಿಸಲಾಗಿದ್ದು, ಜನರ ಬೇಡಿಕೆಯಂತೆ ಹಂತಹಂತ ಅಭಿವೃದ್ಧಿ ಪಡಿಸಲಾಗುವುದು. ಈ ಸೇತುವೆಯನ್ನು ರಾಜ್ಯ ಸರಕಾರದ ವಿಪತ್ತು ಸಂಚಯನ ನಿಯಡಿ 1.75 ಕೋಟಿ ಅನುದಾನ ಬಳಸಿ ರಚಿಸಲಾಗಿದ್ದು, 30 ಮೀಟರ್ ಉದ್ದ ಹಾಗೂ 6.40 ಮೀಟರ್ ಅಗಲವಾಗಿ ನಿರ್ಮಿಸಿ ಸಾರ್ವಜನಿಕರ ಸಂಚಾರಕ್ಕೆ ಸಹಕಾರಿಯಾಗಲಿದೆ ಎಂದು ಹೇಳಿದರು. ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಹರೀಶ್ ಕಂಜಿಪಿಲಿ ಶುಭಹಾರೈಸಿದರು. ಸಭಾ ವೇದಿಕೆಯಲ್ಲಿ ತಾಲೂಕು ಪಂಚಾಯತ್ ಮಾಜಿ ಉಪಾಧ್ಯಕ್ಷೆ ಪುಷ್ಪಾ ಮೇದಪ್ಪ, ಅರಂತೋಡು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಕೇಶವ ಅಡ್ತಲೆ, ಮರ್ಕಂಜ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷೆ ಗೀತಾ ಹೊಸೊಳಿಕೆ, ಉಪಾಧ್ಯಕ್ಷ ಗೋವಿಂದ ಅಳವುಪಾರೆ, »» ಪುಟ 6



- ಈ ಸೇತುವೆಯನ್ನು ರಾಜ್ಯ ಸರಕಾರದ ವಿಪತ್ತು ಸಂಚಯನ ನಿಧಿಯಡಿ 1.75 ಕೋಟಿ ಅನುದಾನ ಬಳಸಿ ರಚಿಸಲಾಗಿದೆ.
- ಸೇತುವೆಯನ್ನು ಒಟ್ಟು 30 ಮೀಟರ್ ಉದ್ದ ಹಾಗೂ 6.40 ಮೀಟರ್ ಅಗಲವಾಗಿ ಇಲ್ಲಿ ನಿರ್ಮಾಣಗೊಳಿಸಲಾಗಿದೆ

ಕೊರಗಜ್ಜನ ಸನ್ನಿಧಿಗೆ ನಟಿ ರಚಿತರಾಮ್ ಭೇಟಿ



ಚಿತ್ರನಟಿ ಡಿಂಪಲ್ ಕ್ವೀನ್ ಖ್ಯಾತಿಯ ರಚಿತಾ ರಾಮ್, ಬಂಟ್ವಾಳ ತಾಲೂಕಿನ ಬೆಂಜನಪದವಿನಲ್ಲಿರುವ ಪ್ರಸಿದ್ಧ ಕೊರಗಜ್ಜ ಸನ್ನಿಧಿಗೆ ಭೇಟಿ ನೀಡಿ ಸ್ವಾಮಿಗೆ ತಮ್ಮ ಹರಕೆ ಕೋಲ ಸೇವೆಯನ್ನು ಅರ್ಪಿಸಿದರು.

ಶಾಲೆಗಳ ಪುನರಾರಂಭಕ್ಕೆ ಇನ್ನು ಎರಡು ವಾರಗಳಷ್ಟೇ ಉಳಿದಿವೆ ಬಾಕಿ | ಮಂದಗತಿಯಲ್ಲಿ ಸಾಗುತ್ತಿದೆ ಅಸುರಕ್ಷಿತ ಕಟ್ಟಡ ತೆರವು ಕಾಮಗಾರಿ

ಕಾಸರಗೋಡು ಜಿಲ್ಲೆಯಲ್ಲಿ ನೂತನ ಶೈಕ್ಷಣಿಕ ವರ್ಷಕ್ಕೆ ಸವಾಲಾಗುತ್ತಿದೆ ಫಿಟ್‌ನೆಸ್!


ಕಾಸರಗೋಡು: ಹೊಸ ಶೈಕ್ಷಣಿಕ ವರ್ಷ ಆರಂಭಕ್ಕೆ ಇನ್ನು ಕೇವಲ ಎರಡು ವಾರಗಳು ಬಾಕಿ ಉಳಿದಿದ್ದು, ಈ ನಡುವೆ ಫಿಟ್‌ನೆಸ್ ಪ್ರಮಾಣಪತ್ರ ಪಡೆಯದ ಶಾಲಾ ಕಟ್ಟಡಗಳ ಕೆಡವುವ ಕಾರ್ಯ ಇನ್ನೂ ನಡೆಯದೇ ಇರುವುದು ಈಗ ಹೊಸ ಸಂಕಷ್ಟವನ್ನು ಸೃಷ್ಟಿಸಿದೆ.

ಕಳೆದ ವರ್ಷವೇ ತರಗತಿಗಳು ಸ್ಥಗಿತವಾಗಿತ್ತು

ಕಳೆದ ವರ್ಷದ ಮಳೆಗಾಲದಲ್ಲಿ ಅಪಾಯಕಾರಿ ಸ್ಥಿತಿಯಲ್ಲಿದ್ದ ಕಟ್ಟಡಗಳಲ್ಲಿ ತರಗತಿ ನಡೆಸುವುದನ್ನು ಶಿಕ್ಷಣ ಇಲಾಖೆ ನಿಲ್ಲಿಸಿತ್ತು. ಆದರೆ ಈ ಕಟ್ಟಡಗಳನ್ನು ಕೆಡವಲು ಮತ್ತು ಬದಲಿ ವ್ಯವಸ್ಥೆಗೆ ಇಲ್ಲಿ ಅಧಿಕಾರಿಗಳು ಮೀನ ಮೇಷ ಎಣಿಸುತ್ತಿದ್ದಾರೆ ಎಂಬ ಆರೋಪಗಳಿವೆ. ಶಿಥಿಲಗೊಂಡ ಕಟ್ಟಡ ಕೆಡವದ ಕಾರಣ ಹೊಸ ಕಟ್ಟಡ ನಿರ್ಮಿಸಲು ಸ್ಥಳಾವಕಾಶವಿಲ್ಲದಿರುವುದು ಹಲವು ಶಾಲೆಗಳನ್ನು ಕಾಡುತ್ತಿರುವ ಸಮಸ್ಯೆಯಾಗಿದೆ. ಹೀಗಾಗಿ ಕಟ್ಟಡ ವ್ಯವಸ್ಥೆ ಇಲ್ಲದೆ ಜೂ. 1ರಂದು ಶಾಲೆ ತೆರೆಯುವಾಗ ಇಲ್ಲಿ ತರಗತಿ ಕೊಠಡಿಗಳ ಕೊರತೆಗೆ ಕಾರಣವಾಗಿ ಶಾಲಾ ಪಿಟಿಎ ಎಸ್‌ಎಂಸಿ ಸಮಿತಿಗಳು ಮತ್ತು ಶಿಕ್ಷಕರಿಗೆ ಹೊಸ ತಲೆನೋವಾಗಿ ಪರಿಣಮಿಸಿದೆ. ಸರ್ಕಾರ ಹೊಸ ಕಟ್ಟಡಗಳಿಗೆ ಹಣವನ್ನು ಮಂಜೂರು ಮಾಡಿದಾಗಲೂ ಸ್ಥಳಾವಕಾಶದ ಕೊರತೆಯು ಇದಕ್ಕೆ ಹಿನ್ನಡೆಯಾಗಿದೆ.

ತಪಾಸಣೆ ಬಿಗಿಗೊಳಿಸಲು ನೋಡಲ್ ಅಧಿಕಾರಿ

ಬೇಸಿಗೆ ಮಳೆ ಸಂದರ್ಭ ಕಳೆದ ಕೆಲವು ದಿನಗಳಲ್ಲಿ



ಸಂಗಮ ವಿಶೇಷ

ಏನೇನಿದೆ ಸಮಸ್ಯೆಗಳು?

- ಶಾಲಾ ಸುರಕ್ಷತೆ ಖಚಿತಪಡಿಸಿಕೊಳ್ಳಲು ಜಿಲ್ಲಾಮಟ್ಟದ ನೋಡಲ್ ಅಧಿಕಾರಿ
- ಶಾಲೆಗಳು ತೆರೆದಾಗ ತರಗತಿ ಕೊಠಡಿ ಕೊರತೆ ಉಂಟಾಗುವ ಸಾಧ್ಯತೆ ಕಾಡಿದೆ
- ಹಳೆಯ ಕಟ್ಟಡಗಳನು ತೆರವುಗೊಳಿಸದೆ ಹೊಸ ಕಟ್ಟಡ ನಿರ್ಮಿಸಲು ಸ್ಥಳವಿಲ್ಲ

ತಂಡದ ಮೇಲ್ವಿಚಾರಣೆಯಲ್ಲಿ ಇನ್ನು ಮುಂದೆ ತಪಾಸಣೆ ಕಠಿಣ

ವಿದ್ಯಾರ್ಥಿಗಳು ವಿದ್ಯುತ್ ಸ್ಪರ್ಶಿಸುವುದು, ಹಾವು ಕಡಿತ ಮತ್ತು ಕಟ್ಟಡಗಳು ಕುಸಿಯುವುದು ಮುಂತಾದ ಹಿಂದಿನ ಘಟನೆಗಳನ್ನು ಪರಿಗಣಿಸಿ ಇನ್ನು ಮುಂದೆ ತಪಾಸಣೆ ಕಠಿಣವಾಗಿರುತ್ತದೆ. ಹೊಸ ಸುರಕ್ಷತಾ ತಪಾಸಣೆಗಳನ್ನು ವೈದ್ಯಕೀಯ ಅಧಿಕಾರಿ, ಅಗ್ನಿಶಾಮಕ ಇಲಾಖೆ, ಅರಣ್ಯ ಇಲಾಖೆ, ಪಂಚಾಯತ್ ಇಂಜಿನಿಯರಿಂಗ್ ಇಲಾಖೆ, ಸಾರಿಗೆ ಇಲಾಖೆ, ಪೊಲೀಸ್ ಠಾಣೆಯ ಎಸ್ ಎಚ್‌ಒ ಮತ್ತು ಪಂಚಾಯತ್ ಕಾರ್ಯದರ್ಶಿ ಒಳಗೊಂಡ ತಂಡವು ಮೇಲ್ವಿಚಾರಣೆ ನಡೆಸುತ್ತಿದೆ.

ಜೂ. 1ರ ಮೊದಲು ಸಿಕ್ಕೀತೇ ಫಿಟ್‌ನೆಸ್ ಪ್ರಮಾಣಪತ್ರ??

ಶಾಲಾ ಕಟ್ಟಡ ಕುಸಿದಿರುವುದು ಭದ್ರತಾ ವ್ಯವಸ್ಥೆಗಳಲ್ಲಿನ ನ್ಯೂನತೆಗಳನ್ನು ಬಹಿರಂಗಪಡಿಸುತ್ತದೆ. ಇದರ ಹಿನ್ನೆಲೆಯಲ್ಲಿ ಶಾಲಾ ಕಟ್ಟಡಗಳ ಫಿಟ್‌ನೆಸ್‌ನ್ನು ಖಚಿತಪಡಿಸಿಕೊಳ್ಳಲು ತಪಾಸಣೆ ನಡೆಸಲು ವಿವಿಧ ಇಲಾಖೆಗಳನ್ನು ಸಂಘಟಿಸಲು ಜಿಲ್ಲಾ ಮಟ್ಟದಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಿಸಲು ಸಾರ್ವಜನಿಕ ಶಿಕ್ಷಣ ಇಲಾಖೆ ನಿರ್ಧರಿಸಿದೆ. ಜೂನ್ 1ರ ಮೊದಲು ಎಲ್ಲಾ ಶಾಲೆಗಳಿಗೆ ಫಿಟ್‌ನೆಸ್ ಪ್ರಮಾಣಪತ್ರಗಳನ್ನು ಒದಗಿಸುವುದು ಗುರಿಯಾಗಿದೆ.

ಅನಿಶ್ಚಿತತೆಯಲ್ಲಿ ಮೊಗ್ರಾಲ್ ಶಾಲಾ ಕಟ್ಟಡ ನಿರ್ಮಾಣ

ಮೊಗ್ರಾಲ್ ವೃತ್ತಿಪರ ಪ್ರೌಢಶಾಲೆಯಲ್ಲಿ ಹೈಯರ್ ಸೆಕೆಂಡರಿ ವಿಭಾಗಕ್ಕೆ ಹಂಚಿಕೆಯಾದ ಕಟ್ಟಡದ ನಿರ್ಮಾಣ ಇನ್ನೂ ಅನಿಶ್ಚಿತತೆಯಲ್ಲಿದೆ. ಶಾಲಾ ಮೈದಾನವನ್ನು ರಕ್ಷಿಸಲು ಸ್ಥಳೀಯರು ಮತ್ತು ಕ್ಲಬ್ ಸದಸ್ಯರ ಬಲವಾದ ನಿಲುವು ನಿರ್ಮಾಣಕ್ಕೆ ಅಡ್ಡಿಯಾಗುತ್ತಿದೆ. ಈ ಮಧ್ಯೆ ಉತ್ತಮ ಸ್ಥಿತಿಯಲ್ಲಿಲ್ಲದ ಮತ್ತು ಫಿಟ್‌ನೆಸ್ ಇಲ್ಲದ ಹಳೆಯ ಪ್ರೌಢಶಾಲಾ ಕಟ್ಟಡವನ್ನು ಕೆಡವಲಾಗಿಲ್ಲ, ಇದು ಹೊಸ ಕಟ್ಟಡವನ್ನು ನಿರ್ಮಿಸಲು ಸ್ಥಳಾವಕಾಶದ ಕೊರತೆಗೆ ಕಾರಣವಾಗಿದೆ. ಕಳೆದ ವರ್ಷ ಸೋರಿಕೆಯಿಂದಾಗಿ ಮುಚ್ಚಲ್ಪಟ್ಟ ಈ ಕಟ್ಟಡವನ್ನು ಇನ್ನೂ ತೆರವುಗೊಳಿಸಿಲ್ಲ.

ಬೋಳಿಯಾರಿನಲ್ಲಿ ಸಮಾಜ ಸೇವಾ ಸಹಕಾರಿ ಸಂಘದ 18ನೇ ಶಾಖೆ ಉದ್ಘಾಟಿಸಿ ಮಾಣಿಲ ಶ್ರೀ ಸಂದೇಶ

ಜನಸಾಮಾನ್ಯರ ಆರ್ಥಿಕ ಉನ್ನತಿಯ ಉದ್ದೇಶ ಸಾಕಾರ

ಬಂಟ್ವಾಳ: ಜನ ಸಾಮಾನ್ಯರಿಗೆ ಆರ್ಥಿಕ ಉನ್ನತಿ ಕೊಡಬೇಕು, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಉದ್ಯೋಗ ವಕಾಶವನ್ನು ನೀಡುವ ಮೂಲಕ ಜನವರ ಸೇವೆ ನೀಡಬೇಕು ಎನ್ನುವ ಉದ್ದೇಶದಿಂದ ಡಾ. ಅಮ್ಮೆಂಬಳ ಬಾಳಪ್ಪ ಹಾಗೂ ಹೂವಯ್ಯ ಮೂಲ್ಯನವರು ಅಂದು ಸ್ಥಾಪಿಸಿದ ಸಮಾಜ ಸೇವಾ ಸಹಕಾರಿ ಸಂಘ ಇಂದು ಅದೇ ಉದ್ದೇಶದಲ್ಲಿ ಮುಂದುವರಿಯುತ್ತಿರುವುದು ಅಭಿನಂದನೀಯ ಎಂದು ಮಾಣಿಲ ಶ್ರೀಧಾಮದ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ಹೇಳಿದರು.

ಉಳ್ಳಾಲ ತಾಲೂಕಿನ ಬೋಳಿಯಾರಿನ ಶ್ರೀ ದೇವಿಕಿರಣ್ ಸಂಕೀರ್ಣದಲ್ಲಿ ಸಮಾಜ ಸೇವಾ ಸಹಕಾರಿ ಸಂಘದ 18ನೇ ಬೋಳ್ಯಾರ್ ಶಾಖೆಯನ್ನು ಉದ್ಘಾಟಿಸಿ, ಬಳಿಕ ಸಭಾ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

ಠೇವಣಿ ಪತ್ರ ಬಿಡುಗಡೆ

ಅಮ್ಮೆಂಬಳ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ರಾಜರಾಮ ಭಟ್ ಭದ್ರತಾ ಕೊಠಡಿ ಉದ್ಘಾಟಿಸಿದರು. ಸಜೀಪಮುನ್ನೂರು ಮೂರ್ತೆದಾರರ ಸೇವಾ ಸಹಕಾರಿ ಸಂಘದ



ಅಧ್ಯಕ್ಷ ಕೆ. ಸಂಜೀವ ಪೂಜಾರಿ ಠೇವಣಿ ಪತ್ರ ಬಿಡುಗಡೆಗೊಳಿಸಿ, ಆಡಳಿತ ಮಂಡಳಿ ಹಾಗೂ ಸಿಬ್ಬಂದಿಗಳು ಗ್ರಾಹಕರೊಂದಿಗೆ ಇಟ್ಟುಕೊಂಡಿರುವ ಉತ್ತಮ ಸಂಬಂಧದಿಂದಾಗಿ ಇಂದು ಸಂಘ ಉನ್ನತಿಯ ಹಾದಿಯಲ್ಲಿದೆ. ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಸಮಾಜ ಸೇವಾ ಸಹಕಾರಿ ಸಂಘ ಕೊಡುಗೆ ನೀಡುತ್ತಿದ್ದು ಜಿಲ್ಲೆಯಲ್ಲಿ ದೊಡ್ಡ ಮಟ್ಟದಲ್ಲಿ ಬೆಳೆಯುತ್ತಿರುವ ಸಹಕಾರಿ ಸಂಘ ಎಂದು ಅಭಿಪ್ರಾಯಪಟ್ಟರು.

ಸಂಘದ ಅಧ್ಯಕ್ಷ ಸುರೇಶ್ ಕುಲಾಲ್ ಸಭಾಧ್ಯಕ್ಷತೆ ವಹಿಸಿ, ಬೋಳಿಯಾರಿನಲ್ಲಿ ಹೊಸ ಶಾಖೆ ಆರಂಭಗೊಂಡಿದ್ದು ಗ್ರಾಹಕರು ಠೇವಣಾತಿ ನೀಡಿ, ಸಾಲಪಡೆದು ಸಂಘದ ಅಭಿವೃದ್ಧಿಗೆ ಸಹಕರಿಸುವಂತೆ ವಿನಂತಿಸಿದರು. ಕಾರ್ಯಕ್ರಮದಲ್ಲಿ ಕಟ್ಟಡ ಮಾಲಕ ಕೇಶವ ಭಂಡಾರಿ ಅವರನ್ನು ಸನ್ಮಾನಿಸಲಾಯಿತು. ಅಮೂಲ್ಯ ಸ್ವಸಹಾಯ ಸಂಘಗಳನ್ನು ಅಭಿನಂದಿಸಲಾಯಿತು. ಮೂಲ್ಯರ ಯಾನೆ ಕುಲಾಲರ ಮಾತೃ ಸಂಘದ ಅಧ್ಯಕ್ಷ ಮಯೂರ್

> ಇಂದು ಸಮಾಜ ಸೇವಾ ಸಹಕಾರಿ ಸಂಘ ಪ್ರಗತಿಯ ಹಾದಿಯಲ್ಲಿದೆ. ಹೆಚ್ಚಿನ ಶಾಖೆಗಳು ಸ್ವಂತ ಕಟ್ಟಡಕ್ಕೆ ಸ್ಥಳಾಂತರಗೊಳ್ಳುವ ಸ್ಥಿತಿಗೆ ಅಭಿವೃದ್ಧಿಯಾಗಿದೆ. ಒಳ್ಳೆಯ ಉದ್ದೇಶ ಇಟ್ಟುಕೊಂಡು ಪ್ರಾಮಾಣಿಕ ಸೇವೆ ನೀಡಿದಾಗ ಸಂಸ್ಥೆ ಪ್ರಕಾಶಕ್ಕೆ ಬರುತ್ತದೆ. ಬ್ಯಾಂಕ್ ಮುಂದಿನ ಪೀಳಿಗೆಯ ಸಮಾಜದ ಸಂಪತ್ತು. ಇದನ್ನು ಈ ಪೀಳಿಗೆಯ ಜನರು ಅರ್ಥಮಾಡಿಕೊಳ್ಳಬೇಕು
>
> ● ಮೋಹನದಾಸ ಪರಮಹಂಸ ಶ್ರೀ

ಉಳ್ಳಾಲ್, ಬೋಳಿಯಾರ್ ಎಂಜೆಎಂ ಮಸೀದಿ ಅಧ್ಯಕ್ಷ ಪಿ.ಕೆ. ಅಬ್ದುಲ್ಲ, ಮಂಗಳೂರು ತಾ.ಪಂ. ಸದಸ್ಯ ಬಿ.ಕೆ. ಅಬ್ದುಲ್ ಜಬ್ಬಾರ್, ಬೋಳ್ಯಾರು ಗ್ರಾ.ಪಂ. ಅಧ್ಯಕ್ಷ ಶಕೂರು, ಮೆಸ್ಕಾಂ ನಿವೃತ್ತ ಎಂ.ಡಿ. ಮಂಜಪ್ಪ ಮೂಲ್ಯ, ಕುರ್ನಾಡು ದತ್ತಾತ್ರೇಯ ಹಿರಿಯ ಪ್ರಾಥಮಿಕ ಶಾಲೆಯ ಸಂಚಾಲಕ ಗಣೇಶ್ ನಾಯಕ್ ಕುರ್ನಾಡುಗುತ್ತು, ಸಜೀಪಮುನ್ನೂರು ಗ್ರಾ.ಪಂ. ಮಾಜಿ ಅಧ್ಯಕ್ಷ ಪರಮೇಶ್ವರ ಮೂಲ್ಯ, ನಾಗುರಿ ವ್ಯವಸಾಯ ಸೇವಾ ಸಹಕಾರಿ ಸಂಘದ ಮಾಜಿ ಕಾರ್ಯದರ್ಶಿ ಮೋಹನದಾಸ್ ಗಾಂಭಿರ್ ಬೋಳಿಯಾರ್ ಗುತ್ತು, ಉಳ್ಳಾಲ ಬ್ಲಾಕ್ ಕಾಂಗ್ರೆಸ್ ಹಿಂದುಳಿದ ವರ್ಗಗಳ ಉಪಾಧ್ಯಕ್ಷ ಭಾಸ್ಕರ ಕುತ್ತಾರ್ ,ಗುರುದೇವಾ ಸೇವಾ ಬಳಗ ಅಧ್ಯಕ್ಷ ನೇಮಿರಾಜ್ ಶೆಟ್ಟಿ,ಅಮ್ಮೆಂಬಳ ಕುಲಾಲ ಜಾತಿ ಅಭ್ಯುದಯ ಸಂಘದ ಅಧ್ಯಕ್ಷ ನಾಗಪ್ಪ ಕುಲಾಲ್ ಉದ್ದ, ದ.ಕ. ವರ್ತಕರ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷ ಸುಭಾಶ್ಚಂದ್ರ ಜೈನ್, ಸೆಲ್ಕೋ ಸೀನಿಯರ್ ಮ್ಯಾನೇಜರ್ ರವೀಣ ಬಂಗೇರ, ಸ್ಕಾಡ್ಸ್ ಅಧ್ಯಕ್ಷ ರವೀಂದ್ರ ಕಂಬಳಿ,ಪ್ರಗತಿಪರ ಕೃಷಿಕ ಚಿನ್ನಯ್ಯ ಸಾಲ್ಯಾನ್,ಉಪಾಧ್ಯಕ್ಷ ಜನಾರ್ದನ ಬೊಂಡಾಲ ವೇದಿಕೆಯಲ್ಲಿದ್ದರು. ಪ್ರಧಾನ ವ್ಯವಸ್ಥಾಪಕ ಭೋಜ ಮೂಲ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು. ನಿರ್ದೇಶಕರಾದ ಅರುಣ್ ಕುಮಾರ್ ಕೆ. ಸ್ವಾಗತಿಸಿದರು, ಕಿರಣ್ ಕುಮಾರ್ ಎ. ವಂದಿಸಿದರು. ಸತೀಶ್ ಹೊಸ್ಮಾರ್ ಕಾರ್ಯಕ್ರಮ ನಿರೂಪಿಸಿದರು.

ಸುತ್ತ ಮುತ್ತ

ಪುತ್ತೂರು: ಇಂದು ಕೇಂದ್ರ ಸರಕಾರದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

ಪುತ್ತೂರು: ಕೇಂದ್ರ ಸರಕಾರದ ಬೆಲೆ ಏರಿಕೆ ನೀತಿ ಮತ್ತು ಆಡಳಿತ ವೈಫಲ್ಯವನ್ನು ಖಂಡಿಸಿ ಮೇ 18 ಸೋಮವಾರದಂದು ಪುತ್ತೂರು ಬಸ್ ನಿಲ್ದಾಣದ ಬಳಿ ಇರುವ ಗಾಂಕಟ್ಟೆಯ ಎದುರು ಕಾಂಗ್ರೆಸ್ ಪಕ್ಷದ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಶಾಸಕ ಅಶೋಕ್ ರೈ ತಿಳಿಸಿದ್ದಾರೆ.

ಪುತ್ತೂರು ಪ್ರವಾಸಿ ಮಂದಿರದಲ್ಲಿ ನಡೆದ ಪುತ್ತೂರು, ವಿಟ್ಲ ಮತ್ತು ಉಪ್ಪಿನಂಗಡಿ ಬ್ಲಾಕ್ ಕಾಂಗ್ರೆಸ್ ಪ್ರಮುಖರ ಜೊತೆ ಶಾಸಕರು ಪ್ರತಿಭಟನೆ ವಿಚಾರವಾಗಿ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಜನರ ಮೇಲೆ ಹೊರೆ: ಅಶೋಕ್

ವಿಪರೀತ ಬೆಲೆ ಏರಿಕೆ ಜನಸಾಮಾನ್ಯರನ್ನು ಆತಂಕಕ್ಕೀಡು ಮಾಡಿದ್ದು ದಿನೇ ದಿನೇ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲದ ಬೆಲೆ ಏರಿಕೆಯಾಗುತ್ತಿದೆ ಇದನ್ನು ನಿಯಂತ್ರಣ ಮಾಡುವಲ್ಲಿ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರಕಾರ ವಿಫಲವಾಗಿದೆ. ದೇಶದ ಆರ್ಥಿಕ ಸ್ಥಿತಿ ದುಸ್ತರವಾಗಿದೆ. ನಿಯಂತ್ರಿಸುವಲ್ಲಿ ವಿಫಲವಾದ ಸರಕಾರ ದೇಶದ ಜನರಲ್ಲಿ ಚಿನ್ನ ಖರೀದಿಸಬೇಡಿ, ರಸಗೊಬ್ಬರ ಖರೀದಿಸಬೇಡಿ, ಇಂಧನ ಬಳಸಬೇಡಿ ಎಂದು ಆದೇಶ ಮಾಡುತ್ತದೆ. ಸರಕಾರದ ವೈಫಲ್ಯವನ್ನು ಜನರ ತಲೆ ಮೇಲೆ ಹೊರಿಸುವುದು ಸರಿಯಲ್ಲ ಎಂದು ಅಶೋಕ್ ರೈ ತಿಳಿಸಿದರು. ಸಭೆಯಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ.ಎಸ್. ಮಹಮ್ಮದ್, ಕೆಪಿಸಿಸಿ ಸಂಯೋಜಕ ಕಾವು ಹೇಮನಾಥ ಶೆಟ್ಟಿ, ಬ್ಲಾಕ್ ಅಧ್ಯಕ್ಷರಾದ ಕೃಷ್ಣಪ್ರಸಾದ್ ಆಳ್ವ, ಪದ್ಮನಾಭ ಪೂಜಾರಿ, ಯು.ಟಿ. ತೌಸೀಫ್, ಡಿಸಿಸಿ ಪ್ರಧಾನ ಕಾರ್ಯದರ್ಶಿ ಮುರಳೀಧರ್ ರೈ ಮಠಂತಬೆಟ್ಟು, ಪ್ರಚಾರ ಸಮಿತಿ ಅಧ್ಯಕ್ಷ ಡಾ.ರಾಜಾರಾಂ, ಪಕ್ಷದ ಪ್ರಮುಖರಾದ ಕುಂಬ್ರ ದುರ್ಗಾಪ್ರಸಾದ್ ರೈ, ಜೋಕಿಂ ಡಿಸೋಜಾ, ರಮನಾಥ ವಿಟ್ಲ, ಯಾಕೂಬ್ ಮುಲಾರ್, ಅಸ್ಗರ್ ಅಲಿ ನೆಕ್ಕಿಲಾಡಿ, ಮಹಾಲಿಂಗ ನಾಯ್ಕ, ಜಯಪ್ರಕಾಶ್ ಬದಿನಾರ್, ಹೊನ್ನಪ್ಪ ಕೈಂದಾಡಿ, ಚಂದ್ರಪ್ರಭಾ, ಸನತ್ ಕುಮಾರ್ ರೈ, ಪೂರ್ಣೇಶ್ ಭಂಡಾರಿ, ವಿಕ್ರಂ ಶೆಟ್ಟಿ ಸುಶಾಂತ್, ಸುಮಿತ್ ಶೆಟ್ಟಿ, ರವಿಪ್ರಸಾದ್ ಶೆಟ್ಟಿ ಬನ್ನೂರು ಮೊದಲಾದವರಿದ್ದರು.

ಭಜನಾ ಮಂದಿರದ ನೂತನ ಅಧ್ಯಕ್ಷರಾಗಿ ಸುಧೀರ್ ಶೆಟ್ಟಿ ಆಯ್ಕೆ

ಮುಲ್ಕಿ: ಅಂಗರಗುಡ್ಡೆ,ರಾಮನಗರದ ಶ್ರೀರಾಮ ಭಜನಾ ಮಂದಿರದ ನೂತನ ಅಧ್ಯಕ್ಷರಾಗಿ



ಕೊಡೆತ್ತೂರು ಗುತ್ತು ಸುಧೀರ್ ಶೆಟ್ಟಿ ಆಯ್ಕೆಯಾಗಿದ್ದಾರೆ. ಉಳಿದಂತೆ ಉಪಾಧ್ಯಕ್ಷರಾಗಿ ಹರೀಶ್ ಸಫಲಿಗ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ಪುಜಾರಿ, ಜೊತೆ ಕಾರ್ಯದರ್ಶಿಯಾಗಿ ಸಂತೋಷ್ ಕುಮಾರ್ ತಾಳಿಪಾಡಿ,ಕೋಶಾಧಿಕಾರಿಯಾಗಿ ಸುರೇಶ್ ಎನ್. ಪೂಜಾರಿ, ಭಜನಾ ಕಾರ್ಯದರ್ಶಿಯಾಗಿ ಯೋಗೀಶ್ ಎನ್. ಪೂಜಾರಿ ಆಯ್ಕೆಯಾಗಿದ್ದಾರೆ.

ಸ್ವಚ್ಛತಾ ಕಾವಲು ಸಮಿತಿ ರಚನೆಯ ಪೂರ್ವಬಾವಿ ಸಭೆ

ಬಂಟ್ವಾಳ: ಸ್ವಚ್ಚ ಶನಿವಾರ ಆಚರಣೆಯ ಪ್ರಯುಕ್ತ ಶ್ರಮದಾನ ಹಾಗೂ ಸ್ವಚ್ಚತಾ ಕಾವಲು ಸಮಿತಿ ರಚನೆಯ ಪೂರ್ವಬಾವಿ ಸಭೆ ನಡೆಯಿತು. ಗ್ರಾಮ ಪಂಚಾಯತ್ ಆಡಳಿತ ಅಧಿಕಾರಿ ಗೋವಿಂದರಾಜು ಎ.ವಿ ವಹಿಸಿದ್ದರು.

ಸ್ವಚ್ಚತೆಯ ಬಗ್ಗೆ ಜಾಗೃತರಾಗಿ

ಪಂಚಾಯತ್ ನ ಅಭಿವೃದ್ಧಿ ಅಧಿಕಾರಿ ವಿಶ್ವನಾಥ ಬಿ ಅವರು ಸಾರ್ವಜನಿಕ ಸ್ಥಳಗಳಲ್ಲಿ ಕಸ ಕಡ್ಡಿ ಎಸೆಯದೆ ಸ್ವಚ್ಚತೆಯ ಬಗ್ಗೆ ಜಾಗೃತರಾಗಿರಬೇಕೆಂದರಲ್ಲದೆ ನಮ್ಮ ತ್ಯಾಜ್ಯ ನಮ್ಮ ಜವಾಬ್ದಾರಿ ಎಂಬ ಅರಿವು ಎಲ್ಲಾ ನಾಗರಿಕರಲ್ಲೂ ಮೂಡಬೇಕು, ಏಕ ಬಳಕೆ ಪ್ಲಾಸ್ಟಿಕ್ ಬಳಸದೆ ಎಲ್ಲರೂ ಕೈಚೀಲ ಬಳಕೆ ಮಾಡಬೇಕು ಎಂದರು. ಆರೋಗ್ಯದ ಹಿತದೃಷ್ಟಿಯಿಂದ ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಬೇಕು, ಬಳಸಿದ ಪ್ಲಾಸ್ಟಿಕ್ ಸುಡದೆ ಸ್ವಚ್ಚವಾಗಿ ಸಂಗ್ರಹಿಸಿ ಪ್ರತಿ ಮನೆಯಿಂದ ಗ್ರಾಮ ಪಂಚಾಯತ್ ನ ತ್ಯಾಜ್ಯ ಸಂಗ್ರಹ ವಾಹನಕ್ಕೆ ನೀಡಿ ಸಹಕರಿಸಬೇಕು ಎಂದು ಸೂಚಿಸಿದರು. ಬಳಿಕ ಪಂಚಾಯತ್‌ನ ಆವರಣದೊಳಗೆ ಸ್ವಚ್ಚತಾ ಕಾರ್ಯ ನಡೆಸಲಾಯಿತು. ಪಂಚಾಯತ್‌ನ ಕಾರ್ಯದರ್ಶಿ ನಾರಾಯಣ ನಾಯ್ಕ, ತಾಲೂಕು ಎನ್‌ಆರ್‌ಎಲ್ಎಂ ವ್ಯವಸ್ಥಾಪಕರು ಪ್ರದೀಪ್ ಕುಮಾರ್ , ಸಿಎಚ್‌ಓ ವಂದನಾ ಪ್ರಿಯಾ, ಆಶಾ ಕಾರ್ಯಕರ್ತೆಯರು. ಸಂಜೀವಿನಿ ಒಕ್ಕೂಟದ ಅಧ್ಯಕ್ಷರು ಪದಾಧಿಕಾರಿಗಳು, ಗ್ರಾಮದ ವ್ಯಾಪರಸ್ಥರು, ಸಾರ್ವಜನಿಕರು ಮತ್ತು ಗ್ರಾಮ ಪಂಚಾಯತ್ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಬೆಳ್ತಂಗಡಿ ರೋಟರಿ ಕ್ಲಬ್‌ನಿಂದ ಕನ್ನಡ ಸಾಹಿತ್ಯ ಸಂಭ್ರಮ, ಕವಿಗೋಷ್ಠಿ

ಪ್ರಾದೇಶಿಕ ಭಾಷೆಯನ್ನು ಉಳಿಸಿ ಬೆಳೆಸಿ: ಕಲ್ಲೂರ

ಬೆಳ್ತಂಗಡಿ: ರೋಟರಿ ಸಂಸ್ಥೆಯು ಕನ್ನಡ ಸಾಹಿತ್ಯ ಸಂಭ್ರಮ ಆಚರಿಸುತ್ತಿರುವುದು ಸಂತಸದಾಯಕ. ನಾವೆಲ್ಲಾ ಭ್ರಮೆಗಳಿಂದ ಹೊರಬಂದು ಪ್ರಾದೇಶಿಕ ಭಾಷೆಯನ್ನು ಅವಲಂಬಿಸಿ ಸ್ವದೇಶಿ ಪರಿಮಳ ಪಸರಿಸುವ ಕೆಲಸ ಆಗಬೇಕಿದೆ. ಮಕ್ಕಳಿಗೆ ಸಂಸ್ಕೃತಿಯ ಚಿಂತನೆ ಹಾಗೂ ರಾಷ್ಟ್ರೀಯತೆ ಕಲಿಸುವುದು ಅಗತ್ಯ ಕೆಲಸ. ಓದುವ ಹವ್ಯಾಸದಿಂದ ದೂರವಾಗುತ್ತಿದ್ದೇವೆ. ಆದ್ದರಿಂದ ಮಾತೃ ಸಂಸ್ಕೃತಿ ಬೆಳೆಸಿಕೊಳ್ಳೋಣ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಜಿಲ್ಲಾಧ್ಯಕ್ಷ ಪ್ರದೀಪ ಕುಮಾರ ಕಲ್ಲೂರ ಹೇಳಿದರು.

ರೋಟರಿ ಕ್ಲಬ್ ಬೆಳ್ತಂಗಡಿ ನೇತೃತ್ವದಲ್ಲಿ ಇದೇ ಮೊದಲ ಬಾರಿಗೆ ಮೇ 17ರಂದು ಅರಳಿಯ ರೋಟರಿ ಸೇವಾ ಭವನದಲ್ಲಿ ಹಮ್ಮಿಕೊಂಡಿದ್ದ ಕನ್ನಡ ಸಾಹಿತ್ಯ ಸಂಭ್ರಮ ಮತ್ತು ಬಹುಭಾಷಾ ಕವಿಗೋಷ್ಠಿ 2026 ಉದ್ಘಾಟಿಸಿ ಅವರು ಮಾತನಾಡಿದರು.

ಸಮ್ಮೇಳನದ ಅಧ್ಯಕ್ಷ ಕ.ಸಾ.ಪ. ತಾಲೂಕು ಅಧ್ಯಕ್ಷ ಡಿ.ಯದುಪತಿ ಗೌಡ ಮಾತನಾಡಿ, ದೇಶದಲ್ಲಿ ಒಂದು ಭಾಷೆಯನ್ನು ತೆಗೆದುಕೊಂಡಾಗ ಕನ್ನಡಕ್ಕೆ ಸಿಕ್ಕಷ್ಟು ಗೌರವ ಯಾವ ಭಾಷೆಗೂ ಸಿಕ್ಕಿಲ್ಲ, ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಿದ ಎಲ್ಲಾ ಕವಿ ಪರಂಪರೆಯನ್ನು ನಾವು ಇಂದು ನೆನಪಿಸಿಕೊಳ್ಳುವಂತಾಗಿದೆ. 8 ಭಾಷೆಗಳಲ್ಲಿ 17 ಮಂದಿ ಕವಿಗೋಷ್ಠಿಯಲ್ಲಿ ಭಾಗಿಯಾಗಿರುವುದು ಸಂತಸದಾಯಕ.



ನಾವು ಹೆಚ್ಚು ಓದಿದರೆ ಬರೆಯಲು ಸಾಧ್ಯ. ಓದು, ಅಧ್ಯಯನ, ಶಿಕ್ಷಣದಿಂದ ಅನುಭವ ಮತ್ತು ಜ್ಞಾನ ಪ್ರಾಪ್ತಿಯಾಗುತ್ತದೆ. ಭಾಷೆ ಸತ್ತರೆ ಸಂಸ್ಕೃತಿ ನಾಶವಾಗುತ್ತದೆ ಎಂದರು.

ಮುಖ್ಯ ಅತಿಥಿಯಾಗಿದ್ದ ಶಾಸಕ ಪ್ರತಾಪ ಸಿಂಹ ನಾಯಕ್ ಭಾಗವಹಿಸಿದರು. ರೋಟರಿ ಕ್ಲಬ್ ಅಧ್ಯಕ್ಷ ಪ್ರಕಾಶ ಪ್ರಭು ಪ್ರಸ್ತಾವನೆಗೈದರು. ಎಕ್ಸೆಲ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸುಮಂತ್ ಕುಮಾರ್ ಜೈನ್, ಸಂಧ್ಯಾ ಟ್ರೇಡರ್ಸ್ ಮಾಲಕ ರಾಜೇಶ್ ಪೈ ಶುಭ ಕೋರಿದರು. ರೋಟರಿ ಕ್ಲಬ್ ಅಧ್ಯಕ್ಷ ಪ್ರಕಾಶ ಪ್ರಭು ಅವರ ಹಳೆಕತೆ ಹೊಸ ರೀತಿ ಕೃತಿ ಬಿಡುಗಡೆಗೊಳಿಸಿ ಜಿಲ್ಲಾ ಕಸಾಪ ಅಧ್ಯಕ್ಷ ಡಾ. ಎಂ.ಪಿ ಶ್ರೀನಾಥ್ ಮಾತನಾಡಿದರು. ರಾಜೀವ ಗಾಂಧಿ ಸದ್ಭಾವನಾ ಪ್ರಶಸ್ತಿ ಪಡೆದ ರಾಜೇಶ್ ಪೈ ಅವರನ್ನು ಸನ್ಮಾನಿಸಲಾಯಿತು. ಮನೋರಮಾ ಉದಯಚಂದ್ರ, ಸೋಮಶೇಖರ ಶೆಟ್ಟಿ ನಿರೂಪಿಸಿದರು. ಪ್ರಕಾಶ ಪ್ರಭು ಸ್ವಾಗತಿಸಿ, ರೋಟರಿ ಕಾರ್ಯದರ್ಶಿ ಡಾ. ಎಂ.ಎಂ ದಯಾಕರ್ ವಂದಿಸಿದರು.

> **ಪ್ರಬುದ್ಧ ಗೋಷ್ಠಿಗಳು**
>
> ಹೊಸ ತಲೆಮಾರು ಮತ್ತುಓದಿನ ಅಭಿರುಚಿ ವಿಷಯದಲ್ಲಿ ಎಸ್.ಡಿ.ಎಂ ಕಾಲೇಜಿನ ಪ್ರಾಧ್ಯಾಪಕ ಡಾ. ಹಳೆಮನೆ ರಾಜಶೇಖರ, ಮನುಜ ಮತ ವಿಶ್ವಪಥ ವಿಷಯದಲ್ಲಿ ಮತ್ತೋರ್ವ ಪ್ರಾಧ್ಯಾಪಕ ಡಾ.ದಿವ ಕೊಕ್ಕಡ, ತುಳುನಾಡಿನ ದೈವಾರಾಧನೆ ವಿಷಯದ ಮೇಲೆ ಜಾನಪದ ವಿದ್ವಾಂಸ ಡಾ. ರವೀಶ ಪಡುಮಲೆ ಪ್ರಬುದ್ಧ ಗೋಷ್ಠಿ ನಡೆಸಿಕೊಟ್ಟರು. ಗೋಷ್ಠಿಯಲ್ಲಿ ಡಾ. ಪ್ರದೀಪ ಕುಮಾರ್ ಆಟಿಕುಕ್ಕೆ ನಾವೂರು ಇವರು ಪುತ್ರಿ ಮನಸ್ವಿನಿ ಜೊತೆಗೂಡಿ ಮಂಕು ತಿಮ್ಮನ ಕಗ್ಗ ಉಪನ್ಯಾಸ ನಡೆಸಿಕೊಟ್ಟರು.

ಜಿಲ್ಲಾ ಹಿಂದೂ ರಾಷ್ಟ್ರ ಅಧಿವೇಶನದಲ್ಲಿ ರಾಜಶೇಖರಾನಂದ ಶ್ರೀ ಸಲಹೆ

ದೇಶ ಧರ್ಮ ರಕ್ಷಣೆಗಾಗಿ ಕುಟುಂಬದ ಹಿತ ಮುಖ್ಯ

ಬಂಟ್ವಾಳ: ದೇಶ ಮತ್ತು ಧರ್ಮದ ರಕ್ಷಣೆಗಾಗಿ ಕುಟುಂಬದ ರಕ್ಷಣೆ ಮುಖ್ಯವಾಗಿದ್ದು, ಮಕ್ಕಳಿಗೆ ಎಳೆ ಪ್ರಾಯದಲ್ಲೇ ಉತ್ತಮ ಸಂಸ್ಕಾರ ನೀಡಬೇಕು ಸತ್ ಕುಟುಂಬದಿಂದಲೇ ಉತ್ತಮ ರಾಷ್ಟ್ರದ ಸ್ಥಾಪನೆ ಸಾಧ್ಯ ಎಂದು ಗುರುಪುರ ವಜ್ರದೇಹಿ ಮಠದ ಪೀಠಾಧಿಪತಿ ಶ್ರೀ ರಾಜಶೇಖರಾನಂದ ಸ್ವಾಮೀಜಿ ಹೇಳಿದರು.

ಹಿಂದೂ ಜನಜಾಗೃತಿ ಸಮಿತಿಯ ವತಿಯಿಂದ ಭಾನುವಾರ ಬಿ.ಸಿ.ರೋಡಿನ ಗೀತಾಂಜಲಿ ಕಲ್ಯಾಣ ಮಂಟಪದಲ್ಲಿ ನಡೆದ ಜಿಲ್ಲಾ ಹಿಂದೂ ರಾಷ್ಟ್ರ ಅಧಿವೇಶನದಲ್ಲಿ ಅವರು ಆಶೀರ್ವಚನಗೈದ ಅವರು ಹಿಂದೂಗಳು ಸ್ವಾರ್ಥ ಚಿಂತನೆಗಳನ್ನು ಬಿಟ್ಟು ನಿಸ್ವಾರ್ಥವಾಗಿ ಬದುಕಬೇಕು ಎಂದು ಶ್ರೀಗಳು ಸಂದೇಶ ನೀಡಿದರು.

ಹಿಂದೂ ಜನಜಾಗೃತಿ ಸಮಿತಿಯ ದಕ್ಷಿಣ ಕರ್ನಾಟಕ ಸಮನ್ವಯಕ ಚಂದ್ರ ಮೊಗವೀರ ದಿಕ್ಸೂಚಿ ಭಾಷಣದಲ್ಲಿ, ನಮ್ಮ ಸಮಾಜವು ಧರ್ಮವನ್ನು ಅರಿತು ಸಾತ್ವಿಕರಾದರೆ ಹಿಂದೂ ರಾಷ್ಟ್ರದ ಸ್ಥಾಪನೆ ಸಾಧ್ಯ. ಧರ್ಮ ಕಾರ್ಯದ ಹಾದಿಯಲ್ಲಿ ಬರುವ ಅಡೆತಡೆ ಗಳನ್ನು ಎದುರಿಸಲು ನಾವೆಲ್ಲರೂ ಕೈಜೋಡಿಸಬೇಕು ಎಂದರು.

ಹಿಂದೂ ಧರ್ಮದ ನಾಶಕ್ಕೆ ಸಂಚು

'ಲವ್ ಜಿಹಾದ್' ಎಂಬ ವಿಷ ಸಾರ್ವತ್ರಿಕವಾಗಿ ಹರಡುತ್ತಿದ್ದು, ಭಾರತ ಮತ್ತು ಹಿಂದೂ ಧರ್ಮವನ್ನು ನಾಶ ಮಾಡುವುದೇ



ಇದರ ಮೂಲ ಉದ್ದೇಶವಾಗಿದೆ ಎಂದು ಬಿ.ಸಿ. ರೋಡಿನ ನ್ಯಾಯವಾದಿ ಪ್ರಸಾದ್ ರೈ ಆತಂಕ ವ್ಯಕ್ತಪಡಿಸಿದರು.

ಜಿಹಾದ್‌ಗೆ ಬಲಿಯಾಗದಿರಿ

ಧರ್ಮದ ಆಧಾರ ಸ್ತಂಭವಾಗಿರುವ ಹಿಂದೂ ಹೆಣ್ಣುಮಕ್ಕಳನ್ನು ಪ್ರೀತಿ-ಪ್ರೇಮದ ನಾಟಕ ಹಾಗೂ ವೇಷಾಂತರಗಳ ಮಾಯಾ ಜಾಲಕ್ಕೆ ಸಿಲುಕಿಸಿ ಈ ಷಡ್ಯಂತ್ರ ನಡೆಸಲಾಗುತ್ತಿದೆ. ಯಾವುದೇ ಜಿಹಾದ್‌ಗಳಿಗೆ ಬಲಿಯಾಗದೆ ನಮ್ಮ ಸ್ವಯಂ ರಕ್ಷಣೆಯನ್ನು ನಾವೇ ಮಾಡಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ನಮ್ಮ ಸನಾತನ ಧರ್ಮಕ್ಕೆ ಎಲ್ಲ ಸಾಕ್ಷ್ಯಾಧಾರಗಳಿದ್ದರೂ ರಾಜಕಾರಣಿಗಳು ನಮ್ಮ ಆದರ್ಶ ಇತಿಹಾಸವನ್ನು ತಿರುಚಿದ್ದಾರೆ ಎಂದು ಉಡುಪಿಯ ಉದ್ಯಮಿ ಅಜಯ್ ಶೆಟ್ಟಿ ಬೇಸರ ವ್ಯಕ್ತಪಡಿಸಿದರು.

ಸನಾತನ ಸಂಸ್ಥೆಯ ಸಂತರಾದ ಸಾಂತಪ್ಪ ಗೌಡ, ನ್ಯಾಯವಾದಿ ಜಗದೀಶ ಶೇಣವ ಮಂಗಳೂರು, ಸಂದೇಶ್ ಶೆಟ್ಟಿ ಅರೆಬೆಟ್ಟು, ಬಂಟ್ವಾಳ ತಾ.ಪಂ. ಮಾಜಿ ಸದಸ್ಯ ಪ್ರಭಾಕರ ಪ್ರಭು, ಹಿಂದೂ ಜಾಗರಣ ವೇದಿಕೆ ಮುಖಂಡ ರಾಧಾಕೃಷ್ಣ ಅಡ್ಯಾಂತಾಯ, ಅಳಿಕೆ ಉಳಿಯ ವೈಷ್ಣವಿ ಕ್ಷೇತ್ರದ ಶ್ರೀಶಿವಾನಂದ ಸರಸ್ವತಿ ಸ್ವಾಮೀಜಿ, ಡಿಸಿಸಿ ಬ್ಯಾಂಕ್ ನಿರ್ದೇಶಕ ರಾಜಾರಾಮ್ ಭಟ್, ಹಿಂದೂ ಸಂಘಟನೆಯ ಮುಖಂಡರು, ದೇವಸ್ಥಾನಗಳ ವಿಶ್ವಸ್ಥರು, ಪುರೋಹಿತರು, ಆಡಳಿತ ಮಂಡಳಿಯವರು, ಧಾರ್ಮಿಕ ಪ್ರಮುಖರು ಸೇರಿದಂತೆ 250ಕ್ಕೂ ಅಧಿಕ ಮಂದಿ ಇದ್ದರು. ಸುಧಾ ತಲಪಾಡಿ, ಲಾವಣ್ಯ ನಿರೂಪಿಸಿದರು.

ಕುದ್ರೋಳಿ ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ಶನೀಶ್ವರ ಜಯಂತಿ



ಮಂಗಳೂರು: ಬಾವುಕ ಅಮಾವಾಸ್ಯೆ ಹಾಗೂ ಶನೀಶ್ವರ ಜಯಂತಿ ಅಂಗವಾಗಿ ಕುದ್ರೋಳಿ ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ಶನಿವಾರ ಶನೀಶ್ವರ ಜಯಂತಿ ಪೂಜೆ ವೈಭವದಿಂದ ನಡೆಯಿತು.

ವಿವಿಧ ಧಾರ್ಮಿಕ ಕಾರ್ಯಕ್ರಮ

ಬೆಳಗ್ಗೆ 9ಗಂಟೆಗೆ ಶನಿಶಾಂತಿ ಹೋಮ, ಅಭಿಷೇಕ ನಡೆಯಿತು. ಮಧ್ಯಾಹ್ನ 12.00ಗಂಟೆ ಮಹಾಪೂಜೆ ನೆರವೇರಿತು. ಸಂಜೆ 3.30ರಿಂದ ಶ್ರೀ ಚಂದ್ರಶೇಖರ್ ಪೂಜಾರಿ ಮುಂಬಯಿ ಮತ್ತು ಬಳಗದವರಿಂದ ಶ್ರೀ ಶನೀಶ್ವರ ಕಲ್ಪೋಕ್ತ ಪೂಜೆ, ಗ್ರಂಥ ಪಾರಾಯಣ ನಡೆಯಿತು. ರಾತ್ರಿ 7.00ರಿಂದ ಮಹಾಮಂಗಳಾರತಿ, ಪ್ರಸಾದ ವಿತರಣೆ ನಡೆಯಿತು.

ಈ ಸಂದರ್ಭ ಕ್ಷೇತ್ರದ ಅಭಿವೃದ್ಧಿಯ ರೂವಾರಿ ಬಿ. ಜನಾರ್ದನ ಪೂಜಾರಿ, ಕ್ಷೇತ್ರದ ಅಧ್ಯಕ್ಷರಾದ ಜೈರಾಜ್ ಹೆಚ್. ಸೋಮಸುಂದರಂ, ಉಪಾಧ್ಯಕ್ಷರಾದ ಊರ್ಮಿಳಾ ರಮೇಶ್ ಕುಮಾರ್, ಕಾರ್ಯದರ್ಶಿ ಮಾಧವ ಸುವರ್ಣ, ಕೋಶಾಧಿಕಾರಿ ಪದ್ಮರಾಜ್ ಆರ್., ಟ್ರಸ್ಟಿಗಳಾದ ಕಿಶೋರ್ ಕುಮಾರ್, ಕೃತಿನ್ ಡಿ. ಅಮೀನ್, ಅಭಿವೃದ್ಧಿ ಸಮಿತಿ ಅಧ್ಯಕ್ಷರಾದ ದೇವೇಂದ್ರ ಪೂಜಾರಿ, ಉಪಾಧ್ಯಕ್ಷರಾದ ಡಾ.ಬಿ.ಜಿ. ಸುವರ್ಣ, ಸದಸ್ಯರಾದ ಗೌರವಿ ರಾಜಶೇಖರ್, ಚಂದನ್‌ದಾಸ್ ಮತ್ತಿತರರು ಉಪಸ್ಥಿತರಿದ್ದರು.

ವಿಶಿಷ್ಟ ಚೇತನರಿಗೆ ಸ್ವಾವಲಂಬಿ ಬದುಕು: ಡಾ. ಎಂ. ಶಾಂತರಾಮ ಶೆಟ್ಟಿ



ಮಂಗಳೂರು: ವಿಶಿಷ್ಟ ಚೇತನರು ಯಾರನ್ನೂ ಅವಲಂಬಿಸದೆ ಸ್ವಾವಲಂಬಿ ಬದುಕು ನಡೆಸಲು ಸಾಧ್ಯವಿದೆ ಎನ್ನುವುದನ್ನು ಹಲವಾರು ಮಂದಿ ಸಾಧಿಸಿ ತೋರಿಸಿದ್ದಾರೆ. ಅಂತಹ ಸಾಧಕರು ವಿಶಿಷ್ಟ ಚೇತನರಿಗೆ ಮಾತ್ರವಲ್ಲ ಸಮಾಜಕ್ಕೆ ಪ್ರೇರಣೆ ಎಂದು ನಿಟ್ಟೆ ವಿವಿಯ ಸಹಕುಲಾಧಿಪತಿ ಡಾ.ಎಂ. ಶಾಂತರಾಮ ಶೆಟ್ಟಿ ಹೇಳಿದರು.

ದ.ಕ. ಮತ್ತು ಉಡುಪಿ ಜಿಲ್ಲಾ ವಿಶಿಷ್ಟ ಚೇತನರ ಸಂಘದಿಂದ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ದ.ಕ. ಜಿಲ್ಲಾ ಶಾಖೆ ಹಾಗೂ ಯುವ ರೆಡ್ ಕ್ರಾಸ್ ಮಂಗಳೂರು ವಿವಿ ಸಹಯೋಗದಲ್ಲಿ ಭಾನುವಾರ ನಗರದ ರೆಡ್ ಕ್ರಾಸ್ ಶತಮಾನೋತ್ಸವ ಕಟ್ಟಡದ ಪ್ರೇರಣಾ ಸಭಾಂಗಣದಲ್ಲಿ ನಡೆದ ವಿಶಿಷ್ಟ ಚೇತನರ ಸಂಘದ 34ನೇ ವಾರ್ಷಿಕ ಸಮಾವೇಶ, ದಿವ್ಯಾಂಗರಿಗೆ ವೈದ್ಯಕೀಯ ನೆರವು, ವೈದ್ಯಕೀಯ ತಪಾಸಣೆ ಮತ್ತು ವಿದ್ಯಾರ್ಥಿ ವೇತನ ವಿತರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರೆಡ್‌ಕ್ರಾಸ್ ದ.ಕ.ಜಿಲ್ಲಾ ಶಾಖೆಯ ಚೇರ್ಮನ್ ಸಿಎ ಶಾಂತಾರಾಮ ಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಿ, ರೆಡ್‌ಕ್ರಾಸ್ ಸಂಸ್ಥೆ ವಿ ಸವಲತ್ತು ವಿತರಣೆ ಜತೆಗೆ ಅವಶ್ಯ ಇರುವ ಸೇವೆ ನೀಡಲು ಸದಾ ಬದ್ಧ ಎಂದರು.

ಕೆಎಂಸಿಯ ಆರ್ಥೋಪೆಡಿಕ್ ವಿಭಾಗದ ಮುಖ್ಯಸ್ಥ ಡಾ.ಕೆ.ಆರ್.ಕಾಮತ್, ಚೇತನಾ ವಿಶೇಷ ಮಕ್ಕಳ ಶಾಲೆಯ ಸಂಚಾಲಕ ವಿನೋದ್ ಶೆಣೈ, ವಿ.ವಿ.ಕಾಲೇಜಿನ ಯುವ ರೆಡ್‌ಕ್ರಾಸ್ ಸಂಯೋಜನಾಧಿಕಾರಿ ಡಾ. ಭಾರತಿ ಪಿಲಾರ್, ರೆಡ್‌ಕ್ರಾಸ್ ಜಿಲ್ಲಾ ಕಾರ್ಯದರ್ಶಿ ಕಿಶೋರ್‌ಚಂದ್ರ ಹೆಗ್ಡೆ ಮುಖ್ಯ ಅತಿಥಿಗಳಾಗಿದ್ದರು. ಜಿಲ್ಲಾ ರೆಡ್‌ಕ್ರಾಸ್‌ನ ಉಪಾಧ್ಯಕ್ಷ ಡಾ.ಸಚ್ಚಿದಾನಂದ ರೈ, ಖಜಾಂಜಿ ಗುರುದತ್ ನಾಯಕ್, ಆಡಳಿತ ಮಂಡಳಿ ಸದಸ್ಯ ಯತೀಶ್ ಬೈಕಂಪಾಡಿ, ಪುಷ್ಪರಾಜ್ ಜೈನ್, ಪಿ.ಬಿ.ಹರೀಶ್ ರೈ, ಡಾ.ಸುಮನ ಬಿ. ಇದ್ದರು. ಸಂಘದ ಕೋಶಾಧಿಕಾರಿ ಸದಾಶಿವ ಲೆಕ್ಕಪತ್ರ ಮಂಡಿಸಿದರು. ಶಾಲೆಟ್, ಜಯಕಲಾ ಫಲಾನುಭವಿಗಳ ವಿವರ ನೀಡಿದರು. ವಿಶಿಷ್ಟ ಚೇತನರ ಸಂಘದ ಅಧ್ಯಕ್ಷ ಡಾ.ವಿ. ಮುರಳೀಧರ ನ್ಯಾಕ್ ಸ್ವಾಗತಿಸಿ, ಪ್ರಧಾನ ಕಾರ್ಯದರ್ಶಿ ಜಯಪ್ರಕಾಶ್ ವಂದಿಸಿದರು. ದಿನಮಣಿ ರಾವ್ ನಿರೂಪಿಸಿದರು.

ನೀರುಮಾರ್ಗ: ಪುಸ್ತಕ ವಿತರಣೆ



ಮಂಗಳೂರು: ಬಂಟರ ಸಂಘ ನೀರುಮಾರ್ಗ ವಲಯ ಪೆರ್ಮಂಕಿ ಪದವು ಇದರ ವತಿಯಿಂದ ಉಚಿತ ಪುಸ್ತಕ ವಿತರಣಾ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಬಂಟರ ಸಂಘ ನೀರುಮಾರ್ಗ ವಲಯ ಇದರ ಸ್ಥಾಪಕಧ್ಯಕ್ಷ ಗೋಪಾಲ ಕೃಷ್ಣ ಭಂಡಾರಿ ಪಡುಮಜಲು, ಗೌರವಧ್ಯಕ್ಷ ಸತೀಶ್ ಶೆಟ್ಟಿ ಪಡವಲ್ಲಿ ಅಧ್ಯಕ್ಷ ಸೋಹನ್ ಆಳ್ವ ಮಲ್ಲೂರು, ಉಪಾಧ್ಯಕ್ಷ ಚಂದ್ರಶೇಖರ್ ಕಾಪೆಟ್ಟು ನಿಕಟಪೂರ್ವ ಅಧ್ಯಕ್ಷ ಪದ್ಮನಾಭ ಆಳ್ವ ಕೊಂಬೆಲ್, ಕುಂಜಣ್ಣ ಶೆಟ್ಟಿ ಕೊರೆಟ್ಟು ಗುತ್ತು ಹಾಗೂ ಮಹಿಳಾ ಸಂಚಾಲಾಕಿ ವೀಣಾ ಮಾರ್ಥ ಉಪಸ್ಥಿತರಿದ್ದರು. ಗೋಕುಲ್ ದಾಸ್ ಶೆಟ್ಟಿ ಪಡವಲ್ಲಿ ಕಾರ್ಯಕ್ರಮ ನಿರ್ವಹಿಸಿದರು.



2024-25ನೇ ಶೈಕ್ಷಣಿಕ ವರ್ಷದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯವು ನಡೆಸಿದ ಅಂತರ್ ಕಾಲೇಜು ಮಟ್ಟದ ಕೆಟಗರಿ 2 ಕಾಲೇಜು ವಾರ್ಷಿಕ ಪತ್ರಿಕೆಯ ಸ್ಪರ್ಧೆಯಲ್ಲಿ ಶ್ರೀ ದುರ್ಗಾಪರಮೇಶ್ವರೀ ದೇವಳ ಪ್ರಥಮ ದರ್ಜೆ ಕಾಲೇಜು ಪ್ರಥಮ ಸ್ಥಾನ ಪಡೆದಿದೆ. ಕಾಲೇಜಿನ ಪ್ರಾಂಶುಪಾಲರಾದ ಡಾ.ವಿಜಯ್ ವಿ. ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಪಿ.ಎಲ್.ಧರ್ಮ ಅವರಿಂದ ಪ್ರಶಸ್ತಿಯನ್ನು ಸ್ವೀಕರಿಸಿದರು.

ತೆರಿಗೆ ವಸೂಲಾತಿಯಲ್ಲಿ ಪುತ್ತೂರು ತಾಲೂಕಿನ ಗ್ರಾ.ಪಂ.ಗಳಿಂದ ಉತ್ತಮ ಪ್ರಗತಿ | ಆಸ್ತಿ ತೆರಿಗೆ ಪಾವತಿಗೆ ಶೇ.5 ರಿಯಾಯಿತಿ ಮುಂದುವರಿಕೆ

ಒಟ್ಟು 22 ಗ್ರಾಮ ಪಂಚಾಯತ್‌ಗಳಿಂದ ಬರೋಬ್ಬರಿ ರೂ. 3,45,95,093 ಸಂಗ್ರಹ!

ಪುತ್ತೂರು: 2025-26ನೇ ಸಾಲಿನಲ್ಲಿ ಆಸ್ತಿ ತೆರಿಗೆಗಳ ಸಂಗ್ರಹಣೆಯಲ್ಲಿ ಪುತ್ತೂರು ತಾಲೂಕಿನ ಗ್ರಾಮ ಪಂಚಾಯತ್‌ಗಳು ಅತ್ಯುತ್ತಮ ಪ್ರಗತಿ ಸಾಧಿಸಿದ್ದು ಗುರಿ ಮೀರಿದ ಸಾಧನೆ ಮಾಡಿವೆ.

ರೂ.3,04,005 ಹೆಚ್ಚುವರಿ ಸಂಗ್ರಹ

ತಾಲೂಕಿನ 22 ಗ್ರಾಮ ಪಂಚಾಯತ್‌ಗಳಲ್ಲಿ ರೂ. 3,45,95,093 ಸಂಗ್ರಹವಾಗಿದ್ದು, ಶೇ.101 ಸಾಧನೆಯಾಗಿದೆ. ತಾಲೂಕಿನ 22 ಗ್ರಾಮ ಪಂಚಾಯತ್‌ಗಳಿಗೆ 2025-26ರ ಸಾಲಿನಲ್ಲಿ ಒಟ್ಟು 3,42,91,088 ತೆರಿಗೆ ಸಂಗ್ರಹದ ಗುರಿ ನೀಡಲಾಗಿತ್ತು. ಆರ್ಥಿಕ ವರ್ಷಾಂತ್ಯಕ್ಕೆ ಒಟ್ಟು ರೂ.3,45,95,093 ಸಂಗ್ರಹವಾಗಿದ್ದು, ನಿಗದಿಪಡಿಸಿದ ಗುರಿಗಿಂತ ರೂ.3,04,005 ಹೆಚ್ಚುವರಿ ಸಂಗ್ರಹವಾಗಿದೆ. ಶೇಕಡವಾರು ಸಾಧನೆಯಲ್ಲಿ ಶೇ.101 ತೆರಿಗೆ ಸಂಗ್ರಹವಾಗಿದೆ.



ಚಾಲ್ತಿ ಬೇಡಿಕೆ ವಿಭಾಗದಲ್ಲಿ ನಿಡ್ಪಳ್ಳಿ, ಬೆಟ್ಟಂಪಾಡಿ, 34 ನೆಕ್ಕಿಲಾಡಿ, ಕಬಕ, ಕೋಡಿಂಬಾಡಿ, ಒಳಮೊಗ್ರು, ಹಿರೇಬಂಡಾಡಿ, ಆರ್ಯಾಪು, ಕುಡಿಪ್ಪಾಡಿ, ಬಲ್ನಾಡು, ಬನ್ನೂರು, ಕೆದಂಬಾಡಿ, ಬಡಗನ್ನೂರು, ಕೊಳ್ತಿಗೆ, ಪಾಣಾಜೆ, ಕೆಯ್ಯೂರು, ಉಪ್ಪಿನಂಗಡಿ, ನರಿಮೊಗರು ಹಾಗೂ ಬಜತ್ತೂರು ಗ್ರಾ.ಪಂ. ಶೇ. 100ರಷ್ಟು ಗುರಿ ಸಾಧನೆ ಮಾಡಿವೆ. ಉಳಿದಂತೆ ಮುಂಡೂರು-ಶೇ.99, ಆರಿಯಡ್ಕ-ಶೇ.98 ಹಾಗೂ ನೆಟ್ಟಣಿಗೆ ಮುಡ್ನೂರು ಗ್ರಾ.ಪಂ.ನಲ್ಲಿ ಶೇ.97ರಷ್ಟು ತೆರಿಗೆ ಸಂಗ್ರಹವಾಗಿದೆ. ಈ ಮೂಲಕ ಗುರಿಯ ಸನಿಹಕ್ಕೆ ತಲುಪಿ ಗ್ರಾಮ ಪಂಚಾಯತ್‌ಗಳು ಸಾಧನೆ ಮಾಡಿದೆ.

ತೆರಿಗೆ ಸಂಗ್ರಹ ವಿವರ

2025-26ನೇ ಸಾಲಿನಲ್ಲಿ ನಿಡ್ಪಳ್ಳಿ ಗ್ರಾಮ ಪಂಚಾಯತ್ ನಲ್ಲಿ ರೂ. 5,81,653, ಬೆಟ್ಟಂಪಾಡಿ-9,28,111.99, 34 ನೆಕ್ಕಿಲಾಡಿ-8,57,309, ಕಬಕ-23,04,454.40, ಕೋಡಿಂಬಾಡಿ- ರೂ.9,46,005.66, ಒಳಮೊಗ್ರು-12,32,831.48, ಹಿರೇಬಂಡಾಡಿ-13,32,596, ಆರ್ಯಾಪು-33,82,443, ಕುಡಿಪ್ಪಾಡಿ-7,67,038, ಬಲ್ನಾಡು-7,24,385, ಕೆದಂಬಾಡಿ-16,57,937, ಬಡಗನ್ನೂರು- ರೂ.11,11,803, ಕೊಳ್ತಿಗೆ-ರೂ.6,68,892, ಪಾಣಾಜೆ- 4,18,426, ಕೆಯ್ಯೂರು-13,58,842, ಉಪ್ಪಿನಂಗಡಿ-33,85,602, ನರಿಮೊಗರು-ರೂ.40,50,252.01, ಬಜತ್ತೂರು-ರೂ.14,08,425, ಮುಂಡೂರು- ರೂ. 23,03,368, ಆರಿಯಡ್ಕ-ರೂ.22,21,535 ಹಾಗೂ ನೆಟ್ಟಣಿಗೆ ಮುಡೂರು ಗ್ರಾ.ಪಂ.ನಲ್ಲಿ 17,81,552.76 ರೂ. ತೆರಿಗೆ ಸಂಗ್ರಹವಾಗಿದೆ. ಈ ಮೂಲಕ ತಾಲೂಕು ಪಂಚಾಯತ್ ಆಡಳಿತ ನೀಡಿದ ಗುರಿಯನ್ನು ಗ್ರಾಮ ಪಂಚಾಯತ್ ಆಡಳಿತವು ಸಾಧಿಸಿದೆ.

> **ಜೂ.30ರ ಒಳಗೆ ತೆರಿಗೆ ಪಾವತಿಗೆ ರಿಯಾಯಿತಿ**
>
> ಗ್ರಾಮ ಪಂಚಾಯತ್ ವ್ಯಾಪ್ತಿಯ ಎಲ್ಲಾ ರೀತಿಯ ಕಟ್ಟಡಗಳ ಮೇಲಿನ ಆಸ್ತಿ ತೆರಿಗೆ ಪಾವತಿಗೆ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಇಲಾಖೆಯಿಂದ ಈ ವರ್ಷವೂ ಶೇ.5 ರಿಯಾಯಿತಿ ಘೋಷಿಸಲಾಗಿದೆ. ಜೂನ್ ತಿಂಗಳ ಒಳಗಾಗಿ ತೆರಿಗೆ ಪಾವತಿಸುವವರಿಗೆ ಸರಕಾರ ಶೇ.5ರಷ್ಟು ರಿಯಾಯಿತಿ ನೀಡುತ್ತಿದೆ. ಇದು ಪಂಚಾಯತ್ ವ್ಯಾಪ್ತಿಯಲ್ಲಿರುವ ಮನೆ, ವಾಣಿಜ್ಯ ಕಟ್ಟಡ, ಕೈಗಾರಿಕೆಗಳು ಸೇರಿದಂತೆ ಎಲ್ಲಾ ರೀತಿಯ ಕಟ್ಟಡಗಳಿಗೂ ಅನ್ವಯವಾಗಲಿದೆ. ಸಾರ್ವಜನಿಕರು ಈ ವಿಶೇಷ ಕೊಡುಗೆಯ ಸದುಪಯೋಗ ಪಡೆದುಕೊಳ್ಳುವಂತೆ ತಾ.ಪಂ.ನ ಪ್ರಕಟನೆ ತಿಳಿಸಿದೆ.

> ಸಕಾಲದಲ್ಲಿ ತೆರಿಗೆ ಪಾವತಿಸಿ ಗ್ರಾಮಗಳ ಅಭಿವೃದ್ಧಿಗೆ ಸಹಕರಿಸುತ್ತಿರುವ ಸಾರ್ವಜನಿಕರಿಗೆ ಕೃತಜ್ಞತೆಗಳು. ಪ್ರಸಕ್ತ ಸಾಲಿನ ತೆರಿಗೆ 2026ರ ಜೂ.30ರ ಒಳಗೆ ಪಾವತಿಸುವವರಿಗೆ ಶೇ. 5ರಷ್ಟು ರಿಯಾಯಿತಿ ಇದೆ. ಪ್ರತಿಯೊಬ್ಬರೂ ತಪ್ಪದೇ ನಿಗದಿತ ಅವಧಿಯೊಳಗೆ ತೆರಿಗೆ ಪಾವತಿಸುವ ಮೂಲಕ ಗ್ರಾಮ ಪಂಚಾಯತ್‌ಗಳ ಅಭಿವೃದ್ಧಿ ಕಾರ್ಯಗಳಿಗೆ ಹಾಗೂ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಕೈಜೋಡಿಸಿ.
>
> ● ನವೀನ್ ಭಂಡಾರಿ, ಪುತ್ತೂರು ತಾಪಂ ಕಾರ್ಯನಿರ್ವಹಣಾಧಿಕಾರಿ

ನಿರಂತರ ಸುದ್ದಿ ಅಪ್ಡೇಟ್‌ಗಾಗಿ
Google Lens ನಲ್ಲಿ
ಈ QRಕೋಡ್ ಸ್ಕ್ಯಾನ್ ಮಾಡಿ
WhatsApp ಗ್ರೂಪ್ ಇಂದೇ ಸೇರಿ!

ನಿಮ್ಮೂರಿನ ಸುದ್ದಿ

ಹೊಸದಿಗಂತ ಸಂಗಮ 3

ಸೋಮವಾರ 18, ಮೇ 2026

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಪುಟ ಸಂಖ್ಯೆ

ಸುತ್ತಮುತ್ತ

ಮೇ 20ರಿಂದ ಚರ್ಮ ರೋಗಗಳಿಗೆ ಉಚಿತ ವೈದ್ಯಕೀಯ ಶಿಬಿರ

ಮಂಗಳೂರು: ಶಾರದಾ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ತಲಪಾಡಿ, ಮಂಗಳೂರಿನ ಅಗದತಂತ್ರ ವಿಭಾಗದ ವತಿಯಿಂದ ಅಲರ್ಜಿ ಸಂಬಂಧಿತ ಚರ್ಮ ರೋಗಗಳಿಗೆ ವಿಶೇಷ ಉಚಿತ ವೈದ್ಯಕೀಯ ಶಿಬಿರವನ್ನು ಆಯೋಜಿಸಲಾಗಿದೆ. ಈ ಶಿಬಿರವು ಮೇ 20 ರಿಂದ ಜೂನ್ 2 ರವರೆಗೆ ಬೆಳಿಗ್ಗೆ 9 ರಿಂದ ಮಧ್ಯಾಹ್ನ 3 ರವರೆಗೆ ನಡೆಯಲಿದೆ.

ಈ ವಿಶೇಷ ಶಿಬಿರದಲ್ಲಿ ಚರ್ಮದ ಅಲರ್ಜಿ, ವಿವಿಧ ರೀತಿಯ ಕೀಟ ಕಚ್ಚುವಿಕೆ, ಹಾವು ಕಡಿತದ ನಂತರದ ಚರ್ಮದ ಸಮಸ್ಯೆಗಳು, ಆಹಾರದಿಂದಾಗುವ ಅಲರ್ಜಿ, ಪಾದರಕ್ಷೆ, ಆಭರಣ, ಸೌಂದರ್ಯ ವಸ್ತುಗಳು, ಸಿಮೆಂಟ್, ಡಿಟರ್ಜೆಂಟ್, ಕ್ಲೀನಿಂಗ್ ಏಜೆಂಟುಗಳಿಂದಾಗುವ ಕಾಂಟ್ಯಾಕ್ಟ್ ಡರ್ಮಟೈಟಿಸ್ ಹಾಗೂ ಇನ್ನಿತರ ರಾಸಾಯನಿಕ ಸಂಪರ್ಕಗಳಿಂದ ಉಂಟಾಗುವ ಚರ್ಮ ಸಮಸ್ಯೆಗಳಿಗೆ , ದೀರ್ಘಕಾಲೀನ ಚರ್ಮದ ಸಮಸ್ಯೆಗಳಿಗೆ ಉಚಿತ ಸಲಹೆ ಮತ್ತು ಉಚಿತ ಔಷಧಿ ನೀಡಲಾಗುತ್ತದೆ.

ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಸುವರ್ಣಾವಕಾಶ ಬಳಸಿಕೊಳ್ಳಬೇಕೆಂದು ಆಸ್ಪತ್ರೆಯ ಆಡಳಿತ ವರ್ಗ ಮನವಿ ಮಾಡಿದೆ. ಮಾಹಿತಿಗೆ 8971153232 ಸಂಪರ್ಕಿಸಬಹುದು.

ಏಕಲವ್ಯ ಬಾಲಗೋಕುಲ ಸಮಿತಿ: ಮೇ 24ರಂದು ಪುಸ್ತಕ ವಿತರಣೆ

ಬದಿಯಡ್ಕ: ಕಿಳಿಂಗಾರು ಶ್ರೀ ಏಕಲವ್ಯ ಬಾಲಗೋಕುಲ ಸಮಿತಿ ವತಿಯಿಂದ ಮೇ 24 ರಂದು ಎಲ್ಲಾ ಮಕ್ಕಳಿಗೆ ಪುಸ್ತಕ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅಂದಾಜು 70 ರಷ್ಟು ಮಂದಿ ಮಕ್ಕಳಿಗೆ ಪುಸ್ತಕ ವಿತರಣೆ ನಡೆಯಲಿದೆ. ಈ ಕಾರ್ಯಕ್ಕೆ ಸಹಾಯ ಸಹಕಾರ ಕೋರಲಾಗಿದೆ. ಧನ ಸಹಾಯ ಮಾಡಲು ಇಚ್ಛಿಸುವವರು ಈ ಕೆಳಗಿನ ಗೂಗಲ್ ಪೇ ನಂಬರ್ 9633477761 ಗೆ ಸಂದಾಯ ಮಾಡಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕಾಗಿ ಬಾಲಗೋಕುಲ ಪ್ರಮುಖ್ , ನಿಯೋಜನಾ ಪ್ರಮುಖ್ (ಪುಸ್ತಕ ವಿತರಣಾ ಕಾರ್ಯಕ್ರಮ) ವಿನಂತಿಸಿದ್ದಾರೆ.

ವಿದ್ಯುತ್ ವ್ಯತ್ಯಯ

ಕಾರ್ಕಳ: ಮೇ 19ರಂದು ಬೆಳಿಗ್ಗೆ 9 ರಿಂದ ಸಂಜೆ 5.30 ರವರೆಗೆ 11ಕೆವಿ ಫೀಡರ್‌ಗಳ ನಿರ್ವಹಣಾ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ ಕೆಲವೆಡೆ ವಿದ್ಯುತ್ ವ್ಯತ್ಯಯ ಮಾಡಲಾಗುವುದು. ಕಾರ್ಕಳ ತಾಲೂಕಿನ ಆನೆಕೆರೆ ಸುತ್ತಮುತ್ತಲಿನ ಪ್ರದೇಶ, ಕುಂಟಲ್ಪಾಡಿ, ಜೋಗಲ್ ಬೆಟ್ಟು, ಕೋರ್ಟ್ ರೋಡ್, ಪತ್ತೊಂಜಿಕಟ್ಟೆ ಕಲ್ಲೊಟ್ಟೆ ಪೆರ್ವಾಜೆ, ತೆಳ್ಳಾರು, ಮುಂಡ್ಲಿ, ಪಲಾಯಿಬಾಕ್ಯಾರು, ಮಲೆಬೆಟ್ಟು, ಕಡಂಬಲ, ನಾರ್ಕಟ್ಟ, ಪೊಲ್ಲಾರು ಏರಿಯಾ ಮತ್ತು ಹೆಬ್ರಿ ತಾಲೂಕಿನ ಅಂಡಾರು, ಶಿರ್ಲಾಲು, ಮುಂಡ್ಲಿ ರೋಡ್, ಕಾಡುಹೊಳೆ, ಮುನಿಯಾಲು, ಅಜೆಕಾರು, ಹೆರ್ಮುಂಡೆ, ಮುನಿಯಾಲು, ಅಜೆಕಾರು, ಹೆರ್ಮುಂಡೆ, ಎಣ್ಣೆಹೊಳೆ, ಕಡ್ತಲ, ಕುಕ್ಕುಜೆ, ಎಳ್ಳಾರೆ, ಹೆಬ್ರಿ, ಹೆಬ್ರಿ ಪೇಟೆ, ತಾಣ, ಮುದ್ರಾಡಿ, ಮುನಿಯಾಲು, ಬಚ್ಚಾಪ್ಪು, ಕಬ್ಬಿನಾಲೆ, ಮಂಡಾಡಿಜೆಡ್ಡು, ಕಳ್ತೂರು, ಸಂತೆಕಟ್ಟೆ ಕರ್ಜೆ, ಕುರ್ಪಾಡಿ, ಬೆಳೆಂಜೆ, ಮಡಾಮಕ್ಕಿ, ಕಾಸನಮಕ್ಕಿ, ಶಿವಪುರ, ಕೆರೆಬೆಟ್ಟು, ಕನ್ಯಾನ, ಚಾರ, ಹೊಸೂರು, ಹುತ್ತುರ್ಕೆ ವಾಟರ್ ಸಪ್ಲೈ, ಕಲ್ಲಿಲ್ಲು ವಾಟರ್ ಸಪ್ಲೈ, ಸೀತಾನದಿ, ಸೋಮೇಶ್ವರ, ನಾಡ್ಪಾಲು, ವರಂಗ, ಮಾತಿಬೆಟ್ಟು, ಪಡುಕುಡೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ.

ಕುಂದಾಪುರ/ಹಾಲಾಡಿ/ಆವರ್ಸೆ/ಹೈಕಾಡಿ

ಉಡುಪಿ: ಮೇ 19ರಂದು ಬೆಳಿಗ್ಗೆ 9.30 ರಿಂದ ಸಂಜೆ 5.30 ರವರೆಗೆ 110/11ಕೆ.ವಿ ಹಾಲಾಡಿ ವಿದ್ಯುತ್ ಉಪಕೇಂದ್ರದಿಂದ ಹೊರಡುವ ಫೀಡರ್‌ಗಳಲ್ಲಿ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಕೆಲವೆಡೆ ವಿದ್ಯುತ್ ವ್ಯತ್ಯಯ ಮಾಡಲಾಗುವುದು. ಬಿದ್ಕಲ್‌ಕಟ್ಟೆ, ಹಾಲಾಡಿ, ಮೊಳಹಳ್ಳಿ, ಹಾರ್ದಳ್ಳಿ-ಮಂಡಳ್ಳಿ, ಯಡಾಡಿ-ಮತ್ಯಾಡಿ, ರಟ್ವಾಡಿ, ಅಮಾಸೆಬೈಲು, ಮಚ್ಚಟ್ಟು, ಹಳ್ಳಾಡಿ-ಹರ್ಕಾಡಿ, ಅಲ್ಬಾಡಿ, ಶೇಡಿಮನೆ, ಹೈಕಾಡಿ, ಗೋಳಿಯಂಗಡಿ, ಬೆಳ್ವೆ, ಸೂರ್ಗೋಳಿ, ಬೈಲೂರು, ಕಾಜಾಡಿ, ಕೊಂಜಾಡಿ, ಕೊಂಡಳ್ಳಿ, ಕುಳುಂಜೆ, ಶಂಕರನಾರಾಯಣ, ಉಳ್ಳೂರು-74, ಕಾರೇಬೈಲು, ಕೋಣೆಹರ, ತೊಂಬಟ್ಟು, ಮಾವಿನಕಾಡು, ಕಳಿನಜೆಡ್ಡು ಗ್ರಾಮಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಮಾಡಲಾಗುತ್ತದೆ.

ಸಂಸ್ಕಾರವನ್ನು ಜೀವನದಲ್ಲಿ ಅಳವಡಿಸಿಕೊಂಡು ಸಾಧಕರಾಗಬೇಕು



ಮುಲ್ಕಿ: ಯುವ ಜನಾಂಗ ಹಿರಿಯರ ಸಂಸ್ಕೃತಿ ಹಾಗೂ ಸಂಸ್ಕಾರಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಾಧಕರಾಗಬೇಕು ಎಂದು ಕಾರ್ನಾಡು ಶ್ರೀ ಧರ್ಮಸ್ಥಾನದ ಆಡಳಿತ ಮೊಕ್ತೇಸರ ಎಂ. ಎಚ್ ಅರವಿಂದ ಪೂಂಜಾ ಹೇಳಿದ್ದಾರೆ. ಅವರು ಕಾರ್ನಾಡು ಶ್ರೀ ಧರ್ಮಸ್ಥಾನದ ಯುವಕ ವೃಂದದಲ್ಲಿ ಕಳೆದ ಹಲವಾರು ವರ್ಷಗಳಿಂದ ಸುದೀರ್ಘ ಸೇವೆ ಸಲ್ಲಿಸಿದ ಹಿರಿಯ ಸದಸ್ಯರಾದ ಸತ್ಯಾನಂದ ಶೆಟ್ಟಿ ಕೊರೆಂಟಬೆಟ್ಟು, ರಾಮ ಸುವರ್ಣ, ರುಕ್ಮಯಬೆಟ್ಟು ಮತ್ತು ರಮಾನಂದ್ ರಾವ್, ಕನ್ನಡರ ಬೆಟ್ಟು ಅವರನ್ನು ಕ್ಷೇತ್ರದ ವತಿಯಿಂದ ಗೌರವಿಸಿ ಮಾತನಾಡಿದರು. ಅತಿಥಿಗಳಾಗಿ ಕ್ಷೇತ್ರದ ಅರ್ಚಕ ಸದಾನಂದ ಪೂಜಾರಿ, ಯುವಕ ವೃಂದದ ಅಧ್ಯಕ್ಷ ಪ್ರಕಾಶ್ ಮಂಜಟ್ಟೆ ಸದಸ್ಯರಾದ ಜಯ ಸುವರ್ಣ, ಪಾಂಡು ಎ. ಕಾರ್ನಾಡ್, ದಿವಾಕರ್ ಕೋಟ್ಯಾನ್, ತನುಶ್ ಪೂಜಾರಿ, ಚರಣ್ ಪೂಜಾರಿ ಉಪಸ್ಥಿತರಿದ್ದರು.

ಕೊಂಬೆಟ್ಟು ಬಂಟರ ಭವನದಲ್ಲಿ ಎಸ್ಸೆಸ್ಸೆಲ್ಸಿ ಸಾಧಕರಿಗೆ ಅಭಿನಂದನೆ, ನಿವೃತ್ತ ಶಿಕ್ಷಕರಿಗೆ ಸನ್ಮಾನ

ಕಲಿಕೆಯಲ್ಲಿ ಕ್ಯಾರಿಯರ್ ಗೈಡೆನ್ಸ್ ಅತೀ ಅಗತ್ಯ: ಶಾಸಕ ರೈ



ಪುತ್ತೂರು: ಕಲಿಕೆಯಲ್ಲಿ ಕ್ಯಾರಿಯರ್ ಗೈಡೆನ್ಸ್ ಅತೀ ಅವಶ್ಯಕ. ಇದರ ಬಗ್ಗೆ ಸರಕಾರದ ಮಟ್ಟದಲ್ಲಿ ಚರ್ಚೆಯಾಗಿದೆ. ಮಾನ್ಯತೆಯಿರುವ ಕೋರ್ಸ್‌ಗಳನ್ನು ಉಳಿಸಿಕೊಂಡು, ಉಪಯೋಗವಿಲ್ಲದ ಕೋರ್ಸ್‌ಗಳನ್ನು ಸರಕಾರವೇ ಬ್ಯಾನ್ ಮಾಡಲಿದೆ. ಹೀಗಾಗಿ ಮಾನ್ಯತೆಯಿಲ್ಲದ ಕೆಲವು ಕೋರ್ಸ್‌ಗಳು ರದ್ದು ಆಗಲಿದೆ. ಇದರ ಬಗ್ಗೆ ಪೋಷಕರು ಗಮನ ಹರಿಸಬೇಕಾಗಿದೆ ಎಂದು ಶಾಸಕ ಅಶೋಕ್ ಕುಮಾರ್ ರೈ ಹೇಳಿದ್ದಾರೆ.

ಶಾಲಾ ಶಿಕ್ಷಣ ಇಲಾಖೆ, ದ.ಕ. ಜಿ.ಪಂ., ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಪುತ್ತೂರು, ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಂಘದ ಸಹಯೋಗದಲ್ಲಿ ಶನಿವಾರ ಕೊಂಬೆಟ್ಟು ಬಂಟರ ಭವನದಲ್ಲಿ ನಡೆದ ಎಸ್ಸೆಸ್ಸೆಲ್ಸಿಯಲ್ಲಿ ಶೇ.100 ಫಲಿತಾಂಶ ಪಡೆದ ಶಾಲೆಗಳು, ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನೆ ಹಾಗೂ ನಿವೃತ್ತ ಮುಖ್ಯ ಶಿಕ್ಷಕರಿಗೆ ಸನ್ಮಾನ ನೆರವೇರಿಸಿ ಅವರು ಮಾತನಾಡಿದರು.

ಶಿಕ್ಷಣ ವ್ಯವಸ್ಥೆ ಇಂದು ವಾಣಿಜ್ಯೀಕರಣವಾಗುತ್ತಿದೆ. ಮಕ್ಕಳು ಕ್ಯಾರಿಯರ್ ಗೈಡೆನ್ಸ್ ಇಲ್ಲದೆ ಹಿಂದುಳಿಯುತ್ತಿದ್ದಾರೆ. ವಿದ್ಯಾರ್ಥಿಗಳನ್ನು ಮೇಲೆ ತರುವ ಕೆಲಸವಾಗಬೇಕೇ ಹೊರತು ಮಿಸ್‌ಗೈಡ್ ಮಾಡಬಾರದು ಎಂದು ಹೇಳಿದ ಅವರು, ಕನಿಷ್ಠ ಅಂಕ ಪಡೆಯುತ್ತಿರುವ ವಿದ್ಯಾರ್ಥಿಗಳನ್ನು ಮೇಲೆ ತರುವ ಕೆಲಸವಾಗಬೇಕು. ಶೇ.100 ಫಲಿತಾಂಶ ದಾಖಲಿಸುವ ಜವಾಬ್ದಾರಿ ಎಲ್ಲಾ ಶಿಕ್ಷಣ ಸಂಸ್ಥೆಯ ಮೇಲಿದೆ. ಹೊಸ ಶಿಕ್ಷಕರಲ್ಲಿ ನಿವೃತ್ತ ಶಿಕ್ಷಕರಷ್ಟು ಅನುಭವ ಇರಲು ಅಸಾಧ್ಯ. ಹೀಗಾಗಿ ನಿಮ್ಮ ಪಕ್ಕದ ಶಾಲೆಯಲ್ಲಿ ಸೇವೆ ನೀಡಿ. ಅದು ನಿಮ್ಮ ಆರೋಗ್ಯಕ್ಕೂ ಉತ್ತಮ, ಜೊತೆಗೆ ಮಕ್ಕಳಿಗೆ ಉತ್ತಮ ಶಿಕ್ಷಣ ದೊರೆಯಲು ಸಾಧ್ಯ. ಶಿಕ್ಷಕರು ಸಮಾಜ ಬದಲಾವಣೆ ಮಾಡುವವರು. ಉದ್ಯೋಗದ ಜೊತೆಗೆ ಸಮಾಜಕ್ಕೂ ಕೊಡುಗೆ ನೀಡಬೇಕು ಎಂದು ಹೇಳಿದರು.

ರಾಮಕೃಷ್ಣ ಪ್ರೌಢಶಾಲಾ ಸಂಚಾಲಕ ಕಾವು ಹೇಮನಾಥಶೆಟ್ಟಿ ಶೇ.100 ಫಲಿತಾಂಶ ಪಡೆಯುವಲ್ಲಿ ಎಲ್ಲಾ ಶಾಲೆಗಳಲ್ಲಿಯೂ ಪ್ರಯತ್ನಗಳು ನಡೆಯುತ್ತಿವೆ. ಇದರಲ್ಲಿ ಮಕ್ಕಳು, ಪೋಷಕರ ಸಹಕಾರವು ಅವಶ್ಯಕ. ಶಾಲೆಗಳ ಸಮಸ್ಯೆಗಳ ಕುರಿತು ಶಾಲಾ ಮುಖ್ಯಶಿಕ್ಷಕರ ಸಂಘದಲ್ಲಿ ಚರ್ಚಿಸಿ ಶಾಸಕರ ಗಮನಕ್ಕೆ ತಂದು ಪರಿಹರಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ವಿಷ್ಣುಪ್ರಸಾದ್ ಸಿ. ಕಾರ್ಯಕ್ರಮವನ್ನು ಉದ್ಘಾಟಿಸಿ ಶುಭಹಾರೈಸಿದರು. ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಣಾಧಿಕಾರಿ ಚಕ್ರಪಾಣಿ, ಎಸ್ಸೆಸ್ಸೆಲ್ಸಿ ನೋಡೆಲ್ ಅಧಿಕಾರಿ ಹರಿಪ್ರಸಾದ್, ಕಡಬ ತಾಲೂಕು ಸಹ ಶಿಕ್ಷಕರ ಸಂಘದ ಅಧ್ಯಕ್ಷ ಶಾಂತರಾಮ ಓಡ್ಲ ಮಾತನಾಡಿ, ಅಭಿನಂದನೆ ಸಲ್ಲಿಸಿದರು. ಪುತ್ತೂರು ತಾಲೂಕು ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಅಬ್ರಹಾಂ ಎಸ್.ಎ., ಪ್ರೌಢ ಶಾಲಾ ಮುಖ್ಯಶಿಕ್ಷಕರ ಸಂಘದ ಕಾರ್ಯದರ್ಶಿ ಜಯಲಕ್ಷ್ಮೀ ವೇದಿಕೆಯಲ್ಲಿದ್ದರು.

ಸಂಘದ ಅಧ್ಯಕ್ಷ ವಸಂತ ಮೂಲ್ಯ ಸ್ವಾಗತಿಸಿ, ಉಪಾಧ್ಯಕ್ಷ ಮೋನಪ್ಪ ವಂದಿಸಿದರು. ಕೆಯ್ಯೂರು ಕೆಪಿಎಸ್‌ನ ಸಹಶಿಕ್ಷಕ ವಿನೋದ್ ಕುಮಾರ್ ನಿರೂಪಿಸಿದರು.

ಸನ್ಮಾನ, ಅಭಿನಂದನೆ

ನಿವೃತ್ತ ಮುಖ್ಯ ಶಿಕ್ಷಕರಾದ ಜಯಲಕ್ಷ್ಮೀ ಎ., ಜಯರಾಮ ಶೆಟ್ಟಿ ನಳಿನಿ ಕೆ., ಶ್ರೀಧರ ಭಟ್, ರಮೇಶ್ ಮಯ್ಯ, ಶ್ರೀಪತಿಭಟ್, ಮೀರಾ ರೋಡ್ರಿಗಸ್ ಅವರನ್ನು ಸನ್ಮಾನಿಸಲಾಯಿತು. 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಗರಿಷ್ಠ ಅಂಕಗಳಿಸಿದ ಸರಕಾರಿ ಪ್ರೌಢ ಶಾಲೆಯ ಶಿಲ್ಪ ವಿಧಾತ್ರಿ, ಭಾನುಪ್ರೀಯ, ಸಪ್ನಾ, ಅನುದಾನಿತ ಶಾಲೆಯ ಯಶ್ವಿತಾ, ದೃತಿ, ಆದಿತ ಭಟ್, ದೀಪಕ್ ಪಿ.ಎಸ್., ಅನುದಾನ ರಹಿತ ಶಾಲೆ ಆದ್ಯ, ಅನನ್ಯ, ಅಪೇಕ್ಷಾ ಎನ್., ಪ್ರೀತಿ ಪ್ರಭು ಶಾವ್ಯ ಯು.ರೈ, ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳಾದ ಅಭಿನವ ಕೃಷ್ಣ ಕೆ.ಪೃಥ್ವಿ ಸಪ್ನಾಎಸ್., ಶ್ರೀರಕ್ಷಾ ಹಾಗೂ ಶೇ.100 ಫಲಿತಾಂಶ ದಾಖಲಿಸಿದ ಎಲ್ಲಾ ಶಾಲೆಗಳ ಮುಖ್ಯಸ್ಥರನ್ನು ಅಭಿನಂದಿಸಲಾಯಿತು.

ಸರ್ಕಾರಿ ಶುಶ್ರೂಷಾ ಕಾಲೇಜಿನಲ್ಲಿ ಉಪಶಮನ ಆರೈಕೆ ಕಾರ್ಯಾಗಾರ



ಮಡಿಕೇರಿ: ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಸರ್ಕಾರಿ ಶುಶ್ರೂಷಾ ಕಾಲೇಜಿನಲ್ಲಿ ಉಪಶಮನ ಆರೈಕೆ ಕಾರ್ಯಾಗಾರದ ಉದ್ಘಾಟನೆ ನಡೆಯಿತು.

ಗಂಭೀರ ಅಥವಾ ದೀರ್ಘಕಾಲದ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ನೋವು, ರೋಗಲಕ್ಷಣಗಳು ಮತ್ತು ಒತ್ತಡ ನಿವಾರಿಸುವ ಮೂಲಕ ಅವರ ಕುಟುಂಬದ ಜೀವನ ಗುಣಮಟ್ಟ ಸುಧಾರಿಸುವ ಮುಖ್ಯ ಉದ್ದೇಶದಿಂದ ಈ ಕಾರ್ಯಾಗಾರವನ್ನು ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಡೀನ್, ನಿರ್ದೇಶಕ ಡಾ. ಲೋಕೇಶ್ ಎ.ಜೆ. ಮಾರ್ಗದರ್ಶನದಲ್ಲಿ ಆಯೋಜಿಸಲಾಗಿದೆ.

ಅಧ್ಯಕ್ಷತೆಯನ್ನು ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಪ್ರಾಂಶುಪಾಲ ಡಾ ವಿಶಾಲ್ ಕುಮಾರ್ ವಹಿಸಿ, ಮುಂದಿನ ದಿನಗಳಲ್ಲಿ ನರ್ಸಿಂಗ್ ಕಾಲೇಜಿನಿಂದ ಇದೇ ತರಹದ ಕಾರ್ಯಾಗಾರ ಹಮ್ಮಿಕೊಳ್ಳಲು ಪ್ರೇರೇಪಣೆ ನೀಡಿ ಶುಭ ಹಾರೈಸಿದರು.

ಅತಿಥಿಯಾಗಿದ್ದ ಸರ್ಕಾರಿ ಶುಶ್ರೂಷಾ ಕಾಲೇಜಿನ ಪ್ರಾಂಶುಪಾಲೆ ಮಂಜುಳಾ ಎ.ಕೆ. ಉಪಶಮನ ಆರೈಕೆ ಕಾರ್ಯಾಗಾರದ ಮಹತ್ವ ವಿವರಿಸಿದರು

ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಲೈಡ್ ಹೆಲ್ತ್ ಸೈನ್ಸ್ ಪ್ರಾಂಶುಪಾಲ ಡಾ. ನರಸಿಂಹ ರೈ ಮಾತನಾಡಿ, ಇಂತಹ ಕಾರ್ಯಾಗಾರಗಳಿಂದ ಹೆಚ್ಚಿನ ವಿಷಯಗಳನ್ನು ಗ್ರಹಿಸಿ ರೋಗಿಗಳಿಗೆ ಉತ್ತಮ ಗುಣಮಟ್ಟದ ಉಪಶಮನ ಆರೈಕೆ ನೀಡುವುದರ ಜೊತೆಗೆ ರೋಗಿಗಳ ಕುಟುಂಬದವರನ್ನು ಸಹ ಆರೈಕೆಯಲ್ಲಿ ಜೊತೆಗೂಡಿಸಿಕೊಳ್ಳಬಹುದೆಂದು ತಿಳಿಸಿದರು

ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಅಕಾಡೆಮಿಕ್ ರಿಜಿಸ್ಟ್ರಾರ್ ಡಾ ರವಿಕಿರಣ್ ಕಿಶಾನ್ ಮಾತನಾಡಿದರು. ಮಣಿಪಾಲ್ ಕಾಲೇಜ್ ಆಫ್ ನರ್ಸಿಂಗ್'ನ ಸಹಾಯಕ ಪ್ರಾಧ್ಯಾಪಕಿ ಡಾ. ರಾಧಿಕಾ ಆರ್ ಪೈ , ಡಾ. ಮಾಲತಿ ಜಿ. ನಾಯಕ್ ಸಂಪನ್ಮೂಲ ವ್ಯಕ್ತಿಗಳಾಗಿ ವಿದ್ಯಾರ್ಥಿಗಳಿಗೆ ಉಪಶಮನ ಆರೈಕೆ ಬಗ್ಗೆ ವಿಷಯ ಮಂಡಿಸಿದರು.

ಸಂಸ್ಥೆ ಮುಖ್ಯ ಆಡಳಿತಾಧಿಕಾರಿ ರೋಹಿಣಿ ಕೆ.ಎಂ., ಸರ್ಕಾರಿ ಶುಶ್ರೂಷಾ ಕಾಲೇಜಿನ ಬೋಧಕ ವೃಂದದವರು, ಆಸ್ಪತ್ರೆ ಸಿಬ್ಬಂದಿಗಳು, ಬೋಧಕೇತರ ಸಿಬ್ಬಂದಿಗಳು ವಿದ್ಯಾರ್ಥಿಗಳಿದ್ದರು.

ಸರ್ಕಾರಿ ಶುಶ್ರೂಷಾ ಕಾಲೇಜಿನ ಸಹ ಪ್ರಾಧ್ಯಾಪಕ ಗುರುಪಾದ ಕೆ.ಪಿ. ಸ್ವಾಗತಿಸಿ, ಆಶಿತಾ ಪ್ರಾರ್ಥಿಸಿ ರಮ್ಯಾ ವಂದಿಸಿದರು.

ಅನಂತೋಡಿ ಶ್ರೀ ಅನಂತಪದ್ಮನಾಭ ದೇವಳದ ಪ್ರತಿಷ್ಠಾ ವರ್ಧಂತೋತ್ಸವ

ಬೆಳ್ತಂಗಡಿ: ಶ್ರೀ ಅನಂತಪದ್ಮನಾಭ ದೇವಸ್ಥಾನ ಅನಂತೋಡಿ ಬೆಳಾಲು ಇದರ ಪ್ರತಿಷ್ಠಾ ವರ್ಧಂತ್ಯುತ್ಸವ ಕಾರ್ಯಕ್ರಮ ಶ್ರೀ ಕ್ಷೇತ್ರ ಧರ್ಮಸ್ಥಳದ ಡಾ.ಡಿ. ವೀರೇಂದ್ರ ಹೆಗ್ಗಡೆಯವರ ಶುಭ ಆಶೀರ್ವಾದದೊಂದಿಗೆ ಆಲಂಬಾಡಿ ಪದ್ಮನಾಭ ತಂತ್ರಿಗಳ ನೇತೃತ್ವ ಶನಿವಾರ ವಿಜೃಂಭಣೆಯಿಂದ ನಡೆಯಿತು.



ವಾರ್ಷಿಕ ಮಹಾಸಭೆ

ಬೆಳಿಗ್ಗೆ ಶ್ರೀ ದೇವರಿಗೆ ಕಲಶಾಭಿಷೇಕ ಮಧ್ಯಾಹ್ನ ಮಹಾಪೂಜೆ ರಾತ್ರಿ ಪ್ರಸನ್ನ ರಂಗ ಪೂಜೆ ಮತ್ತು ಶ್ರೀ ದೇವರ ಉತ್ಸವ ಬಲಿ ನಡೆಯಿತು. ವಾರ್ಷಿಕ ಮಹಾಸಭೆ ಹಾಗೂ ಲೆಕ್ಕ ಪತ್ರ ಮಂಡಿಸಲಾಯಿತು. ಮಧ್ಯಾಹ್ನ ಹಾಗೂ ರಾತ್ರಿ ಸಾರ್ವಜನಿಕ ಅನ್ನ ಸಂತರ್ಪಣೆ ನಡೆಯಿತು.

ಮಧ್ಯಾಹ್ನ ದೇವಸ್ಥಾನದಲ್ಲಿ ಕುಮಾರಿ ಕೃಷ್ಣಪ್ರಿಯಾ ಆಚಾರ್ ಮುರುಳ್ಯ ಇವರಿಂದ ಸಂಗೀತ ಕಚೇರಿ ಹಾಗೂ ಸಮರ್ಥ್ ಪರ್ಲತ್ತಾಯ ಮಾಯಾ ಇವರಿಂದ ಕೊಳಲು ವಾದನ, ಸುಪ್ರೀತಾ ಕೋರ್ನಾಯ ಇವರಿಂದ ಪಿಟೀಲು ವಾದನ ವರ್ಚಸ್ ಕೋರ್ನಾಯ ಧರ್ಮಸ್ಥಳ ಇವರಿಂದ ಮೃದಂಗ ವಾದನ ಕಾರ್ಯಕ್ರಮ ನಡೆಯಿತು. ಈ ಸಂದರ್ಭ ಅಸ್ರಣ್ಣರಾದ ಗಿರೀಶ್ ಭಾರಿತ್ತಾಯ ಪಾರಲ, ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾದ ಶ್ರೀನಿವಾಸ ಗೌಡ ವಕೀಲರು, ಉಪಾಧ್ಯಕ್ಷರಾದ ಮಮತಾ ದಿನೇಶ್ ಪೂಜಾರಿ ಉಪ್ಪಾರ್, ಪ್ರಧಾನ ಕಾರ್ಯದರ್ಶಿ ದುರ್ಗಾ ಪ್ರಸಾದ್ ಕೆಮ್ಮಣ್ಣಾಯ, ಕಾರ್ಯದರ್ಶಿ ಸತೀಶ್ ಗೌಡ ಎಳ್ಳುಗದ್ದೆ ಮಹಿಳಾ ಸಮಿತಿಯ ಗೌರವಾಧ್ಯಕ್ಷೆ ವಿದ್ಯಾ ಶ್ರೀನಿವಾಸ್ ಗೌಡ, ಮಹಿಳಾ ಸಮಿತಿಯ ಅಧ್ಯಕ್ಷರಾದ ಹೇಮಲತಾ ಶ್ರೀನಿವಾಸ ಗೌಡ ಗಣಪನಗುತ್ತು, ಭಜನಾ ಮಂಡಳಿ ಅಧ್ಯಕ್ಷ ಹರೀಶ್ ಪೋಸೊಟ್ಟು, ಸಮಿತಿ ಹಿರಿಯ ಸದಸ್ಯರಾದ ಬೆಳಾಲು ಗುತ್ತು ಮನೆಯ ಹೇಮಲತಾ ಜೀವಂದರ್ ಕುಮಾರ್ ಜೈನ್, ಉದಿತ್ ಕುಮಾರ್ ಜೈನ್ ಕುಜುಂಬೊಟ್ಟು, ದೇಜಪ್ಪ ಗೌಡ ಅರಣೆಮಾರು, ಲಿಂಗಪ್ಪ ಪೂಜಾರಿ ಬನಂದೂರು, ಬಾಬು ಗೌಡ ಅಲಕ್ಕೆ ದಡ್ಡ, ಸರೋಜಿನಿ ಬೀಮಂಡೆ , ದೇವಸ್ಥಾನದ ಲೆಕ್ಕಪರಿಶೋಧಕರಾದ ನಾರಾಯಣಗೌಡ ಎಳ್ಳುಗದ್ದೆ, ಹಾಗೂ ಸದಸ್ಯರಾದ ಶ್ರೀನಿವಾಸ ಗೌಡ ಗಣಪನ ಗುತ್ತು, ಸುಂದರ ಎಂ.ಕೆ. ಬೆಳಾಲು, ಜಾರಪ್ಪ ಗೌಡ ಅರಣೆ ಮಾರು ಹಾಗೂ ಸಮಿತಿ ಸದಸ್ಯರು ಭಜನ ಮಂಡಳಿ ಸದಸ್ಯರು ಮಹಿಳಾ ಸಮಿತಿ ಸದಸ್ಯರು ಮೊದಲಾದವರು ಭಾಗವಹಿಸಿದ್ದರು.

ಭಾರತೀಯ ವೈದ್ಯಕೀಯ ಸಂಘ ಮಂಗಳೂರು ಶಾಖೆ: ಕಾರ್ಯಾಗಾರ



ಮಂಗಳೂರು: ಭಾರತೀಯ ವೈದ್ಯಕೀಯ ಸಂಘ ಮಂಗಳೂರು ಶಾಖೆಯ ಆಶ್ರಯದಲ್ಲಿ ಶೈಕ್ಷಣಿಕ ಕಾರ್ಯಾಗಾರ ನಗರದ ದೀಪಾ ಹೋಟೆಲ್ ಸಭಾಂಗಣದಲ್ಲಿ ಸಂಸ್ಥೆಯ ಅಧ್ಯಕ್ಷ ಡಾ.ಸದಾನಂದ ಪೂಜಾರಿ ನೇತೃತ್ವದಲ್ಲಿ ಶನಿವಾರ ಜರಗಿತು.

ಅತಿಥಿಯಾಗಿದ್ದ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಶಿವಪ್ರಕಾಶ್ ಮಾತನಾಡಿ, ಭಾರತೀಯ ವೈದ್ಯಕೀಯ ಸಂಘ ಮಂಗಳೂರು ಶಾಖೆಯು ಲೈಂಗಿಕ ಶಿಕ್ಷಣ ಕಾರ್ಯಾಗಾರ ಏರ್ಪಡಿಸಿದ್ದು ಇದು ಸಾರ್ವಜನಿಕರ ಲೈಂಗಿಕತೆಯಲ್ಲಿ ಇರುವ ಸಂಕೋಚ ಸ್ವಭಾವ, ಅನುಮಾನ, ಸಂದೇಹಗಳನ್ನು ಪರಿಹರಿಸಲು ಉತ್ತಮ ವೇದಿಕೆಯಾಗಿದೆ ಎಂದು ಶುಭ ಹಾರೈಸಿದರು.

ಸಂಪನ್ಮೂಲ ವ್ಯಕ್ತಿಯಾಗಿದ್ದ ಹಿರಿಯ ಮೂತ್ರ ರೋಗಶಾಸ್ತ್ರ ತಜ್ಞ ಡಾ.ಗಜಾನನ ಭಟ್, ವಾತ್ಸಾಯನ ಕಾಮಸೂತ್ರ ಕೃತಿಯ ಶ್ಲೋಕಗಳನ್ನು ವಿವರಿಸಿದರು. ಬಳಿಕ ಸಭಿಕರೊಂದಿಗೆ ಪ್ರಶ್ನೋತ್ತರ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಶ್ನೆಗಳಿಗೆ ಉತ್ತರಿಸಿದರು. ಸಮಸ್ಯೆಗಳಿಗೆ ಸಲಹೆ ನೀಡಿದರು. ಈ ಸಂದರ್ಭ ಅವರು ವೈದ್ಯಕೀಯ ಕ್ಷೇತ್ರದಲ್ಲಿ ಸಲ್ಲಿಸಿದ ಅನುಪಮ ಸೇವೆ, ಗಮನಾರ್ಹ ಸಾಧನೆಯನ್ನು ಪರಿಗಣಿಸಿ ಸನ್ಮಾನಿಸಲಾಯಿತು.

ಅತಿಥಿಯಾಗಿದ್ದ ಭಾರತೀಯ ವೈದ್ಯಕೀಯ ಶಾಸ್ತ್ರಜ್ಞರ ಮಂಗಳೂರು ಶಾಖೆಯ ಅಧ್ಯಕ್ಷ ಡಾ.ರೋಶನ್ ಸನ್ಮಾನ ನೆರವೇರಿಸಿದರು. ಸಂಸ್ಥೆಯ ಅಧ್ಯಕ್ಷ ಡಾ.ಸದಾನಂದ ಪೂಜಾರಿ ಸ್ವಾಗತಿಸಿದರು. ಸಂಸ್ಥೆಯ ಚುನಾಯಿತ ಅಧ್ಯಕ್ಷ ಡಾ.ಉಲ್ಲಾಸ್ ಶೆಟ್ಟಿ, ಕೋಶಾಧಿಕಾರಿ ಡಾ.ಜ್ಯೂಲಿಯನ್ ಸಲ್ದಾನ್ಹ ಉಪಸ್ಥಿತರಿದ್ದರು. ಡಾ. ಮಧುರಾ ಭಟ್ ನಿರೂಪಿಸಿದರು. ಡಾ.ಪ್ರಕಾಶ್ ಹರಿಶ್ಚಂದ್ರ ವಂದಿಸಿದರು.

ಭವಿಷ್ಯದ ಸವಾಲುಗಳನ್ನು ಮೆಟ್ಟಿ ನಿಲ್ಲಲು ದೃಢ ಸಂಕಲ್ಪಗಳ ನಿಲುವು ಇಂದಿನ ಅಗತ್ಯ



ಮಂಗಳೂರು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ನೀರುಮಾರ್ಗ ವಲಯದ ನೀರುಮಾರ್ಗ ಕೇಂದ್ರ ವ್ಯಾಪ್ತಿಯಲ್ಲಿ ಸಿಎಸ್‌ಸಿ ಒಲಿಂಪಿಯಾಡ್‌ನಲ್ಲಿ ವಿವಿಧ ವಿಷಯಗಳಲ್ಲಿ ನೋಂದಣಿ ಮಾಡಿ ಭಾಗವಹಿಸಿ ಪರೀಕ್ಷೆ ಎದುರಿಸಿದ ವಿದ್ಯಾರ್ಥಿಗಳಿಗೆ ಒಲಿಂಪಿಯಾಡ್ ಪ್ರಮಾಣ ಪತ್ರಗಳನ್ನು ಗುರುವಾರ ವಿತರಣೆ ಮಾಡಲಾಯಿತು.

ಕಾರ್ಯಕ್ರಮವನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬಜಪೆ ಯೋಜನಾ ಕಚೇರಿ ಯೋಜನಾಧಿಕಾರಿ ಗಿರೀಶ್ ಕುಮಾರ್ ಉದ್ಘಾಟಿಸಿ, ಶುಭ ಹಾರೈಸಿದರು.

ವಿದ್ಯಾರ್ಥಿ ಜೀವನ ರೂಪಿಸಿಕೊಳ್ಳಬೇಕು

ಹಿರಿಯ ಪತ್ರಕರ್ತ ವಿಜಯ್ ಕೋಟ್ಯಾನ್ ಪಡು ಮಾತನಾಡಿ, ಆಧುನಿಕ ಬದುಕಿನ ಜಂಜಾಟ, ಆಯ್ಕೆ, ಸವಾಲುಗಳ ಮಧ್ಯೆ ವಿದ್ಯಾರ್ಥಿ ಜೀವನವನ್ನು ರೂಪಿಸಬೇಕಾಗಿದೆ. ನಮ್ಮ ಭವಿಷ್ಯ ನಮ್ಮ ಕೈಯಲ್ಲಿದೆ. ಭವಿಷ್ಯದ ಸವಾಲುಗಳನ್ನು ಮೆಟ್ಟಿ ನಿಲ್ಲಬೇಕಾದರೆ ನಾವು ಕೆಲವೊಂದು ವಿಚಾರದಲ್ಲಿ ದೃಢ ಸಂಕಲ್ಪಗಳನ್ನು ತೊಡಬೇಕಾಗಿದೆ. ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿ ಯಶಸ್ಸಿನ ಹಾದಿಯಲ್ಲಿ ಮುನ್ನಡೆಯಿರಿ ಎಂದರು.

ನೀರುಮಾರ್ಗ ಪಂಚಾಯತ್ ಮಾಜಿ ಅಧ್ಯಕ್ಷ ಶ್ರೀಧರ್ ಚಿಕ್ಕಬೆಟ್ಟು, ಮಾಣೂರು ಸುಬ್ರಹ್ಮಣ್ಯ ದೇವಸ್ಥಾನ ಕಮಿಟಿ ಮಾಜಿ ಸದಸ್ಯ ವಿನಯ್ ಮಾಣೂರು, ವಲಯ ಮೇಲ್ವಿಚಾರಕಿ ಸುಜಾತ ಮತ್ತು ಸೇವಾ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಸವಣೂರು ಗ್ರಾಮ ಪಂಚಾಯತ್‌ನಲ್ಲಿ ಕೃಷಿಕರಿಗೆ ಏಣಿ ವಿತರಣಾ ಕಾರ್ಯಕ್ರಮ



ಸವಣೂರು: ವಿಟ್ಲದ ಭಾರತ ಕೃಷಿ ಅಭಿವೃದ್ಧಿ ಸಂಸ್ಥೆಯಿಂದ ನೀರಾ ಅಮೃತ ಉಚಿತ ಯೋಜನೆಯಡಿ ಏಣಿ ವಿತರಣೆ ಕಾರ್ಯಕ್ರಮ ಸವಣೂರು ಗ್ರಾ.ಪಂ.ನ ಕುಮಾರಾಧಾರ ಸಭಾಂಗಣದಲ್ಲಿ ಶ್ರೀರಾಮ ಸಂಜೀವಿನಿ ಗ್ರಾ.ಪಂ. ಮಟ್ಟದ ಒಕ್ಕೂಟ , ಸವಣೂರು ಗ್ರಾ.ಪಂ.ನ ಸಹಯೋಗದಲ್ಲಿ ನಡೆಯಿತು.

ಸುಳ್ಯ ಸಂಪಾಜೆ ಕೃಷಿ ಸಖಿ ಹಾಗೂ ಭಾರತ್ ಕೃಷಿ ಅಭಿವೃದ್ಧಿ ಸಂಸ್ಥೆಯ ಯೋಜನಾ ಧಿಕಾರಿ ಮೋಹಿನಿ ವಿಶ್ವನಾಥ್(ನಿಶಾ) ಅವರಿಂದ ಸಂಸ್ಥೆ ಯೋಜನೆಗಳು, ತಾಳೆ ಕೃಷಿ, ರೇಷ್ಮೆ ಕೃಷಿ, ಗೇರು ಕೃಷಿ ಆದಿ ಸ್ವರೂಪ ಶಿಕ್ಷಣ ಸಂಸ್ಥೆ ಮಿಶ್ರ ಬೆಳೆ, ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗಿ ಇರುವ ಕಡೆಯಲ್ಲಿ ಬೆಳೆಸಬಹುದಾದ ಬೆಳೆಗಳು, ರೈತರಿಗೆ ಸಿಗುವ ಅನುದಾನಗಳು, ಮಂಗಗಳ ಹಾವಳಿ ನಿಯಂತ್ರಣಕ್ಕೆ ಸಂಬಂಧಿ ಸಿದಂತೆ ಎಕರೆಗಟ್ಲೆ ಜಾಗದಲ್ಲಿ ಕೃಷಿ ಬೆಳೆಸುವ ಬಗ್ಗೆ ಕ್ಷೇಮ ವಿಮಾ ಯೋಜನೆ ಮಾಹಿತಿ ನೀಡಿದರು.

ಸವಣೂರು ಕಾಣಿಯೂರು ರೈತ ಉತ್ಪಾದಕ ಕಂಪೆನಿ ಅಧ್ಯಕ್ಷ ಗಿರಿಶಂಕರ ಸುಲಾಯ ಮಾತನಾಡಿ, ರೈತರಿಗೆ ಸಿಗುವ ಸೌಲಭ್ಯಗಳನ್ನು ಎಲ್ಲರೂ ಪಡೆದುಕೊಳ್ಳಬೇಕು ಮತ್ತು ಮಾಹಿತಿಗಳನ್ನು ಪೂರ್ಣ ಪ್ರಮಾಣದಲ್ಲಿ ಪಡೆದುಕೊಳ್ಳಬೇಕು ಎಂದರು.

ಶ್ರೀ ರಾಮ ಸಂಜೀವಿನಿ ಗ್ರಾ.ಪಂ. ಮಟ್ಟದ ಒಕ್ಕೂಟ ಅಧ್ಯಕ್ಷೆ ವಿಜಯ ಈಶ್ವರ ಗೌಡ ಮಾತನಾಡಿ, ಸವಣೂರು ಗ್ರಾ.ಪಂ. ವ್ಯಾಪ್ತಿಯಲ್ಲಿ 1050 ಸದಸ್ಯತನ ನೋಂದಾವಣೆ ಆಗಿದ್ದು, ಸುಮಾರು 500ರಷ್ಟು ಪ್ರಸ್ತುತ ವರ್ಷದಲ್ಲಿ ನೀಡಲಾಗುವ ಕೃಷಿ ಸಲಕರಣೆಗೆ ಅರ್ಜಿಯನ್ನು ಗ್ರಾಮದ ಕೃಷಿಕರು ಸಲ್ಲಿಸಿದ್ದಾರೆ. 2027ರ ಜನವರಿಯಿಂದ ಏಪ್ರಿಲ್ ಒಳಗಡೆ ವಿತರಿಸಬೇಕಾದ ಏಣಿಗಳನ್ನು ಮುಂಚಿತ ವಿತರಿಸಲಾಗಿದೆ ಎಂದರು.

ಸವಣೂರು ಪ್ರಾ.ಕೃ.ಪಸಹಕಾರಿ ಸಂಘದ ಅಧ್ಯಕ್ಷ ತಾರಾನಾಥ ಕಾಯರ್ಗ, ರೇವತಿ . ಹೇಮಲತಾ, ಜಯಂತಿ ಮತ್ತಿತರರಿದ್ದರು.

ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜು: ಶಿಕ್ಷಕ-ರಕ್ಷಕ ಸಂಘದ ಸಭೆ



ಕುಂದಾಪುರ: ಸತ್ಯ, ಪ್ರಾಮಾಣಿಕ ಮತ್ತು ನೀತಿವಂತರಾಗಿರುವವರು ನಿಜವಾದ ಬುದ್ಧಿವಂತ ವಿದ್ಯಾರ್ಥಿಗಳು ಎಂದು ಬೆಂಗಳೂರಿನ ಮಲ್ನಾಡ್ ಕೋಚಿಂಗ್ ಸೆಂಟರ್‌ನ ನಿರ್ದೇಶಕ ತೀರ್ಥಹಳ್ಳಿ ಕೇಶವಮೂರ್ತಿ ಹೇಳಿದ್ದಾರೆ.

ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜಿನಲ್ಲಿ ಶನಿವಾರ ಜರಗಿದ ಕಾಲೇಜಿನ ರಕ್ಷಕ ಶಿಕ್ಷಕ ಸಂಘದ ಸಭೆಯಲ್ಲಿ ಪೋಷಕರನ್ನು ಉದ್ದೇಶಿಸಿ ಅವರು ಮಾತನಾಡಿದರು.

ಅಧ್ಯಕ್ಷತೆಯನ್ನು ಭಂಡಾರ್ಕಾರ್ಸ್ ಕಾಲೇಜಿನ ಪ್ರಾಂಶುಪಾಲ ಡಾ.ಶುಭಕರಾಚಾರಿ ವಹಿಸಿದ್ದರು. ಭಂಡಾರ್ಕಾರ್ಸ್ ಕಾಲೇಜಿನ ಆಡಳಿತ ಮಂಡಳಿಯ ಕಾರ್ಯದರ್ಶಿ ಯು. ಎಸ್.ಶೆಣೈ, ಮತ್ತು ರಕ್ಷಕ – ಶಿಕ್ಷಕ ಸಂಘದ ಕಾರ್ಯದರ್ಶಿ ಸಂಜೀವ ತೆಕ್ಕಟ್ಟೆ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು.

ಪೋಷಕರ ಸಹಕಾರ ಅಗತ್ಯ

ಪೋಷಕರು ಅವರು ಮಕ್ಕಳ ಜೊತೆ ಮುಕ್ತವಾಗಿ ಚರ್ಚಿಸಿ ಸ್ಪರ್ಧಾತ್ಮಕ ಪರೀಕ್ಷೆಗಳು ಮತ್ತು ಅದರ ಮಹತ್ವ ತಿಳಿಸಬೇಕು. ಸರ್ಕಾರಿ ಕೆಲಸಗಳ ಪಡೆಯು ವುದಕ್ಕೆ ಪೋಷಕರು ಪ್ರೇರೆಪಿಸಬೇಕು.

● ತೀರ್ಥಹಳ್ಳಿ ಕೇಶವಮೂರ್ತಿ

ಕಾಲೇಜಿನ ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ ಸತ್ಯನಾರಾಯಣ ಸ್ವಾಗತಿಸಿದರು. ಇತಿಹಾಸ ಉಪನ್ಯಾಸಕಿ ಸ್ನೇಹ ಕಾರ್ಯಕ್ರಮ ನಿರೂಪಿಸಿದರು. ಇಂಗ್ಲಿಷ್ ಉಪನ್ಯಾಸಕ ಶಶಾಂಕ್ ಪಟೇಲ್ ವಂದಿಸಿದರು.

ಚತುರ್ಮಾಸವಾದರೂ ನಡೆಯದ ಕಡಬ ತಾಲೂಕು ತ್ರೈಮಾಸಿಕ ಕೆಡಿಪಿ ಸಭೆ | ಸದಸ್ಯರ ಆಕ್ರೋಶ

ತಾಲೂಕು ಪಂಚಾಯತ್ ಇ.ಒ. ಕಚೇರಿ ಎದುರು ಸಾಂಕೇತಿಕ ಪ್ರತಿಭಟನೆ

ಕಡಬ: ಕಡಬ ತಾ.ಪಂ. ತ್ರೈಮಾಸಿಕ ಕೆಡಿಪಿ ಸಭೆಯು ನಾಲ್ಕು ತಿಂಗಳಾದರೂ ನಡೆಯುತ್ತಿಲ್ಲ, ಈ ಬಗ್ಗೆ ತಾ.ಪಂ. ಕಾರ್ಯನಿರ್ವಾಹಣಾಧಿಕಾರಿ ಹಾಗೂ ಶಾಸಕರು ಗಮನಹರಿಸುತ್ತಿಲ್ಲ ಎಂದು ಕೆಡಿಪಿ ನಾಮನಿರ್ದೇಶಿತ ಸದಸ್ಯರು ಆರೋಪಿಸಿ ತಾ.ಪಂ. ಕಾರ್ಯನಿರ್ವಾಹಣಾಧಿಕಾರಿಯವರ ಕಚೇರಿಯ ಎದುರು ಸಾಂಕೇತಿಕ ಪ್ರತಿಭಟನೆ ನಡೆಸಿದ ಘಟನೆ ಶನಿವಾರ ನಡೆದಿದೆ.

ಸಭೆ ಯಾಕೆ ನಡೆಯುತ್ತಿಲ್ಲ, ಅಸಡ್ಡೆ ಯಾಕೆ

ಕೆಡಿಪಿ ನಾಮ ನಿರ್ದೇಶಿತ ಸದಸ್ಯರಾದ ಶಿವರಾಮ ರೈ, ಅಶ್ರಫ್ ಶೇಡಿಗುಂಡಿ, ಮೋನಪ್ಪ ಪದ್ಮನಾಭ ಗೌಡ, ಗಿರೀಶ್ ಬದನೆ, ಉಷಾಜೋಯಿ ಅವರು ತಾಲೂಕು ಪಂಚಾಯತ್ ಕಾರ್ಯಾಲಯಕ್ಕೆ ಭೇಟಿ ನೀಡಿ ತಾಲೂಕು ಪಂಚಾಯತ್ ವ್ಯವಸ್ಥಾಪಕಿ ಭವ್ಯ ಎಂ. ಅವರೊಂದಿಗೆ ಚರ್ಚೆ ನಡೆಸಿ ತ್ರೈಮಾಸಿಕ



ಕೆಡಿಪಿ ಸಭೆ ಯಾವಾಗ ನಡೆಯುವುದು, ಯಾಕೆ ನಡೆಯುತ್ತಿಲ್ಲ ಎಂದು ಪ್ರಶ್ನಿಸಿದರು. ಕಳೆದ ಬಾರಿಯ ಸಭೆ ಕೂಡ ಐದು ತಿಂಗಳ ಬಳಿಕ ಆಗಿರುವುದು, ಈ ಬಾರಿ ಏ.22ರಂದು ನಡೆಯಬೇಕಿತ್ತು, ಆದರೆ ಮೇ 22ಕ್ಕೆ ಕೂಡ ಆಗುತ್ತಿಲ್ಲ, ಈ ರೀತಿಯ ಅಸಡ್ಡೆ ಏನು ನಿಮಗೆ ಎಂದು ಪ್ರಶ್ನಿಸಿದರು, ಸದಸ್ಯ ಶಿವರಾಮ ರೈ

ಕಡಬದಲ್ಲಿ ಇಲ್ಲ ಸಭೆ ಯಾಕೆ?

ಶಾಸಕರು ಸುಳ್ಯದಲ್ಲಿ ಸಭೆ ಮಾಡುತ್ತಾರೆ ಕಡಬದಲ್ಲಿ ಯಾಕೆ ಮಾಡುತ್ತಿಲ್ಲ, ಸಭೆ ನಡೆಸಿದರೂ ನಮ್ಮನ್ನು ಕಡೆಗಣಿಸಲಾಗುತ್ತಿದೆ, ನಮಗೆ ಅಧಿಕಾರಿಗಳ ಸಾಲಿನಲ್ಲಿ ಆಸನ ಹಾಕಲಾಗಿದೆ, ನಾವು ಅಧಿಕಾರಿಗಳು ಮಾಹಿತಿ ನೀಡುವಾಗ ತಿರುಗಿ ನೋಡಬೇಕು ಎಂದೆಲ್ಲ ಪ್ರಶ್ನಿಸಿದರು.

ಮಾತನಾಡಿ, ಸಭೆ ನಡೆಯುವುದೇ ಬಾರಿ ಕಷ್ಟದಲ್ಲಿ ಸಭೆ ನಡೆದರೂ ಪ್ರಯೋಜಕ್ಕಿಲ್ಲದಂತಾಗಿದೆ, ಕಳೆದ ಸಭೆಯ ನಿರ್ಣಯದ ಪಾಲನಾ ವರದಿಯೂ ಸಭೆಯಂದೆ ನಮಗೆ ನೀಡಿದರೆ ಎಲ್ಲಾ ವಿಚಾರಗಳನ್ನು ಗಮನಿಸಲು ಸಾಧ್ಯವಾಗುತ್ತಿಲ್ಲ, ಜಿಲ್ಲಾ ಮಟ್ಟದ ಕೆಡಿಪಿ ಸಭೆಯು ಸರಿಯಾದ ಸಮಯದಲ್ಲಿ ನಡೆಯುತ್ತದೆ. ಕಡಬ ತಾಲೂಕು ಕೆಡಿಪಿ ಸಭೆ ನಡೆಸಲು ಇಷ್ಟೊಂದು ಅಸಡ್ಡೆ ಯಾಕೆ. ಸಭೆ ನಡೆದರೆ ತಾಲೂಕು ಮಟ್ಟದ ಅಧಿಕಾರಿಗಳನ್ನು ಪ್ರಶ್ನಿಸಲು ನಮಗೆ ಸಾಧ್ಯವಾಗುತ್ತದೆ. ಅಶ್ರಫ್ ಶೇಡಿಗುಂಡಿ ಮಾತನಾಡಿ, ಕಳೆದ ಬಾರಿಯ ಸಭೆ ನಾವು ತುಂಬಾ ಒತ್ತಡ ಮಾಡಿ ಮಾಡಲಾಗಿದೆ. ಈ ರೀತಿಯಾದರೆ ಜನರ ಸಮಸ್ಯೆಯನ್ನು ಅಧಿಕಾರಿಗಳಿಗೆ ತಿಳಿಯಪಡಿಸುವುದು ಹೇಗೆ ಎಂದು ತಾ.ಪಂ. ವ್ಯವಸ್ಥಾಪಕರಲ್ಲಿ ಕೇಳಿದರು.

ನಮಗೆ ಪಾಲನಾ ವರದಿ ಕೊಡಿ

ಕಂದಾಯ ಇಲಾಖೆಯಲ್ಲಿ ತುಂಬಾ ಸಮಸ್ಯೆಗಳಿರುವುದರಿಂದ ಕಂದಾಯ ಇಲಾಖೆಯ ಸಭೆಯನ್ನು ಪ್ರತ್ಯೇಕವಾಗಿ ನಡೆಸುತ್ತೇವೆ ಎಂದು ಶಾಸಕರು ಈ ಹಿಂದಿನ ಸಭೆಯಲ್ಲಿ ಹೇಳಿದ್ದರು, ಇದೀಗ ಆ ಸಭೆಯೂ ಇಲ್ಲ, ಈ ಸಭೆಯೂ ಇಲ್ಲ ಎಂದು ಹೇಳಿದ ಸದಸ್ಯರು, ನಮಗೆ ಪಾಲನಾ ವರದಿ ಕೊಡಿ ಎಂದು ತಾ.ಪಂ. ವ್ಯವಸ್ಥಾಪಕರಲ್ಲಿ ಕೇಳಿದರು. ಈ ಬಗ್ಗೆ ಉತ್ತರಿಸಿದ ವ್ಯವಸ್ಥಾಪಕರು ಸಿಬ್ಬಂದಿ ಕೊರತೆ, ಸಮಯದ ಅಭಾವದಿಂದ ಸಭೆ ನಡೆಸಲು ವಿಳಂಬವಾಗಿದೆ ಕೂಡಲೇ ಸಭೆ ನಡೆಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿ, ಪಾಲನ ವರದಿಯನ್ನು ಎಲ್ಲ ಸದಸ್ಯರಿಗೂ ನೀಡಿದರು. ಬಳಿಕ ಸದಸ್ಯರು ಇ.ಒ. ನವೀನ್ ಭಂಡಾರಿಯವರ ಕಚೇರಿ ಎದುರು ಕುಳಿತು ಸಾಂಕೇತಿಕವಾಗಿ ಪ್ರತಿಭಟಿಸಿ ಇದೇ ರೀತಿ ಮುಂದುವರಿದರೆ ಸಚಿವರಿಗೆ ಅಧಿಕಾರಿ ಗಳ ವಿರುದ್ಧ ದೂರು ನೀಡಲಾಗುವುದು, ಅಲ್ಲದೆ ಮುಂದಿನ ಸಭೆಗೆ ತಾಲೂಕು ಮಟ್ಟದ ಎಲ್ಲ ಅಧಿಕಾರಿಗಳು ಇರಬೇಕು, ಇಲ್ಲದಿದ್ದರೆ ಅವರ ವಿರುದ್ಧವೂ ದೂರು ನೀಡಲಾಗುವುದೆಂದು ಎಚ್ಚರಿಸಿದರು.

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಸೋಮವಾರ 18, ಮೇ 2026

ಸುತ್ತ ಮುತ್ತ

ಕೇಸರಿ ಶಾಲು ಹಾಕಬಹುದು: ಶಾಸಕ ಮಂಥರ್ ಗೌಡ ಹೇಳಿಕೆ

ಮಡಿಕೇರಿ: ಹಿಜಾಬ್ ನಿಷೇಧ ಆದೇಶವನ್ನು ಹಿಂಪಡೆದಿರುವ ರಾಜ್ಯ ಸರಕಾರದ ಕ್ರಮದ



ಬಗ್ಗೆ ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ ಅವರು ಸರಕಾರದ ಕ್ರಮವನ್ನು ಸಮರ್ಥಿಸಿಕೊಳ್ಳುವುದರ ಜೊತೆಗೆ ಕೇಸರಿ ಶಾಲು ಹಾಕಿಕೊಂಡು ವಿದ್ಯಾರ್ಥಿಗಳು ಶಾಲಾ–ಕಾಲೇಜಿಗೆ ಬರುವುದಕ್ಕೂ ಅವಕಾಶವಿದೆ ಎಂಬ ಅಚ್ಚರಿಯ ಹೇಳಿಕೆ ನೀಡಿದ್ದಾರೆ.

ಮಕ್ಕಳು ಶಾಲಾ–ಕಾಲೇಜುಗಳಿಗೆ ಕೇಸರಿ ಶಾಲು ಹಾಕಿಕೊಂಡೇ ಬನ್ನಿ. ಎಲ್ಲರಿಗೂ ಅವರದ್ದೇ ಆದ ವೈಯಕ್ತಿಕ ಅಭಿಪ್ರಾಯಗಳಿವೆ. ಯಾರೂ ಯಾವ ರೀತಿಯಲ್ಲಿ ಬೇಕಾದರೂ ಹಾಕಿಕೊಂಡು ಹೋಗಲಿ. ಆದರೆ ಮಕ್ಕಳು ಶಾಲಾ ಕಾಲೇಜಿಗೆ ಬರುವುದು ಮುಖ್ಯ ಎಂದು ಅವರು ಅಭಿಪ್ರಾಯಿಸಿದ್ದಾರೆ. ಎಲ್ಲರೂ ಹಿಜಾಬ್ ಬಗ್ಗೆ ಮಾತ್ರ ಹೆಚ್ಚಾಗಿ ಚರ್ಚೆ ಮಾಡುತ್ತಿದ್ದಾರೆ. ಆದರೆ ನೀಟ್ ಪರೀಕ್ಷೆ ಬಗ್ಗೆ ಯಾರೂ ಮಾತನಾಡುತ್ತಿಲ್ಲ. ಯಾಕೆ ದಂಧೆ ನಡೆಯಿತು, ಯಾರು ಜವಾಬ್ದಾರರು ಎಂಬ ಬಗ್ಗೆ ದೊಡ್ಡ ಮಟ್ಟದ ಚರ್ಚೆಯಾಗಬೇಕು. ಒಳ್ಳೆಯ ಪಾಠವನ್ನು ಕಲಿಯಲು ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳಿಗೆ ಹೋಗುವಾಗ ಕೇಸರಿ ಶಾಲು ಹಾಕಿಕೊಂಡು ಹೋಗುವುದರಲ್ಲಿ ತಪ್ಪೇನಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರಕ್ಕಾಗಿ ಅಳಿಲ ಸೇವೆ ಸಲ್ಲಿಸುವುದು ಅನಿವಾರ್ಯ: ಪ್ರಭು

ಬಂಟ್ವಾಳ: ಮಧ್ಯಪ್ರಾಚ್ಯದಲ್ಲಾದ ಯುದ್ಧದ ಪರಿಣಾಮದಿಂದಾಗಿ ಜಾಗತಿಕ ಮಟ್ಟದಲ್ಲಿ ತೈಲ ಬೆಲೆ ಗಗನಕ್ಕೆ ಏರಿಕೆಯಾಗಿದ್ದು ಪ್ರಪಂಚದಾದ್ಯಂತ ತೈಲದ ಅಭಾವವೂ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಬಹುತೇಕ ದೇಶಗಳಲ್ಲಿ ತೈಲ ಬಿಕ್ಕಟ್ಟು ಈಗಾಗಲೇ



ಕಾಡತೊಡಗಿದೆ. ನಮ್ಮ ದೇಶದಲ್ಲಿ ಮುಂದೆ ತಲೆದೋರಬಹುದಾದ ತೈಲ ಸಮಸ್ಯೆ ಬಿಕ್ಕಟ್ಟಿನಿಂದ ಪಾರಾಗಲು ರಾಷ್ಟ್ರದ ಜನತೆಯ ಹಿತದೃಷ್ಟಿಯಿಂದ ಮತ್ತು ಒಟ್ಟು ನಾಗರಿಕ ಸಮಾಜದ ಜನ ಜೀವನದ ಅನುಕೂಲತೆಗಾಗಿ ಪ್ರಧಾನಿ ನರೇಂದ್ರ ಮೋದಿಯವರು ದೇಶದ ಸಮಸ್ತ ಜನರಿಗೆ ತೈಲ ಮಿತ ಬಳಕೆಯ ಬಗ್ಗೆ ನೀಡಿದ ಕರೆಯೊಲೆಯಂತೆ ನಮ್ಮ, ನಮ್ಮ ಸ್ವಂತ ವಾಹನಗಳಿಗೆ ಸ್ವಲ್ಪ ಸಮಯ ವಿಶ್ರಾಂತಿ ನೀಡುವ ಮೂಲಕ ಅಗತ್ಯದ ಕೆಲಸ ಕಾರ್ಯಗಳಿಗೆ ಸಾರ್ವಜನಿಕ ಬಸ್ಸು ಮತ್ತು ರೈಲ್ವೆ ಸೇವೆಯನ್ನು ಬಳಸಿಕೊಂಡು ರಾಷ್ಟ್ರಕ್ಕಾಗಿ ಅಳಿಲ ಸೇವೆಯನ್ನು ಸಲ್ಲಿಸುವುದು ಅನಿವಾರ್ಯವಾಗಿದೆ ಎಂದು ಬಂಟ್ವಾಳ ತಾಲೂಕು ಪಂಚಾಯತ್ ಮಾಜಿ ಸದಸ್ಯ ಪ್ರಭಾಕರ ಪ್ರಭು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಭಿಮಾನವೇ ಇದಕ್ಕೆ ಸಾಕ್ಷಿ

ಪ್ರಧಾನಿ ಮೋದಿಯವರು ತೈಲ ಮಿತ ಬಳಕೆ ಹಾಗೂ ಚಿನ್ನ ಖರೀದಿ ಕಡಿಮೆ ಮಾಡುವ ಬಗ್ಗೆ ದೇಶದ ಜನರಲ್ಲಿ ವಿನಂತಿಸಿಕೊಂಡಿದ್ದಾರೆ ವಿನಾ ಯಾವುದೇ ಒತ್ತಾಯ, ಒತ್ತಡ ಮಾಡಿರುವುದಿಲ್ಲ. ಪ್ರಧಾನಿ ಕರೆಯಂತೆ ಈಗಾಗಲೇ ದೇಶದಾದ್ಯಂತ ಹಲವು ಮಂದಿ ಉನ್ನತ ಮಟ್ಟದ ನಾಯಕರಿಂದ ಹಿಡಿದು ಅಧಿಕಾರಿಗಳು ತೈಲ ಅಭಾವವನ್ನು ತಗ್ಗಿಸುವ ಸಲುವಾಗಿ ತಮ್ಮ ಸರಕಾರಿ ವಾಹನಗಳನ್ನು ಬಿಟ್ಟು ಮಹಾನ್ ತ್ಯಾಗಕ್ಕೆ ಇಳಿದಿರುವುದು ರಾಷ್ಟ್ರ ಮತ್ತು ಪ್ರಧಾನಿ ಮೇಲೆ ಇರುವ ಅಭಿಮಾನವೇ ಇದಕ್ಕೆ ಸಾಕ್ಷಿಯಾಗಿದೆ ಎಂದ ಅವರು ತಿಳಿಸಿದ್ದಾರೆ.

ಹರಿಹರ ಪಳ್ಳತ್ತಡ್ಕದಲ್ಲಿ ಶನಿ ಜಯಂತಿ: ಭಕ್ತರಿಂದ ಪೂಜೆ, ವಿವಿಧ ಸೇವೆ

ಸುಬ್ರಹ್ಮಣ್ಯ: ಇತಿಹಾಸ ಪ್ರಸಿದ್ಧ ಹರಿಹರ ಪಳ್ಳತ್ತಡ್ಕದ ಶ್ರೀ ಹರಿಹರೇಶ್ವರ ದೇವಸ್ಥಾನಕ್ಕೆ ಮಹಾ ಶನಿ ಸಂಯೋಗ ಮತ್ತು ಶನಿ ಜಯಂತಿ ಅಂಗವಾಗಿ ಶನಿವಾರದಂದು ಅಧಿಕ ಸಂಖ್ಯೆಯ ಭಕ್ತಾಧಿಗಳು ಶ್ರೀ ದೇವರ ದರುಶನಕ್ಕೆ ಆಗಮಿಸಿದ್ದರು. ಶನಿ ಪೂಜೆಗೆ ಪ್ರಖ್ಯಾತಿ ಪಡೆದ ಶ್ರೀ ದೇವಳದಲ್ಲಿ 330 ಶನಿಪೂಜೆ ನೆರವೇರಿತು.ಉಳಿದಂತೆ, 170 ರುದ್ರಾಭಿಷೇಕ ಮತ್ತು ಇತರ ಸೇವೆಗಳಾದ, ಹಾಲು–ಪಾಯಸ, ಅವಲಕ್ಕಿ–ಪಂಚಕಜ್ಜಾಯಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ನೆರವೇರಿಸಿದರು. ಮದ್ಯಾಹ್ನದ ಮಹಾಪೂಜೆಯಲ್ಲಿ ಪಾಲ್ಗೊಂಡು ಶ್ರೀ ದೇವರ ಆಶೀರ್ವಾದ ಪಡೆದು ಪ್ರಸಾದ ಸ್ವೀಕರಿಸಿದರು. ಸಂದರ್ಭದಲ್ಲಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾದ ಜಗದೀಶ್ ಪಡ್ಪು, ಶ್ರೀ ದೇವಳದ ಪ್ರಧಾನ ಅರ್ಚಕರಾದ ಶ್ರೀ ಸುಬ್ರಹ್ಮಣ್ಯ ನರಸಿಂಹ ಭಟ್, ವ್ಯವಸ್ಥಾಪನಾ ಸಮಿತಿ ಹಾಗೂ ಅಭಿವೃದ್ಧಿ ಸಮಿತಿಯ ಪದಾಧಿಕಾರಿಗಳು ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಮಡಿಕೇರಿ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜ್‌ನಲ್ಲಿ ಥ್ರೋಬಾಲ್ ಪಂದ್ಯಾಟ ಉದ್ಘಾಟನೆ

ಕ್ರೀಡೆಯಿಂದ ನಾಯಕತ್ವ ಗುಣ ಬೆಳೆಯಲಿದೆ: ಪ್ರೊ. ರಾಘವ

ಮಡಿಕೇರಿ: ಕ್ರೀಡೆ ಎಂದರೆ ಕೇವಲ ಗೆಲುವು ಸೋಲಿನ ಲೆಕ್ಕಾಚಾರವಲ್ಲ, ಅದು ಶಿಸ್ತು, ಆತ್ಮವಿಶ್ವಾಸ ಮತ್ತು ನಾಯಕತ್ವದ ಗುಣವನ್ನು ಬೆಳೆಸುವ ಒಂದು ಮಾರ್ಗವಾಗಿದೆ ಎಂದು ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜ್‌ನ ಪ್ರಾಂಶುಪಾಲ ಪ್ರೊ. ಮೇಜರ್ ರಾಘವ ಬಿ. ಅವರು ತಿಳಿಸಿದ್ದಾರೆ.

ನಗರದ ಫೀ.ಮಾ.ಕೆ.ಎಂ.ಕಾರ್ಯಪ್ಪ ಕಾಲೇಜ್ ನಲ್ಲಿ ನಡೆದ ಕೊಡಗು ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು ಮಹಿಳೆಯರ ಥ್ರೋಬಾಲ್ ಪಂದ್ಯಾಟದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು.



ಕ್ರೀಡೆ ಸಂಘಟನಾ ಕೌಶಲ್ಯ, ವೇಗ ಚಾತುರ್ಯ ಮತ್ತು ಒಗ್ಗಟ್ಟಿನ ಪ್ರತೀಕವಾಗಿದೆ. ಕ್ರೀಡೆಯನ್ನು ಕೇವಲ ಕ್ರೀಡೆಯಾಗಿ ತೆಗೆದುಕೊಳ್ಳದೆ ವೃತ್ತಿಪರವಾಗಿ ತೆಗೆದುಕೊಂಡರೆ ಜೀವನದಲ್ಲಿ ಸರ್ವಾಂಗೀಣ ಅಭಿವೃದ್ಧಿ ಸಾಧಿಸಬಹುದು ಹಾಗೂ ಭವಿಷ್ಯದಲ್ಲಿ ಜೀವನೋಪಾಯವನ್ನು ಕಂಡುಕೊಳ್ಳಬಹುದು. ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು ವಿದ್ಯಾರ್ಥಿಗಳ ಜೀವನದಲ್ಲಿ ಸದಾ ಪಠ್ಯ ಪಠ್ಯೇತರ ವಿಷಯಗಳಿಗೆ ಸಮಾನ ಆದ್ಯತೆ ನೀಡುತ್ತಾ ಬರುತ್ತಿದೆ. ಶಿಸ್ತು ಮತ್ತು ತಾಳ್ಮೆಯನ್ನು ಮೈಗೂಡಿಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಸಲಹೆ ಸೂಚನೆಗಳನ್ನು ನೀಡಿ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸುತ್ತಿದೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮಡಿಕೇರಿಯ ಶ್ರೀ ರಾಜರಾಜೇಶ್ವರಿ ವಿದ್ಯಾಸಂಸ್ಥೆಯ ನಿರ್ದೇಶಕ ದೇವರಾಜ್ ಎಚ್.ಎಸ್ ಅವರು ಯುವಜನತೆ ಕ್ರೀಡಾ ಚಟುವಟಿಕೆಯಲ್ಲಿ ಹೆಚ್ಚು ಹೆಚ್ಚು ಪಾಲ್ಗೊಳ್ಳಬೇಕು, ಪ್ರಸ್ತುತ ದಿನಗಳಲ್ಲಿ ಮೊಬೈಲ್ ಬಳಕೆಯಿಂದಾಗಿ ಯುವ ಸಮೂಹದಲ್ಲಿ ಮಾನಸಿಕ ಖಿನ್ನತೆ, ಅಸ್ವಸ್ಥತೆ ಹೆಚ್ಚಾಗುತ್ತಿದೆ. ಇದರಿಂದ ಹೊರಬರಬೇಕಾದರೆ ಕ್ರೀಡೆ ಉತ್ತಮ ಮಾರ್ಗವಾಗಿದೆ ಎಂದು ತಿಳಿಸಿದರು.

> **ವಿಶೇಷ ಒತ್ತು**
> ಕ್ರೀಡೆ ವಿದ್ಯಾರ್ಥಿಗಳಲ್ಲಿ ಹೊಸ ಉತ್ಸಾಹವನ್ನು ತುಂಬಲ ಸಹಕಾರಿಯಾಗಲಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ಇಂದು ಕ್ರೀಡಾ ವಲಯಕ್ಕೆ ವಿಶೇಷವಾದ ಒತ್ತು ನೀಡಿ, ಅನುದಾನ ಒದಗಿಸುತ್ತಿದೆ. ಇದರ ಸೌಲಭ್ಯವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು.
> • ಪ್ರೊ. ಮೇಜರ್ ರಾಘವ ಬಿ.

ವಿದ್ಯಾರ್ಥಿಗಳು ಸಂಬಂಧಗಳಿಗಿಂತ, ಪ್ರೀತಿ ಪಾತ್ರರಿಗಿಂತ ಮೊಬೈಲ್‌ಗೆ ಹೆಚ್ಚು ಮಹತ್ವ ನೀಡುತ್ತಿದ್ದು ಇದು ಸಮಾಜಕ್ಕೆ ಆಘಾತವನ್ನು ತಂದೊಡ್ಡಲಿದೆ. ಆದ್ದರಿಂದ ವಿದ್ಯಾರ್ಥಿಗಳು ಮೊಬೈಲ್ ದೂರ ಮಾಡಿ ತಂದೆ–ತಾಯಿಗಳಿಗೆ, ಗುರು–ಹಿರಿಯರಿಗೆ ಗೌರವ ನೀಡುವುದರೊಂದಿಗೆ ಜೀವನದಲ್ಲಿ ಉತ್ತುಂಗಕ್ಕೇರಬೇಕು ಎಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಮಡಿಕೇರಿಯ ಕೆನರಾ ಬ್ಯಾಂಕ್ ಪಶ್ಚಿಮ ಶಾಖೆಯ ಹಿರಿಯ ಪ್ರಬಂಧಕ ಸುನೀಲ್ ಎಸ್.ಎನ್, ಸ್ವತಃ ಕ್ರಿಕೆಟ್ ಹಾಗೂ ಬ್ಯಾಡ್ಮಿಂಟನ್ ಆಟಗಾರನಾದ ನನಗೆ ಇಂತಹ ಕ್ರೀಡಾ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಸಂತೋಷವಾಗುತ್ತದೆ. ಯುವಜನತೆ ದೈಹಿಕ ಮತ್ತು ಮಾನಸಿಕ ಕ್ಷಮತೆಯನ್ನು ಕಾಯ್ದುಕೊಳ್ಳುವಂತೆ ಸಲಹೆ ನೀಡಿದರು. ಕ್ರೀಡಾ ವಿಭಾಗದ ಸಂಯೋಜಕ ಡಾ.ತಳವಾರ್ ಬಿ.ಹೆಚ್ ಸ್ವಾಗತಿಸಿ, ದೈಹಿಕ ಶಿಕ್ಷಣ ನಿರ್ದೇಶಕ ರಮೇಶ್ ಪಿ.ಸಿ ವಂದಿಸಿದರು. ಕಾರ್ಯಕ್ರಮದಲ್ಲಿ ಕಾಲೇಜ್‌ನ ಭೋದಕ, ಭೋದಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳು, ವಿವಿಧ ಕಾಲೇಜುಗಳ ಕ್ರೀಡಾಪಟುಗಳು ಹಾಗೂ ಕ್ರೀಡಾ ನಿರ್ದೇಶಕರು ಉಪಸ್ಥಿತರಿದ್ದರು. ಶ್ರೀ ರಾಜರಾಜೇಶ್ವರಿ ವಿದ್ಯಾಸಂಸ್ಥೆಯ ನಿರ್ದೇಶಕ ದೇವರಾಜ್ ಎಚ್.ಎಸ್ ಅವರು ಪ್ರಾಯೋಜಕತ್ವವನ್ನು ವಹಿಸಿ ನಗದು ಬಹುಮಾನ ಘೋಷಿಸಿದರು.

ಎಸ್‌ಡಿಎಂ ಕಾಲೇಜಿನಲ್ಲಿ ವಿಶ್ರುತಿ ಕಾರ್ಯಕ್ರಮ | ಡಾ. ಭಾಸ್ಕರ್ ಹೆಗಡೆ ಕರೆ

ಕಲಾ ವಿಭಾಗದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ

ಬೆಳ್ತಂಗಡಿ: ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವಾಯತ್ತ ಕಾಲೇಜಿನ ಐಕ್ಯುಎಸಿ ಮತ್ತು ಮಾನವಿಕ ಸಂಘ ಇವುಗಳ ಆಶ್ರಯದಲ್ಲಿ ಕಲಾವಿದ ವಿದ್ಯಾರ್ಥಿಗಳಿಗಾಗಿ ವಿಶ್ರುತಿ–26 ಕಾರ್ಯಕ್ರಮ ಆಯೋಜಿಸಲಾಯಿತು.



ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವಾಯತ್ತ ಕಾಲೇಜಿನ ಕಲಾ ವಿಭಾಗದ ಡೀನ್ ಹಾಗೂ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಡಾ. ಭಾಸ್ಕರ್ ಹೆಗಡೆ ಉದ್ಘಾಟಿಸಿದರು.

ಕಲಾವಿಭಾಗದ ವಿದ್ಯಾರ್ಥಿಗಳಿಗೆ ಉತ್ತೇಜನವನ್ನು ನೀಡಲು ಹಾಗೂ ಅವರ ಪ್ರತಿಭೆಗಳಿಗೆ ರಚನಾತ್ಮಕ ದೃಷ್ಟಿಕೋನವನ್ನು ನೀಡಲು ಈ ರೀತಿಯ ಕಾರ್ಯಕ್ರಮಗಳು ಅತ್ಯಂತ ಉಪಕಾರಿ. ಕಲಾವಿಭಾಗದ ವಿದ್ಯಾರ್ಥಿಗಳು ವಾಣಿಜ್ಯ ಮತ್ತು ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗಿಂತಲೂ ಹೆಚ್ಚಿನ ಅವಕಾಶಗಳನ್ನು ಹೊಂದಿದ್ದಾರೆ ಅವುಗಳನ್ನು ಸದುಪಯೋಗಪಡಿಸಿಕೊಳ್ಳಲು ಈ ರೀತಿಯ ಕಾರ್ಯಕ್ರಮ ಸಹಕಾರಿಯಾಗಿದೆ ಎಂಬುದನ್ನು ಅನೇಕ ಉದಾಹರಣೆಗಳ ಮೂಲಕ, ಈಗಾಗಲೇ ಸಾಧನೆ ಮಾಡಿರುವ ಅನೇಕ ಕಲಾ ವಿಭಾಗದ ವಿದ್ಯಾರ್ಥಿಗಳ ಘಟನೆಗಳನ್ನು ಉಲ್ಲೇಖಿಸಿ ಕಲಾ ವಿಭಾಗದ ವಿದ್ಯಾರ್ಥಿಗಳು ಯಾವುದರಲ್ಲೂ ಕಡಿಮೆ ಇಲ್ಲ ಎಂದು ತಿಳಿಸಿದರು.

ಭವಿಷ್ಯದ ಬಗ್ಗೆ ಭಯ ಇದ್ದಾಗ ಅವರ ಜೀವನದಲ್ಲಿ ಜಯ ಸಿಗುತ್ತದೆ ಹಾಗಾಗಿ ವಿದ್ಯಾರ್ಥಿಗಳು ಭವಿಷ್ಯದ ಬಗ್ಗೆ ಆಲೋಚಿಸಿ ಅಧ್ಯಯನದಲ್ಲಿ ತೊಡಗಿಕೊಳ್ಳಬೇಕು ಹಾಗೂ ಈ ರೀತಿಯ ಕಾರ್ಯಕ್ರಮಗಳ ಮುಖಾಂತರ ತಮ್ಮ ಕೌಶಲ್ಯವನ್ನು ಮತ್ತು ನಾಯಕತ್ವವನ್ನು ರೂಡಿಸಿಕೊಳ್ಳಬೇಕು ಎಂದರು. ಮಾನವಿಕ ಸಂಘದ ಸಂಯೋಜಕ ಪ್ರೊ. ರೊನಾಲ್ಡ್ ಪ್ರವೀಣ್ ಕೊರಾಯ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾಲೇಜಿನ ವಿದ್ಯಾರ್ಥಿ ಕ್ಷೇಮ ಪಾಲನ ಅಧಿಕಾರಿ ಪ್ರೊ. ಪದ್ಮನಾಭ ಕೆ., ಅಧ್ಯಕ್ಷತೆಯನ್ನು ವಹಿಸಿ ಇಂದಿನ ಅನೇಕ ಅಧಿಕಾರಿ ವರ್ಗದವರು ಐಎಎಸ್ ಮತ್ತು ಕೆಎಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗುವವರು ಕಲಾವಿಭಾಗದ ವಿದ್ಯಾರ್ಥಿಗಳು ಹೆಚ್ಚು, ಹಾಗಾಗಿ ಕಲಾವಿಭಾಗದ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ಮಾಡಲು ಈ ರೀತಿಯ ಕಾರ್ಯಕ್ರಮಗಳು ಅನುಕೂಲಕರ ಎಂದು ತಿಳಿಸಿದರು.

> **ಬಹುಮಾನ ವಿತರಣೆ**
> ಅಂತರ್ ತರಗತಿ ಸ್ಪರ್ಧೆಯಲ್ಲಿ ದ್ವಿತೀಯ ಬಿಕಾಂನ ವಿದ್ಯಾರ್ಥಿಗಳು ಸಮಗ್ರ ಪ್ರಶಸ್ತಿಯನ್ನು ತಮ್ಮ ಮುಡಿಗೇರಿಸಿಕೊಂಡರು. ದ್ವಿತೀಯ ಬಿಎ ವಿದ್ಯಾರ್ಥಿಗಳು ದ್ವಿತೀಯ ಸಮಗ್ರ ಪ್ರಶಸ್ತಿಯನ್ನು ಪಡೆದರು.

ಇತಿಹಾಸ ವಿಭಾಗದ ಮುಖ್ಯಸ್ಥ ಪ್ರೊ. ಕವಿತಾ ಹಾಗೂ ಸ್ನಾತಕೋತ್ತರ ವಿಭಾಗದ ಸಂಚಾಲಕರಾದ ಡಾ. ರವಿ ಎಂ ಎನ್. ಇದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ. ಮಾರುತಿ ಅತಿಥಿಗಳನ್ನು ಸ್ವಾಗತಿಸಿ ಉದ್ಘಾಟಕರ ಪರಿಚಯ ಮಾಡಿದರು. ಅಂತಿಮ ಬಿಎ ವಿದ್ಯಾರ್ಥಿ ಜಗದೀಶ್ ಹಾಗೂ ದ್ವಿತೀಯ ಬಿಎ ವಿದ್ಯಾರ್ಥಿನಿ ಕುಮಾರಿ ನಸೀಬಾ ನಿರೂಪಿಸಿದರು. ಮಾನವಿಕ ಸಂಘದ ಪದಾಧಿಕಾರಿ ಚೇತನ್ ಉಪಸ್ಥಿತರಿದ್ದರು. ಅರ್ಪಿತ ವಂದಿಸಿದರು.

ಕಾಂಗ್ರೆಸ್‌ನಿಂದ ಪ್ರತಿಭಟನೆ, ಆಕ್ರೋಶ | ಉಗ್ರ ಹೋರಾಟದ ಎಚ್ಚರಿಕೆ

ವಿಟ್ಲ ಪಟ್ಟಣ ಪಂಚಾಯತ್‌ನಿಂದ ತೆರಿಗೆ ಏರಿಕೆ

ವಿಟ್ಲ: ಬೇಕಾಬಿಟ್ಟಿ ತೆರಿಗೆ ಹಾಕುವ ಕಾರ್ಯಕ್ಕೆ ಬಿಜೆಪಿ ಆಡಳಿತ ಜನರನ್ನು ಲೂಟಿ ಮಾಡುವುದಕ್ಕೆ ಮುಂದಾಗಿರುವುದು ಖಂಡನೀಯ. 34 ಏಕನಿವೇಶನ ಕಡತಗಳು ವಿಲೇವಾರಿಗೆ ಬಾಕಿಯಿದ್ದು, 10 ಸಾವಿರ ಶುಲ್ಕದ ಬದಲಾಗಿ 1.45 ಲಕ್ಷ ತೆರಿಗೆ ವಿಧಿಸಲಾಗುತ್ತಿದೆ. ಈಗ ನಡೆದ ಸಾಂಕೇತಿಕ ಪ್ರತಿಭಟನೆ, ಮುಂದಿನ ದಿನ ಅನಿರ್ದಿಷ್ಟ ಅವಧಿಯ ಪ್ರತಿಭಟನೆ ಮಾಡಲಾಗುವುದು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪದ್ಮನಾಭ ಪೂಜಾರಿ ಸಣ್ಣಗುತ್ತು ಹೇಳಿದರು.



ವಿಟ್ಲ ಪಟ್ಟಣ ಪಂಚಾಯತ್ ಮುಂಭಾಗದಲ್ಲಿ ಅಭಿವೃದ್ಧಿ ಶುಲ್ಕ ಹಾಗೂ ಕಸದ ತೆರಿಗೆ ವಿಚಾರವಾಗಿ ಆಡಳಿತ ಮಂಡಳಿ ಸೂಕ್ತ ನಿರ್ಧಾರ ಕೈಗೊಳ್ಳದ ವಿಚಾರವನ್ನು ಖಂಡಿಸಿ ನಡೆದ ಪ್ರತಿಭಟನೆಯನ್ನುದ್ದೇಶಿ ಮಾತನಾಡಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ. ಎಸ್. ಮಹಮ್ಮದ್ ಮಾತನಾಡಿ ಬಿಟಿಪಿಗರಿಗೆ ಆಡಳಿತ ಮಾಡುವುದಕ್ಕೆ ಅನುಭವಿಲ್ಲ, ಬೊಬ್ಬೆ ಹಾಕಿ ಮಾತನಾಡು ಕಾರ್ಯ ಮಾತ್ರ ನಡೆಯುತ್ತಿದೆ. ಕಾಂಗ್ರೆಸ್ ಜವಾಬ್ದಾರಿಯಿಂದ ಕೆಲಸಗಳನ್ನು ಮಾಡುತ್ತಿದೆ. ಸಭೆಗಳಲ್ಲಿ ಜನರ ಸಮಸ್ಯೆಗೆ ಪರಿಹಾರ ಒದಗಿಸುವ ಕಾರ್ಯವಾಗಬೇಕು. ಬಿಜೆಪಿ ಗೆ ಕೆಲಸ ಮಾಡಲಾಗದಿದ್ದರೆ, ಆಡಳಿತ ಬಿಟ್ಟು ಹೊರಗೆ ಬರಬೇಕು ಎಂದರು.

> **ಕಾಟಾಚಾರದ ಪ್ರತಿಭಟನೆ:**
> ನೂರು ಜನ ಸೇರಿಸಲಾಗದಿದ್ದರೆ ಪ್ರತಿಭಟನೆ ಮಾಡುವುದು ಯಾಕೆ ಎಂದು ಹಿರಿಯ ಮುಖಂಡರು ಪ್ರಶ್ನಿಸಿದರು. ಅಧಿಕಾರಿಗಳ ಮುಂದೆ ನಿಂತು ಮಾತನಾಡಲು ಸಾಧ್ಯವಿಲ್ಲದವರು ಜನ ಪ್ರತಿನಿಧಿಗಳಾದ ಕಾರಣ ಮಾಡಿದ್ದೇ ಕಾನೂನು ಆಗಿದೆ ಎಂದು ಗೊಣಗಿದರು. 5 ಸದಸ್ಯರ ಪೈಕಿ ಇಬ್ಬರು, ಮೂರು ನಾಮ ನಿರ್ದೇಶಿತ ಸದಸ್ಯರ ಪೈಕಿ ಒಬ್ಬ ಗೈರಾಗಿದ್ದರು. ಮೂವತ್ತು ಮಂದಿ ಸೇರಿ ಮಾಡಿದ ಪ್ರತಿಭಟನೆ ಕಾಟಾಚಾರಕ್ಕೆ ಮಾಡಿದಂತಾಯಿತು.

ಡಿಸಿಸಿ ಕಾರ್ಯದರ್ಶಿ ರಮಾನಾಥ ವಿಟ್ಲ ಮಾತನಾಡಿ ತೆರಿಗೆ ವಿಧಿಸುವುದಕ್ಕೂ ಜನರ ಅಭಿಪ್ರಾಯ ಪಡೆದುಕೊಂಡಿಲ್ಲ. ಕಸ ವಿಲೇವಾರಿ, ನೀರು ಸರಬರಾಜು ಸಮರ್ಪಕವಾಗುತ್ತಿಲ್ಲ. ಬೈಲಾ ಬಿಜೆಪಿ ಒಳಜಗಳದಿಂದ ಬೈಲಾ ಜಾರಿಗೆ ಮುಂದಾಗಿಲ್ಲ, ಬಿಜೆಪಿಗೆ ಊರಿನ ಅಭಿವೃದ್ಧಿಯ ಅಗತ್ಯವಿಲ್ಲ, ಜನರಿಗೆ ಸಹಾಯ ಆಗಬೇಕೆಂಬ ನಿಟ್ಟಿನಲ್ಲಿ ಕಾಂಗ್ರೆಸ್ ಹೋರಾಟಕ್ಕೆ ಮುಂದಾಗಿದೆ ಎಂದರು.

ಪಟ್ಟಣ ಪಂಚಾಯತ್ ಸದಸ್ಯರಾದ ವಿಕೆ ಎಂ. ಅಶ್ರಫ್, ಅಬ್ದುಲ್ ರಹಿಮಾನ್ ಹಸೈನಾರ್, ನಾಮನಿರ್ದೇಶಿತ ಶ್ರೀನಿವಾಸ ಶೆಟ್ಟಿ ಮಹಮ್ಮದ್ ಇಕ್ಬಾಲ್ ಹಾನೆಸ್ಟ್ ಪ್ರಮುಖರಾದ ಎಂ.ಕೆ. ಮೂಸಾ, ಹಂಝ ವಿಟ್ಲ, ಉಲ್ಲಾಸ್ ಕೋಟ್ಯಾನ್ ಉಪಸ್ಥಿತರಿದ್ದರು.

ಜೀವಗಳ ರಕ್ಷಣೆಗೆ ಹನಿ ಹನಿ ರಕ್ತವೂ ಅಮೂಲ್ಯ: ಡಾ. ರಾಮಕೃಷ್ಣ ರಾವ್



ಪುತ್ತೂರು: ಅಕ್ಷಯ ಪದವಿ ಕಾಲೇಜಿನಲ್ಲಿ ರೆಡ್ ಕ್ರಾಸ್ ಘಟಕ, ಎನ್ನೆಸ್ಸೆಸ್ ಘಟಕ ಮತ್ತು ರೋಟರಿ ಕ್ಲಬ್ ಪುತ್ತೂರು ಈಸ್ಟ್ ಮತ್ತು ರೋಟರಿ ಬ್ಲಡ್ ಬ್ಯಾಂಕ್ ಜಂಟಿ ಆಶ್ರಯದಲ್ಲಿ ರಕ್ತದಾನ ಶಿಬಿರ ನಡೆಯಿತು.

ದೀಪ ಪ್ರಜ್ವಲನೆ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದ ರೋಟರಿ ಕ್ಯಾಂಪ್ಕೋ ಬ್ಲಡ್ ಸೆಂಟರ್‌ನ ಡಾ. ರಾಮಕೃಷ್ಣ ರಾವ್, ಒಂದು ಹನಿ ರಕ್ತವೂ ಎಷ್ಟು ಅಮೂಲ್ಯ ಎಂಬುದು ಅದರ ಅವಶ್ಯಕತೆ ಇದ್ದವನಿಗೆ ಅರಿವಿರುತ್ತದೆ. ಈ ನಿಟ್ಟಿನಲ್ಲಿ ಹಲವು ಜೀವಗಳನ್ನು ಉಳಿಸುವ ಮಹಾತ್ಕಾರ್ಯವನ್ನು ವಿದ್ಯಾರ್ಥಿಗಳು ಮಾಡುವಂತಾಗಲಿ ಎಂದರು.

ಅತಿಥಿಗಳಾಗಿದ್ದ ರೋಟರಿ ಕ್ಲಬ್ ಪುತ್ತೂರು ಈಸ್ಟ್ ಅಧ್ಯಕ್ಷ ಶಶಿಧರ್ ಕಿನ್ನಿಮಜಲು ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಅಕ್ಷಯ ಪದವಿ ಕಾಲೇಜಿನ ಪ್ರಾಂಶುಪಾಲ ಸಂಪತ್ ಕೆ. ಪಕ್ಕಳ, ಜೀವವನ್ನು ಉಳಿಸಲು ನಾವು ವೈದ್ಯರಾಗಬೇಕಿಲ್ಲ, ರಕ್ತದಾನ ಮಾಡಿದರೆ ಸಾಕು. ರಕ್ತದಾನ ಮಾಡಿ ಜೀವ ಉಳಿಸಿದ ಸಂತೃಪ್ತಿ ಹೊಂದಬಹುದು. ಸ್ವಯಂಪ್ರೇರಿತ ರಕ್ತದಾನ ಆರೋಗ್ಯಕರ ಜೀವನಕ್ಕೆ ದಾರಿ. ಹಾಗಾಗಿ ಇಂದು ರಕ್ತದಾನ ಎಂಬ ಮಹಾದಾನದಲ್ಲಿ ನಾವು ಭಾಗಿಯಾಗಿದ್ದೇವೆ ಎಂದು ಹೇಳಿದರು.

ವೇದಿಕೆಯಲ್ಲಿ ಅಕ್ಷಯ ಸಮೂಹ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಅಕ್ಷಯ್, ಕಾಲೇಜಿನ ಆಡಳಿತ ಅಕಾರಿ ಅರ್ಪಿತ್ ಟಿ.ಎ. ಮತ್ತು ಉಪಪ್ರಾಂಶುಪಾಲ ರಕ್ಷಣ ಟಿ.ಆರ್., ಐಕ್ಯೂಎಸಿ ನಿರ್ದೇಶಕಿ ರಶ್ಮಿ, ಎನ್ನೆಸ್ಸೆಸ್ ನಿರ್ದೇಶಕ, ಉಪನ್ಯಾಸಕರಾದ ರಾಕೇಶ್, ಮೇಘಶ್ರೀ, ವಿದ್ಯಾರ್ಥಿ ಸಂಘದ ನಾಯಕ ತೃತೀಯ ಐಡಿ ವಿಭಾಗದ ರಾಕೇಶ್ ಇದ್ದರು. ಶಿಬಿರದಲ್ಲಿ ಅಕ್ಷಯ ಕಾಲೇಜಿನ ಉಪನ್ಯಾಸಕರು, ವಿದ್ಯಾರ್ಥಿಗಳು ರಕ್ತದಾನ ಮಾಡಿದರು. ಬಿಸಿಎ ವಿಭಾಗದ ಮುಖ್ಯಸ್ಥೆ ದೀಕ್ಷಾ ಸ್ವಾಗತಿಸಿ, ಪ್ರಥಮ ಬಿಸಿಎ ವಿದ್ಯಾರ್ಥಿನಿ ವೀಕ್ಷ ಪ್ರಾರ್ಥಿಸಿದರು. ತೃತೀಯ ಐಡಿ ವಿದ್ಯಾರ್ಥಿ ರಾಕೇಶ್ ವಂದಿಸಿದರು. ದ್ವಿತೀಯ ಬಿಎ ವಿದ್ಯಾರ್ಥಿನಿ ಅಪೇಕ್ಷಾ ಕಾರ್ಯಕ್ರಮ ನಿರ್ವಹಿಸಿದರು.

ಆತ್ಮಶಕ್ತಿ ಅಡ್ಯಾರ್ ಶಾಖೆಯ 4ನೇ ವಾರ್ಷಿಕೋತ್ಸವ: ಗ್ರಾಹಕರಿಗೆ ಸೌಲಭ್ಯ



ಮಂಗಳೂರು: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ ಅಡ್ಯಾರ್ ಶಾಖೆಯ ಚತುರ್ಥ ವಾರ್ಷಿಕೋತ್ಸವ ಹಾಗೂ ಗ್ರಾಹಕರ ಸಭೆಯು ಸಂಘದ ಅಧ್ಯಕ್ಷ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಅಧ್ಯಕ್ಷತೆಯಲ್ಲಿ ಅಡ್ಯಾರ್ ಶಾಖೆಯಲ್ಲಿ ಜರುಗಿತು.

ಸಂಘದ ಗ್ರಾಹಕರಾದ ಜಯಶೀಲ ಅಡ್ಯಂತಾಯ, ಉಮೇಶ್ ಶೆಟ್ಟಿ ಹಾಗೂ ಹರೀಶ್ ಅಡ್ಯಾರ್ ಕಾರ್ಯಕ್ರಮ ಉದ್ಘಾಟಿಸಿದರು. ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಮಾತನಾಡಿ, ನಮ್ಮ ಸಂಸ್ಥೆಯಲ್ಲಿ ಹೆಚ್ಚಿನ ಸಿಬ್ಬಂದಿಗಳು ಮಹಿಳೆಯರಾಗಿದ್ದು ಗ್ರಾಹಕರ ಸಹಕಾರದಿಂದ ಈ ಸಂಸ್ಥೆಯನ್ನು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಬರಲು ಸಾಧ್ಯವಾಗಿದೆ. ಸಂಘದ ಸದಸ್ಯರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಚಿನ್ನಾಭರಣ ಸಾಲದ ಸೇವೆಯನ್ನು ಹೆಚ್ಚಾಗಿ ನೀಡುತ್ತಿದೆ. ಸಂಘದ ಸದಸ್ಯರಿಗೆ ಸ್ಪರ್ಧಾತ್ಮಕ ದರದಲ್ಲಿ ವಿಮಾ ಸೌಲಭ್ಯ ನೀಡುತ್ತಿದೆ ಎಂದರು.

ಅಡ್ಯಾರ್ ಶಾಖೆಯ ಚತುರ್ಥ ವಾರ್ಷಿಕೋತ್ಸವ ಪ್ರಯುಕ್ತ 500 ದಿನಗಳ ಠೇವಣಿಗಳಿಗೆ ವಿಶೇಷ ಬಡ್ಡಿ ದರ ಶೇ. 10 ಹಾಗೂ 1000 ದಿನಗಳ ಠೇವಣಿಗಳಿಗೆ ವಿಶೇಷ ಬಡ್ಡಿ ದರ ಶೇ. 10.50 ವನ್ನು ನೀಡಲಾಗುತ್ತಿದ್ದು, ಚಿನ್ನಾಭರಣ ಸಾಲಗಳಿಗೆ ಪ್ರತಿ ಗ್ರಾಂ ಗೆ ಗರಿಷ್ಟ ಮೌಲ್ಯ ರೂ. 12,000 ರವರೆಗೆ ಯಾವುದೇ ಸೇವಾ ಶುಲ್ಕವಿಲ್ಲದೆ ಸಾಲವನ್ನು ಸದಸ್ಯರಿಗೆ ನೀಡಲಾಗುವುದು ಎಂದರು. ಸಂಘದ ಉಪಾಧ್ಯಕ್ಷ ನೇಮಿರಾಜ್ ಪಿ., ನಿರ್ದೇಶಕ ಗೋಪಾಲ್ ಎಂ, ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸೌಮ್ಯ ವಿಜಯ್ ಉಪಸ್ಥಿತರಿದ್ದರು.

ಶಾಖೆಯ ಸಿಬ್ಬಂದಿ ನವ್ಯ ಸ್ವಾಗತಿಸಿ, ಅಶ್ವಿನಿ ವಂದಿಸಿದರು. ಶಾಖೆಯ ಶಾಖಾಧಿಕಾರಿ ಕವಿತಾ ನಿರೂಪಿಸಿದರು.

ಧಾರ್ಮಿಕ ಚಿಂತನೆಯೊಂದಿಗೆ ಸೌಹಾರ್ದತೆ ವೃದ್ಧಿ: ಶಾಸಕ ಕಾಮತ್



ಮಂಗಳೂರು: ಸೂಟರ್‌ಪೇಟೆ ಶ್ರೀ ಬಬ್ಬುಸ್ವಾಮಿ ಕ್ಷೇತ್ರದಲ್ಲಿ ನಡೆದ ಶನೀಶ್ವರ ಪೂಜೆಯು ಭಕ್ತ ಸಮುದಾಯದಲ್ಲಿ ಭಕ್ತಿ ಮತ್ತು ಶ್ರದ್ಧೆ, ವಿಶೇಷ ಉತ್ಸಾಹ ಮೂಡಿಸಿದೆ. ಇದರಿಂದ ಸಮಾಜದಲ್ಲಿ ಧಾರ್ಮಿಕ ಚಿಂತನೆ, ಭಕ್ತಿ ಹಾಗೂ ಪರಸ್ಪರ ಸೌಹಾರ್ದತೆಯು ವೃದ್ಧಿಯಾಗುತ್ತದೆ ಎಂದು ಶಾಸಕ ವೇದವ್ಯಾಸ ಕಾಮತ್ ಹೇಳಿದರು.

ಸೂಟರ್‌ಪೇಟೆ ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿ ವತಿಯಿಂದ ಸೂಟರ್‌ಪೇಟೆ ಶ್ರೀ ಕೋರ್ದಬ್ಬು ದೈವಸ್ಥಾನದ ಶ್ರೀ ಬಬ್ಬುಸ್ವಾಮಿ ರಂಗದಲ್ಲಿ ನಡೆದ ಭಕ್ತಿ ವೈಭವದ 4ನೇ ವರ್ಷದ ಸಾರ್ವಜನಿಕ ಶ್ರೀ ಶನೀಶ್ವರ ಪೂಜೆಯಲ್ಲಿ ಮಾತನಾಡಿದರು.

ಕದ್ರಿ ಶ್ರೀ ಮಂಜುನಾಥ ಸ್ವಾಮಿ ದೇವಸ್ಥಾನದ ಅರ್ಚಕ ಕೃಷ್ಣ ಅಡಿಗ ಅವರ ಪೌರೋಹಿತ್ಯದಲ್ಲಿ ಶ್ರೀ ಶನೀಶ್ವರ ದೇವರಿಗೆ ಪೂಜಾ ಕೈಂಕರ್ಯಗಳು ನಡೆಯಿತು. ಸಾರ್ವಜನಿಕ ಗಣೇಶೋತ್ಸವ ಸಮಿತಿ ಅಧ್ಯಕ್ಷ ಸತೀಶ್, ಗೌರವಾಧ್ಯಕ್ಷ ಎಸ್.ಶಿವಪ್ರಸಾದ್, ಸೂಟರ್ ಪೇಟೆ ಕೋರ್ದಬ್ಬು ದೈವಸ್ಥಾನದ ಪ್ರಧಾನ ಕಾರ್ಯದರ್ಶಿ ಜಗದೀಶ್ಚಂದ್ರ ಅಂಚನ್, ಗೌರವ ಸಲಹೆಗಾರ ಪಾಂಡುರಂಗ ಕೆ., ಪ್ರಧಾನ ಅರ್ಚಕ ಗಣೇಶ ಪಾತ್ರಿ, ಕೋಶಾಧಿಕಾರಿ ಎಸ್.ನವೀನ್, ಮಾಜಿ ಕಾರ್ಪೊರೇಟರ್ ಎಸ್. ಅಪ್ಪಿ, ಸಾರ್ವಜನಿಕ ಗಣೇಶೋತ್ಸವ ಸಮಿತಿಯ ಪದಾಧಿಕಾರಿ ನಿತೀನ್ ಎಸ್., ಶರತ್, ಹೇಮಂತ್, ರಾಜ, ಮಧುಸೂದನ್, ಸಂದೀಪ್, ಗಿರೀಶ್, ಅಮರ್, ಸೇಸಪ್ಪ ಟೈಲರ್, ಚಂದ್ರಹಾಸ ಕೋಟ್ಯಾನ್, ಕುಸುಮಾಕರ್ ದೇವಾಡಿಗ, ಸುನಿಲ್ ಕುಡ್ಪಾಡಿ, ನಾಗೇಂದ್ರ, ರವಿರಾಜ್ ಮತ್ತಿತರಿದ್ದರು. ಮಹಾ ಮಂಗಳಾರತಿ ನಂತರ ಪ್ರಸಾದ ವಿತರಣೆ ಅನ್ನಸಂತರ್ಪಣೆ ನಡೆಯಿತು.

ಒಟ್ಟು 11 ಹಿರಿಯರ ಸ್ಮರಣಾರ್ಥ ದ್ವಾರಗಳ ನಿರ್ಮಾಣ | ವಿವಿಧ ಕ್ಷೇತ್ರದ 15 ಮಂದಿ ಸಾಧಕರಿಗೆ ಸನ್ಮಾನ, ಸಾಂಸ್ಕೃತಿಕ ಕಾರ್ಯಕ್ರಮಗಳ ವೈಭವ

ಮೇ 20ರಂದು ಕಡಂಗದಲ್ಲಿ ಮಡಿಕೇರಿ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನೆ

ಮಡಿಕೇರಿ: ಮಡಿಕೇರಿ ತಾಲೂಕಿನ 12ನೇ ಕನ್ನಡ ಸಾಹಿತ್ಯ ಸಮ್ಮೇಳನ ಮೇ 20ಕ್ಕೆ ಸಾಹಿತಿ, ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ ಅವರ ಸರ್ವಾಧ್ಯಕ್ಷತೆಯಲ್ಲಿ ಕಡಂಗ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮೈದಾನದಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಟಿ.ಪಿ. ರಮೇಶ್ ಮಾತನಾಡಿ, ಜಾನಪದ ತಜ್ಞ ಹರದಾಸ ಅಪ್ಪನೆರವಂಡ ಅಪ್ಪಚ್ಚ ಕವಿ ಸಭಾಂಗಣದಲ್ಲಿ, ಕೊಡವ ಕೌಟುಂಬಿಕ ಹಾಕಿಯ ಸಂಸ್ಥಾಪಕ ಪಾಂಡಂಡ ಕುಟ್ಟಣಿ ಸಭಾ ಮಂಟಪದಲ್ಲಿ ಸಮ್ಮೇಳನ ನಡೆಯಲಿದೆ ಎಂದರು.

ನೆನಪಿನ ದ್ವಾರಗಳು

ಕನ್ನಡದ ಹಬ್ಬದ ಅಂಗವಾಗಿ ಕಡಂಗ ಪಟ್ಟಣದಲ್ಲಿ ಹಿರಿಯರಾದ ಕುಲ್ಲಚಂಡ ದಿ.ಲಾಲು ಮೇದಯ್ಯ ಮತ್ತು ದಿ.ದೇವಕ್ಕ ಪ್ರವೇಶ ದ್ವಾರ, ಕೋಡಿರ ದಿ.ಮನು ಮೊಣ್ಣಪ್ಪ ನೆನಪಿನ ದ್ವಾರ, ದೇಯಿರ ಕುಟುಂಬಸ್ಥರ ನೆನಪಿನ ಪ್ರವೇಶ ದ್ವಾರ, ಮೇದುರ ದಿ.ನಂಜಪ್ಪ ಹಾಗೂ ದಿ.ಸೀತಮ್ಮ ನೆನಪಿನ ಪ್ರವೇಶ ದ್ವಾರ, ಕೋಡಿರ ದಿ.ಮುತ್ತಣ್ಣ ಹಾಗೂ ದಿ.ಸುನಂದಿ ಮುತ್ತಣ್ಣ ನೆನಪಿನ ಪ್ರವೇಶ ದ್ವಾರ, ಚಲ್ಮಂಡ ದಿ.ಸುಬ್ಬಯ್ಯ ಹಾಗೂ ದಿ.ಕಾಮವ್ವ ನೆನಪಿನ ಪ್ರವೇಶ ದ್ವಾರ, ನಂಬಿಯಪಂಡ ದಿ.ಅಪ್ಪಣ್ಣ ಹಾಗೂ ದಿ.ಕಾಮವ್ವ ನೆನಪಿನ ಪ್ರವೇಶ ದ್ವಾರ, ಮುಕ್ಕಾಟಿರ ದಿ.ಚಂಗಪ್ಪ ಹಾಗೂ ದಿ.ಕಾಂಜವ್ವ ನೆನಪಿನ ಪ್ರವೇಶ ದ್ವಾರ, ಅನ್ನಂಬಿರ ದಿ. ಉತ್ತಪ್ಪ ಹಾಗೂ ದಿ.ಪಾರ್ವತಿ ನೆನಪಿನ ಪ್ರವೇಶ ದ್ವಾರ ಮತ್ತು ದಿ.ಪಾಲಚಂಡ ಬಿಟ್ಟು ಕಾವೇರಪ್ಪ ಹಾಗೂ ದಿ. ಭೋಜಕ್ಕಿ ನೆನಪಿನ ಪ್ರವೇಶ ದ್ವಾರ ಸೇರಿದಂತೆ ಒಟ್ಟು 11 ದ್ವಾರಗಳನ್ನು ನಿರ್ಮಿಸಲಾಗುತ್ತಿದ್ದು, ಅಂದು ಬೆಳಗ್ಗೆ ಇವುಗಳನ್ನು ಉದ್ಘಾಟಿಸಲಾಗುತ್ತದೆ.



ಇದರೊಂದಿಗೆ ಶಾಲೆಗೆ ಸ್ಥಳ ದಾನ ಮಾಡಿದ ಕಣೆಯರ ದಿ.ಬೆಳ್ಯಪ್ಪ ಮತ್ತು ಕಣೆಯರ ದಿ.ಜೋಯಪ್ಪ ನೆನಪಿನ ದ್ವಾರ ಮತ್ತು ರಾವ್ ಬಹದ್ದೂರ್ ಕೋಡಿರ ಟಿ.ಉತ್ತಪ್ಪ ಅವರ ನೆನಪಿನ ಮಹಾದ್ವಾರವನ್ನೂ ಉದ್ಘಾಟಿಸಲಾಗುತ್ತದೆಂದರು. ಇದೇ ಸಂದರ್ಭ ನಡಿಕೇರಿಯಂಡ ಚಿಣ್ಣಪ್ಪ ನೆನಪಿನ ಪುಸ್ತಕ ಮಳಿಗೆ, ದಿ.ಪಾಲಚಂಡ ಪೊನ್ನು ತಿಮ್ಮಯ್ಯ ನೆನಪಿನ ಸ್ತ್ರೀಶಕ್ತಿ ಮಳಿಗೆಗಳನ್ನು ಗಣ್ಯರು ಉದ್ಘಾಟಿಸಲಿದ್ದಾರೆಂದರು.

ಸಮ್ಮೇಳನಾಧ್ಯಕ್ಷರ ಮೆರವಣಿಗೆ

ಸಮ್ಮೇಳನದಂದು ಬೆಳಗ್ಗೆ 9ಗಂಟೆಗೆ ಕಡಂಗದ ವಿಜಯ ಪ್ರೌಢಶಾಲೆಯಿಂದ ಸಮ್ಮೇಳನ ನಡೆಯುವ ಜಿಎಂಪಿ ಶಾಲಾ ಮೈದಾನದವರೆಗೆ ವಿವಿಧ ಕಲಾ ತಂಡಗಳೊಂದಿಗೆ ಸಮ್ಮೇಳನಾಧ್ಯಕ್ಷ ಐತಿಚಂಡ ರಮೇಶ್ ಉತ್ತಪ್ಪರ ಮೆರವಣಿಗೆಯನ್ನು ಆಯೋಜಿಸಲಾಗಿದೆ.

ಕನ್ನಡ ಸಾಹಿತ್ಯ ಸಮ್ಮೇಳನದ ಸಭಾ ಕಾರ್ಯಕ್ರಮವನ್ನು ಬೆಳಗ್ಗೆ 10.30 ಗಂಟೆಗೆ ವೀರಾಜಪೇಟೆ ವಿಧಾನ ಸಭಾ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಉದ್ಘಾಟಿಸಲಿದ್ದು, ಅಧ್ಯಕ್ಷತೆಯನ್ನು ಐತಿಚಂಡ ರಮೇಶ್ ಉತ್ತಪ್ಪ ವಹಿಸಲಿದ್ದಾರೆ. ನಿಕಟ ಪೂರ್ವ ಸಮ್ಮೇಳನಾಧ್ಯಕ್ಷ ಡಾ.ವಿಜಯ್ ಪೂಣಚ್ಚ ತಂಬಂಡ ಉಪಸ್ಥಿತರಿರಲಿದ್ದಾರೆ. ಸ್ಮರಣ ಸಂಚಿಕೆಯನ್ನು ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ ಲೋಕಾರ್ಪಣೆ ಮಾಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು ಅವರು ಕಡಂಗದ ಸಿ.ಪಿ.ಮೊಹಮ್ಮದ್ ನಿರ್ಘಾರ್ ಸಖಾಫಿ ಅವರು ರಚಿಸಿರುವ 'ಕಡಂಗ ನೆನಪಿನಂಗಳದಲ್ಲಿ' ಪುಸ್ತಕವನ್ನು ಅನಾವರಣ ಗೊಳಿಸಲಿದ್ದಾರೆಂದು ರಮೇಶ್ ವಿವರಿಸಿದರು. ಸಭಾ ಕಾರ್ಯಕ್ರಮದ ಬಳಿಕ ಮಧ್ಯಾಹ್ನ 1 ಗಂಟೆಗೆ ಕನ್ನಡ ಗೀತ ಗಾಯನ, ಮಧ್ಯಾಹ್ನ 3ಕ್ಕೆ ಕವಿಗೋಷ್ಠಿ ವಿಚಾರಗೋಷ್ಠಿ ನಡೆಯಲಿದೆ. ಸಮ್ಮೇಳನದ ಬಹಿರಂಗ ಅಧಿವೇಶನ ಮಧ್ಯಾಹ್ನ 3.30ಕ್ಕೆ ತಾಲೂಕು ಕಸಾಪ ಅಧ್ಯಕ್ಷೆ ಕಡ್ಲೇರ ತುಳಸಿ ಮೋಹನ್ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, ಬಳಿಕ 15 ಮಂದಿ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಗುತ್ತದೆ. ಸಂಜೆ 5ಕ್ಕೆ ಸಮಾರೋಪ, ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ ಎಂದರು.

ಮಡಿಕೇರಿ ತಾಲೂಕು ಕಸಾಪ ಅಧ್ಯಕ್ಷೆ ಕಡ್ಲೇರ ತುಳಸಿ ಮೋಹನ್, ಕಾರ್ಯದರ್ಶಿ ಲಕ್ಕು ಸೋಮಣ್ಣ ಗುಡ್ಡೇರ, ಸಮ್ಮೇಳನ ಸಮಿತಿ ಉಪಾಧ್ಯಕ್ಷ ಹಾಗೂ ಹಣಕಾಸು ಸಮಿತಿ ಅಧ್ಯಕ್ಷ ಕೋಡೀರ ವಿನೋದ್ ನಾಣಯ್ಯ, ಸಾಂಸ್ಕೃತಿಕ ಸಮಿತಿ ಅಧ್ಯಕ್ಷೆ ಪೆಮ್ಮಂಡ ಕೌಶಿ ಕಾವೇರಮ್ಮ, ಸಮ್ಮೇಳನದ ಆಹಾರ ಮತ್ತು ವೇದಿಕೆ ಸಮಿತಿ ಪದಾಧಿಕಾರಿ ಅಚ್ಚಾಂಡಿರ ತಾರಾ ಉದಯ ಉಪಸ್ಥಿತರಿದ್ದರು.

ಸುತ್ತ ಮುತ್ತ

ಮೇ 19ರಂದು ಅಚ್ಚೇರಿ ಕ್ಷೇತ್ರದಲ್ಲಿ ದೃಢಕಲಶ

ಕಾಸರಗೋಡು: ಅಚ್ಚೇರಿ ಶ್ರೀ ಮಹಾವಿಷ್ಣು ಕ್ಷೇತ್ರದಲ್ಲಿ ಮಾರ್ಚ್ ತಿಂಗಳ 28ರಿಂದ ಏಪ್ರಿಲ್ 5ರ ವರೆಗೆ ನಡೆದ ನವೀಕರಣ ಪುನರ್ ಪ್ರತಿಷ್ಠಾ ಬ್ರಹ್ಮಕಲಶೋತ್ಸವದ ಅಂಗವಾಗಿ ದೃಢಕಲಶ ಮಹೋತ್ಸವ ಮೇ 19ರಂದು ಶ್ರೀ ಕ್ಷೇತ್ರದ ತಂತ್ರಿವರ್ಯ ಅರವತ್ ಕೆ.ಯು.ದಾಮೋದರ ಅವರ ನೇತೃತ್ವದಲ್ಲಿ ಜರಗಲಿದೆ.
ಬೆಳಗ್ಗೆ 6.30ಕ್ಕೆ ಪುಣ್ಯಾಹ ಶುದ್ಧಿ, ಪ್ರಾಸಾದ ಶುದ್ಧಿ ಗಣಪತಿಹೋಮ, ಕಲಶಪೂಜೆ, ಕಲಶಾಭಿಷೇಕ, 11.30ಕ್ಕೆ ಮಹಾಪೂಜೆ, ಪ್ರಸಾದ ವಿತರಣೆ, ಅನ್ನದಾನ, ತುಲಾಭಾರ ಸೇವೆ ಮಾಡಿಸುವವರು ಮುಂಚಿತವಾಗಿ ಹೆಸರು ನೋಂದಾಯಿಸಬೇಕಾಗಿದೆ. ಮೊಬೈಲ್ ಸಂಖ್ಯೆ: 9961556177 ಕರೆ ಮಾಡಬಹುದು.

ಸಂಡೇ ಥಿಯೇಟರ್, ನೆರುದ ಗ್ರಂಥಾಲಯದಲ್ಲಿ ನಾಟಕ ಶಿಬಿರ ಆರಂಭ

ಕಾಸರಗೋಡು: ಸಂಡೇ ಥಿಯೇಟರ್ಸ್ ಮತ್ತು ನೆರುದ ಗ್ರಂಥಾಲಯದಲ್ಲಿ ಮೂರು ದಿನಗಳ ನಾಟಕ ಶಿಬಿರ ಆರಂಭಗೊಂಡಿತು. ಜಿಲ್ಲಾ ಪಂಚಾಯತ್ ಅಧ್ಯಕ್ಷ ಸಾಬು ಅಬ್ರಹಾಂ ಶಿಬಿರವನ್ನು ಉದ್ಘಾಟಿಸಿದರು. ಜಿಲ್ಲಾ ಪಂಚಾಯತ್ ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷೆ ಡಾ.ಸರಿನಾ, ಬ್ಲಾಕ್ ಪಂಚಾಯತ್ ಸದಸ್ಯ ರಾಜೇಶ್‌ಬಾಬು, ಗ್ರಾ.ಪಂ. ಉಪಾಧ್ಯಕ್ಷ ಟಿ.ಕೆ.ಮನೋಜ್, ಗ್ರಾ.ಪಂ. ಸದಸ್ಯ ರಾಜು ಕಾಡಕಂ ಮಾತನಾಡಿದರು. ಗೋಪಿ ಕುತ್ತಿಕೋಲ್ ಸ್ವಾಗತಿಸಿ, ಅಶೋಕನ್ ತೀರ್ಥಂಕರ ವಂದಿಸಿದರು. ಶಿನಿಲ್ ವಡಗರ, ಡಾ.ಶ್ಯಾಮ್, ರಾಜೇಶ್ ಮಾಧವನ್, ಉಣ್ಣಿರಾಜ್ ಚೆರ್ವತ್ತೂರು, ಯೋಗೇಶ್ ಪರಪ್ಪ, ಸತೀಶ್, ದಿನೇಶ್, ಪ್ರವೀಣ್ ಮಣಿಪ್ರಸಾದ್, ಪ್ರಿಯಾ ನಂದನ್, ಪಿ.ವಿ.ಕುಂಞಿಕಣ್ಣನ್ ತರಗತಿ ನಡೆಸುತ್ತಿದ್ದಾರೆ.

ಮೇ 25ರಂದು ಶಿಕ್ಷಕ ಹುದ್ದೆಗೆ ಸಂದರ್ಶನ

ಪೆರ್ಲ: ಕಾಟುಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ಹೈಯರ್ ಸೆಕೆಂಡರಿ ಶಾಲೆಯ ಹೈಯರ್ ಸೆಕೆಂಡರಿ ವಿಭಾಗದಲ್ಲಿ ಖಾಲಿ ಇರುವ ಎಚ್‌ಎಸ್‌ಎಸ್‌ಟಿ ಕನ್ನಡ, ಎಚ್‌ಎಸ್ ಎಸ್‌ಟಿ ಜೂನಿಯರ್ ಸಂಸ್ಕೃತ ಶಿಕ್ಷಕ ಹುದ್ದೆಗಳಿಗೆ ದಿನವೇತನ ಆಧಾರದಲ್ಲಿ ತಾತ್ಕಾಲಿಕ ನೇಮಕಾತಿಗಾಗಿ ಮೇ 25ರಂದು ಬೆಳಿಗ್ಗೆ 10.30ಕ್ಕೆ ಸಂದರ್ಶನ ನಡೆಯಲಿದೆ. ಅರ್ಹ ಆಸಕ್ತ ಅಭ್ಯರ್ಥಿಗಳು ಮೂಲ ಪ್ರಮಾಣ ಪತ್ರಗಳೊಂದಿಗೆ ಹೈಯರ್ ಸೆಕೆಂಡರಿ ಶಾಲಾ ಕಚೇರಿಯಲ್ಲಿ ನಡೆಯುವ ಸಂದರ್ಶನದಲ್ಲಿ ಭಾಗವಹಿಸುವಂತೆ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 30ರಂದು ಅತಿಥಿ ಉಪನ್ಯಾಸಕರ ಸಂದರ್ಶನ

ಮಂಜೇಶ್ವರ: ಮೀಯಪದವು ಶ್ರೀ ವಿದ್ಯಾವರ್ಧಕ ಹೈಯರ್ ಸೆಕೆಂಡರಿ ಶಾಲೆಯ ಹೈಯರ್ ಸೆಕೆಂಡರಿ ವಿಭಾಗದಲ್ಲಿ ಇಕನಾಮಿಕ್ಸ್ ಜೂನಿಯರ್ ಅತಿಥಿ ಉಪನ್ಯಾಸಕರ ಹುದ್ದೆ ಖಾಲಿಯಿದ್ದು ಪ್ರಸ್ತುತ ಹುದ್ದೆಯನ್ನು ಭರ್ತಿಗೊಳಿಸಲು ಮೇ 30ರಂದು ಬೆಳಗ್ಗೆ 10.30ಕ್ಕೆ ಶಾಲಾ ಕಚೇರಿಯಲ್ಲಿ ಸಂದರ್ಶನ ನಡೆಯಲಿದೆ. ಆಸಕ್ತ ಅಭ್ಯರ್ಥಿಗಳು ಅಸಲಿ ಪ್ರಮಾಣ ಪತ್ರಗಳೊಂದಿಗೆ ಸಂದರ್ಶನದಲ್ಲಿ ಹಾಜರಾಗುವಂತೆ ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ 9400448888 ಮೊಬೈಲ್ ನಂಬರ್‌ಗೆ ಕರೆ ಮಾಡಬಹುದು.

ಸತತ 6ನೇ ಬಾರಿ ಶೇ. 100 ಫಲಿತಾಂಶ ದಾಖಲಿಸಿದ ಶೇಣಿ ಶಾಲೆ

ಪೆರ್ಲ: 2025–26ನೇ ಶೈಕ್ಷಣಿಕ ವರ್ಷದ ಎಸ್‌ಎಸ್ ಎಲ್‌ಸಿ ಪರೀಕ್ಷೆಯಲ್ಲಿ ಶೇಣಿ ಶ್ರೀ ಶಾರದಾ ಹೈಯರ್ ಸೆಕೆಂಡರಿ ಶಾಲೆಗೆ ಶೇಕಡಾ 100 ಫಲಿತಾಂಶ ಬಂದಿದೆ. ಈ ಮೂಲಕ ಶಾಲೆಯು ಇದೀಗ ಸತತ 6ನೇ ವರ್ಷ ಈ ಸಾಧನೆಗೆ ಪಾತ್ರವಾಗಿದೆ. ಈ ಬಾರಿ ಒಟ್ಟು 260 ಮಂದಿ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಎಲ್ಲರೂ ಉತ್ತೀರ್ಣರಾಗಿದ್ದಾರೆ. 12 ಮಂದಿ ವಿದ್ಯಾರ್ಥಿಗಳಿಗೆ ಎಲ್ಲಾ ವಿಷಯಗಳಲ್ಲಿ ಎ ಪ್ಲಸ್ ಗ್ರೇಡ್ ಲಭಿಸಿದೆ. ವಿದ್ಯಾರ್ಥಿಗಳಾದ ದಿಶಾಂತ್ ಪಟೇಲ್ ಬಿ., ಪ್ರಸೀದಾ ಎ.ಕೆ.ನಾಯಕ್, ಆಶೀತಾ, ಮನೀಷಾ ಕ್ರಾಸ್ತಾ, ಸೂತ್ಮರ್ತಿ ಪಿ.ರೈ, ತೃಪ್ತಿ ಎನ್., ಇರ್ಫಾತ್ ಫಾತಿಮ ಕೆ., ಸೈಮಾ ಬಿ.ಎ., ಮರಿಯಂ ಸುಲಾ, ಆಯಿಷಾ ಸೌಫ, ಖದೀಜತ್ ಫರ್ಝಾನಾ, ಆಯಿಷಾ ತಮನ್ನ ಅವರು ಪೂರ್ತಿ ಎ ಪ್ಲಸ್ ಗಳಿಸಿದವರು. ಅಲ್ಲದೆ ಶಾಲೆಯ 8 ಮಂದಿ ವಿದ್ಯಾರ್ಥಿಗಳಿಗೆ 9 ವಿಷಯಗಳಲ್ಲಿ ಎ ಪ್ಲಸ್ ದೊರಕಿದೆ. ವಿದ್ಯಾರ್ಥಿಗಳ ಈ ಸಾಧನೆಯನ್ನು ಶಾಲಾ ಆಡಳಿತ ಮಂಡಳಿ, ಮುಖ್ಯೋಪಾಧ್ಯಾಯರು, ರಕ್ಷಕ ಶಿಕ್ಷಕ ಸಂಘ ಅಭಿನಂದಿಸಿದೆ.

ತ್ವರಿತಗತಿಯಲ್ಲಿ ನಡೆಯುತ್ತಿದೆ ಬೇವಿಂಜೆ ಷಟ್ಪಥ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಕಾಮಗಾರಿ

ಚಟ್ಟಂಚಾಲ್-ಚೆರ್ಕಳ ಹೈವೇಯಲ್ಲಿ ವಾಹನ ಸಂಚಾರ ಆರಂಭ

ಕಾಸರಗೋಡು: ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ದ್ವಿತೀಯ ರೀಚ್ ವ್ಯಾಪ್ತಿಯ ಭೂಕುಸಿತಕ್ಕೊಳಗಾಗಿ ಆತಂಕಕಾರಿ ಪ್ರದೇಶವಾಗಿರುವ ಬೇವಿಂಜೆ ಭಾಗದಲ್ಲಿ ಷಟ್ಪಥ ಹೈವೇ ಅಭಿವೃದ್ಧಿ ಕಾಮಗಾರಿ ತ್ವರಿತಗತಿಯಲ್ಲಿ ಸಾಗುತ್ತಿದೆ. ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಕಾರ್ಯದ ಅಂಗವಾಗಿ ನಿಲುಗಡೆಗೊಂಡಿದ್ದ ಚೆರ್ಕಳ – ಚಟ್ಟಂಚಾಲ್ ಹೈವೇಯಲ್ಲಿ ಮೇ 18ರಿಂದ ಘನ ವಾಹನಗಳ ಸಂಚಾರ ನಡೆಯಲಿದೆ. ಮಾತ್ರವಲ್ಲದೆ ಈಗಾಗಲೇ ಈ ರೂಟ್‌ನಲ್ಲಿ ಲಘು ವಾಹನಗಳು ಸಂಚಾರ ಆರಂಭಿಸಿವೆ.
ಕಾಸರಗೋಡು ಕಲೆಕ್ಟರೇಟ್‌ನಲ್ಲಿ ಇತ್ತೀಚೆಗೆ ಜರಗಿದ ಜಿಲ್ಲಾ ಮಟ್ಟದ ದುರಂತ ನಿವಾರಣಾ ಪ್ರಾಧಿಕಾರದ ಸಭೆಯಲ್ಲಿ ಗುತ್ತಿಗೆ ಸಂಸ್ಥೆಯಾದ ಮೇಘ ಕಂಪೆನಿಯ ಪ್ರತಿನಿಧಿಗಳು ಪ್ರಸ್ತುತ ಬೇವಿಂಜೆ ರಸ್ತೆಯನ್ನು ಅತೀ ಶೀಘ್ರದಲ್ಲಿ ವಾಹನ ಸಂಚಾರಕ್ಕೆ ಮುಕ್ತಗೊಳಿಸುವುದಾಗಿ ತಿಳಿಸಿದ್ದರು. ಆದರೆ ಧಾರಾಕಾರ ಮಳೆ ಸುರಿದರೆ ಬೇವಿಂಜೆ ರೂಟ್‌ನಲ್ಲಿ ಮತ್ತೆ ವಾಹನ ಸಂಚಾರ ಸ್ಥಗಿತಗೊಳ್ಳುವ ಸಾಧ್ಯತೆಯಿದೆ.



- ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಕಾರ್ಯದ ಅಂಗವಾಗಿ ನಿಲುಗಡೆಗೊಂಡಿದ್ದ ಚೆರ್ಕಳ – ಚಟ್ಟಂಚಾಲ್ ಹೈವೇಯಲ್ಲಿ ಮೇ 18ರಿಂದ ಆರಂಭಗೊಳ್ಳಲಿದೆ ಘನ ವಾಹನಗಳ ಸಂಚಾರ
- ತಡೆಬೇಲಿಯಂತಹ ಸುರಕ್ಷತಾ ಮುಂಜಾಗೃತಾ ಯೋಜನೆ ಮಾತ್ರ ಇನ್ನೂ ಪೂರ್ಣಗೊಂಡಿಲ್ಲ

ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ತಡೆಬೇಲಿಯಂತಹ ಸುರಕ್ಷಾ ಮುಂಜಾಗೃತಾ ಯೋಜನೆಗಳ ಕಾಮಗಾರಿ ಇನ್ನಷ್ಟೇ ಪೂರ್ತಿಗೊಳಿಸಬೇಕಾಗಿದೆ. ಆದ್ದರಿಂದ ಕಾಮಗಾರಿ ಪೂರ್ಣಗೊಳಿಸಲು ಸಮಯಾವಕಾಶ ಬೇಕೆಂಬುದು ಗುತ್ತಿಗೆ ಕಂಪೆನಿಯ ಬೇಡಿಕೆಯಾಗಿದೆ. ಇನ್ನೊಂದೆಡೆ ಕಾಮಗಾರಿ ನಡೆಯುವ ಸಂದರ್ಭ ವಾಹನಗಳನ್ನು ಈ ರಸ್ತೆಯಲ್ಲಿ ಸಂಚರಿಸಲು ಬಿಡುವುದರಿಂದ ಪ್ರಯಾಣಿಕರ ಸುರಕ್ಷತೆಗೂ ತೊಡಕಾಗಲಿದೆ.
ಬೇವಿಂಜೆಯಲ್ಲಿ ಗುಡ್ಡ ಕುಸಿದ ಪ್ರದೇಶದ ಪಾರ್ಶ್ವ ಭಾಗವನ್ನು ಕಾಂಕ್ರೀಟೀಕರಣಗೊಳಿಸಿ ಸಮರ್ಪಕಗೊಳಿಸುವಂತಹ ಕಾಮಗಾರಿಯನ್ನು ಪ್ರಧಾನ ನೆಲೆಯಲ್ಲಿ ನಡೆಸಬೇಕಾಗಿದೆ. ಅಪಾಯ ಭೀತಿಯಿರುವ ಭಾಗದ ಕಾಮಗಾರಿಯನ್ನು ಆದ್ಯತೆ ಆಧಾರದಲ್ಲಿ ಪೂರ್ಣಗೊಳಿಸಬೇಕಿದೆ. ಏಪ್ರಿಲ್ 11ರಿಂದ ರಾಷ್ಟ್ರೀಯ ಹೆದ್ದಾರಿಯ ಈ ಭಾಗದಲ್ಲಿ ವಾಹನ ಸಂಚಾರ ಸ್ಥಗಿತಗೊಳಿಸಿ ಚಂದ್ರಗಿರಿ ರಾಜ್ಯ ಹೆದ್ದಾರಿ ಮೂಲಕ ಅನುವು ಮಾಡಿಕೊಡಲಾಗಿತ್ತು.
ಎರಡು ವಾರಗಳೊಳಗೆ ನಿರ್ಮಾಣ ಕಾಮಗಾರಿಗಳನ್ನು ಪೂರ್ತಿಗೊಳಿಸಲು ಉದ್ದೇಶಿಸಲಾಗಿತ್ತಾದರೂ ಒಂದು ತಿಂಗಳು ಕಳೆದರೂ ನಿರ್ಮಾಣ ಕಾರ್ಯ ಪೂರ್ಣಗೊಳ್ಳದಿರುವುದು ಜಿಲ್ಲಾಡಳಿತದ ಆಕ್ರೋಶಕ್ಕೂ ಗುರಿಯಾಗಿದೆ. ಬೇವಿಂಜೆ ಹಳೆಯ ಮಸೀದಿಯಿಂದ ರಸ್ತೆ ಅಗೆದು ಷಟ್ಪಥ ಹೆದ್ದಾರಿಯನ್ನು ನಿರ್ಮಿಸಲಾಗುತ್ತಿದೆ. ಚೆರ್ಕಳ ಭಾಗಕ್ಕಿರುವ ಹೆದ್ದಾರಿ ಸರಿಸುಮಾರು ಪೂರ್ಣಗೊಂಡಿದೆ. ಆದರೆ ಚಟ್ಟಂಚಾಲ್ ಭಾಗಕ್ಕಿರುವ ಹೆದ್ದಾರಿ ನಿರ್ಮಾಣ ಅರ್ಧದಷ್ಟು ಮಾತ್ರ ಪೂರ್ಣಗೊಂಡಿದೆ. ಇದರೊಂದಿಗೆ ರಸ್ತೆ ಬದಿ ಕಾಂಕ್ರೀಟೀಕರಣಗೊಳಿಸಿ ಸಮರ್ಪಕಗೊಳಿಸುವ ಕಾರ್ಯ ನಡೆಯಬೇಕಾಗಿದೆ. ಪೂರ್ತಿಯಾದ ಭಾಗದ ಮೂಲಕ ಇಕ್ಕೆಲಗಳಿಗೆ ಪ್ರಸ್ತುತ ವಾಹನಗಳು ಸಂಚರಿಸುತ್ತಿವೆ. ಬೇವಿಂಜೆ ಯಿಂದ ಚೆರ್ಕಳ ರಾಷ್ಟ್ರೀಯ ಹೆದ್ದಾರಿಗಿರುವ ಬೈಪಾಸ್ ರಸ್ತೆ ಮೂಲಕ ವಾಹನಗಳು ಸಂಚರಿಸುತ್ತಿವೆ. ಬೇವಿಂಜೆಯಿಂದ ಎತ್ತರಕ್ಕೇರುವ ರಸ್ತೆಯಿಂದ ಘನ ವಾಹನಗಳಿಗೆ ಸಮಸ್ಯೆಯಾಗುತ್ತಿದೆ. ಈ ಹಿನ್ನೆಲೆ ಅಗತ್ಯದ ಕ್ರಮ ಕೈಗೊಳ್ಳಬೇಕೆಂಬುದು ವಾಹನ ಚಾಲಕರ ಆಗ್ರಹವಾಗಿದೆ.

ಬೇವಿಂಜೆ ರಾಷ್ಟ್ರೀಯ ಹೆದ್ದಾರಿ ಅಪಾಯಕಾರಿ
ಬೇವಿಂಜೆ ಪ್ರದೇಶದಲ್ಲಿ ಅಲ್ಪದೂರದಲ್ಲಿ ರಾಷ್ಟ್ರೀಯ ಹೆದ್ದಾರಿ ಇಬ್ಭಾಗವಾಗಿ ಬದಲಾಗುತ್ತದೆ. ಚೆರ್ಕಳ ಭಾಗಕ್ಕಿರುವ ತ್ರಿಪಥ ಪ್ರದೇಶವನ್ನು ಇಲ್ಲಿ ಭಾರೀ ತಿರುವುಗಳು ಇಲ್ಲದೆ ಗುಡ್ಡೆ ಅಗೆದು ಹೊಸದಾಗಿ ನಿರ್ಮಿಸಲಾಗಿದೆ. ಚಟ್ಟಂಚಾಲ್ ಭಾಗಕ್ಕಿರುವ ತ್ರಿಪಥ ಹೆದ್ದಾರಿಯನ್ನು ಹಳೆಯ ರಾಷ್ಟ್ರೀಯ ಹೆದ್ದಾರಿಯ ಅದೇ ಪ್ರದೇಶದ ಮೂಲಕ ನಿರ್ಮಿಸಲಾಗುತ್ತಿದೆ. ಬೇವಿಂಜೆ ಹಾಗೂ ಆಸುಪಾಸಿನ ಪ್ರದೇಶಗಳಲ್ಲಿ ಖಾಸಗಿ ಭೂಮಿ ಅಗತ್ಯದಷ್ಟು ಸ್ವಾಧೀನಪಡಿಸದೇ ಇರುವುದು ನೂತನ ಹೆದ್ದಾರಿಯಲ್ಲಿ ಅಪಾಯಕಾರಿ ತಿರುವುಗಳು ಬರಲು ಕಾರಣವಾಗಿದೆ. ಹಳೆಯ ರಾಷ್ಟ್ರೀಯ ಹೆದ್ದಾರಿ ಹಾದುಹೋಗಿದ್ದ ಗುಡ್ಡ ಅಗೆದು ತಗ್ಗಿಸಿ ನೂತನ ಹೆದ್ದಾರಿ ನಿರ್ಮಾಣ ಕಾರ್ಯ ತ್ವರಿತಗತಿಯಲ್ಲಿ ಮುಂದುವರಿದಿದೆ.

ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ ಕಾಸರಗೋಡು ತಾ. ಸಮಿತಿ ಸಭೆ



ಕಾಸರಗೋಡು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಅಂಗಸಂಸ್ಥೆಯಾದ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್‌ನ ಕಾಸರಗೋಡು ತಾಲೂಕು ಇದರ ತಾಲೂಕು ವೇದಿಕೆ ಪದಾಧಿಕಾರಿಗಳ ಸಭೆಯು ಕಾಸರಗೋಡು ಎಕೆಆರ್‌ಡಿಎ ಸಭಾಂಗಣದಲ್ಲಿ ಜರಗಿತು. ಸಮಿತಿಯ ಕೋಶಾಧಿಕಾರಿ ಶರೀಫ್ ಕೊಡವಂಜಿ ಅಧ್ಯಕ್ಷತೆ ವಹಿಸಿ ಶುಭಕೋರಿದರು.
ಜಿಲ್ಲಾ ನಿರ್ದೇಶಕ ಬಾಬು ನಾಯ್ಕ ಕಾಸರಗೋಡು ಪ್ರದೇಶದಲ್ಲಿ ಹಲವಾರು ಶಿಬಿರಗಳು ನಡೆದಿದ್ದು, ಅನೇಕ ಮಂದಿ ಕುಡಿತದ ಚಟ ಬಿಟ್ಟು ನವಜೀವನ ಆರಂಭಿಸಿದ್ದಾರೆ. ಈ ಭಾಗವನ್ನು ಮದ್ಯಮುಕ್ತ ಗ್ರಾಮವನ್ನಾಗಿಸುವ ಪ್ರಯತ್ನ ಮಾಡಬೇಕು ಎಂದರು.
ಜನಜಾಗೃತಿ ವಿಭಾಗ ಪ್ರಾದೇಶಿಕ ಯೋಜನಾಧಿಕಾರಿ ಗಣೇಶ್ ಆಚಾರ್ಯ ಅವರು 2026–27ನೇ ಸಾಲಿನ ಕ್ರಿಯಾ ಯೋಜನೆ ಗುರಿ ಸಾಧನೆ ಕುರಿತು ಮಾಹಿತಿ ನೀಡಿದರು.

ಅಧ್ಯಕ್ಷರ ಆಯ್ಕೆ
ತಾಲೂಕು ವೇದಿಕೆ ಅಧ್ಯಕ್ಷ ಅಖಿಲೇಶ್ ನಗುಮುಗಂ ಅವರ ಅವಧಿ ಪೂರ್ಣವಾಗಿರುವುದರಿಂದ ತಾಲೂಕು ವೇದಿಕೆ ಎಲ್ಲಾ ಪದಾಧಿಕಾರಿಗಳ ನಿರ್ದೇಶನದಂತೆ ನೂತನವಾಗಿ ಜಯರಾಮ ಪಾಟಾಳಿ ಅವರನ್ನು ತಾಲೂಕು ವೇದಿಕೆಯ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಕಾಸರಗೋಡು ಯೋಜನಾ ಕಚೇರಿ ವ್ಯಾಪ್ತಿಯ ವಲಯವಾರು ಸಾಧನ ವರದಿಯನ್ನು ಮಂಡಿಸಲಾಯಿತು. ಯೋಜನಾಧಿಕಾರಿ ದಿನೇಶ್ ಗತಸಭೆ ವರದಿ ಮಂಡಿಸಿದರು. ಬದಿಯಡ್ಕ ವಲಯ ಮೇಲ್ವಿಚಾರಕರಾದ ಸುಗುಣ ಓ. ಹವಲ್ದಾರ್ ಸ್ವಾಗತಿಸಿ, ಕಾರಡ್ಕ ವಲಯ ಮೇಲ್ವಿಚಾರಕ ಸುರೇಶ್ ವಂದಿಸಿ, ಕಾಸರಗೋಡು ವಲಯ ಮೇಲ್ವಿಚಾರಕ ಗೋಪಾಲಕೃಷ್ಣ ನಿರೂಪಿಸಿದರು.

ಹಿಂಐವೇ ಕಾಸರಗೋಡು ಜಿಲ್ಲಾ ಸಮ್ಮೇಳನ: ನೂತನ ಸಂಚಾಲಕರಾಗಿ ಗಿರಿ ವೀರನಗರ ಆಯ್ಕೆ



ಕಾಸರಗೋಡು: ಹಿಂದು ಐಕ್ಯ ವೇದಿಕೆಯ ಮಂಜೇಶ್ವರ ತಾಲೂಕು ಸಮಿತಿಯ ನೂತನ ಸಂಚಾಲಕರಾಗಿ ಉತ್ತಮ ಸಂಘಟಕರಾದ ಗಿರಿ ವೀರನಗರ ಆಯ್ಕೆಯಾದರು. ಭಾನುವಾರ ಕಾಞಂಗಾಡಿನ ಮಾವುಂಗಾಲ್ ವ್ಯಾಪಾರ ಭವನದಲ್ಲಿ ಜರಗಿದ ಹಿಂದು ಐಕ್ಯ ವೇದಿಕೆ ಕಾಸರಗೋಡು ಜಿಲ್ಲಾ ಸಮ್ಮೇಳನದಲ್ಲಿ ವಿವಿಧ ಪದಾಧಿಕಾರಿಗಳ ಆಯ್ಕೆ ನಡೆಯಿತು.
ಸಂಘಟನೆಯ ಕೇರಳ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಕೆ.ಹರಿದಾಸ್ ಸಮ್ಮೇಳನವನ್ನು ಉದ್ಘಾಟಿಸಿದರು. ಹಿಂದು ಐಕ್ಯ ವೇದಿಕೆಯ ರಾಜ್ಯ ರಕ್ಷಾಧಿಕಾರಿ ವಲ್ಸನ್ ತಿಲ್ಲಂಗೇರಿ, ಕಾಸರಗೋಡು ಜಿಲ್ಲಾಧ್ಯಕ್ಷ ಕೆ.ಪಿ.ಶಾಜಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜನ್ ಮುಳಿಯಾರು ಮಾತನಾಡಿದರು.
ಗಿರಿ ವೀರನಗರ ತನ್ನ ಶಾಲಾ ಕಾಲೇಜು ಜೀವನದಿಂದಲೇ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಅಲ್ಲದೆ ಭಾರತೀಯ ಜನತಾ ಯುವ ಮೋರ್ಚಾದ ಮಂಜೇಶ್ವರ ಮಂಡಲಾಧ್ಯಕ್ಷ, ಬಿಜೆಪಿ ಮಂಡಲ ಉಪಾಧ್ಯಕ್ಷ, ಬಾಲಗೋಕುಲ ಸಮಿತಿ ಅಧ್ಯಕ್ಷ ಹೀಗೆ ಹಲವು ಸಮಿತಿಗಳಲ್ಲಿ ಗುರುತಿಸಿಕೊಂಡಿದ್ದರು. ಹಿಂದು ಐಕ್ಯ ವೇದಿಕೆ ಮಂಜೇಶ್ವರ ತಾ.ಸಂಚಾಲಕರಾಗಿ ಆಯ್ಕೆಯಾದ ಗಿರಿ ವೀರನಗರ ಅವರನ್ನು ನಾಡಿನ ಪ್ರಮುಖರು, ವಿವಿಧ ಸಂಘಟನೆಗಳ ಪ್ರತಿನಿಧಿಗಳು ಅಭಿನಂದಿಸಿದ್ದಾರೆ.

ಸಕ್ರಿಯರಾಗಿದ್ದಾರೆ
ಗಿರಿ ವೀರನಗರ ಅವರು ಅಚ್ಚಗನ್ನಡ ನಾಡಾದ ಗಡಿನಾಡು ಮಂಜೇಶ್ವರದಲ್ಲಿ ಸಕ್ರಿಯ ಸಂಘಟನಾತ್ಮಕ ಚಟುವಟಿಕೆ ಗಳಲ್ಲಿ ನಿರತರಾಗಿರುವ ಅನ್ಯಮತೀಯರ ದೌರ್ಜನ್ಯ, ಸ್ಥಾಪಿತ ಹಿತಾಸಕ್ತಿಗಳ ಷಡ್ಯಂತ್ರವನ್ನು ಹಿಮ್ಮೆಟ್ಟಿಸುವಲ್ಲಿ ಸಮರ್ಥ ಕಾರ್ಯನಿರ್ವಹಿಸಿದ್ದಾರೆ. ಅವರು ಸಾಮಾಜಿಕ, ಧಾರ್ಮಿಕ ಹಲವಾರು ಸಂಘಟನೆಗಳಲ್ಲಿ ಸಕ್ರಿಯಾಗಿದ್ದಾರೆ.

ಬಜಕೂಡ್ಲು ಗೋಶಾಲೆಯಲ್ಲಿ 'ಶನಿ ನಮನ ತಾಪ ನಮನ' ಕಾರ್ಯಕ್ರಮ




ಪೆರ್ಲ: ಶನಿ ಜಯಂತಿಯ ಪುಣ್ಯ ಪರ್ವ ದಿನದಂದು ಗೋಕರ್ಣ ಮಂಡಲಾಧೀಶ್ವರ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳ ಮಾರ್ಗದರ್ಶನದಲ್ಲಿ ಪೆರ್ಲ ಸಮೀಪದ ಬಜಕೂಡ್ಲು ಅಮೃತಧಾರಾ ಗೋಶಾಲೆಯಲ್ಲಿ ವಿಶೇಷವಾದ 'ಶನಿ ನಮನ ತಾಪ ಶಮನ' ಎಂಬ ಪುಣ್ಯ ಕಾರ್ಯಕ್ರಮ ವೈದಿಕ ವಿದ್ವಾಂಸರ ಮಂತ್ರಘೋಷದೊಂದಿಗೆ ಶ್ರದ್ಧಾಭಕ್ತಿಯಿಂದ ಜರಗಿತು.
ಅದರಂತೆ ಶನಿವಾರ ಮುಂಜಾನೆ ಗುರುವಂದನೆ, ದೇವತಾ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಸ್ವಸ್ತಿ ಪುಣ್ಯಾಹ, ಬಾಲಗಣಪತಿ ಹವನ, ಶ್ರೀ ಮಹಾಗಣಪತ್ಯಥರ್ವಶೀರ್ಷ ಅಖಂಡ ಪಾರಾಯಣ, ಶ್ರೀ ಗೋಪಾಲಕೃಷ್ಣ ಪೂಜೆ, ಗೋಪೂಜೆ, ಗೋಸೇವೆ, ಶ್ರೀ ಮಹಾಗಣಪತಿ ಹವನ, ಪೂರ್ಣನವಗ್ರಹಶಾಂತಿ, ಶನಿಶಾಂತಿ ಹವನ, ಮಾತೆಯರಿಂದ ಕುಂಕುಮಾರ್ಚನೆ, ಶ್ರೀ ಗಣೇಶ ಪಂಚರತ್ನ ಸ್ತೋತ್ರ, ಶ್ರೀ ಹನುಮತ್ಪಂಚರತ್ನಸ್ತೋತ್ರ ಪಾರಾಯಣ, ಸಂಜೆ ಶನಿ ಕಲ್ಪೋಕ್ತ ಪೂಜೆ, ರಾತ್ರಿ ಶನಿಪೂಜಾ ಮಹಾಮಂಗಳಾರತಿ ಮೊದಲಾದ ವಿಧಿ ವಿಧಾನಗಳು ಸಡಗರದಿಂದ ನೆರವೇರಿದವು.
ಭಾನುವಾರ ಬೆಳಗ್ಗೆ ಶ್ರೀ ಮಹಾಗಣಪತ್ಯಥರ್ವಶೀರ್ಷ ಅಖಂಡ ಪಾರಾಯಣ ಮಂಗಲ, ಚತುದ್ರವ್ಯಾತ್ಮಕ ಶ್ರೀ ಮಹಾಗಣಪತ್ಯಥರ್ವ ಶೀರ್ಷ ಹವನ ನಡೆಯಿತು.

ಜಿಲ್ಲೆಯ ಸರಕಾರಿ ಆಸ್ಪತ್ರೆಯಲ್ಲಿ ಹೆಣ್ಮಕ್ಕಳಿಗೆ ಮೇ 31ರವರೆಗೆ ಎಚ್‌ಪಿವಿ ವ್ಯಾಕ್ಸಿನೇಶನ್

ಕಾಸರಗೋಡು: ಗರ್ಭಕೋಶ ಕ್ಯಾನ್ಸರ್ ತಗುಲುವುದನ್ನು ತಡೆಗಟ್ಟಲು ರೋಗ ಪ್ರತಿರೋಧಕ ಎಚ್‌ಪಿವಿ ವ್ಯಾಕ್ಸಿನೇಶನ್ ನೀಡುವ ಅಭಿಯಾನದ ಅಂಗವಾಗಿ ಕಾಸರಗೋಡು ಜಿಲ್ಲೆಯ ಎಲ್ಲಾ ಸರಕಾರಿ ಆಸ್ಪತ್ರೆಗಳಲ್ಲಿ ವ್ಯಾಕ್ಸಿನೇಶನ್ ವಿತರಿಸುವ ಪ್ರಕ್ರಿಯೆ ಆರಂಭವಾಗಿದೆ. ಈ ಯೋಜನೆ ಮೇ 31ರ ತನಕ ಮುಂದುವರಿಯಲಿದೆ.
14–15ರ ಮಧ್ಯಪ್ರಾಯದ ಹೆಣ್ಮಕ್ಕಳಿಗೆ ತಲಾ 1 ಡೋಸ್ ವ್ಯಾಕ್ಸಿನೇಶನ್ ನೀಡಲಾಗುವುದು.

ಗರ್ಭಕೋಶ ಕ್ಯಾನ್ಸರ್ ತಡೆಗೆ ಸಹಕಾರಿ
14ರಿಂದ 15ರ ಮಧ್ಯೆ ಪ್ರಾಯದ ಹೆಣ್ಮಕ್ಕಳಿಗೆ ಇಂತಹ ವ್ಯಾಕ್ಸಿನ್ ನೀಡಿದಲ್ಲಿ ಮುಂದೆ ಅವರಿಗೆಗರ್ಭಕೋಶಕ್ಯಾನ್ಸರ್ ಬರುವುದನ್ನು ತಡೆಗಟ್ಟಬಹುದು. ಗರ್ಭಕೋಶ ಕ್ಯಾನ್ಸರ್ ತಗುಲುವ ಸಾಧ್ಯತೆಯನ್ನು ತಡೆಗಟ್ಟುವ ಕೇಂದ್ರ ಸರಕಾರವು ಆರಂಭಿಸಿದ ಮಹತ್ವದ ಯೋಜನೆ ಇದಾಗಿದೆ. ಈ ಮೂಲಕ ಗರ್ಭಕೋಶ ಕ್ಯಾನ್ಸರ್ ಪೂರ್ಣ ತೊಡೆದು ಹಾಕುವುದು ಪ್ರಧಾನ ಉದ್ದೇಶವಾಗಿದೆ.
ಗರ್ಭಕೋಶ ಕ್ಯಾನ್ಸರ್ ಭಾರತದಲ್ಲಿ ಮಹಿಳೆ ಯರಿಗೆ ತಗುಲುವ ಎರಡನೇ ಅತೀ ದೊಡ್ಡ ರೋಗವಾಗಿದೆ. ಗರ್ಭಕೋಶದ ಕೆಳಗಿನ ಭಾಗಕ್ಕೆ ಕ್ಯಾನ್ಸರ್ ತಗುಲುವುದಾಗಿದೆ. ಹ್ಯೂಮನ್ ಪೌಪ್ಪಿಲೋಮ ಎಂಬ ವೈರಸ್ ಮೂಲಕ



ಈ ಕಾಯಿಲೆ ಹರಡುತ್ತದೆ. ಗರ್ಭಕೋಶ ಕ್ಯಾನ್ಸರ್ ತಗಲಿದರಲ್ಲಿ ಶೇ. 99.70ರಷ್ಟು ಮಂದಿಗೆ ಇದೇ ವೈರಸ್ ಕಾರಣವಾಗಿದೆ.

ಶೇ.90ರಷ್ಟು ರೋಗ ತಡೆಯಬಹುದು
ಎಚ್‌ಪಿವಿ ವ್ಯಾಕ್ಸಿನ್ ಮೂಲಕ ಈ ಕ್ಯಾನ್ಸರ್ ಬರದಂತೆ ಶೇಕಡಾ 90ರಷ್ಟು ತಡೆಯಬಹುದು. ಈ ನಿಟ್ಟಿನಲ್ಲಿ 11,720 ಡೋಸ್ ವ್ಯಾಕ್ಸಿನೇಶನ್ ಕಾಸರಗೋಡು ಜಿಲ್ಲೆಗೆ ಈಗಾಗಲೇ ತಲುಪಿದೆ. ಈ ವ್ಯಾಕ್ಸಿನ್ ನೀಡುವ ಅಭಿಯಾನ ಮೇ 31ರಂದು ಕೊನೆಗೊಳ್ಳಲಿರುವುದರಿಂದ ಈ ನಿಗದಿತ ಸಮಯ ವ್ಯಾಪ್ತಿ ಯೊಳಗೆ ಸರಕಾರಿ ಆರೋಗ್ಯ ಕೇಂದ್ರಗಳಿಗೆ ತೆರಳಿ ವ್ಯಾಕ್ಸಿನ್ ಪಡೆದುಕೊಳ್ಳಬೇಕೆಂದು ಕಾಸರಗೋಡು ಜಿಲ್ಲಾ ವೈದ್ಯಾಧಿಕಾರಿ (ಆರೋಗ್ಯ) ಡಾ.ಬಿ.ಸಂತೋಷ್ ತಿಳಿಸಿದ್ದಾರೆ.

ಭೂಸೇನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಸುಬೇದಾರ್ ಸಂಪತ್ ಕುಮಾರ್‌ಗೆ ಗೌರವ



ಮುಳ್ಳೇರಿಯ: ಭಾರತೀಯ ಭೂಸೇನೆಯಲ್ಲಿ 30 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದ ಸುಬೇದಾರ್ ಸಂಪತ್ ಕುಮಾರ್ ಕೆ. ಅವರನ್ನು ಆಡೂರು ವಿದ್ಯಾಭಾರತಿ ವಿದ್ಯಾಲಯ ಹಾಗೂ ಶ್ರೀ ರಾಮೋತ್ಸವ ಸಮಿತಿ ಇವುಗಳ ಜಂಟಿ ಆಶ್ರಯದಲ್ಲಿ ಅಭಿನಂದಿಸಲಾಯಿತು.
ಆಡೂರು ವಿದ್ಯಾಭಾರತಿ ವಿದ್ಯಾಲಯದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಅಧ್ಯಕ್ಷತೆಯನ್ನು ಸತ್ಯಪ್ರೇಮಾ ಭಾರಿತ್ತಾಯ ವಹಿಸಿದ್ದರು. ಖ್ಯಾತ ವೈದ್ಯ ಡಾ.ಶ್ರೀನಿವಾಸ ಸರಳಾಯ ಬದಿಯಡ್ಕ ಅವರು ಸುಬೇದಾರ್ ಸಂಪತ್ ಕುಮಾರ್ ಅವರ ಕುರಿತು ಸಮಗ್ರ ಅಭಿನಂದನಾ ಭಾಷಣ ಮಾಡಿದರು.
ಕಾರ್ಯಕ್ರಮವನ್ನು ಭಾರತೀಯ ವಾಯುಪಡೆಯ ನಿವೃತ್ತ ಅಧಿಕಾರಿ ಸಾರ್ಜೆಂಟ್ ಬಾಲಚಂದ್ರ ಕೇಕುಣ್ಣಾಯ ದೀಪ ಬೆಳಗಿಸಿ ಉದ್ಘಾಟಿಸಿದರು. ಸಾಮಾಜಿಕ ಮುಖಂಡರಾದ ಅಪ್ಪಕುಂಞಿ ಮಾಸ್ತರ್, ರಾಜಾರಾಮ ಸರಳಾಯ, ರಾಧಾಕೃಷ್ಣ ಮೇರ್ಟ, ಲಕ್ಷ್ಮಣ ಪೊನಾರಂ ಮೊದಲಾದವರು ಭಾಗವಹಿಸಿದ್ದರು.
ಶ್ರೀಶಾರದಾದೇವಿ ಅಭಿನಂದನಾ ಭಾಷಣ ಮಾಡಿದರು. ವೆಂಕಟ್ರಾಜ್ ಸ್ವಾಗತಿಸಿ, ಗಣೇಶ ಒ. ವಂದಿಸಿದರು. ಬಾಲಸುಬ್ರಹ್ಮಣ್ಯ ಭಟ್ ಬೈತನಡ್ಕ ಕಾರ್ಯಕ್ರಮ ನಿರೂಪಿಸಿದರು.

ಸಂಘಟನೆಯಿಂದ ಗೌರವ
ಈ ಸಂದರ್ಭದಲ್ಲಿ ಆಡೂರಿನ ಅನೇಕ ಸಂಘಟನೆಗಳ ವತಿಯಿಂದ ಸುಬೇದಾರ್ ಸಂಪತ್ ಕುಮಾರ್, ಅಭಿಷೇಕ್ ಕಣೆಮಾರಡ್ಕ ಅವರನ್ನು ಗೌರವಿಸಲಾಯಿತು.

ಅಭಿನಂದನೆ
24 ಗಂಟೆಗಳ ಕಾಲ ಕೂಚುಪ್ಪುಡಿ ನೃತ್ಯ ಪ್ರದರ್ಶನ ನೀಡಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಸಾಧನೆ ಮಾಡಿದ ಅಭಿಷೇಕ್ ಕಣೆಮಾರಡ್ಕ ಅವರನ್ನು ಅಭಿನಂದಿಸಲಾಯಿತು.



ಭ್ರಾಮರಿ ಬಾಲಗೋಕುಲದ ಮಕ್ಕಳಿಗೆ ಕಲಿಕೋಪಕರಣಗಳ ವಿತರಣೆಯನ್ನು ಉಪ್ಪಳ ಐಲ ಶ್ರೀ ದುರ್ಗಾಪರಮೇಶ್ವರೀ ಕ್ಷೇತ್ರದ ಸೇವಾ ಸಮಿತಿಯ ಅಧ್ಯಕ್ಷ ಸುಧೀಶ್ಚಂದ್ರ ಶೆಟ್ಟಿ ನೆರವೇರಿಸಿದರು. ಸಾಮಾಜಿಕ ಕಾರ್ಯಕರ್ತ ವೀರಪ್ಪ ಅಂಬಾರು, ಬಾಲಗೋಕುಲ ಪ್ರಮುಖ ಸದಾಶಿವ, ಕಾರ್ಯದರ್ಶಿ ರಾಕೇಶ್ ಐಲ, ಶಿಕ್ಷಕಿಯರಾದ ಅನುಷಾ, ನಂದನಾ, ಸುಶ್ಮಿತಾ, ನಿಶ್ಮಿತಾ, ಬಾಲಗೋಕುಲದ ಅಧ್ಯಕ್ಷ ಪ್ರೇಮ್ ಕುಮಾರ್ ಐಲ ಮುಂತಾದವರು ಉಪಸ್ಥಿತರಿದ್ದರು.



ವಾಚನೋತ್ಸವದ ಅಂಗವಾಗಿ ಬೋವಿಕ್ಕಾನ ಮಧುವಾಹಿನಿ ಗ್ರಂಥಾಲಯದ ನೇತೃತ್ವದಲ್ಲಿ ಬಾಲ ವೇದಿಕೆಯ ಕಾರ್ಯಾಲಯದಲ್ಲಿ ಪುಸ್ತಕ ರಸಗ್ರಹಣ ಕಾರ್ಯಕ್ರಮ (ಪುಸ್ತಕ ಓದುವ ಕಾರ್ಯಕ್ರಮ) ವನ್ನು ಆಯೋಜಿಸಲಾಗಿತ್ತು. ಪ್ರಮುಖರಾದ ಇ.ಪಿ.ಅನುಭವ, ಕೆ.ಯದುನಂದನ್, ಕೆ.ಕೃಷ್ಣಾನಂದ, ನಿರಂಜನ ಸಿ., ಸಾನ್ವಿಯಾ ಸಿ., ವೈಷ್ಣವ್ ಮಾತನಾಡಿದರು. ಅಭಿಷೇಕ್ ಜಿ., ಕೆ. ಶೋಭಾ, ಸಿ.ಅನುಶ್ರೀ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಪುಲ್ಲೂರು ಪೆರಿಯ ಸಂಸ್ಕೃತಿ ಸಭಾಂಗಣದಲ್ಲಿ ವಿಶ್ವ ಹೈಪರ್ ಟೆನ್ಶನ್ ದಿನಾಚರಣೆ | ಜಾಗೃತಿ ಕಾರ್ಯಕ್ರಮ

ನಿತ್ಯದ ದಿನಚರಿಯಲ್ಲಿ ಇರಲಿ ವ್ಯಾಯಾಮ, ಆಹಾರದಲ್ಲಿ ಉಪ್ಪು-ಕೊಬ್ಬಿನ ಸೇವನೆಯ ಬಳಕೆ ಮಿತವಿರಲಿ

ಕಾಸರಗೋಡು: ವಿಶ್ವ ಹೈಪರ್ ಟೆನ್ಶನ್ (ವಿಶ್ವ ಅಧಿಕ ರಕ್ತದೊತ್ತಡ) ದಿನಾಚರಣೆ ಅಂಗವಾಗಿ ಜಾಗೃತಿ ತರಗತಿ ಹಾಗೂ ಬ್ಯಾಡ್ಮಿಂಟನ್ ಪಂದ್ಯಾವಳಿ ಆಯೋಜಿಸಲಾಗಿತ್ತು. ಜಿಲ್ಲಾ ವೈದ್ಯಕೀಯ ಕಚೇರಿ (ಆರೋಗ್ಯ), ರಾಷ್ಟ್ರೀಯ ಆರೋಗ್ಯ ಮಿಷನ್ ಮತ್ತು ಪುಲ್ಲೂರು ಸಂಸ್ಕೃತಿ ಕ್ಲಬ್ ಬ್ಯಾಡ್ಮಿಂಟನ್ ಮಾರ್ನಿಂಗ್ ಬ್ಯಾಚ್ ಜಂಟಿಯಾಗಿ ಪುಲ್ಲೂರು ಪೆರಿಯ ಸಂಸ್ಕೃತಿ ಸಭಾಂಗಣದಲ್ಲಿ ಭಾನುವಾರ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಉಪಜಿಲ್ಲಾ ವೈದ್ಯಾಧಿಕಾರಿ ಡಾ.ಅಜಯ್‌ರಾಜ್ ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಕೃತಿ ಪುಲ್ಲೂರು ಕಾರ್ಯದರ್ಶಿ ಎ.ಟಿ.ಶಶಿ ವಹಿಸಿದ್ದರು.
ತಾಂತ್ರಿಕ ಸಹಾಯಕ ಚಂದ್ರನ್ ಎಂ. ಮತ್ತು ಪೆರಿಯ ಸಾಮಾಜಿಕ ಆರೋಗ್ಯ ಕೇಂದ್ರದ ಆರೋಗ್ಯ ನಿರೀಕ್ಷಕ



ಎಂ.ವಿ.ಅಶೋಕನ್ ಜಾಗೃತಿ ತರಗತಿ ನಡೆಸಿದರು. ಆರೋಗ್ಯ ರಕ್ಷಣೆಯಲ್ಲಿ ವ್ಯಾಯಾಮದ ಮಹತ್ವವನ್ನು ಸಾರಲು ಆಯೋಜಿಸಿದ್ದ ಡಬಲ್ಸ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಬಿನು ವನ್ನರವಯಲ್ ಮತ್ತು ಹರಿಶ್ರೀ ಶಶಿ ಅವರನ್ನೊಳಗೊಂಡ ತಂಡ ವಿಜೇತರಾಗಿ ಹಾಗೂ ರತೀಶ್ ಮಕರಮಕೋಟ್ ಮತ್ತು ಶರೋನ್ ಕಿಜಕ್ಕುಮ್ಕರ ಅವರಿದ್ದ ತಂಡ ರನ್ನರ್ಸ್ ಅಪ್ ಆಗಿ ಹೊರಹೊಮ್ಮಿತು.
ಉಪ ಜಿಲ್ಲಾ ವೈದ್ಯಾಧಿಕಾರಿ ಡಾ.ಅಜಯ್‌ರಾಜ್ ವಿಜೇತರಿಗೆ ಟ್ರೋಫಿ ವಿತರಿಸಿದರು. ಸಂಸ್ಕೃತಿ ಪುಲ್ಲೂರು ಉಪಾಧ್ಯಕ್ಷ ವಿ.ವಿ.ಬಾಲಕೃಷ್ಣನ್, ಪ್ರವೀಣ್ ಕನ್ನಂಗೋಟ್, ಇ.ಬಾಲಕೃಷ್ಣನ್, ರಾಹುಲ್ ಪುಲಿಕಲ್, ಪ್ರಜಿತ್ ಚೆಮ್ಮಟ್ಟುಂವಯಲ್ ಭಾಗವಹಿಸಿದ್ದರು.

> **ಆಹಾರದಲ್ಲಿ ಕೊಬ್ಬಿನ ಸೇವನೆ ಮಿತವಿರಲಿ**
> **ಔಷಧಗಳ ಜೊತೆಗೆ ವ್ಯಾಯಾಮ, ಉಪ್ಪು-ಕೊಬ್ಬಿನ ಸೇವನೆಯಲ್ಲಿ ಮಿತ ಬಳಕೆಯ ಅಭ್ಯಾಸಗಳನ್ನು ಅನುಸರಿಸುವುದರಿಂದ ಪ್ರತಿಯೊಬ್ಬರೂ ಅಧಿಕ ರಕ್ತದೊತ್ತಡ ದೂರವಿಡಲು, ದೀರ್ಘಕಾಲದ ವರೆಗೆ ಆರೋಗ್ಯಕರ ಜೀವನವನ್ನು ನಡೆಸಲು ಸಹಾಯ ಮಾಡುತ್ತದೆ.**
> • ಡಾ.ಅಜಯ್‌ರಾಜ್, ಉಪಜಿಲ್ಲಾ ವೈದ್ಯಾಧಿಕಾರಿ

ಅಧಿಕ ರಕ್ತದೊತ್ತಡ ಜಾಗೃತಿ
ದಿನಾಚರಣೆಯ ಭಾಗವಾಗಿ ಕೇರಳ ಸರ್ಕಾರಿ ವೈದ್ಯಾಧಿಕಾರಿಗಳ ಸಂಘವು ಕನಂಗಾಡ್‌ನ ಕೆಜಿಎಂಒಎ ಸಭಾಂಗಣದಲ್ಲಿ ಆಯೋಜಿಸಿದ ಅಧಿಕ ರಕ್ತದೊತ್ತಡ ಜಾಗೃತಿ ಕಾರ್ಯಕ್ರಮದಲ್ಲಿ ಉಪ ಜಿಲ್ಲಾ ವೈದ್ಯಾಧಿಕಾರಿ ಡಾ.ಅಜಯ್‌ರಾಜ್ ತರಗತಿ ನಡೆಸಿದರು. ಈ ಕಾರ್ಯಕ್ರಮದಲ್ಲಿ ಅಧಿಕ ರಕ್ತದೊತ್ತಡ ತಪಾಸಣೆಯನ್ನೂ ಆಯೋಜಿಸಲಾಗಿತ್ತು.
ಪ್ರತಿ ವರ್ಷ ಮೇ 17ರಂದು ವಿಶ್ವ ಅಧಿಕ ರಕ್ತದೊತ್ತಡ ದಿನವನ್ನು ಆಚರಿಸಲಾಗುತ್ತದೆ. ಅಧಿಕ ರಕ್ತದೊತ್ತಡವನ್ನು ತಡೆಗಟ್ಟುವಲ್ಲಿ ಆರೋಗ್ಯಕರ ಜೀವನಶೈಲಿ ಪ್ರಮುಖ ಪಾತ್ರ ವಹಿಸುತ್ತದೆ. ದೈನಂದಿನ ದಿನಚರಿಯಲ್ಲಿ ನಿಯಮಿತ ವ್ಯಾಯಾಮವನ್ನು ಸೇರಿಸುವುದು ಮತ್ತು ಆಹಾರದಲ್ಲಿ ಉಪ್ಪು-ಕೊಬ್ಬಿನ ಸೇವನೆ ಕಡಿಮೆ ಮಾಡುವುದು ಬಹಳ ಮುಖ್ಯ. ಇದರ ಹೊರತಾಗಿ ದೈನಂದಿನ ಜೀವನದ ಮಾನಸಿಕ ಒತ್ತಡ ನಿಯಂತ್ರಿಸಲು ಮತ್ತು ಪ್ರತಿದಿನ ಸರಿಯಾದ ನಿದ್ರೆಯನ್ನು ಖಚಿತಪಡಿಸಿಕೊಳ್ಳಲು ನಾವು ವಿಶೇಷ ಗಮನ ಹರಿಸಬೇಕಾಗಿದೆ ಎಂದರು.
ದಿನಾಚರಣೆಯ ಅಂಗವಾಗಿ ಜಿಲ್ಲೆಯ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ವಿವಿಧ ಜಾಗೃತಿ ಕಾರ್ಯಕ್ರಮ ಗಳನ್ನು ಆಯೋಜಿಸಲಾಗುವುದು ಎಂದು ಜಿಲ್ಲಾ ವೈದ್ಯಾಧಿಕಾರಿ (ಆರೋಗ್ಯ) ಡಾ.ಬಿ.ಸಂತೋಷ್ ತಿಳಿಸಿದ್ದಾರೆ.

ನಮ್ಮ ಉಡುಪಿ

ನಿರಂತರ ಸುದ್ದಿ ಅಪ್ಡೇಟ್‌ಗಾಗಿ Google Lens ನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಸೋಮವಾರ 18, ಮೇ 2026

ಸುತ್ತಮುತ್ತ

ಮೇ 19ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಉಡುಪಿ: ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮೇ 19ರಂದು ಬೆಳಿಗ್ಗೆ 9.30ರಿಂದ ಸಂಜೆ 4:30ರವರೆಗೆ ಪಾಂಗಳ, ಮೂಡಬೆಟ್ಟು, ಬಂಟಕಲ್ಲು, ಶಂಕರಪುರ, ಕುಂಜಾರುಗಿರಿ, ಸಾಲ್ಮರ, ಕುರ್ಕಾಲು, ಪಾಜೈ, ಇನ್ನಂಜೆ, ಪಡುಬೆಳ್ಳೆ, ಶಿರ್ವ, ಮಟ್ಟಾರು, ಪದವು ಪಂಜಿಮಾರು, ಪಿಲಾರುಖಾನ, ಪೆರ್ನಾಲು, ಕುತ್ಯಾರು, ಪುಂಚಲಕಾಡು, ಕಳತ್ತೂರು, ಚಂದ್ರನಗರ, ಕಲ್ಯ ಪದವು, ಅಬ್ಬೇಟ್ಟು, ಹೇರೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವಿದ್ಯುತ್ ವ್ಯತ್ಯಯವಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಮೇ 20ರಂದು ಉಡುಪಿ ಜಿಲ್ಲಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆ

ಉಡುಪಿ: ಉಡುಪಿ ಜಿಲ್ಲಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆಯು ಮೇ 20ರಂದು ಬೆಳಗ್ಗೆ 11 ಗಂಟೆಗೆ ನಗರದ ಮಣಿಪಾಲದ ರಜತಾದ್ರಿಯ ಜಿಲ್ಲಾಧಿಕಾರಿಗಳ ಕಚೇರಿಯ ಕೋರ್ಟ್ ಹಾಲ್‌ನಲ್ಲಿ ನಡೆಯಲಿದೆ. ಮೇ 8ರ ವರೆಗೆ ಸ್ವೀಕರಿಸಿದ ಪರವಾನಿಗೆ ಅರ್ಜಿಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದು. ಸದರಿ ಸಭೆಯಲ್ಲಿ ಸಂಬಂಧಪಟ್ಟ ಅರ್ಜಿದಾರರು ತಪ್ಪದೇ ಹಾಜರಾಗಬೇಕು. ತಪ್ಪಿದ್ದಲಿ ತಮ್ಮ ಗೈರು ಹಾಜರಿಯಲ್ಲಿ ಪ್ರಾಧಿಕಾರವು ಏಕಪಕ್ಷಿಯ ನಿರ್ಣಯವನ್ನು ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಬೈಕಿಗೆ ಆಟೋರಿಕ್ಷಾ ಡಿಕ್ಕಿ: ಸವಾರನಿಗೆ ಗಾಯ, ಪ್ರಕರಣ ದಾಖಲು

ಗಂಗೊಳ್ಳಿ: ಆಟೋರಿಕ್ಷಾ ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಗಗನ್ ಎಂಬವರು ಗಾಯಗೊಂಡ ಘಟನೆ ಗಂಗೊಳ್ಳಿ-ತ್ರಾಸಿ ರಸ್ತೆಯ ನಾಯಕವಾಡಿ ಎಂಬಲ್ಲಿ ನಡೆದಿದೆ. ಗಗನ್ ಅವರು ಬೈಕಿನಲ್ಲಿ ತ್ರಾಸಿ-ಗಂಗೊಳ್ಳಿ ರಸ್ತೆಯಲ್ಲಿ ಹೋಗುತ್ತಿರುವಾಗ ಎದುರಿನಿಂದ ಬಂದ ಆಟೋರಿಕ್ಷಾ ಡಿಕ್ಕಿ ಹೊಡೆದ ಪರಿಣಾಮ ಗಗನ್ ಅವರು ಗಂಭೀರವಾಗಿ ಗಾಯಗೊಂಡು ಚಿಕಿತ್ಸೆಗಾಗಿ ಕುಂದಾಪುರ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ಗಂಗೊಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿದ್ಕಲ್‌ಕಟ್ಟೆ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ತರಬೇತಿ ಶಿಬಿರ

ಕುಂದಾಪುರ: ಬಿದ್ಕಲ್‌ಕಟ್ಟೆಯ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಇನ್ಫೋಸಿಸ್ ಸಂಸ್ಥೆಯೊಂದಿಗೆ ಒಡಂಬಡಿಕೆಯಲ್ಲಿ ಎಥೆನಸ್ ಕನ್ಸಲ್ಟೆನ್ಸಿ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಸಾಜಿದ ಅಬ್ದುಲ್ ಖಾದರ್ ಅವರು ಐಟಿಐನ ಹಿರಿಯ ಹಾಗೂ ಕಿರಿಯ ತರಬೇತಿದಾರರಿಗೆ ಜಾಬ್ ರೆಡಿನೆಸ್, ಲೈಫ್ ಸ್ಕಿಲ್ಸ್ ಕಾರ್ಪೊರೇಟ್ ಕಮ್ಯುನಿಕೇಷನ್ ಅಂಡ್ ಸಾಫ್ಟ್ ಸ್ಕಿಲ್ ವಿಚಾರವಾಗಿ ಮೂರು ದಿನಗಳ ತರಬೇತಿ ನೀಡಿದರು. ಸಮಾರೋಪ ಸಮಾರಂಭದಲ್ಲಿ ಸಂಸ್ಥೆಯ ಪ್ರಾಚಾರ್ಯ ಹರೀಶ್ ಅಧ್ಯಕ್ಷತೆ ವಹಿಸಿದ್ದರು. ತರಬೇತಿ ಅಧಿಕಾರಿಗಳಾದ ಗಣೇಶ್ ಎಚ್., ಕಿರಿಯ ತರಬೇತಿ ಅಧಿಕಾರಿಗಳಾದ ಪ್ರಸನ್ನ ಆಚಾರ್ಯ, ಬಸವ ನಾಯಕ್, ಪ್ರಫುಲ್ಲ ಕೆ.ಎನ್., ಸುಮಂಗಲ, ರೂಪದೇವಿ ಹಾಗೂ ತರಬೇತಿದಾರರು ಉಪಸ್ಥಿತರಿದ್ದರು. ಅಜಿತ್ ಆಚಾರ್ಯ ಕೋಟ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಕುಂದಾಪುರ ಪುರಸಭೆ: ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಕುಂದಾಪುರ: ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಕುಂದಾಪುರ ಪುರಸಭೆ ವ್ಯಾಪ್ತಿ, ಕೋಟೇಶ್ವರ, ಬೀಜಾಡಿ, ಗೋಪಾಡಿ, ಕುಂಭಾಶಿ, ತೆಕ್ಕಟ್ಟೆ ಅಂಪಾರು, ಹಳ್ನಾಡು, ಕಾವ್ರಾಡಿ, ಶಂಕರನಾರಾಯಣ, ಬಳ್ಕೂರು, ಕೋಣಿ, ಕಂದಾವರ, ಬಸ್ರೂರು, ವಕ್ವಾಡಿ ಮತ್ತು ಆನಗಳ್ಳಿ, ಗ್ರಾಮಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 19ರಂದು ಬೆಳಿಗ್ಗೆ 9ರಿಂದ ಸಂಜೆ 5.30 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಮೊದಲನೇ ಪುಟದಿಂದ

ಸಂಪರ್ಕ ಇನ್ನಷ್ಟು ಬಿಗಿ!

ಅರಂತೋಡು ತೊಡಿಕಾನ ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಸಂತೋಷ್ ಕುತ್ತಮೊಟ್ಟೆ ಹಿರಿಯರಾದ ಎಲ್ಯಣ್ಣ ಅರಮನೆಗಯ ಮತ್ತಿತರರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಶಾಸಕಿ ಭಾಗೀರಥಿ ಮುರುಳ್ಯ ಅವರನ್ನು ನಾಗರೀಕರು ಸನ್ಮಾನಿಸಿದರು. ಪ್ರಮುಖರಾದ ಪ್ರಮುಖರಾದ ಸುಬೋದ್ ಶೆಟ್ಟಿ ಮೇನಾಲ, ದಯಾನಂದ ಕುರುಂಜಿ, ಕಿಶೋರ್ ಕುಮಾರ್ ಉಳುವಾರು, ಭಾರತಿ ಉಳುವಾರು, ಚಂದ್ರಶೇಖರ ಜೋಡಿಪಣೆ, ಪ್ರಸಾದ್ ಕಾಟೂರು, ಅಂಬೇಡ್ಕರ್ ರಕ್ಷಣಾ ವೇದಿಕೆಯ ಅಧ್ಯಕ್ಷ ನವೀನ್ ಕಲ್ಲುಗುಡ್ಡೆ, ಕಾರ್ಯದರ್ಶಿ ರಾಮಕೃಷ್ಣ ಆರಮನೆಯಗಯ, ಜಿಲ್ಲಾ ಕಾರ್ಯದರ್ಶಿ ತೇಜಕುಮಾರ್, ಉಪಾಧ್ಯಕ್ಷ ಚಂದ್ರಶೇಖರ ಹಾಜರಿದ್ದರು.
ಅರಂತೋಡು ಗ್ರಾ.ಪಂ. ಮಾಜಿ ಅಧ್ಯಕ್ಷ ಕೇಶವ ಅಡ್ತಲೆ ಸ್ವಾಗತಿಸಿ ಪ್ರಾಸ್ತಾವಿಸಿದರು. ಗೋವಿಂದ ಅಳವುಪಾರೆ ವಂದಿಸಿದರು. ಭವಾನಿಶಂಕರ ಅಡ್ತಲೆ ನಿರೂಪಿಸಿದರು.

ಘನಘೋರವಾಗಿದೆ ಉಡುಪಿ ಸಂತೆಕಟ್ಟೆ ಮಾರ್ಕೆಟ್ ಹಿಂಭಾಗದ ದೃಶ್ಯ | ಸಾಂಕ್ರಾಮಿಕ ರೋಗದ ಭೀತಿ

ರಸ್ತೆ ಬದಿಯಲ್ಲೇ ಮಾಂಸದ ಅವಶೇಷ, ರಾಶಿ ರಾಶಿ ತ್ಯಾಜ್ಯಗಳು

ಉಡುಪಿ: ಉಡುಪಿ ನಗರಸಭೆ ವ್ಯಾಪ್ತಿಯ ಸಂತೆಕಟ್ಟೆಯ ಪುತ್ತೂರು ಎಂಬಲ್ಲಿನ ಸಂತೆಕಟ್ಟೆ ಮಾರ್ಕೆಟ್ ಹಿಂಭಾಗದ ರಸ್ತೆ ಬದಿಯು ಸದ್ಯ ಕಸದ ತೊಟ್ಟಿಯಾಗಿ ಮಾರ್ಪಟ್ಟಿದ್ದು, ಸ್ಥಳೀಯ ಆಡಳಿತದ ಬೇಜವಾಬ್ದಾರಿತನದಿಂದಾಗಿ ಈ ಪರಿಸರದಲ್ಲಿ ಮಳೆಗಾಲ ಆರಂಭವಾಗುವ ಮುನ್ನವೇ ಭೀಕರ ಸಾಂಕ್ರಾಮಿಕ ರೋಗ ಹರಡುವ ಭೀತಿ ಎದುರಾಗಿದೆ.

ಮಾರುಕಟ್ಟೆಯ ಹಿಂಭಾಗದ ಪ್ರಮುಖ ರಸ್ತೆಯ ಬದಿಯಲ್ಲಿ ನಿರಂತರವಾಗಿ ಕಸ ಹಾಗೂ ತ್ಯಾಜ್ಯಗಳು ತುಂಬಿ ತುಳುಕುತ್ತಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಕಣ್ಣಿದ್ದು ಕುರುಡರಂತೆ ವರ್ತಿಸುತ್ತಿದ್ದಾರೆ ಎಂದು ಸ್ಥಳೀಯ ನಾಗರಿಕರು ಹಾಗೂ ಪ್ರಜ್ಞಾವಂತ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಿತಿ ಮೀರಿದ ಪರಿಸರ ಮಾಲಿನ್ಯ

ಈ ಭಾಗದಲ್ಲಿ ಪರಿಸರ ಮಾಲಿನ್ಯವು ಮಿತಿ ಮೀರಿದ್ದು, ಶೀಘ್ರದಲ್ಲೇ ಮಳೆಗಾಲದ ದಿನಗಳು ಆರಂಭವಾಗುವುದರಿಂದ ಕಸದ ರಾಶಿಯಲ್ಲಿ ನೀರು ನಿಂತು ಸೊಳ್ಳೆಗಳು ಉತ್ಪತ್ತಿಯಾಗಲಿವೆ. ಇದು ಮಲೇರಿಯಾ, ಡೆಂಗ್ಯೂ ಸೇರಿದಂತೆ ಹಲವಾರು ಜೀವವಿರೋಧಿ ಸಾಂಕ್ರಾಮಿಕ ಕಾಯಿಲೆಗಳು ಇಡೀ



ಪರಿಸರವನ್ನು ವ್ಯಾಪಿಸಲು ನೇರ ಕಾರಣವಾಗಲಿದೆ. ಇದರೊಂದಿಗೆ ಅಕ್ಕಪಕ್ಕದ ಅಂಗಡಿ ಮುಂಗಟ್ಟುಗಳು ಹಾಗೂ ಮಾರುಕಟ್ಟೆಯಿಂದ ತಂದು ಸುರಿಯಲಾಗುತ್ತಿರುವ ಮಾಂಸದ ಹಸಿ ತ್ಯಾಜ್ಯಗಳು ಇಲ್ಲಿನ ವಾತಾವರಣವನ್ನು ಮತ್ತಷ್ಟು ಕಲುಷಿತಗೊಳಿಸಿವೆ. ರಸ್ತೆ ಬದಿಯಲ್ಲೇ ಈ ರೀತಿ ಮಾಂಸದ ಅವಶೇಷಗಳನ್ನು ಎಸೆಯುತ್ತಿರುವುದರಿಂದ ಇಡೀ ಸಂತೆಕಟ್ಟೆ ಪರಿಸರದಲ್ಲಿ ದುರ್ನಾತ ಹರಡಿದ್ದು, ಹಾದಿಹೋಕರು ಮೂಗು ಮುಚ್ಚಿ ಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಮಾತ್ರವಲ್ಲದೆ, ಇದೇ ಮಾರ್ಗದ ರಸ್ತೆಯುದ್ದಕ್ಕೂ ದೊಡ್ಡ ದೊಡ್ಡ ಕಂದಕ ಹಾಗೂ ಹೊಂಡಗಳು ಬಿದ್ದಿದ್ದು, ವಾಹನ ಸವಾರರು ಜೀವ ಕೈಯಲ್ಲಿ ಹಿಡಿದು ಸಂಚರಿಸಬೇಕಾಗಿದೆ. ಮಳೆ ನೀರು ಈ ಹೊಂಡಗಳಲ್ಲಿ ನಿಂತಾಗ ರಸ್ತೆಯ ಆಳ ತಿಳಿಯದೆ ಅಪಘಾತಗಳು ಸಂಭವಿಸುವ ಸಾಧ್ಯತೆ ದಟ್ಟವಾಗಿದೆ. ಸ್ಥಳೀಯ ನಾಗರಿಕರ ಮತ್ತು ಪಾದಚಾರಿಗಳ ಹಿತದೃಷ್ಟಿಯಿಂದ ಉಡುಪಿ ನಗರಸಭೆಯ ಅಧಿಕಾರಿಗಳು ತಕ್ಷಣವೇ ಎಚ್ಚೆತ್ತುಕೊಂಡು, ಈ ಜ್ವಲಂತ ಸಾರ್ವಜನಿಕ ಸಮಸ್ಯೆ ಯುದ್ಧೋಪಾದಿಯಲ್ಲಿ ಬಗೆಹರಿಸಬೇಕು ಎಂದು ಸಾಮಾಜಿಕ ಕಾರ್ಯಕರ್ತ ಸತೀಶ್ ಪೂಜಾರಿ ಕೀಳಂಜೆ ಆಗ್ರಹಿಸಿದ್ದಾರೆ.

ಮಾಂಸ ತ್ಯಾಜ್ಯದಿಂದ ಹೆಚ್ಚಿದ ಸಂಕಷ್ಟ

ಸಂತೆಕಟ್ಟೆ ಮಾರ್ಕೆಟ್ ಹಿಂಭಾಗದಲ್ಲಿ ಕೋಳಿ ಹಾಗೂ ಇತರ ಪ್ರಾಣಿಗಳ ಮಾಂಸದ ತ್ಯಾಜ್ಯಗಳ ಮೇಲೆ ನೊಣ ಹಾಗೂ ಕೀಟಗಳು ಮುತ್ತಿಕೊಳ್ಳುತ್ತಿದ್ದು, ಸುತ್ತಮುತ್ತಲಿನ ವಸತಿ ಪ್ರದೇಶಗಳಿಗೆ ಹಾಗೂ ಹೋಟೆಲ್‌ಗಳಿಗೆ ಇವು ಲಗ್ಗೆ ಇಡುತ್ತಿವೆ. ಇದರಿಂದಾಗಿ ಆಹಾರ ಮತ್ತು ನೀರು ಕಲುಷಿತಗೊಂಡು ಪರಿಸರದಲ್ಲಿ ಕಾಲರಾ ಮತ್ತು ಅತಿಸಾರದಂತಹ ತೀವ್ರ ಆರೋಗ್ಯದ ರೋಗರುಜಿನಗಳು ಹರಡುವ ಭೀತಿ ಎದುರಾಗಿದೆ. ಒಟ್ಟಿನಲ್ಲಿ ನಗರಸಭೆ ಆಡಳಿತ ತುರ್ತು ಕ್ರಮ ವಹಿಸಬೇಕು ಎಂಬುದು ನಾಗರಿಕರ ಆಗ್ರಹವಾಗಿದೆ.

> ಪುತ್ತೂರು ರಸ್ತೆಯಲ್ಲಿ ಕಸದ ರಾಶಿ ಹಾಗೂ ಮಾಂಸದ ತ್ಯಾಜ್ಯ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದೆ. ಇದರಿಂದ ಬರುವ ದುರ್ನಾತಕ್ಕೆ ಕರಾವಳಿಯ ಈ ಭಾಗದಲ್ಲಿ ವಾಸಿಸುವುದೇ ನರಕದಂತಾಗಿದೆ. ಮಳೆಗಾಲದ ಮುನ್ನವೇ ನಗರಸಭೆ ಈ ಕಸವನ್ನು ತೆರವುಗೊಳಿಸಿ, ರಸ್ತೆ ಹೊಂಡಗಳನ್ನು ಮುಚ್ಚದಿದ್ದರೆ ಸಾಂಕ್ರಾಮಿಕ ರೋಗಗಳು ಹರಡುವುದು ಗ್ಯಾರಂಟಿ.
> ● ಸತೀಶ್ ಪೂಜಾರಿ, ಸಾಮಾಜಿಕ ಕಾರ್ಯಕರ್ತ

ಬೀದಿ ನಾಯಿಗಳ ಕಾಟ!

ರಸ್ತೆ ಬದಿಯಲ್ಲಿ ರಾಜಾರೋಷವಾಗಿ ಸುರಿದಿರುವ ಮಾಂಸದ ತ್ಯಾಜ್ಯ ತಿನ್ನಲು ಇಡೀ ಪರಿಸರದ ಬೀದಿ ನಾಯಿಗಳು ಇಲ್ಲಿಗೆ ಹಿಂಡು ಹಿಂಡಾಗಿ ಲಗ್ಗೆ ಇಡುತ್ತಿವೆ. ಇದರಿಂದ ಈ ಭಾಗದಲ್ಲಿ ಸಂಚರಿಸುವ ಶಾಲಾ ಮಕ್ಕಳು, ಮಹಿಳೆಯರು, ಪಾದಚಾರಿಗಳ ಮೇಲೆ ನಾಯಿಗಳು ದಾಳಿ ಮಾಡುತ್ತಿವೆ. ಇದರಿಂದ ಭಯದ ವಾತಾವರಣ ಸೃಷ್ಟಿಯಾಗಿದೆ. ಅಲ್ಲದೇ ತ್ಯಾಜ್ಯ ತಿನ್ನುವುದರಿಂದ ನಾಯಿಗಳಿಗೂ ರೋಗ ಹರಡುವ ಭೀತಿ ಇದೆ.

ಮಲ್ಯರಮಠ ದೇವಳ: ಮಾಸಾವಧಿ ಅಖಂಡ ಭಜನಾ ಮಹೋತ್ಸವಕ್ಕೆ ಚಾಲನೆ



ಕುಂದಾಪುರ: ಗಂಗೊಳ್ಳಿಯ ಮಲ್ಯರಮಠ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಪುರುಷೋತ್ತಮ ಮಾಸದ ಅಂಗವಾಗಿ ಹಮ್ಮಿಕೊಂಡಿರುವ ಮಾಸಾವಧಿ ಅಖಂಡ ಭಜನಾ ಮಹೋತ್ಸವಕ್ಕೆ ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶ ಶ್ರೀಮದ್ ವಿದ್ಯಾಧೀಶ ತೀರ್ಥ ಶ್ರೀಪಾದ ವಡೇರ ಸ್ವಾಮೀಜಿಗಳು ದೀಪ ಪ್ರಜ್ವಲಿಸಿ ಭಾನುವಾರ ಚಾಲನೆ ನೀಡಿದರು.

ಬೆಳಿಗ್ಗೆ ಶ್ರೀಗಳು ಶ್ರೀ ವೆಂಕಟರಮಣ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ದೇವರ ಸನ್ನಿಧಾನದಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಮಾಸಾವಧಿ ಅಖಂಡ ಭಜನಾ ಮಹೋತ್ಸವದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ದೇವಸ್ಥಾನದ ಪ್ರಧಾನ ಅರ್ಚಕ ಎಸ್.ವೆಂಕಟರಮಣ ಆಚಾರ್ಯ ಮತ್ತು ತಾಂತ್ರಿಕ ಜಿ.ವಸಂತ ಭಟ್ ನೇತೃತ್ವದಲ್ಲಿ ಜರಗಿತು. ಪುರುಷೋತ್ತಮ ಮಾಸದ ಅಂಗವಾಗಿ ಬೆಳಿಗ್ಗೆ ಪುರುಷೋತ್ತಮ ಅಷ್ಟೋತ್ತರದಿಂದ ಶ್ರೀ ದೇವರಿಗೆ 108 ಪ್ರದಕ್ಷಿಣಾ ಸೇವೆ, ಮಧ್ಯಾಹ್ನ ಅಪೂಪದಾನ ದೀಪದಾನ ಸೇವೆ, ಉಭಯ ದೇವರಿಗೆ ಮಹಾಪೂಜೆ, ಮಹಾಸಮಾರಾಧನೆ, ಸಂಜೆ ಉಭಯ ದೇವರ ಸನ್ನಿಧಿಯಲ್ಲಿ ದೀಪಾರಾಧನೆ ಸೇವೆ ಮತ್ತಿತರ ಧಾರ್ಮಿಕ ಕಾರ್ಯಕ್ರಮಗಳು ಸಂಪನ್ನಗೊಂಡಿತು.

ದೇವಸ್ಥಾನದ ಆಡಳಿತ ಮೊಕ್ತೇಸರ ಎನ್. ಸದಾಶಿವ ನಾಯಕ್, ಜಿ.ವೆಂಕಟೇಶ ನಾಯಕ್, ಆಡಳಿತ ಮಂಡಳಿ ಸದಸ್ಯರು, ಪುರೋಹಿತರು, ವೈದಿಕರು, ಊರಿನ ಹತ್ತು ಸಮಸ್ತರು, ಊರ ಪರ ಊರಿನ ಸಮಾಜ ಬಾಂಧವರು, ಸೇವಾದಾರರು ಮೊದಲಾದವರು ಇದ್ದರು. ಜೂ. 16ಕ್ಕೆ ಬೆಳಿಗ್ಗೆ ದೀಪ ವಿಸರ್ಜನೆಯೊಂದಿಗೆ ಮಾಸಾವಧಿ ಅಖಂಡ ಭಜನಾ ಮಹೋತ್ಸವ ಮುಕ್ತಾಯಗೊಳ್ಳಲಿದ್ದು ಈ ಮಹೋತ್ಸವದಲ್ಲಿ ರಾಜ್ಯ ಮತ್ತು ಹೊರರಾಜ್ಯಗಳಿಂದ ವಿವಿಧ ಭಜನಾ ಮಂಡಳಿಗಳು ಹಾಗೂ ಕಲಾವಿದರು ಆಗಮಿಸಿ ಭಜನಾ ಸೇವೆ ಸಮರ್ಪಿಸಲಿದ್ದಾರೆ.

ಮೇ 31ರಂದು 'ಕುಶಲ ಹೆಗ್ಡೆ 100' ಕಾರ್ಯಕ್ರಮ: ಆಮಂತ್ರಣ ಬಿಡುಗಡೆ



ಕುಂದಾಪುರ: ವೃತ್ತಿ, ಪ್ರವೃತ್ತಿ ಹಾಗೂ ಜೀವನದ ಜೊತೆಯಲ್ಲಿ ಸಮಾಜದ ಬಗ್ಗೆ ತುಡಿತವಿರುವ ಸಮಾಜಮುಖಿ ಗಳಾಗಿರುವುದೇ ಬದುಕಿನ ನಿಜವಾದ ಶ್ರೇಷ್ಠತನ ಎಂದು ಟೆಲಿಕಾಂ ಇಲಾಖೆಯ ನಿವೃತ್ತ ಹಿರಿಯ ಅಧಿಕಾರಿ ಶ್ರೀಧರ ಶೆಟ್ಟಿ ನುಡಿದರು.

ನಗರದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಮೇ 31ರಂದು ಕೋಟೇಶ್ವರದ ಸಹನಾ ಕನ್ವೆನ್ಷನ್ ಹಾಲ್‌ನಲ್ಲಿ ನಡೆಯಲಿರುವ ಜಿ.ಕುಶಲ ಹೆಗ್ಡೆ ಜನ್ಮ ಶತಮಾನೋತ್ಸವ ಕಾರ್ಯಕ್ರಮ 'ಕುಶಲ ಹೆಗ್ಡೆ 100' ಇದರ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿ, ಮಾತನಾಡಿದರು.

ಸಮಾಜದ ಕಟ್ಟಕಡೆಯ ಮಕ್ಕಳಿಗೂ ಶಿಕ್ಷಣ ದೊರಕಬೇಕು ಎನ್ನುವ ಕಾಳಜಿಯಲ್ಲಿ ಸ್ಥಾಪನೆಗೊಂಡಿದ್ದ ಕುಂದಾಪುರದ ಬಂಟ್ಸ್ ಹಾಸ್ಟೆಲ್ ನಿರ್ವಹಣೆ ವೇಳೆ, ಸ್ವಂತಕ್ಕೆ ಬಂದಿದ್ದ ಗೇಣಿ ಅಕ್ಕಿಯನ್ನು ನಿಲಯವಾಸಿಗಳಿಗೆ ನೀಡುವ ಔದಾರ್ಯತೆ ಜಿ.ಕುಶಲ ಹೆಗ್ಡೆ ಅವರಿಗೆ ಇತ್ತು ಎಂದರು.

ಗುಡ್ಡಮ್ಮಾಡಿ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತ ಧರ್ಮದರ್ಶಿ ಬಿ.ಅರುಣಕುಮಾರ ಶೆಟ್ಟಿ ಜಿ.ಕುಶಲ ಹೆಗ್ಡೆ ಜನ್ಮ ಶತಮಾನೋತ್ಸವ ಸಂಯೋಜಕ ಬಿ.ಉದಯ್ ಕುಮಾರ್ ಹೆಗ್ಡೆ, ರಾಜ್ಯ ವೈನ್ಸ್ ಮರ್ಚಂಟ್ಸ್ ಅಸೋಸಿಯೇಷನ್ ಅಧ್ಯಕ್ಷ ಗೋವಿಂದ್ ರಾಜ್ ಹೆಗ್ಡೆ ಬ್ರಹ್ಮಾವರ ಮಾತನಾಡಿದರು.

ಜಿ.ಕುಶಲ ಹೆಗ್ಡೆ ಚಾರಿಟೇಬಲ್ ಟ್ರಸ್ಟ್‌ನ ಸ್ನೇಹಾ ಪಿ ರೈ, ಬಿ.ಕಿಶೋರ ಹೆಗ್ಡೆ, ಜಿ.ಸಂತೋಷ್ ಕುಮಾರ್ ಶೆಟ್ಟಿ ಸುಜಾತ ಉದಯ್ ಕುಮಾರ್ ಹೆಗ್ಡೆ, ನಾರಾಯಣ ದೇವಾಡಿಗ, ಕೆ.ಕೆ. ರಾಮನ್, ಬಂಟರ ಯಾನೆ ನಾಡವರ ಸಂಘದ ಮಾಜಿ ಸಂಚಾಲಕ ಆವರ್ಸೆ ಸುಧಾಕರ ಶೆಟ್ಟಿ, ಕುಂದಾಪುರ ತಾಲ್ಲೂಕು ಯುವ ಬಂಟರ ಸಂಘದ ಸ್ಥಾಪಕಾಧ್ಯಕ್ಷ ಡಾ.ನಿತ್ಯಾನಂದ ಶೆಟ್ಟಿ ಅಂಪಾರು, ಅಧ್ಯಕ್ಷ ನಿತೇಶ್ ಶೆಟ್ಟಿ ಬಸ್ರೂರು, ಉದ್ಯಮಿ ಕೆ.ಆರ್.ನಾಯಕ್, ಜನ್ಮ ಶತಮಾನೋತ್ಸವ ಸಮಿತಿಯ ಪಡುಕೆರೆ ಉದಯ್ ಕುಮಾರ್ ಶೆಟ್ಟಿ, ಪ್ರವೀಣ್ ಯಕ್ಷೀಮಠ, ಎನ್.ಮಂಜಯ್ಯ ಶೆಟ್ಟಿ ಸಬ್ಲಾಡಿ, ಬೈಂದೂರು ಬಂಟರ ಸಂಘದ ಮಾಜಿ ಅಧ್ಯಕ್ಷ ಸಾಲಗದ್ದೆ ಶಶಿಧರ ಶೆಟ್ಟಿ, ಹೆಚ್.ಸೋಮಶೇಖರ ಶೆಟ್ಟಿ ಇದ್ದರು. ದಿ.ಜಿ.ಕುಶಲ ಹೆಗ್ಡೆ ಚಾರಿಟೇಬಲ್ ಟ್ರಸ್ಟ್ ಕಾರ್ಯದರ್ಶಿ ಯು.ಎಸ್.ಶೆಣೈ ಪ್ರಾಸ್ತಾವಿಕವಾಗಿ ಮಾತನಾಡಿದರು. ಜನ್ಮ ಶತಮಾನೋತ್ಸವ ಸಮಿತಿಯ ರಾಜೇಶ್ ಕೆ.ಸಿ ನಿರೂಪಿಸಿದರು. ಯೋಗಾನಂದ ಹೆಗ್ಡೆ ಗಿಳಿಯಾರ್ ವಂದಿಸಿದರು.

ಬಂಟಕಲ್ಲು: 'ಋಣಾನುಬಂಧ' ವಧು-ವರರ ಸಮಾವೇಶ ಉದ್ಘಾಟನೆ



ಶಿರ್ವ: ಇಂದಿನ ಆಧುನಿಕ ಯುಗದಲ್ಲಿ ಯುವ ಪೀಳಿಗೆಗೆ ಯೋಗ್ಯ ಹಾಗೂ ಒಪ್ಪುವಂತಹ ವಧು-ವರರನ್ನು ಕಂಡುಕೊಳ್ಳುವುದು ದೊಡ್ಡ ಸವಾಲಾಗಿದೆ. ಇಂತಹ ಸಂದರ್ಭ ಆಯೋಜನೆಗೊಳ್ಳುವ ವಧುವರರ ಸಮಾವೇಶ ಯುವಜನತೆಯ ಸುಂದರ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಿಕೊಡುತ್ತವೆ ಎಂದು ಬೆಂಗಳೂರು ಸಪ್ತಪದಿ ವಿವಾಹ ಮಾಹಿತಿ ಕೇಂದ್ರದ ಅಧ್ಯಕ್ಷ ನಾಗೇಂದ್ರ ಕಾಮತ್ ನುಡಿದರು.

ಅವರು ಭಾನುವಾರ ಬಂಟಕಲ್ಲು ರೋಟರಿ ಭವನದಲ್ಲಿ ಆರ್‌ಎಸ್‌ಬಿ ಹಾಗೂ ಬಿಜಿಎಸ್‌ಬಿ ಸಮಾಜ ಬಾಂಧವರ ಜಂಟಿ ಆಯೋಜನೆಯಲ್ಲಿ ಸಪ್ತಪದಿ ವಿವಾಹ ಮಾಹಿತಿ ಕೇಂದ್ರದ ವತಿಯಿಂದ ಏರ್ಪಡಿಸಿದ 'ಋಣಾನುಬಂಧ' ವಧು-ವರರ ಸಮಾವೇಶದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಮಾಜ ಬಾಂಧವರನ್ನು ಒಂದೆಡೆ ಸೇರಿಸಿ ಪರಸ್ಪರ ಪರಿಚಯ ಮಾಡಿಸಿಕೊಳ್ಳುವ ಮೂಲಕ ವಿವಾಹ ಪ್ರಕ್ರಿಯೆಯನ್ನು ಸುಲಭಗೊಳಿಸುವುದು ಈ ಕೇಂದ್ರದ ಮುಖ್ಯ ಉದ್ದೇಶ. ಇದೊಂದು ಸಂಪೂರ್ಣ ಉಚಿತ ಸೇವೆ ಎಂದರು.

ಹಿರಿಯ ಜ್ಯೋತಿಷಿ ಮಾಣ್ಯೂರು ವೈ ಉಪೇಂದ್ರ ಪ್ರಭು ಕಾರ್ಯಕ್ರಮ ಉದ್ಘಾಟಿಸಿ, ಶುಭಹಾರೈಸಿದರು.

ಈ ಸಂದರ್ಭ ವಿವಾಹ ಮಾಹಿತಿ ಕೇಂದ್ರದಿಂದ ಉಪೇಂದ್ರ ಪ್ರಭು ಹಾಗೂ ಉದ್ಯಮಿ ಎಂ.ಎನ್. ನಾಯಕ್, ಅಂತಾರಾಷ್ಟ್ರೀಯ ತರಬೇತುದಾರ ಸುಬ್ರಹ್ಮಣ್ಯ ಕುಲೇದು ಅವರನ್ನು ಸನ್ಮಾನಿಸಲಾಯಿತು. ತರಬೇತುದಾರ ಸುಬ್ರಹ್ಮಣ್ಯ ಕುಲೇದು ಅವರು ವಿಶೇಷ ಉಪನ್ಯಾಸ ನೀಡಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಕಾರ್ಕಳ ಹಿರ್ಗಾನದ ಶ್ರೀ ಆದಿಶಕ್ತಿ ಮಹಾಲಕ್ಷ್ಮೀ ದೇವಳದ ಮಾಜಿ ಆಡಳಿತ ಮೊಕ್ತೇಸರ ಅಶೋಕ್ ನಾಯಕ್, ಉದ್ಯಮಿ ವಾಸುದೇವ ಕೃಷ್ಣ ಭಾಗವಹಿಸಿ, ಮಾತನಾಡಿದರು. ಪ್ರಧಾನ ಸಂಚಾಲಕ ಎಂ.ಡಿ.ಪ್ರಭು ವೇದಿಕೆಯಲ್ಲಿದ್ದರು.

192 ಮಂದಿ ನೋಂದಣಿ

ನಿವೃತ್ತ ಮುಖ್ಯಶಿಕ್ಷಕ ಚಂದ್ರಹಾಸ ಪ್ರಭು ಮುದರಂಗಡಿ ಗಣ್ಯರನ್ನು ಪರಿಚಯಿಸಿದರು. ಸುನಿಲ್ ಬೋರ್ಕಾರ್ ಪುತ್ತೂರು ನಿರೂಪಿಸಿದರು. ಸರೋಜಿನಿ ಕೊಡಿಬೆಟ್ಟು ಧನ್ಯವಾದವಿತ್ತರು. ಕಾರ್ಯಕ್ರಮದಲ್ಲಿ 192 ವಧುವರರು ತಮ್ಮ ಹೆಸರುಗಳನ್ನು ಅಧಿಕೃತವಾಗಿ ನೋಂದಾಯಿಸಿದರು.

ತೆಕ್ಕಟ್ಟೆ ರಾಷ್ಟ್ರೀಯ ಹೆದ್ದಾರಿಯಲ್ಲಿ 'ಸ್ವಚ್ಛತಾ ಅಭಿಯಾನ' ಕಾರ್ಯಕ್ರಮ



ಕೋಟ: ತೆಕ್ಕಟ್ಟೆ ಗ್ರಾಮಪಂಚಾಯತ್, ಎಸ್‌ಎಲ್‌ಆರ್‌ಎಂ ಘಟಕ, ಕೋಟದ ಪಂಚವರ್ಣ ಯುವಕ ಮಂಡಲ ಪ್ರವರ್ತಿತ ಸಂಸ್ಥೆ ಪಂಚವರ್ಣ ಮಹಿಳಾ ಮಂಡಲ, ತೆಕ್ಕಟ್ಟೆ ಫ್ರೆಂಡ್ಸ್, ಜೈ ಭಾರತ್ ಇವರುಗಳ ಸಂಯುಕ್ತ ಆಶ್ರಯದಲ್ಲಿ ತೆಕ್ಕಟ್ಟೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಸ್ವಚ್ಛತಾ ಅಭಿಯಾನ ಜರಗಿತು.

ತೆಕ್ಕಟ್ಟೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಸಂತೋಷ್ ಕುಮಾರ್ ಅಭಿಯಾನಕ್ಕೆ ಚಾಲನೆ ನೀಡಿದರು. ಸುಮಾರು 100ಕ್ಕೂ ಅಧಿಕ ಕಡೆಗಳಲ್ಲಿ ತ್ಯಾಜ್ಯವನ್ನು ಹೆದ್ದಾರಿಯಿಂದ ತೆರವುಗೊಳಿಸಲಾಯಿತು. ಅಲ್ಲದೆ ಈ ವೇಳೆ ಪಿಡಿಒ ಸಂತೋಷ್ ಕುಮಾರ್ ಮಾತನಾಡಿ, ಸ್ವಚ್ಛತೆಯ ಬಗ್ಗೆ ಗ್ರಾಮದ ಜನರಲ್ಲಿ ಅರಿವು ಅತ್ಯಗತ್ಯ. ಪಂಚಾಯತ್ ವ್ಯಾಪ್ತಿಯಲ್ಲಿ ತ್ಯಾಜ್ಯ ಎಸೆಯುವವರಿಗೆ ದಂಡ ವಿಧಿಸುವುದು ಸೇರಿದಂತೆ ಸ್ವಚ್ಛ ಗ್ರಾಮ ಪರಿಕಲ್ಪನೆಯ ಬಗ್ಗೆ ಮಾಹಿತಿ ನೀಡಿದರು.

ಪಂಚಾಯತ್ ಮಾಜಿ ಅಧ್ಯಕ್ಷೆ ಶೋಭಾ ಶೆಟ್ಟಿ,ವಿಜಯ ಭಂಢಾರಿ, ನಿವೃತ್ತ ಯೋಧ ರವಿ ಶೆಟ್ಟಿ, ಪಂಚವರ್ಣ ಯುವಕಮಂಡಲದ ನಿಕಟಪೂರ್ವ ಅಧ್ಯಕ್ಷ ಅಜಿತ್ ಆಚಾರ್, ಪಂಚವರ್ಣ ಮಹಿಳಾ ಮಂಡಲದ ಅಧ್ಯಕ್ಷೆ ಲಲಿತಾ ಪೂಜಾರಿ,ತೆಕ್ಕಟ್ಟೆ ಫ್ರೆಂಡ್ಸ್ ಮುಖ್ಯಸ್ಥ ಪ್ರಕಾಶ್ ಶೆಟ್ಟಿ, ತೆಕ್ಕಟ್ಟೆ ಪಂ. ಎಸ್‌ಎಲ್‌ಆರ್‌ಎಂ ಘಟಕದ ಮುಖ್ಯಸ್ಥೆ ರೇವತಿ ತೆಕ್ಕಟ್ಟೆ, ಜೈ ಭಾರತ್‌ನ ಪ್ರಮುಖರಾದ ಸಂತೋಷ್ ಪೂಜಾರಿ, ಕುಂದಾಪುರ ತಾ.ಪಂ.ನ ಉಮೇಶ್ ಪೂಜಾರಿ, ಸಂದೀಪ್, ಗ್ರಾ.ಪಂ. ಸಿಬ್ಬಂದಿಗಳು, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು, ಸಂಜೀವಿನಿ ಒಕ್ಕೂಟದ ಪದಾಧಿಕಾರಿಗಳು ಮತ್ತಿತರರು ಉಪಸ್ಥಿತರಿದ್ದರು.

ಬೈಂದೂರು ಗಾಂಧಿ ಮೈದಾನದಲ್ಲಿ ವಿಕ್ರಂ ಟ್ರೋಫಿ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ



ಬೈಂದೂರು: ಬೈಂದೂರು ವಿಕ್ರಂ ಕ್ಲಬ್ ಆಶ್ರಯದಲ್ಲಿ ಜಿಲ್ಲಾ ಕ್ರಿಕೆಟ್ ಅಸೋಸಿಯೇಶನ್ ಸಹಭಾಗಿತ್ವದಲ್ಲಿ ಶನಿವಾರ ಇಲ್ಲಿನ ಗಾಂಧಿ ಮೈದಾನದಲ್ಲಿ ಎರಡು ದಿನಗಳ ಅಂಡರ್ 23 ಲೆದರ್ ಬಾಲ್ ಟಿ20 ನಾಕೌಟ್ ಮಾದರಿಯ ಕ್ರಿಕೆಟ್ ಪಂದ್ಯಾಟ 'ವಿಕ್ರಂ ಟ್ರೋಫಿ-2026'ಕ್ಕೆ ಚಾಲನೆ ನೀಡಲಾಯಿತು.

ಕುಂದಾಪುರ ಟೋರ್ಪೊಡೋಸ್ ಸ್ಪೋರ್ಟ್ಸ್ ಕ್ಲಬ್ ಚೇರ್‌ಮನ್ ಗೌತಮ್ ಶೆಟ್ಟಿ ಪಂದ್ಯಾಟವನ್ನು ಉದ್ಘಾಟಿಸಿ, ಶುಭಹಾರೈಸಿದರು. ಅಧ್ಯಕ್ಷತೆ ವಹಿಸಿದ್ದ ಕ್ಲಬ್‌ನ ಅಧ್ಯಕ್ಷ ದಿನೇಶ ಗಾಣಿಗ ಸ್ವಾಗತಿಸಿ, ಪ್ರಾಸ್ತಾವಿಸಿದರು. ರೋಟರಿ ಜಿಲ್ಲಾ ಸಹಾಯಕ ಗವರ್ನರ್ ಐ. ನಾರಾಯಣ, ಹಿರಿಯ ಕ್ರಿಕೆಟ್ ಆಟಗಾರ ನಾರಾಯಣ ಶೆಟ್ಟಿ, ಜಿಲ್ಲಾ ಕ್ರಿಕೆಟ್ ಅಸೋಸಿಯೇಶನ್ ಕರ್ಯದರ್ಶಿ ರೆನ್ ಟ್ರೆವರ್ ಡಯಾಸ್, ವಿಶ್ವವಿದ್ಯಾಲಯ ಮಾಜಿ ಕ್ರಿಕೆಟಿಗ ಪ್ರದೀಪ್ ವಾರ್ಘ್, ಮೌರ್ಘುಂ ಇದ್ದರು. ಮೂರ್ತಿ ಬೈಂದೂರು ಪ್ರಾರ್ಥಿಸಿದರು. ಸುಬ್ರಹ್ಮಣ್ಯ ಜಿ. ಉಪ್ಪುಂದ ಕಾರ್ಯಕ್ರಮ ನಿರ್ವಹಿಸಿದರು.

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಂಘದ ಸಿಬ್ಬಂದಿಗೆ ಬೀಳ್ಕೊಡುಗೆ



ಶಿರ್ವ: ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ಪುತ್ತೂರು ಇದರ ಶಿರ್ವ ಶಾಖೆಯಲ್ಲಿ ಜನಸ್ನೇಹಿ ಶಾಖಾ ಪ್ರಬಂಧಕರಾಗಿ 4 ವರ್ಷ ಕರ್ತವ್ಯ ನಿರ್ವಹಿಸಿದ ಸುಧಾ ಕೆ.ಪ್ರಭು ಅವರು ಗುರುಪುರ ಕೈಕಂಬ ಶಾಖೆಗೆ ವರ್ಗಾವಣೆ ಹೊಂದಿದ ಪ್ರಯುಕ್ತ ಶಿರ್ವ ಶಾಖಾ ಕಾರ್ಯಾಲಯದಲ್ಲಿ ಶನಿವಾರ ಅವರ ಸೇವೆ ಸ್ಮರಿಸಿ, ಸನ್ಮಾನಿಸಿ ಶುಭ ವಿದಾಯ ಕೋರಲಾಯಿತು.

ಹಿರಿಯ ಗ್ರಾಹಕ ರಘುಪತಿ ಐತಾಳ್, ಕಟ್ಟಡದ ಮಾಲಿಕ ಸುನಂದಮ್ಮ, ನಿವೃತ್ತ ಶಿಕ್ಷಕ ಬಿ.ಪುಂಡಲೀಕ ಮರಾಠೆ, ದಯಾನಂದ್, ನಿವೃತ್ತ ಶುಶ್ರೂಷಾ ಅಧಿಕಾರಿ ಉಷಾ ಪಿ. ಮರಾಠೆ, ಶಾಖೆಯ ಹಿರಿಯ ಅಧಿಕಾರಿ ಸುಧೀರ್ ಪೂಜಾರಿ, ಸಹಾಯಕರಾದ ಪ್ರಜ್ವಲ್ ನಾಯಕ್, ಆಕಾಶ್ ಎ, ಅಮೃತಾ ಕುಮಾರಿ, ಸುಲೋಚನಾ ಮತ್ತಿತರರಿದ್ದರು.

ಬೋಳಾಸ್ ಆಗ್ರೋ, ವಿಕಾಸ ಸೇವಾ ಸಂಸ್ಥೆಯಡಿ ಮಹಿಳೆಯರಿಗೆ ಚೆಂಡೆ, ಹೊಲಿಗೆ ಯಂತ್ರ ವಿತರಿಸಿ ಶಾಸಕ ಸುನೀಲ್ ಭರವಸೆ

ಕಾರ್ಕಳ ತಾಲೂಕಿನ ಪ್ರತಿ ಮನೆಯೂ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ನೆರವು

ಕಾರ್ಕಳ: 'ಸ್ವರ್ಣ ಕಾರ್ಕಳ' ಕಲ್ಪನೆಯಡಿ ಪ್ರವಾಸೋದ್ಯಮ, ಸಾಹಿತ್ಯ, ಸಾಂಸ್ಕೃತಿಕ ಹೀಗೆ ಎಲ್ಲಾ ಆಯಾಮಗಳಲ್ಲಿ ಕ್ಷೇತ್ರದ ಪ್ರತಿಯೊಬ್ಬ ಪುರುಷ ಮತ್ತು ಮಹಿಳೆಯರು ಆರ್ಥಿಕವಾಗಿ ವೃದ್ಧಿಯಾಗಬೇಕು. ಕ್ಷೇತ್ರದ ಕೊನೆಯ ಮನೆಯೂ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಬೇಕು ಎನ್ನುವುದೇ ನಮ್ಮ ಆಶಯ. ಇದಕ್ಕೆ ಸಂಪೂರ್ಣ ಸಹಕಾರ ನೀಡಲಿದ್ದೇವೆ ಎಂದು ಶಾಸಕ ವಿ. ಸುನೀಲ್ ಕುಮಾರ್ ಹೇಳಿದರು.

ಅವರು ಶಾಸಕರ ವಿಕಾಸ ಕಚೇರಿಯಲ್ಲಿ ಭಾನುವಾರ ಬೋಳಾಸ್ ಆಗ್ರೋ ಪ್ರೈವೆಟ್ ಲಿಮಿಟೆಡ್ ಹಾಗೂ ವಿಕಾಸ ಸೇವಾ ಸಂಸ್ಥೆ ಕಾರ್ಕಳ ಇದರ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಕಾರ್ಕಳ ಮತ್ತು ಹೆಬ್ರಿ ಸಂಜೀವಿನಿ ಒಕ್ಕೂಟದ ಮಹಿಳೆಯರ ತಂಡದ ಸ್ವಾವಲಂಬಿ ಬದುಕಿನ ಆಸರೆಗಾಗಿ ಉಚಿತ ಹೊಲಿಗೆ



ಯಂತ್ರ ಹಾಗೂ ಸಂಜೀವಿನಿ ಬಳಗಕ್ಕೆ ಚೆಂಡೆ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ವಿಕಾಸ ಸಂಸ್ಥೆಯು ಕಳೆದ 20 ವರ್ಷಗಳಿಂದ ನೂರಾರು ಸಾಮಾಜಿಕ ಸೇವಾ ಕಾರ್ಯ ಕೈಗೊಳ್ಳುತ್ತಾ ಬಂದಿದೆ. ಅದರ ಮುಂದುವರಿದ ಭಾಗವಾಗಿಯೇ ಇಂದು ರೂ. 5 ಲಕ್ಷ ಮೊತ್ತದ 25 ಉಚಿತ ಹೊಲಿಗೆ ಯಂತ್ರ, ಚೆಂಡೆ ವಿತರಣೆ ಮಾಡಲಾಗಿದೆ ಎಂದರು.

ಉದ್ಯಮದ ಜೊತೆಗೆ ಸಮಾಜಕ್ಕೂ ಅಪಾರ ಕೊಡುಗೆ ನೀಡುತ್ತಿರುವ ಬೋಳಾಸ್ ಆಗ್ರೋ ಸಂಸ್ಥೆಯನ್ನು ಶ್ಲಾಘಿಸಿದ ಶಾಸಕರು, ಬೋಳಾಸ್ ಸಂಸ್ಥೆಯು ಸಮಾಜಕ್ಕೆ ಅಗತ್ಯ ಅನಿಸಿದ್ದನ್ನು ಕೊಡುವ ಕಲ್ಪವೃಕ್ಷದಂತಿದೆ. ನರ್ಸಿಂಗ್ ಕಾಲೇಜಿಗೆ 75 ಲಕ್ಷ ರೂ. ಧನಸಹಾಯ ಹಾಗೂ ಬೋಳದಲ್ಲಿ ಸಾರ್ವಜನಿಕ ಸೇವೆಗಾಗಿ ಆ್ಯಂಬುಬುಲೆನ್ಸ್ ನೀಡುವ ಮೂಲಕ ಸಂಸ್ಥೆಯು ಸಮಾಜಕ್ಕೆ ಕೊಡುಗೆ ನೀಡಿದೆ ಎಂದರು.

ಉದ್ಯಮಿ, ಬೋಳಾಸ್ ಆಗ್ರೋಸ್‌ನ ಬೋಳ ದಾಮೋದರ ಕಾಮತ್ ಮಾತನಾಡಿ, ನಮ್ಮ ಸಮಾಜ ಸೇವೆಯ ಪರಿಕಲ್ಪನೆಗೆ ಶಾಸಕ ಸುನಿಲ್ ಕುಮಾರ್ ಅವರೇ ಪ್ರೇರಣೆ. ಎಂದರು.

ಸಂಜೀವಿನಿ ಒಕ್ಕೂಟದ ವ್ಯವಸ್ಥಾಪಕಿ ಉಮಾ, ಪ್ರಮುಖರಾದ ಮಹಾವೀರ ಹೆಗ್ಡೆ, ಮಾಲಿನಿ ರೈ, ಹಾಗೂ ರವೀಂದ್ರ ಮಡಿವಾಳ ಇದ್ದರು. ಕರುಣಾಕರ ಕೋಟ್ಯಾನ್ ನಿರೂಪಿಸಿದರು. ಸಂಜೀವಿನಿ ಒಕ್ಕೂಟದ ಅಧ್ಯಕ್ಷೆ ಸುಜಾತ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಚೆಂಡೆ ಬಾರಿಸಿ ಕಾರ್ಯಕ್ರಮ ಉದ್ಘಾಟಿಸಿದ ಶಾಸಕರು!

ಕಾರ್ಯಕ್ರಮದಲ್ಲಿ ಸಂಜೀವಿನಿ ಒಕ್ಕೂಟದ 25 ಮಂದಿ ಮಹಿಳೆಯರಿಗೆ ಸ್ವ ಉದ್ಯೋಗಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ 25 ಉಚಿತ ಹೊಲಿಗೆ ಯಂತ್ರಗಳನ್ನು ವಿತರಿಸಲಾಯಿತು. ಸಂಜೀವಿನಿ ಮಹಿಳಾ ತಂಡಕ್ಕೆ ಕರಾವಳಿಯ ಹೆಮ್ಮೆಯ ಕಲೆಯಾದ ಚೆಂಡೆಗಳನ್ನು ವಿತರಿಸಲಾಗಿದ್ದು, ಶಾಸಕ ವಿ. ಸುನೀಲ್ ಕುಮಾರ್ ಅವರು ತಾವೇ ಸ್ವತಃ ವಿಶಿಷ್ಟ ಶೈಲಿಯಲ್ಲಿ ಚೆಂಡೆ ಬಾರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.